ಗಿಯೂ ಇದ್ದರೆ ಸ್ತ್ರೀ ವಿದ್ಯಾಭ್ಯಾಸವನ್ನು ಯಾರೂ ನಿಂದಿಸಲಾರರು. ವಿದ್ಯೆಯ ಫಲವು ಇಂಥಾದುದೆಂದು ಜನರು ತಿಳಿದರೆ ಸ್ತ್ರೀ ವಿದ್ಯಾಭಿವೃದ್ಧಿಯಲ್ಲಿ ತಾವೇ ಬದ್ಧಕಂಕಣರಾಗಿ ನಿಲ್ಲುವರು. ಇತರ ಜನಾಂಗಗಳಲ್ಲಿ ಸ್ತ್ರೀ ವಿದ್ಯಾಭ್ಯಾಸವು ಪ್ರಾಚುರ್ಯಕ್ಕೆ ಬರಲು ಇದು ಮುಖ್ಯಕಾರಣವಾಗಿದೆ. ಗೃಹಕೃತ್ಯವನ್ನು ನಿರ್ವಹಿಸುವುದರಲ್ಲಿ ಚತುರರೆಂತಲೂ, ಪತಿಗಳಿಗೆ ಮುಖ್ಯ ಸಹಾಯಕರೆಂತಲೂ ಹೊಗಳಿಸಿಕೊಳ್ಳುವ ಕೆಲವು ವಂದಿ ಒಳ್ಳೆಯವರಾದ ವಿದ್ಯಾವತಿಯರನ್ನು ಇತರ ಜನಾಂಗಗಳಲ್ಲಿನಾನು ಕೇಳಿಯೂ ಬಲ್ಲೆ. ನೋಡಿಯೂ ಬಲ್ಲೆ. ಇಲ್ಲಿಯೂ ಅಂಥವರು ಇರಬೇಕಲ್ಲವೇ ?

ದೊಡ್ಡ ದೊಡ್ಡ ಮನೆತನಕ್ಕೆ ಸೇರಿರುವ, ಐಶ್ವರ್ಯವುಳ್ಳ ಸ್ತ್ರೀಯರಿಗೆ ಹೇಳಬೇಕಾದ ಒಂದು ಅಂಶವಿರುತ್ತೆ. ಅವರಿಗೆ ಅವಕಾಶವು ಬಹಳವಾಗಿರುವುದಲ್ಲವೆ. ಆ ಕಾಲವನ್ನು ವ್ಯರ್ಥವಾಗಿ ಕಳೆಯದೆ, ಉಚಿತವಾಗಿ ಉಪಯೋಗಿಸಬೇಕೆಂಬ ಅಪೇಕ್ಷೆ ಇದ್ದಲ್ಲಿ, ನನ್ನ ಅನುಭವಸಿದ್ಧನಾದುದನ್ನು ಹೇಳುವೆನು—ವಿದ್ಯಾಕಾಲಕ್ಷೇಪದಿಂದಲ್ಲದೆ ಇತರ ಪ್ರಯೋಜನವನ್ನು ಪಡೆಯಲಾಗದು. ಅದು ರುಚಿಸುವುದು, ಮನೋಲ್ಲಾಸವನ್ನು ಮಾಡುವುದು, ಜ್ಞಾನಾಭಿವೃದ್ಧಿಯನ್ನುಂಟುಮಾಡುವುದು, ಇಷ್ಟೇ ಅಲ್ಲದೆ (ಅಜ್ಞಾನಾಂಧಕಾರವನ್ನು ಹೋಗಲಾಡಿಸಿ) ಮನೋನೈರ್ಮಲ್ಯವನ್ನುಂಟುಮಾಡುವುದು.

ಓದುವುದು, ಬರೆಯುವುದು, ಹೊಲಗೆ, ಕಸೂತಿ ಕೆಲಸವೇ ಮುಂತಾದ್ದನ್ನು ಐಶ್ವರ್ಯವಂತರು, ಮನೆತನದವರು, ಮಾಡುವುದರಲ್ಲಿ ಮನಸ್ಸಿಡುವರೆಂದು ನಾನು ನಂಬುತ್ತೇನೆ. ವಿದ್ಯಾವತಿಯರಾದ ಕೆಲವರು ಮನೇ ಕೆಲಸವನ್ನು ಮಾಡುವುದು ತಮ್ಮ ಗೌರವಕ್ಕೆ ಕಡಮೆಯಾದುದೆಂದು ತಿಳಿದಿರುವರು. ಇಂಥವರೇ ಅಕ್ಷೇಪಣೀಯವಾದ ಅನೇಕ ಕೆಲಸವನ್ನು ಮಾಡುವರು ಬಹು ಡಂಭವನ್ನು ತೋರಿಸುವರು. ಧರ್ಮಮಾರ್ಗವನ್ನು ಬಿಡುವರು. ವಿದ್ಯಾಭ್ಯಾಸದ ದೂಷಣೆಗೆ ಇಂಥವರೇ ಮುಖ್ಯಕಾರಣ. ಇಂಥವರಿಂದಲೇ ಸ್ತ್ರೀ ವಿದ್ಯಾಭ್ಯಾಸಕ್ಕೆ ದೊಡ್ಡ ಆಟಂಕ ಉಂಟಾಗಿರುವುದು. ಇಂಥಾ ಅಪರಾಧಗಳಿಗೆ ನಾವು ಈಡಾಗದಹಾಗೆ ಬಹಳಜಾಗರೂಕರಾಗಿರಬೇಕು. ಪರಿಶೀಲಿಸಿ ಪತಿವ್ರತಾಶಿರೋಮಣಿಗಳಾದ ಸೀತೆ ದ್ರೌಪದಿ ಮುಂತಾದ ಭಾರತಮಹಿಳೆಯರು ಈ ಭರತಖಂಡವನ್ನೆಲ್ಲಿ ಅಲಂಕರಿಸಿ ಅಚಂದ್ರಾರ್ಕವಾದ ಕೀರ್ತಿಯನ್ನು ಪಡೆದರು. ಇಂಥಾ ಸ್ತ್ರೀರತ್ನಗಳು ಇತರದೇಶಗಳಲ್ಲಿ ಅಪೂರ್ವ. ಇವರು

ವಿದ್ಯಾಭ್ಯಾಸವನ್ನು ಪ್ರಚುರಗೊಳಿಸುತಿರುವ ನಮ್ಮ ಮಹಾರಾಜರಿಗೆ ನೀವುಮಾತ್ರವಲ್ಲದೆ ಇನ್ನು ಮುಂದೆ ಜನಿಸತಕ್ಕವರೂಕೂಡ ಕೃತಜ್ಞರಾಗಿರಬೇಕು. ವಿದ್ಯಾವತಿಯುರಲ್ಲಿ ಜನಿಸಿದ ಪುತ್ರರು ತಾವೂ ವಿದ್ಯೆಯನ್ನು ಪಡೆದು ಸುಖಿಸುವರು. ಅವರಂತೆ ಅವರ ಪುತ್ರಮಿತ್ರರು ಕಾಲಕ್ರಮವಾಗಿ ಸಂಸ್ಥಾನದ ಜನರೆಲ್ಲರೂ ವಿದ್ಯಾವಂತರಾಗಿ, ಜನಾಂಗಗಳಲ್ಲಿ ಗಣ್ಯರಾಗುವರು. ಈರೀತಿಯಾಗಿ ಸಂಸ್ಥಾನವನ್ನು ಊರ್ಜಿತಸ್ಥಿತಿಗೆ ತರಬೇಕೆಂಬುದು ಮಹಾರಾಜರ ನಿಜನಾದ ಅಭಿಪ್ರಾಯವೇ ಆಹುದು. ಈ ಅಭಿಪ್ರಾಯವು ಅಂಕುರಿಸಿ, ಫಲಿಸಬೇಕಾದರೆ ಇತರ ಸಹಕಾರಿಗಳು ಅವಶ್ಯವಲ್ಲವೆ? ಚತುರನಾದ ಶಿಲ್ಪಿಯು ಒಳ್ಳೆ ಚಮತ್ಕಾರವಾದ ಕೆಲಸವನ್ನು ಮಾಡಬೇಕಾದರೆ ತನಗೆ ಅನುಕೂಲವಾದ ಆಯುಧಗಳನ್ನು ಅಪೇಕ್ಷಿಸುವನಲ್ಲವೇ? ಸರಿಯಾದ ಆಯುಧಗಳಿದ್ದರೆ ತಾನೆ ತನ್ನ ಕುಶಲತೆಯನ್ನು ತೋರಿಸಬಹುದು. ಇಲ್ಲಿ ಲೇಡಿ ಸೂಪರಿಂಟೆಂಡೆಂಟ್ ಆಗಿರುವ ಮಿಸ್. ಸೊರಾಬ್ಜಿಯವರು ಮನಃಪೂರ್ವಕವಾಗಿ ಸ್ತ್ರೀ ವಿದ್ಯಾಭ್ಯಾಸಕ್ಕೆ ತಮ್ಮಲ್ಲಕೆಲಾದುದನ್ನೆಲ್ಲಾ ಸ್ವಲ್ಪವೂ ಸಾಲುಮಾರದೆ ಮಾಡುತಿರುವುದು ನಿಸ್ಸಂದೇಹವಾಗಿಯೂ ಶ್ಲಾಘ್ಯವಾದುದಾಗಿಯೂ ಇದೆ. ನನಗಾದರೋ ಅವರ ಕೆಲಸವು ಬಹಳ ಸಮರ್ಪಕವಾಗಿದೆ. ಅವರು ಸೊತ್ರೀತಾರ್ಹರು. ಈ ಅನುಕೂಲನಾದ ಕಾಲವನ್ನು ಸ್ವಲ್ಪವೂ ಬಿಡದೆ ಸಾಧ್ಯವಾದಷ್ಟು ಪ್ರಯೋಜನಗಳನ್ನು ನೀವುಗಳೆಲ್ಲರೂ ಪಡೆಯಬೇಕೆಂಬುದೇ ನನ್ನ ಬುದ್ಧಿವಾದವು. ಗಿಳಿಯು ಕಲಿತಂತೆ ನಾವುಗಳು ಕಲಿಯಬೇಕೆಂಬುದು ನನ್ನ ತಾತ್ಪರ್ಯವಲ್ಲ. ಇನ್ನೊಂದು ಅಂಶವು ಹೆಚ್ಚಾದ ಆವಶ್ಯಕವು. ನಮ್ಮ ಗೃಹಕೃತ್ಯವನ್ನು ಕ್ರಮಪಡಿಸಿಕೊಳ್ಳುವುದರಲ್ಲಿ ಫಲಿಸುವ ವಿದ್ಯೆಯೆ ಬೆಲೆಯುಳ್ಳದ್ದು. ಗೂಡಿನಿಂದ ತೆಗೆದ ನಿಪ್ಪತ್ತು ಕಳೆಗುಂದಿ ಹೇಗೆ ಶೋಭಿಸುವುದಿಲ್ಲವೋ ಹಾಗೆಯೇ ಮಾನಮರ್ಯಾದೆಯಿಂದಲೂ, ಸ್ವಧರ್ಮದಿಂದಲೂ, ಪಾತಿವ್ರತ್ಯದಿಂದಲೂ ರಹಿತವಾದ ವಿದ್ಯೆಯು ಎಂದಿಗೂ ಶೋಭಿಸುವುದಿಲ್ಲ. ಈ ಗುಣಾತಿಶಯಗಳೇ ವಿದ್ಯೆಗೆ ಅಲಂಕಾರವಸ್ತುಗಳೆಂದು ನಾನು ಧಾರಿಹೇಳುವೆನು. ಫಲಭರಿತವಾದ ವೃಕ್ಷವು ಕಣ್ಣಿಗೆ ಆನಂದವನ್ನುಂಟುಮಾಡುವಂತೆ ವಿದ್ಯಾ ವಿನಯಸಂಪತ್ತಿನಿಂದ ಕೂಡಿದ ಸ್ತ್ರೀಯು ಸಕಲರಿಗೂ ಆನಂದವನ್ನುಂಟು ಮಾಡುವಳು.

ವಿದ್ಯಾವತಿಯರಾದ ಸ್ತ್ರೀಯರು ಸ್ವಧರ್ಮವನ್ನು ಅನುಸರಿಸಿ ಕುಲಸತಿಯರಾಗಿಯೂ, ಮಕ್ಕಳನ್ನು ಧರ್ಮಮಾರ್ಗ ಪ್ರವೃತ್ತರನ್ನಾಗಿ ಮಾಡುವುದರಲ್ಲಿ ನಿರತರಾ

ಪದವನ್ನು ಹೆಚ್ಚಾಗಿ ಸೂತ್ರದಲ್ಲಿ ಸೇರಿಸಿರುವನು. ಆದರೆ ಗ್ರಂಥಕಾರರಲ್ಲಿ ಸಾಮಾನ್ಯವಿಶೇಷ ವಿವಕ್ಷಾ ಭೇದಗಳಿದ್ದಾಗ್ಯೂ ತಾತ್ಪರ್ಯಭೇದವೇನೂ ಇಲ್ಲವೆಂದು ಬುದ್ಧಿಶಾಲಿಗಳು ಊಹಿಸಿಕೊಳ್ಳಬೇಕು.

೨ ಹೀಗೆಯೆ ಶಾಸನಕಾರನು ದ್ರೋಹ, ಕ್ರೋಧ, ಮತ್ಸರ, ಶಬ್ದಗಳನ್ನು ಬೇರೆಬೇರೆ ಹೇಳಿರುವನು. ದರ್ಪಣಕಾರನು ಮಾತ್ರ, ಮಚ್ಚರದೊಳೆಂದೊಂದನ್ನೇ ಹೇಳಿ ಅದಕ್ಕೆ ಉದಾಹರಣೆಗಳನ್ನು ಕೊಟ್ಟಿರುವನು. ಈ ವಿಷಯದಲ್ಲೂ ಪರಸ್ಪರ ವಿರೋಧವೇನೂ ತೋರುವದಿಲ್ಲ. ಹ್ಯಾಗೆಂದರೆ,—ದ್ರೋಹವೆಂದರೆ ಅಪಕಾರವೆಂತಲೂ, ಕ್ರೋಧವೆಂದರೆ ಕೋಪವೆಂತಲೂ, ಮತ್ಸರವೆಂದರೆ ಇತರರ ವಿಳಗಾಯಿಸ್ನು ನೋಡಿ ಅಪ್ರೀತಿಸುವಿಕೆಯೆಂತಲೂ, ಬೇರೆಬೇರೆ ಅರ್ಥಗಳು ತೋರುವವು. ಇವೆಲ್ಲದರಲ್ಲೂ ಕೋಪವು ತೋರುವುದರಿಂದ ದ್ರೋಹಮತ್ಸರಗಳಿಗೆ ಕೋಪವೆ ಕಾರಣವೆಂದು ತಿಳಿಯಬೇಕು. ಮೇಲೆ ಹೇಳಿದ ಈರ್ಷ್ಯಾಸೂಯೆಗಳಲ್ಲಾದರೂ, ಕೋಪವಿಲ್ಲದಿದ್ದರೂ ಅಕ್ಷಾಂತಿ ಮಾತ್ರ ತೋರಬಹುದು. ಇಲ್ಲಿ ಕೋಪಮಾತ್ರ ತೋರುವುದು. ಆದುದರಿಂದ ಇವಕ್ಕೆ ಮೇಲೆ ಹೇಳಿದ ಈರ್ಷ್ಯಾಸೂಯೆಗಳಲ್ಲಿ ಅಂತರ್ಭಾವವನ್ನೂ, ಅವಕ್ಕೆ ದ್ರೋಹಾದಿಗಳಲ್ಲಿ ಅಂತರ್ಭಾವವನ್ನೂ ಹೇಳುವುದಕ್ಕಾಗುವದಿಲ್ಲವೆಂದೇ ಎಲ್ಲರೂ ಈರ್ಷ್ಯಕ್ರೋಧಗಳನ್ನು ಚತುರ್ಥಿಗೆ ನಿಮಿತ್ತಗಳನ್ನಾಗಿ ಬೇರೆಬೇರೆ ಅಂಗೀಕರಿಸಿರುವರು.

ಆದರೆ ಲೋಕದಲ್ಲಿ ಸಾಮಾನ್ಯದಲ್ಲಿ ವಿಶೇಷಕ್ಕೆ ಅಂತರ್ಭಾವವನ್ನು ಹೇಳುವ ವಾಡಿಕೆಯುಂಟು. ಅದರಂತೆ ಇಲ್ಲಿ ಎಂದರೆ ದರ್ಪಣದಲ್ಲಿ ಮಚ್ಚರದೊಳ್, ಎಂದು ವಿಶೇಷಾರ್ಥಬೋಧಕ ಶಬ್ದವನ್ನೇ ಹೇಳಿ ಅದರಲ್ಲಿ ಸಾಮಾನ್ಯಕ್ಕೆ ಅಂತರ್ಭಾವವನ್ನು ಹೇಳಿದಂತೆ ತೋರುವ್ರದು. ಇದು ಲೋಕವಿರುದ್ಧವೆಂದು ಶಂಕಿಸಬಹುದು. ಆ ರೀತಿಯಲ್ಲಿ ಸಾಮಾನ್ಯ ವಿಶೇಷಭಾವಗಳನ್ನುದ್ದೇಶಿಸಿ ಹೇಳುವದಿಲ್ಲ. ಮತ್ತೇನೆಂದರೆ ಈ ಮೂರರಲ್ಲೂ ಕೋಪವು ಅನುವರ್ತಿಸಿಕೊಂಡಿರುವುದರಿಂದ ಆ ಅಂಶವನ್ನು ಮಾತ್ರ ವಿವಕ್ಷಿಸಿ ವಿಶೇಷಾಂಶವನ್ನು ತ್ಯಾಗಮಾಡಿ ಹೇಳಲ್ಪಟ್ಟಿದೆ, ಆದುದರಿಂದ ಯಾವವಿರೋಧವೂ ತೋರುವುದಿಲ್ಲವೆಂದು ಬುದ್ಧಿಶಾಲಿಗಳು ಊಹಿಸಿಕೊಳ್ಳಬೇಕು.

೩ ದರ್ಪಣಕಾರನು ಇದೇ ಪ್ರಕರಣದಲ್ಲಿ ಹಿತದೊಳ್ ಚತುರ್ಥಿಯಕ್ಕುಂ, ಎಂದು ಹೇಳಿ, ಪಶುವಿಗೆ ತೃಣಂಹಿತಂ, ಎಂದು ಉದಾಹರಣೆಯನ್ನು ಕೊಟ್ಟಿರುವನು.

ಗಳಿಲ್ಲ ವಿದ್ಯಾವತಿಯರಾಗಿರಲಿಲ್ಲವೆ? ನೀವುಗಳಿಲ್ಲರೂ ಪತಿಸೇವೆಯುಲ್ಲಿ, ಸತ್ಯಸಂಧತೆಯಲ್ಲಿ, ಧರ್ಮವಾರ್ಗದಲ್ಲಿ, ನಿಂತು ಸೀತಾ ದ್ರೌಪದಿ ಯರಂತೆ ಕೀರ್ತಿಯನ್ನು ಪಡೆಯಬಹುದಲ್ಲವೆ! ಇದೇ ವಿದ್ಯೆಯ ಫಲ, ಇದೇ ಸರ್ವ ಸುಖಕ್ಕೂ ಆಕರ. ನೀವೆಲ್ಲರೂ ಈ ರೀತಿಯವಾಗಿ ನಡೆದರೆ ಮಹಾರಾಜರ ಪ್ರಯತ್ನವೂ ಉದ್ದೇಶವೂ ಸಾರ್ಥಕವಾಗುವುದು.

ಈ ಪ್ರಸಂಗವನ್ನು ಮುಗಿಸುವುದಕ್ಕೆ ಮೊದಲು ಮಹಾರಾಜರ ಔದಾರ್ಯ ಫಲವನ್ನು ಅನುಭವಿಸುತ್ತಿರುವ ನಾವೆಲ್ಲರೂ, ಮಹಾರಾಜರಿಗೆ ಆರೋಗ್ಯವನ್ನು ಗೌರವನ್ನು ಕೊಟ್ಟ ದೇವರು ಅವರನ್ನು ಬಹುಕಾಲ ಕಾಪಾಡಲೆಂದು ಪ್ರಾರ್ಥಿಸುವುದು ಯುಕ್ತವಾಗಿದೆ.

ವ್ಯಾಕರಣಕಾಠ್ಯ ೨೦.

೬೭ ನೆಯ ಪುಟದಶೇಷ.

ಶಬ್ದವು ಶಾಸನದಲ್ಲಿ ಈಷಾರ್ಥಕ ಶಬ್ದಗಳ ಯೋಗವಿದ್ದಾಗಲೂ. ಅಸೂಯಾರ್ಥಕ ಶಬ್ದಗಳ ಯೋಗವಿದ್ದಾಗಲೂ, ಚತುರ್ಥೀವಿಭಕ್ತಿಯು ಬರುವುದೆಂದು ಬೇರೆಬೇರೆ ನಿಮಿತ್ತಗಳು ಹೇಳಲ್ಪಟ್ಟಿರುವುದು. ಶಬ್ದಮಣಿದರ್ಪಣದಲ್ಲಾದರೋ, ಈರ್ಷ್ಯೆಯೊಳೆಂದು, ಒಂದೇ ನಿಮಿತ್ತವು ಹೇಳಲ್ಪಟ್ಟಿರುವುದು. ಇದು ಸ್ಥೂಲಬುದ್ಧಿಗಳಿಗೆ ಪರಸ್ಪರ ವಿರುದ್ಧವೆಂತು ತೋರಿದರೂ ಸ್ವಲ್ಪ ವಿಚಾರಮಾಡಿದರೆ ವಿರುದ್ಧವಾಗಿ ತೋರುವುದಿಲ್ಲ. ಹ್ಯಾಗೆಂದರೆ.—ಈರ್ಷ್ಯೆಯೆಂದರೆ ಸಾಮಾನ್ಯವಾಗಿ ಅಸಹನೆಯೆಂದೂ, ಅಸೂಯೆಯೆಂದರೆ ಇತರರ ಗುಣಗಳನ್ನೂ ದೋಷಗಳನ್ನಾಗಿ ಎಣಿಸುವಿಕೆಯೆಂದೂ ಅರ್ಥವಾಗುವುದು. ಇದರಲ್ಲಿ ಗುಣಗಳನ್ನು ದೋಷಗಳನ್ನಾಗಿ ಎಣಿಸಬೇಕಾದರೆ ಇತರರ ಉತ್ಕರ್ಷಾಸಹನವೇ ಕಾರಣವಾಗಿರುವುದು. ಆದುದರಿಂದ ಇವೆರಡಲ್ಲೂ ಅಸಹನೆಯು ಸಾಮಾನ್ಯವಾಗಿ ತೋರುವುದು, ಎಂದು ದರ್ಪಣಕಾರನು ಯೋಚಿಸಿ ಒಳಗಿರುವ ಭೇದಗಳನ್ನು ಉಪೇಕ್ಷಿಸದೆ ಈರ್ಷ್ಯೆಯೊಳೆಂದೊಂದನ್ನೇ ಹೇಳಿರುವನು. ಶಾಸನಕಾರನಾದರೊ ಈ ಭೇದಗಳನ್ನು ಸ್ಪಷ್ಟಪಡಿಸುವುದಕ್ಕೋಸ್ಕರ ಬೇರೆ ಅಸೂಯಾ

ವುದರಿಂದಲೂ, ಹೇತುಸಾವಯವಾನ್ಯದಲ್ಲಿ ತೃತೀಯೆಯನ್ನೂ, ಪಂಚಮಿಯನ್ನೂ, ವಿಧಿಸಿರುವುದರಿಂದಲೂ, ಇದಕ್ಕೆ ಹೇತುವಿಶೇಷಾರ್ಥದಲ್ಲಿ ಪರ್ಯವಸಾನವೆಂದು ಹೇಳಬೇಕು. ಶಾಸನಕಾರನಾದರೊ ಸ್ಪಷ್ಟವಾಗಿ, "ಉತ್ಪಾತೇಪಜ್ಞಾಪ್ಯೆ" ಎಂಬ ಸೂತ್ರದಲ್ಲಿ, ಅಶುಭಸೂಚಕವಾದ ಭೂತವಿಕಾರದಿಂದ ಜ್ಞಾಪ್ಯವಾದ ವಸ್ತುವಾಚಕದ ಮೇಲೆ ಚತುರ್ಥಿಯು ಬರುವುದೆಂದು ಹೇಳಿ ಬಳಕ್ಕೆ ಬೆಳ್ಳಿಂಚು, ಮೊದಲಾದ ಉದಾಹರಣೆಯನ್ನು ಕೊಟ್ಟಿರುವನು. ಇಲ್ಲೂ ಹೇತು ಹೇತುಮದ್ಭಾವಗಳೇ ತೋರುವುದರಿಂದ ಗ್ರಂಥವಿರೋಧವಾವುದೂ ಇಲ್ಲ.

ಆದುದರಿಂದ ದರ್ಪಣಕಾರನು ಸಂಕ್ಷೇಪವಾಗಿ ಹೇಳಿದ ವಿಷಯಗಳನ್ನು ವಿಸ್ತಾರವಾಗಿಯೂ, ಅಸ್ಪಷ್ಟವಾದ ವಿಷಯಗಳನ್ನು ಸ್ಪಷ್ಟವಾಗಿಯೂ ಹೇಳಿರುವದೆಂದು ತಿಳಿದು ಬುದ್ಧಿಶಾಲಿಗಳು ಉಭಯುಕ್ಕೂ ಏಕ ಕಂಠ್ಯವನ್ನು ಕ್ಲೆಲಾದಮಟ್ಟಿಗೂ ಹೇಳುವುದು ಒಳ್ಳೆದೆಂದು ತೋರುವುದು.

(ಸಶೇಷ.)

ಆಹಾರವು ಜೀರ್ಣವಾಗಿ ಶರೀರಕ್ಕೆ ಸೇರತಕ್ಕ ಕ್ರಮ.

ಆಹಾರವನ್ನು ಜೀರ್ಣಮಾಡತಕ್ಕ ಮುಖ್ಯಾವಯವಗಳು ಯಾವವೆಂದರೆ:—

ಬಾಯಿ, ಹಲ್ಲುಗಳು, ನಾಲಿಗೆ, ಗಂಟಲು, ಅನ್ನನಾಳ, ಜಠರ, ಚಿಕ್ಕದೊಡ್ಡ ಕರುಳುಗಳು, ಪಿತ್ತಜನಕಾಂಶ, ಮೇದೋಜೀರಕ.— ನಾವು ಆಹಾರವನ್ನು ಮೊದಲು ಬಾಯಿಯಲ್ಲಿ ಹಾಕಿಕೊಳ್ಳುತ್ತೇವೆ. ಅದನ್ನು ಹೊರಗೆ ಬೀಳದಹಾಗೆ ಹಲ್ಲುಗಳು, ತುಟಿಗಳು ಕಾಪಾಡುತ್ತವೆ. ನಮ್ಮ ಬಾಯಿಯು ಒಳಭಾಗವು ಬಹಳ ಕೆಂಪಾಗಿಯೂ ದ್ರವ ಜಿಳ್ಳೆದ್ರವ್ಯದಾಗಿಯೂ ಇರುವ ಸ್ರೋತ ವುಳ್ಳದಾಗಿದೆ. ಬಾಯಿಯು ಸುತ್ತ ಇರುವ ಮಾಂಸಖಂಡಗಳ ಸಹಾಯದಿಂದ ಬಾಯನ್ನು ಮನಸ್ಸು ಬಂದಹಾಗೆ ತೆಗೆಯಬಹುದು ಮುಚ್ಚಲೂ

ಈ ವಿಷಯವನ್ನು ಶಾಸನಕಾರನು ಬೇರೆ ಹೇಳಲಿಲ್ಲ. ಆದರೂ ಇಷ್ಟಾರ್ಥದಲ್ಲಿ ಇದೂ ಸೇರಿರುವದೆಂದು ವೃತ್ತಿಯಲ್ಲಿ ಇಷ್ಟಾರ್ಥಕ್ಕೆ ಕೊಟ್ಟಿರುವ ಪಶುವಿಂಗೆ ತೃಣಂಹಿತಂ, ಎಂಬ ಉದಾಹರಣೆಯಿಂದ ತಿಳಿದುಬರುವುದು. ಆದರೆ ದರ್ಪಣಕಾರನು, ಇಷ್ಟದೊಳ್ಂ ಎಂದು ಹಿತಕ್ಕಿಂತಲೂ, ಇಷ್ಟಾರ್ಥವನ್ನು ಬೇರೆ ಹೇಳಿ ಉದಾಹರಣೆಯನ್ನು ಕೊಟ್ಟಿರುವನು. ಇದು ಯುಕ್ತವಾಗಿ ತೋರುವುದಿಲ್ಲ. ಏತಕೆಂದರೆ, ಲೋಕದಲ್ಲಿ ಯಾವುದು ಹಿತವಾಗಿರುವುದೋ ಅದು ಇಷ್ಟವಾಗಿಯೆ ಇರುವುದು. ಯಾವುದು ಇಷ್ಟವೋ ಅದು ಹಿತವಾಗಿರುವುದು. ಆದುದರಿಂದ ಇವೆರಡರಲ್ಲಿ ಒಂದನ್ನು ಹೇಳುವುದಕ್ಕೆ ಸರಿಯಾದ ಕಾರಣವು ತೋರುವುದಿಲ್ಲ. ಆದರೆ ಈ ಗ್ರಂಥದಲ್ಲಿ ಅಭಿಮಾನವುಳ್ಳವರು, ಹಿತವೆಂದರೆ ಒಳ್ಳೆಯದಾಗಿಯೂ ಉಪಜೀವ್ಯಕ್ಕೆ ಹೇತುವಾಗಿಯೂ ಇರುವುದೆಂದೂ, ಇಷ್ಟವೆಂದರೆ ಒಳ್ಳೆಯದಾಗಲಿ ಕೆಟ್ಟದ್ದಾಗಲಿ ಜ್ಞಾನಮಾತ್ರ ವಿಷಯವಾದುದೆಂದೂ, ಅಭಿಪ್ರಾಯವನ್ನು ಕಲ್ಪಿಸಿ ಭೇದವನ್ನು ಹೇಳುವುದರಿಂದ ಉಭಯಗ್ರಹಣಕ್ಕೂ ಸಾರ್ಥಕ್ಯವನ್ನು ಹೇಳಬಹುದು. ಈ ಪಕ್ಷದಲ್ಲಿ ಶಾಸನಕಾರನಿಗೆ ಇಷ್ಟದಲ್ಲಿ ಹಿತಕ್ಕೂ ಅಂತರ್ಭಾವವನ್ನು ಹೇಳಬಹುದು ಆದುದರಿಂದ ಗ್ರಂಥವಿರೋಧವಿಲ್ಲವೆಂದು ತಿಳಿಯಬಹುದು.

ಆದರೆ ದರ್ಪಣದಲ್ಲಿ, ಭಕ್ತಂಗೆ ವರಮನಿತ್ತಂ, ಎಂದು ಇಷ್ಟಕ್ಕೆ ಉದಾಹರಣೆಯು ಕೊಡಲ್ಪಟ್ಟಿದೆ. ಇದು,—ಇತ್ತಂ, ಎಂದು ದಾನಾರ್ಥಕಧಾತುಯೋಗವಿರುವುದರಿಂದ ಸಂಪ್ರದಾನಕ್ಕೆ ಉದಾಹರಣೆಯಾಗಿ ಕೊಡಬಹುದಾದುದರಿಂದ ಅಸಂಗತವಾಗಿ ಇರುವುದು.

೪ ದರ್ಪಣಕಾರನು ಸ್ವಸ್ತ್ಯಾದಿಶಬ್ದಗಳ ಯೋಗವಿದ್ದಾಗಲೂ ಚತುರ್ಥ್ಯರ್ಥವಿಭಕ್ತಿಯು ಬರುವುದೆಂದು ಹೇಳಿರುವನು. ಇದನ್ನು ಸ್ಪಷ್ಟವಾಗಿ ಶಾಸನಕಾರನು ಹೇಳದಿದ್ದಾಗ್ಯೂ "ಆಶಿಷ್ಯದ್ದೇಶ್ಯೆ" ಎಂಬ ಸೂತ್ರದಿಂದ ಆಶೀರರ್ಥವು ತೋರುವಾಗ ಯಾವುದು ಉದ್ದೇಶ್ಯವಾಚಕವಾಗಿರುವುದೊ ಅದರ ಮೇಲೆ ಚತುರ್ಥಿಯು ಬರುವುದೆಂದು ಹೇಳಿರುವುದರಿಂದ, ಸ್ವಸ್ತ್ಯಾದಿಶಬ್ದಗಳ ಯೋಗವಿದ್ದಾಗ ಆಶೀರರ್ಥವು ತೋರುವುದರಿಂದ ಈ ವಿಷಯದಲ್ಲೂ ಪರಸ್ಪರ ವಿರೋಧವೇನೂ ಇರುವದಿಲ್ಲ.

೫ ದರ್ಪಣದಲ್ಲಿ ಹೇತ್ವರ್ಥಕ ಶಬ್ದಯೋಗವಿಲ್ಲದಿರೆ ಆ ಹೇತು ವಾದ್ಯಾಚಕದ ಮೇರೆ ಚತುರ್ಥಿಯು ಬರುವುದೆಂದು ಹೇಳಲ್ಪಟ್ಟಿದೆ. ಇದು ಇಲ್ಲಿ ಹೇತುಸಾಮಾನ್ಯಕ್ಕೆ ವಿಷಯವಾಗುವುದೆಂದು ತೋರುವುದು. ಆದರೆ ಗ್ರಂಥಾಂತರ ವಿರೋಧವಿರು

ನಮ್ಮ ಸ್ವಾಧೀನ ತಪ್ಪುವದು. ಈ ನಾಳವು ಯಾವಾಗಲೂ ದ್ರವ ಉಳ್ಳದ್ದಾಗಿರುವುದು.

ಜಠರ, ಹೊಟ್ಟೆ, ಅನ್ನಾಶಯ:—ನಾವು ತಗದುಕೊಳ್ಳುವ ಆಹಾರವು ಅನ್ನನಾಳದಿಂದ ಜಠರಕ್ಕೆ ಬೀಳುವುದು. ಜಠರವು ಮಾಂಸಭಿತ್ತಿಯಿಂದ ಮಾಡಿದ ಒಂದು ಚೀಲವಾಗಿದೆ. ಇದರ ಭಿತ್ತಿಯಲ್ಲಿರುವ ಮಾಂಸಖಂಡಗಳು ಸಂಕೋಚಶಕ್ತಿಯುಳ್ಳದಾಗಿದ್ದರೂ ನಮ್ಮ ಕೈ ಕಾಲುಗಳಲ್ಲಿರುವ ಮಾಂಸಖಂಡಗಳಂತೆ ನಮ್ಮ ಇಷ್ಟಾನುಸಾರ ಸಂಕುಚಿತವಾಗುವದಿಲ್ಲ. ಈ ಖಂಡಗಳ ಸಾಹಾಯ್ಯದಿಂದ ಈ ಚೀಲವು ಚಿಕ್ಕದಾಗಿಯೂ ದೊಡ್ಡದಾಗಿಯೂ ಆಗಿ ತನ್ನಲ್ಲಿರುವ ಆಹಾರವನ್ನು ಚೆನ್ನಾಗಿ ತಿರಿವಿಹಾಕುವ ಶಕ್ತಿಯುಳ್ಳದ್ದಾಗಿದೆ. ಅಲ್ಲದೆ ಜಠರದ ಒಳಭಾಗವು ಬಹಳ ಸೂಕ್ಷ್ಮವಾದ ಪೊರೆಯಿಂದ ಮಾಡಲ್ಪಟ್ಟಿದೆ. ಇದರಲ್ಲಿ ಅನೇಕ ಸೂಕ್ಷ್ಮಗ್ರಂಥಿಗಳು ಇವೆ. ಇವುಗಳಲ್ಲಿ ಜಠರಸಾರವೆಂಬ ಒಂದು ರಸವಿಶೇಷ ಉತ್ಪತ್ತಿಯಾಗುತ್ತದೆ. ಈ ಜಠರಸಾರವು ಜಠರಕ್ಕೆ ಆಹಾರ ಬಿದ್ದಾಗ ಬಹಳವಾಗಿ ಉತ್ಪತ್ತಿಯಾಗಿ ನಮ್ಮ ಆಹಾರದಲ್ಲಿರುವ ಸಸಾರಜನಕಪದಾರ್ಥಗಳನ್ನು ಕರಗಿಸಿ ಜೀರ್ಣವಾಗುವಹಾಗೆ ಮಾಡಿ ಜಠರದ ಒಳಪೊರೆಯ ಲೋಮನಾಳಗಳಲ್ಲಿರುವ ರಕ್ತಕ್ಕೆ ಸೇರುವಹಾಗೆ ಮಾಡುತ್ತದೆ. ಈ ಜಠರಸಾರವು ಕಡಮೆಯಾದಾಗ ಅಜೀರ್ಣ ವುಂಟಾಗುವದು. ಜಠರಸಾರವು ಆಹಾರವನ್ನು ಕೊಳೆಯದಹಾಗೆ ಕಾಪಾಡುವ ಶಕ್ತಿಯುಳ್ಳದ್ದಾಗಿದೆ.

ಕರಳುಗಳು. ಕರಳುಗಳಲ್ಲಿ ಸಣ್ಣಕರಳು ದೊಡ್ಡಕರಳು ಎಂದು ಎರಡು ಭಾಗ ಉಂಟು. ಅನ್ನಾಶಯದಿಂದ ಆಚೆಯೊದಲು ಒಳಭಾಗದ ಸಣ್ಣಕರಳು ಇವೆ. ಇದು ಸುಮಾರು ೧೪ ಅಡಿ ಉದ್ದವಾಗಿಯೂ ೧½ ಅಂಗಲ ಅಗಲವಾಗಿಯೂ ಇರುವ ಕೊಳವೆಯಾಗಿದೆ. ಇದರ ಒಳಭಾಗವು ಬಹಳ ತೆಳುವಾದ ಪೊರೆಯಿಂದ ಮಾಡಲ್ಪಟ್ಟಿದೆ. ದೂರಭಾಗವು ಚಕ್ರಾಕಾರವಾಗಿ ಉದ್ದವಾಗಿಯೂ ಇರುವ ತೆಳುವಾದ ಮಾಂಸಖಂಡಗಳಿಂದ ಮಾಡಲ್ಪಟ್ಟಿದೆ. ಇವುಗಳಿಂದಲೇ ಕರಳಿನಲ್ಲಿ ಸೇರತಕ್ಕ ಆಹಾರವು ತಿರುವುಹಾಕಲ್ಪಟ್ಟು ಮುಂದಕ್ಕೆ ತಳ್ಳಲ್ಪಡುವದು. ಈ ಸಣ್ಣ ಮಾಂಸಖಂಡಗಳ ಮೇಲೆ ಇನ್ನೊಂದು ವಿಧವಾದ ಸೂಕ್ಷ್ಮವಾದ ಹೊದಿಕೆ ಒಂದಿದೆ. ಕರಳಿನ ಒಳಭಾಗದಲ್ಲಿ ಅನೇಕ ಸೂಕ್ಷ್ಮಗ್ರಂಥಿಗಳಿವೆ. ಇವುಗಳಲ್ಲಿ ಆಹಾರ ಜೀರ್ಣಕ್ಕೆ ಬೇಕಾದ ರಸವಿಶೇಷಗಳು ಉತ್ಪತ್ತಿಯಾಗುವವು. ಚಿಕ್ಕ ಕರಳಿನಲ್ಲಿ ಸಾರಜನಕ ಮೇದಸ್ಸು ಪಿಷ್ಟಭೂತಗ

ಆಹಾರವು. ಪಾಲಗೆ— ಇದು ನಾವು ತೆಗೆದುಕೊಂಡ ಆಹಾರವನ್ನು ಬಾಯಿಯಲ್ಲಿ ಚೆನ್ನಾಗಿ ಶಿರುವಿಹಾಕಿ ಅದನ್ನು ಗಂಟಲೊಳಕ್ಕೆ ನೂಕುವದಕ್ಕೆ ಸಹಾಯ ಮಾಡುತ್ತದೆ. ನಮಗೆ ಪದಾರ್ಥಗಳ ರುಚಿಯನ್ನು ತಿಳಿಸುವ ಅವಯವವು. ಹಲ್ಲುಗಳು—ಇವು ಆಹಾರಪದಾರ್ಥಗಳನ್ನು ಚೆನ್ನಾಗಿ ಸುರುಗಿಸಿ ನುಣ್ಣಗಾಗಿ ಮಾಡಿ ಜೀರ್ಣರಸಗಳೊಡನೆ ಸೇರುವದಕ್ಕೆ ಯೋಗ್ಯವಾಗಿ ಮಾಡುತ್ತವೆ. ಆಹಾರವನ್ನು ಚೆನ್ನಾಗಿ ಅಗಿಯದೆ ನುಂಗಿದರೆ ಅಜೀರ್ಣ, ಹೊಟ್ಟೆನೋವು, ಛೇದಿ ಮುಂತಾದ ರೋಗಗಳು ಉಂಟಾಗುತ್ತವೆ

ನಮ್ಮ ಬಾಯಿನಲ್ಲಿ ಯಾವಾಗಲೂ ಒಂದು ವಿಧವಾದ ದ್ರವವಿರುವದು. ಇದು ಕೆಲವು ಕಾಲದಲ್ಲಿ ಹೆಚ್ಚು ಕಡವೆ ಯಾಗುವದು. ಈ ದ್ರವಕ್ಕೆ ಜೊಲ್ಲು ಎಂದು ಹೆಸರು. ಇದು ಬಾಯಲ್ಲಿರತಕ್ಕ ಲಾಲಾಗ್ರಂಥಿಗಳಿಂದ ಉತ್ಪತ್ತಿಯಾಗುತ್ತದೆ, ನಾವು ಸಿಹಿ ಮತ್ತು ಖಾರವಾದ ಪದಾರ್ಥಗಳನ್ನು ತಿಂದಕೂಡಲೇ ಈ ಗ್ರಂಥಿಗಳಲ್ಲಿ ಅಧಿಕವಾಗಿ ಜೊಲ್ಲು ಉತ್ಪತ್ತಿಯಾಗಿ ಬಾಯೊಳಕ್ಕೆ ಸುರಿಯುವದು. ಜೊಲ್ಲಿನ ಮುಖ್ಯ ಉಪಯೋಗಗಳು ಯಾವವೆಂದರೆ (೧) ನಮ್ಮ ಆಹಾರಪದಾರ್ಥಗಳಲ್ಲಿರತಕ್ಕ ಪಿಷ್ಟ (ಹಿಟ್ಟು) ಪದಾರ್ಥಗಳನ್ನು ಚೆನ್ನಾಗಿ ಕರಿಗಿಸಿ ಸಕ್ಕರೆಯಾಗಿ ಮಾಡಿ ನಮ್ಮ ಬಾಯಿಯ ಒಳಮೇಯಲ್ಲಿರತಕ್ಕ ರೋಮನಾಳಗಳ ಮಾರ್ಗವಾಗಿ ಶರೀರದ ಎಲ್ಲಾ ಭಾಗಗಳಿಗೂ ಸೇರುವಂತೆ ಮಾಡುವದು. (ಪಿಷ್ಟಪದಾರ್ಥಗಳು ಸ್ವಭಾವವಾಗಿ ನೀರಿನಲ್ಲಿ ಕರಗುವದಿಲ್ಲ) (೨) ಆಹಾರವನ್ನು ಅಗಿಯುವದಕ್ಕೂ ಮತ್ತು ಗಂಟಲೊಳಕ್ಕೆ ನೂಕುವದಕ್ಕೂ ಸಹಕಾರಿಯಾಗಿದೆ. (೩) ಬಾಯಿ ಒಳಭಾಗವನ್ನು ಒಣಗದಹಾಗೆ ಕಾಪಾಡುತ್ತದೆ. (೪) ಮಾತನಾಡುವದಕ್ಕೆ ಸಹಕಾರಿಯಾಗಿದೆ.

<u>ಅನ್ನನಾಳ</u> ನಾವು ಬಾಯಲ್ಲಿ ಚೆನ್ನಾಗಿ ಅಗಿದು ನುಂಗಿದ ಆಹಾರವು ಗಂಟಲಮಾರ್ಗವಾಗಿ ಅನ್ನನಾಳಕ್ಕೆ ಇಳಿಯುವದು. ಈ ಅನ್ನನಾಳವೆ ಎದೆಯಲ್ಲಿಳಿದು ವಪಿಯನ್ನು ದೂರಿ ಜಠರವೆಂಬ ಅನ್ನನಾಳಕ್ಕೆ ಹೋಗುವದು. ಈ ನಾಳಕ್ಕೆ ಆಹಾರವನ್ನೂ ನೀರನ್ನೂ ತಡೆಯತಡೆದು ಮುಂದಕ್ಕೆ ಬಿಡುವ ಒಂದು ಶಕ್ತಿ ಉಂಟು. ಇದನ್ನು ನಾವು ನೀರು ಕುಡಿಯುವಾಗ ಚೆನ್ನಾಗಿ ನೋಡಬಹುದು. ನಾವು ತಲೆ ಕೆಳಗಾಗಿ ನಿಂತರೆ ನಮ್ಮ ಗಂಟಲನ್ನು ದಾಟಿ ಸ್ವಲ್ಪ ದೂರ ಈ ಅನ್ನನಾಳದಲ್ಲಿ ಇಳಿದ ಆಹಾರವೂ ನೀರೂ ಮೇಲಕ್ಕೇಳಿದ ಕಾರಣಗಳಿಂದ ಬಾಯಿಗೆ ಸಾಧಾರಣವಾಗಿ ಪುನಃ ಬರುವದಿಲ್ಲ. ಆಹಾರವೂ ನೀರೂ ಈ ನಾಳದಲ್ಲೆಲ್ಲಾ ಸ್ವಲ್ಪದೂರ ಇಳಿದಮೇಲೆ

೧ ಪಿತ್ತರಸವು ಆಹಾರವಲ್ಲಿ ಇರುವ ಮೇದೋಭಾಗವನ್ನು ಕರಗಿಸಿ ಮೇಲೆಹೆ
ಳಿದ ರಸಾಯನಗಳ ಮಾರ್ಗನಾಗಿ ರಕ್ತಕ್ಕೆ ಸೇರುವಹಾಗೆ ಮಾಡುತ್ತದೆ.

೨ ಕರುಳಿನ ಒಳಭಾಗವನ್ನು ಒಣಗದ ಹಾಗೆ ಮಾಡುತ್ತದೆ

೩ ಕರುಳಿನಲ್ಲಿರುವ ಆಹಾರವು ಕೊಳೆಯುವಂತೆ ಇಡುವದು.

೪ ಮಲವಿಸರ್ಜನೆಗೆ ಬಹಳ ಸಹಕಾರಿಯಾಗಿರುವುದು.

ಮೇಲೆ ಹೇಳಿದ ಕಾರ್ಯಗಳನ್ನು ಮಾಡುವದಲ್ಲದೆ, ನಾವು ತೆಗೆದುಕೊಳ್ಳುವ ಆಹಾರದಲ್ಲಿರುವ ಪಿಷ್ಟಪದಾರ್ಥವನ್ನು ಮತ್ತೊಂದು ವಿಧವಾದ ಸಕ್ಕರೆಯಾಗಿ ಮಾಡಿ ಪಿತ್ತಜನಕಾಂಗದ ಒಳಗೆ ಇರುವ ಗೂಡುಗಳಲ್ಲಿ ಕೂಡಿಡುತ್ತಾ ಬರುತ್ತದೆ. ಇದು ಪಿತ್ತಜನಕಾಂಗದ ಇನ್ನೊಂದು ಮುಖ್ಯಕಾರ್ಯವಾಗಿದೆ ಪಿತ್ತಜನಕಾಂಗದಲ್ಲಿ ಕೆಲವು ಮೇಲೆ ಪಿತ್ತ ಉತ್ಪತ್ತಿಯಾಗಿ ಸ್ವಭಾವ ಮಾರ್ಗವಾಗಿ ಕರುಳಿಗೆ ಬರುವದಕ್ಕೇನಾದರೂ ಅಡಚಣೆಯಾಗಿದೆ ಹೊರಗೆಬಂದು ಸೇರುತ್ತದೆ. ಅದೆ ಸಾಂತಿವಾಡುವಹಾಗೆ ಸಂಕಟ ಮನ್ನುಂಟುಮಾಡುತ್ತದೆ. ಪಿತ್ತಜನಕಾಂಗ ಲ್ಲಿ ಪಿತ್ತರಸವು ಉತ್ಪತ್ತಿಯಾಗಿ ಅದನ್ನು ಮುಂದಕ್ಕೆ ತೆಗೆದುಕೊಂಡುಹೋಗುವ ಪಿತ್ತನಾಳಗಳಲ್ಲಿ ಏನಾದರೂ ವ್ಯತ್ಯಾಸಬಂದರೆ ಅದು ಪುನಃ ರಕ್ತದೊಡನೆ ವಿಶ್ರವಾಗುವದು. ಇದೇ ಅರಿಸಿವಕಾವಾಲೆಗೆ ಕಾರಣವಾಗಿ ಕಣ್ಣು ಮುಖ ಇವನ್ನೆಲ್ಲಾ ಬಹಳ ಹಳದೀ ಬಣ್ಣವನ್ನಾಗಿ ಮಾಡುವದು. ಪಿತ್ತಜನಕಾಂಗವು ಶರೀರದಲ್ಲಿ ಒಂದು ಮುಖ್ಯ ರಕ್ತಶೋಧಕಾವಯವವಾಗಿದೆ.

ಇಕಂಟ್ಯಾಕ್ಸ್, (ಆದಾಯದ ತೆರಿಗೆ).

I ಆದಾಯದಮೇಲೆ ಯಾವುದಾದರೂ ಒಂದು ತರದ ದರದಂತೆ ಸರಕಾರಕ್ಕೆ ಕೊಡುವ ತೆರಿಗೆಗೆ 'ಇಕಂಟ್ಯಾಕ್ಸ್' ಎಂದು ಹೆಸರು. ಈ ಮಾದರಿಯ ಲೆಕ್ಕಗಳಲ್ಲಿ ಆದಾಯ, ತೆರಿಗೆಯ ದರ, ಉಳಿಯುವ ಹಣ, ಈ ಮೂರು ವಿಷಯಗಳು ಸಾಮಾನ್ಯವಾಗಿ ಬರುವವು. ತ್ರೈರಾಶಿಕದಂತೆ ಈ ಬಗೆಯ ಲೆಕ್ಕಗಳನ್ನು ಸುಲಭವಾಗಿ ಮಾಡಬಹುದು.

ಲೆಲ್ಲಾ ಜೀರ್ಣಿಸಲ್ಪಟ್ಟು ರಕ್ತಸೇರುವದಕ್ಕೆ ಯೋಗ್ಯನಾಗುವವು. ಚಿಕ್ಕ ಕರಳುಗ ಳಲ್ಲಿ ಜೀರ್ಣಿಸಲ್ಪಟ್ಟ ಮೇದಸ್ಸು ಮಾತ್ರ ಇತರ ಪದಾರ್ಥಗಳಹಾಗೆ ಕರಳಿನ ಒಳಭಾಗ ವಲ್ಲಿರುವ ರಸಾಯನೀ ನಾಳಗಳ ಮಾರ್ಗವಾಗಿ ರಕ್ತಕ್ಕೆ ಸೇರುವದು. ಈ ರಸಾಯನಿ ಗಳಿಗೆ ಸೇರುವದಕ್ಕೆ ಮುಂಚೆ ಮೇದಸ್ಸು ಬಹುಸೂಕ್ಷ್ಮಕಣಗಳಾಗಿ ಒಡೆಯಲ್ಪಟ್ಟು ಹಾಲಿನಂತೆ ಆಗುತ್ತದೆ.

ದೊಡ್ಡಕರುಳು ಇದು ಸಣ್ಣಕರುಳಿನ ಮೊದಲಭಾಗನಾಗಿದೆ. ಸುಮಾರ ೬½ಅಡಿ ಉದ್ದವಾಗಿಯೂ ೨—೩ ಅಂಗುಲ ಅಗಲವಾಗಿಯೂ ಇದೆ. ಇದು ಆಕೃತಿ ಯಲ್ಲಿ ಹೊರತು ಇತರ ವಿಷಯಗಳಲ್ಲಿ ಚಿಕ್ಕ ಕರಳಿನ ಹಾಗೆಯೇ ಇದೆಯೆಂದು ಹೇಳಬ ಹುದು ಆದರೆ ಇದರಲ್ಲಿರತಕ್ಕ ರಸವಿಶೇಷಗಳು ಚಿಕ್ಕ ಕರಳಿನಲ್ಲಿ ಜೀರ್ಣಿಸದೆ ಮುಂದಕ್ಕೆ ತಳ್ಳಲ್ಪಟ್ಟು ಆಹಾರ ಪದಾರ್ಥಗಳನ್ನು ಜೀರ್ಣಮಾಡುತ್ತವೆ. ಮುಖ್ಯವಾಗಿ ಇದು ಹೆಂಬಾ ನೀರನ್ನು ಹೀರಿಕೊಳ್ಳುತ್ತದೆ.

ಮೂತ್ರಜನಕಾಂಗ(Liver) ಕಾಲಖಂಡ, ಯಕೃತ್ತು:—ಇದು ಉದರಾಂತ ರ್ದೇಶದಲ್ಲಿ ಜಠರದ ಬಲಭಾಗದಲ್ಲಿದೆ. ಇದು ಮೇಲುಗಡೆ ಪಪೆಗೆ ತಗಲಿದ ಹಾಗೆ ಇದೆ. ಇದರ ಕೆಳಭಾಗದಲ್ಲಿ ಕರುಳುಗಳೂ, ಬಲಭಾಗದ ಮೂತ್ರಜನಕಾಂಗವೂ ಇವೆ. ಇದು ಸುಮಾರಾಗಿ ಕೆಪ್ಪು ಬೆರಸಿದ ಕೆಂಪು ಬಣ್ಣ ಉಳ್ಳದ್ದಾಗಿದೆ. ಇದು ಸುಮಾರು ೪ ಸೇರು ತೂಕ ಉಳ್ಳದ್ದಾಗಿದೆ. ಇದು ಎಡಬಲಭಾಗಗಳಾಗಿ ಭಾಗಿಸಲ್ಪಟ್ಟಿದೆ. ಈ ಎರಡು ಭಾಗಗಳು ಒಳಗೆ ಸೂಕ್ಷ್ಮವಾದ ಅನೇಕ ಗೂಡುಗಳಿವೆ. ಇವುಗಳಲ್ಲಿ ಎಡ ಬಿಡದೆ ಅನೇಕ ಲೋಮನಾಳಗಳು ತುಂಬಿವೆ. ಇವುಗಳಲ್ಲಿ ಹರಿಯುವ ರಕ್ತದಿಂದಲೆ ಈ ಸಣ್ಣ ಗೂಡುಗಳು ಪಿತ್ತಕ್ಕೆ ಬೇಕಾದ ಸಾಮಗ್ರಿಗಳನ್ನು ತೆಗೆದುಕೊಂಡು ಪಿತ್ತರ ಸವನ್ನು ಮಾಡುತ್ತದೆ.

ಪಿತ್ತವು ಹಳದಿಯಾಗಿ ಕಹಿಯಾ ಇರುವ ಒಂದು ಕ್ಷಾರಸ್ವಭಾವವುಳ್ಳ ರಸವಾಗಿದೆ. ಇದು ಸದಾ ಕಾಲವೆಲ್ಲೂ ಕಾಲಖಂಡದಲ್ಲಿ ಉತ್ಪತ್ತಿಯಾಗುತ್ತಲೇ ಇರುವದು. ಆಹಾರವು ಜಠರದಿಂದ ಸಣ್ಣಕರುಳಿಗೆ ಬಂದು ಸೇರುವಾಗ ಕಾಲಖಂಡದಿಂದ ಪಿತ್ತರಸವು ಒಂದು ದೊಡ್ಡ ನಾಳದ ಮಾರ್ಗವಾಗಿ ಆಹಾರದೊಡನೆ ಸೇರುತ್ತದೆ. ಕರುಳಿನಲ್ಲಿ ಆಹಾರವಿಲ್ಲದಿದ್ದರೆ ಉತ್ಪತ್ತಿಯಾದ ಪಿತ್ತವು ಪಿತ್ತಕೋಶದಲ್ಲಿ ಸೇರುತ್ತದೆ.

೧ ಪಿತ್ತರಸವು ಆಹಾರದಲ್ಲಿ ಇರುವ ಮೇದೋಭಾಗವನ್ನು ಕರಗಿಸಿ ಮೇಲೆಹೇಳಿದ ರಸಾಯನಗಳ ಮಾರ್ಗನಾಗಿ ರಕ್ತಕ್ಕೆ ಸೇರುವಹಾಗೆ ಮಾಡುತ್ತದೆ.

೨ ಕರುಳಿನ ಒಳಭಾಗವನ್ನು ಒಣಗದ ಹಾಗೆ ಮಾಡುತ್ತದೆ.

೩ ಕರುಳಿನಲ್ಲಿರುವ ಆಹಾರವು ಕೊಳೆಯುವಂತೆ ಇಡುವದು.

೪ ಮಲವಿಸರ್ಜನೆಗೆ ಬಹಳ ಸಹಕಾರಿಯಾಗಿರುವುದು.

ಮೇಲೆ ಹೇಳಿದ ಕಾರ್ಯಗಳನ್ನು ಮಾಡುವದಲ್ಲದೆ, ನಾವು ತೆಗೆದುಕೊಳ್ಳುವ ಆಹಾರದಲ್ಲಿರುವ ಪಿಷ್ಟಪದಾರ್ಥವನ್ನು ಮತ್ತೊಂದು ವಿಧವಾದ ಸಕ್ಕರೆಯಾಗಿ ಮಾಡಿ ಪಿತ್ತಜನಕಾಂಗದ ಒಳಗೆ ಇರುವ ಗೂಡುಗಳಲ್ಲಿ ಕೂಡಿಡುತ್ತಾ ಬರುತ್ತದೆ. ಇದು ಪಿತ್ತಜನಕಾಂಗದ ಇನ್ನೊಂದು ಮುಖ್ಯಕಾರ್ಯವಾಗಿದೆ ಪಿತ್ತಜನಕಾಂಗದಲ್ಲಿ ಕೆಲವು ಸೀಳೆ ಪಿತ್ತ ಉತ್ಪತ್ತಿಯಾಗಿ ಸ್ವಭಾವ ಮಾರ್ಗವಾಗಿ ಕರುಳಿಗೆ ಬರುವದಕ್ಕೇನಾದರೂ ತಡವಾದರೆ ಹೊರಗೆಬಂದು ಸೇರುತ್ತದೆ. ಅದೆ ವಾಂತಿಮಾಡುವಹಾಗೆ ಸಂಕಟವನ್ನುಂಟುಮಾಡುತ್ತದೆ. ಪಿತ್ತಜನಕಾಂಗದಲ್ಲಿ ಪಿತ್ತರಸವು ಉತ್ಪತ್ತಿಯಾಗಿ ಅದನ್ನು ಮುಂದಕ್ಕೆ ತೆಗೆದುಕೊಂಡುಹೋಗುವ ಪಿತ್ತನಾಳಗಳಲ್ಲಿ ಏನಾದರೂ ವ್ಯತ್ಯಾಸಬಂದರೆ ಅದು ಪುನಃ ರಕ್ತದೊಡನೆ ವಿಶ್ರಮವಾಗುವದು. ಇದೇ ಅರಿಸಿವಕಾಮಾಲೆಗೆ ಕಾರಣವಾಗಿ ಕಣ್ಣು ಮುಖ ಇವನ್ನೆಲ್ಲಾ ಬಹಳ ಹಳದೀ ಬಣ್ಣವನ್ನಾಗಿ ಮಾಡುವದು. ಪಿತ್ತಜನಕಾಂಗವು ಶರೀರದಲ್ಲಿ ಒಂದು ಮುಖ್ಯ ರಕ್ತಶೋಧಕಾವಯವವಾಗಿದೆ.

ಇಕಂಟ್ಯಾಕ್ಸ್, (ಆದಾಯದ ತೆರಿಗೆ).

ಆದಾಯದಮೇಲೆ ಯಾವುದಾದರೂ ಒಂದು ತರದ ದರದಂತೆ ಸರಕಾರಕ್ಕೆ ಕೊಡುವ ತೆರಿಗೆಗೆ 'ಇಕಂಟ್ಯಾಕ್ಸ್' ಎಂದು ಹೆಸರು. ಈ ಮಾದರಿಯ ಲೆಕ್ಕಗಳಲ್ಲಿ ಆದಾಯ, ತೆರಿಗೆಯ ದರ, ಉಳಿಯುವ ಹಣ, ಈ ಮೂರು ವಿಷಯಗಳು ಸಾಮಾನ್ಯವಾಗಿ ಬರುವವು. ತ್ರೈರಾಶಿಕದಂತೆ ಈ ಬಗೆಯ ಲೆಕ್ಕಗಳನ್ನು ಸುಲಭವಾಗಿ ಮಾಡಬಹುದು.

ಲೆಲ್ಲಾ ಜೀರ್ಣಿಸಲ್ಪಟ್ಟು ರಕ್ತಸೇರುವದಕ್ಕೆ ಯೋಗ್ಯವಾಗುವವು. ಚಿಕ್ಕ ಕರಳುಗಳಲ್ಲಿ ಜೀರ್ಣಿಸಲ್ಪಟ್ಟ ಮೇದಸ್ಸು ಮಾತ್ರ ಇತರ ಪದಾರ್ಥಗಳಹಾಗೆ ಕರಳಿನ ಒಳಭಾಗವಲ್ಲಿರುವ ರಸಾಯನೀ ನಾಳಗಳ ಮಾರ್ಗವಾಗಿ ರಕ್ತಕ್ಕೆ ಸೇರುವದು. ಈ ರಸಾಯನಿಗಳಿಗೆ ಸೇರುವದಕ್ಕೆ ಮುಂಚೆ ಮೇದಸ್ಸು ಬಹುಸೂಕ್ಷ್ಮಕಣಗಳಾಗಿ ಒಡೆಯಲ್ಪಟ್ಟು ಹಾಲಿನಂತೆ ಆಗುತ್ತದೆ.

ದೊಡ್ಡಕರುಳು ಇದು ಸಣ್ಣಕರುಳಿನ ಮೊದಲಭಾಗನಾಗಿದೆ. ಸುಮಾರ ೬ ಅಡಿ ಉದ್ದವಾಗಿಯೂ ೨—೩ ಅಂಗುಲ ಅಗಲವಾಗಿಯೂ ಇದೆ. ಇದು ಆಕೃತಿಯಲ್ಲಿ ಹೊರತು ಇತರ ವಿಷಯುಗಳಲ್ಲಿ ಚಿಕ್ಕ ಕರಳಿನ ಹಾಗೆಯೇ ಇದೆಯೆಂದು ಹೇಳಬಹುದು ಆದರೆ ಇದರಲ್ಲಿರತಕ್ಕ ರಸವಿಶೇಷಗಳು ಚಿಕ್ಕ ಕರಳಿನಲ್ಲಿ ಜೀರ್ಣಿಸದೆ ಮುಂದಕ್ಕೆ ತಳ್ಳಲ್ಪಟ್ಟು ಆಹಾರ ಪದಾರ್ಥಗಳನ್ನು ಜೀರ್ಣವಾಡುತ್ತವೆ. ಮುಖ್ಯವಾಗಿ ಇದು ತುಂಬಾ ನೀರನ್ನು ಹೀರಿಕೊಳ್ಳುತ್ತದೆ.

ಪಿತ್ತಜನಕಾಂಗ(Liver) ಕಾಲಖಂಡ, ಯಕೃತ್ತು:—ಇದು ಉದರಾಂತರ್ದೇಶದಲ್ಲಿ ಜಠರದ ಬಲಭಾಗದಲ್ಲಿದೆ. ಇದು ಮೇಲುಗಡೆ ಪಪೆಗೆ ತಗಲಿದ ಹಾಗೆ ಇದೆ. ಇದರ ಕೆಳಭಾಗದಲ್ಲಿ ಕರುಳುಗಳೂ, ಬಲಭಾಗದ ಮೂತ್ರಜನಕಾಂಗವೂ ಇವೆ. ಇದು ಸುಮಾರಾಗಿ ಕಪ್ಪು ಬೆರಸಿದ ಕೆಂಪು ಬಣ್ಣ ಉಳ್ಳದ್ದಾಗಿದೆ. ಇದು ಸುಮಾರು ೪ ಸೇರು ತೂಕ ಉಳ್ಳದ್ದಾಗಿದೆ. ಇದು ಎಡಬಲಭಾಗಗಳಾಗಿ ಭಾಗಿಸಲ್ಪಟ್ಟಿದೆ. ಈ ಎರಡು ಭಾಗಗಳು ಒಳಗೆ ಸೂಕ್ಷ್ಮವಾದ ಅನೇಕ ಗೂಡುಗಳಿವೆ. ಇವುಗಳಲ್ಲಿ ಎಡಬಿಡದೆ ಅನೇಕ ಲೋಮನಾಳಗಳು ತುಂಬಿವೆ. ಇವುಗಳಲ್ಲಿ ಹರಿಯುವ ರಕ್ತದಿಂದಲೆ ಈ ಸಣ್ಣ ಗೂಡುಗಳು ಪಿತ್ತಕ್ಕೆ ಬೇಕಾದ ಸಾಮಗ್ರಿಗಳನ್ನು ತೆಗೆದುಕೊಂಡು ಪಿತ್ತರಸವನ್ನು ಮಾಡುತ್ತದೆ.

ಪಿತ್ತವು ಹಳದಿಯಾಗಿ ಕಹಿಯಾಗಿ ಇರುವ ಒಂದು ಕ್ಷಾರಸ್ವಭಾವವುಳ್ಳ ರಸವಾಗಿದೆ. ಇದು ಸದಾ ಕಾಲವಲ್ಲೂ ಕಾಲಖಂಡದಲ್ಲಿ ಉತ್ಪತ್ತಿಯಾಗುತ್ತಲೇ ಇರುವದು. ಆಹಾರವು ಜಠರದಿಂದ ಸಣ್ಣ ಕರುಳಿಗೆ ಬಂದು ಸೇರುವಾಗ ಕಾಲಖಂಡದಿಂದ ಪಿತ್ತರಸವು ಬಂದು ದೊಡ್ಡ ನಾಳದ ಮಾರ್ಗವಾಗಿ ಆಹಾರದೊಡನೆ ಸೇರುತ್ತದೆ. ಕರುಳಿನಲ್ಲಿ ಆಹಾರವಿಲ್ಲದಿದ್ದರೆ ಉತ್ಪತ್ತಿಯಾದ ಪಿತ್ತವು ಪಿತ್ತಕೋಶದಲ್ಲಿ ಸೇರುತ್ತದೆ.

ಅಪರಾಧಗಳಿಗೆ ತಕ್ಕ ಶಿಕ್ಷೆಯಾಗುವಂತೆ ಸರಕಾರದವರು ಕಾನೂನುಗಳನ್ನು ಮಾಡಿದರು ಅವುಗಳನ್ನು ಜಾರಿಯಲ್ಲಿ ತರುವದಕ್ಕೆ ಕೋರ್ಟು ಕಛೇರಿ ಮೊದಲಾದ ವ್ಯವಸ್ಥೆಗಳನ್ನು ಏರ್ಪಡಿಸುತ್ತಾರೆ. ಆದರೆ ಬಡವರಾಗಿಯೂ ಕೂಲಿಸಾಲಿ ಮೊದಲಾದವುಗಳನ್ನು ಮಾಡಿ ಜೀವಿಸತಕ್ಕವರಾಗಿಯೂ ಇರತಕ್ಕ ಸಂಸಾರಿಗಳನ್ನು ಪಡಖಾನೆಗಳಿಗೆ ಆಕರ್ಷಿಸಿ ಪಾನವಮಾಡುವದರಲ್ಲಿ ಅವರಿಗೆ ಆಸಕ್ತಿಯನ್ನುಂಟುಮಾಡಿ ಅವರು ಕೂಲಿಯಿಂದ ಸಂಪಾದಿಸಿದ ದ್ರವ್ಯಗಳನ್ನು ಕಸುಗೊಂಡು ಅವರಿಗೂ ಅವರ ಹೆಂಡರು ಮಕ್ಕಳಿಗೂ ಅನ್ನ ವಸ್ತ್ರಗಳಿಗೆ ನ್ಯೂನತೆಯನ್ನುಂಟುಮಾಡತಕ್ಕ ಜನಗಳ ವಿಷಯದಲ್ಲಿ ಸರಕಾರವು ಪ್ರತಿಕೂಲರಾಗಲಿಲ್ಲವಲ್ಲಾ ಇಂಥಾವರ ಮರುಳಿಗೆ ಸಿಕ್ಕಿ ನನ್ನ ಗಂಡನು ತಾನು ಕೆಡುವದಲ್ಲದೆ ನಮ್ಮನ್ನು ಕೆಡಿಸುತ್ತಲಿದಾನಲ್ಲಾ ದೇವರಿಗೂ ನಮ್ಮಮೇಲೆ ದಯವಿಲ್ಲದೆ ಹೋಯಿತಲ್ಲಾ, ಇನ್ನು ಈತನು ಪಾನಾಸಕ್ತಿಯನ್ನು ಬಿಟ್ಟು ಕ್ರಮವಾಗಿ ನಡೆದುಕೊಳ್ಳದೇ ಇದ್ದಪಕ್ಷದಲ್ಲಿ ಈ ದುರವಸ್ಥೆಯಲ್ಲಿ ಬದುಕುವದಕ್ಕಿಂತ ವಿಷವನ್ನಾದರೂ ತಿಗೆದುಕೊಂಡು ಈ ಕಷ್ಟದೆಸೆಯನ್ನು ತಪ್ಪಿಸಿಕೊಳ್ಳುವದು ಉತ್ತಮ " ಎಂಬುದಾಗಿ ತನ್ನ ಮಕ್ಕಳಸಂಗಡ ಹೇಳುತ್ತಾ ಇದ್ದಳು. ಈ ಮಾತುಗಳು ಮನೆಯನ್ನು ಪ್ರವೇಶಿಸುತ್ತಲಿದ್ದ ಲೆನರ್ಡಿನ ಕಿವಿಗಳಿಗೆ ಶೂಲದಂತೆ ಪ್ರವೇಶಿಸಿದವು. ಆತನು ಹಾಗೆಯೇ ಸಂತಿರುಗಿ ಏಕಾಂತವಾದ ಒಂದು ಪ್ರದೇಶಕ್ಕೆ ಹೋಗಿ ತನ್ನ ಅವಿಜ್ಞಾತೆಯನ್ನು ಅದರಿಂದ ಉಂಟಾಗುತ್ತಲಿದ್ದ ಅನರ್ಥಗಳನ್ನು ಪರ್ಯಾಲೋಚಿಸಿ, ಪಾನದಲ್ಲಿ ಅಪೇಕ್ಷೆಯನ್ನು ಪಾಯಿಗಳ ಸಹವಾಸವನ್ನು ಬಿಡುತ್ತೇನೆಂದು ನಿಷ್ಕರ್ಷೆಮಾಡಿ, ಅಲ್ಲಿಂದ ಮನೆಗೆ ಬಂದು ತನ್ನ ಹೆಂಡತಿಯನ್ನೂ ಮಕ್ಕಳನ್ನೂ ಕುರಿತು ಅವರ ಸಂಭಾಷಣೆಯಿಂದ ತಾನು ಮಾಡಿದ ನಿಷ್ಕರ್ಷೆಯನ್ನು ತಿಳಿಸಿದನು. ಕೂಡಲೆ ಹರಟ್ರೂಡಳು ಅತನನ್ನು ಕುರಿತು ಕಾಡುಕರ ಸಂಕಲ್ಪವೂ ನಿಷ್ಕರ್ಷೆಯೂ ಸ್ಥಿರವಾದುದಲ್ಲ. ಬಹಳ ಚಂಚಲವಾದದ್ದು. ಪಾನಾಪೇಕ್ಷೆಯು, ಪಾಯಿಗಳ ಸಹವಾಸವೂ ಶ್ರೇಯಸ್ಕರವಲ್ಲವೆಂದು ನಿಮಗಳು ತಿಳಿದುಕೊಂಡಿರುವದಿಲ್ಲ. ಅವುಗಳಿಂದ ಉಂಟಾಗತಕ್ಕ ಅನರ್ಥಗಳು ಇವೇ ತಿಳಿಯದೇ ಇರುವದಿಲ್ಲ. ಆದಾಗ್ಯೂ ಪಾನಾಸಕ್ತಿಯನ್ನು ಪಾಯಿಗಳ ಸಹವಾಸವನ್ನು ಬಿಡತಕ್ಕ ಶಕ್ತಿಯು ಇವರಿಗೆ ಉಂಟಾಗುವದು ಅಪೂರ್ವ. ನರಿಯು ಕಕ್ಕಿಯನ್ನು ತಿನ್ನುವದಿಲ್ಲಾ ಎಂಬದಾಗಿ ಹೊಟ್ಟೇನೋವು ಅಧಿಕವಾದಾಗ ದೃಢನಾದ ಸಂಕಲ್ಪವನ್ನು ಮಾಡುವದು. ಹೊಟ್ಟೆನೋವಿನ ಜೊತೆಯಲ್ಲಿಯೇ ಈ ಸಂಕಲ್ಪವೂ

ಮೊದಲಾ ಆದಾಯ 600 ರೂ., ದರ ರೂ 1ಕ್ಕೆ 8 ಪೈ., ತೆರಿಗೆ 25 ರೂ. ಆದರೆ ಉಳಿಯುವುದು 575 ರೂ.

ಪ್ರಶ್ನೆ. ೧. ವರುಷ 1 ಕ್ಕೆ 600 ರೂ. ಆದಾಯ ಉಳ್ಳವನು ರೂ. 1 ಕ್ಕೆ ೮ ಪೈಯಂತೆ ತೆರಿಗೆ ಕೊಟ್ಟರೆ ಎಷ್ಟು ಆದಾಯ ಉಳಿಯುವುದು?

ರೂ. 1 ಕ್ಕೆ 8 ಪೈ ತೆರಿಗೆ. ಹೋಗಿ ಉಳಿಯುವುದು 184 ಪೈ ಅಥವಾ $\frac{23}{24}$ ರೂ.

1 ರೂಪಾಯಿಗೆ ತೆರಿಗೆ ಕಳೆದು $\frac{23}{24}$ ರೂ. ಉಳಿಯುವುದು.

600 ರೂ. ಗೆ ... $\frac{23}{24} \times \frac{600}{1} = 575$ ರೂ.

೨. ವರುಷಕ್ಕೆ 600 ರೂ. ಗಳ ಆದಾಯ ಉಳ್ಳವನು ರೂ. 1 ಕ್ಕೆ ಯಾವ ದರದಿಂದ ತೆರಿಗೆ ಕೊಟ್ಟರೆ 575 ರೂ. ಉಳಿಯುವುದು?

ಆದಾಯ 600 ರೂ. ಉಳಿಯುವುದು 575 ರೂ. ತೆರಿಗೆ. 600 − 575 = 25 ರೂ.

600 ರೂಪಾಯಿಗಳ ತೆರಿಗೆ 25 ರೂ. ಇರುವುದು.

1 ರೂ. ... $\frac{25}{600} = \frac{1}{24}$ ರೂ. ಅಥವಾ 8 ಪೈ.

೩. ಒಬ್ಬನು ರೂ. 1 ಕ್ಕೆ 8 ಪೈಯಂತೆ ತೆರಿಗೆ ಕೊಟ್ಟಮೇಲೆ 575 ಉಳಿಯುವದಾದರೆ ಅವನ ಆದಾಯವೆಷ್ಟು?

1 ರೂ. ಯಲ್ಲಿ ತೆರಿಗೆ 8 ಪೈ ಕೊಟ್ಟರೆ $\frac{23}{24}$ ರೂ. ಉಳಿಯುವುದು.

$\frac{23}{24}$ ರೂ ಗಳು ಉಳಿಯುವುದಕ್ಕೆ 1 ರೂ ಯ ಆದಾಯವಿರಬೇಕು.

1 ರೂ ... $\frac{24}{23}$ ರೂ. ...

575 ರೂ. ... $\frac{575 \times 24}{23} = 600$ ರೂ. ಆದಾಯ.

8 ಪೈ ಇದ್ದದ್ದು 6 ಪೈ. ಆದ್ದರಿಂದ 2 ಪೈ. ಉಳಿಯಲು 1 ರೂ ಆದಾಯ

1 $\frac{1}{2}$ ರೂ.

$6\frac{1}{4}$ ರೂ. × 192 ಪೈ. 192 × $6\frac{1}{4}$ × $\frac{1}{2}$

= 600 ರೂ. ಮೊದಲಿನ ಆದಾಯ.

೫. ಒಬ್ಬನು ರೂ. 1 ಕ್ಕೆ 6 ಪೈ. ಯಂತೆ ಆದಾಯದ ತೆರಿಗೆಯನ್ನು ಕೊಟ್ಟು ಉಳಿದ-ದರ $\frac{1}{25}$ ಭಾಗವನ್ನು ದಾನಮಾಡಲಾಗಿ ಅವನಲ್ಲಿ 1488 ರೂ. ಗಳು ಉಳಿದುವು. ಅವನ ಆದಾಯವೆಷ್ಟು?

1 ರೂ. = 16 ಆ.– ತೆರಿಗೆ ಕಳೆದರೆ $15\frac{1}{2}$ ಆ, ಉಳಿಯುವುದು ಇದರ $\frac{1}{25}$ ದಾನಕ್ಕೆ.

= $\frac{31}{2} \times \frac{1}{25} = \frac{31}{50}$; $15\frac{1}{2}$ ಆ. – $\frac{31}{50} = \frac{744}{50}$ ಆಣೆ. ಉಳಿಯಲು: 1 ರೂ. ಆದಾಯ.

1 $\frac{50}{744}$ ಆಣೆ.

1488 ರೂ. × 16 ಆ. ... $\frac{1488 \times 50 \times 16}{744}$

= 1600 ರೂ. ಆದಾಯ.

ಪ್ರಶ್ನೆಗಳು.

೧. ವರುಷ 1 ಕ್ಕೆ 3360 ರೂ. ಗಳ ಆದಾಯವುಳ್ಳವನು ರೂ 1 ಕ್ಕೆ 4 ಪೈ. ಯಂತೆ ಟ್ಯಾಕ್ಸ್ ಕೊಟ್ಟಮೇಲೆ ಅವನಲ್ಲಿ ಉಳಿಯುವುದೆಷ್ಟು?

600 ರೂ. ಗಳಿಗೆ ಕಡಿವೆಯೊದತಕ್ಕೆ $6\frac{1}{4}$ ರೂ.

1 ರೂ. ... $\frac{25}{4\times 600}=\frac{1}{96}$ರೂ. 2ಪೈ

೩. ಒಬ್ಬನು ವರ್ಷಕ್ಕೆ 600 ರೂ. ಗಳ ಆದಾಯವುಳ್ಳವನಾಗಿದ್ದು ಇನ್ ಕಂಟ್ಯಾಕ್ಸ್ ಕೊಟ್ಟಮೇಲೆ 575 ರೂ. ಉಳಿಸುತ್ತಿದ್ದನು. ತೆರಿಗೆಯು ದರ ಕಡಿಮೆಯಾದುದರಿಂದ ಈಗ $581\frac{1}{4}$ ರೂ. ಗಳು ಉಳಿಯುತ್ತವೆ. ಕಡಿಮೆಯು ದರವೆಷ್ಟು ?

$581\frac{1}{4}-575=6\frac{1}{4}$ ರೂ.

600 ರೂ. ಗಳಿಗೆ. $6\frac{1}{4}$ ರೂ. ತೆರಿಗೆ ಕಡಮೆ.

1 ರೂ. ಗೆ ... $\frac{25}{4+600}=\frac{1}{96}$ರೂ. 2ಪೈ

೪. ಒಬ್ಬನ ಆದಾಯವು ವರುಷಕ್ಕೆ 120 ರೂ ಗಳು ಹೆಚ್ಚಿದರೂ ತೆರಿಗೆ ರೂ. ಗೆ 8 ಪೈ. ಇದ್ದುದು 6 ಪೈ. ಆದ್ದರಿಂದ ಮೊದಲಿಗಿಂತ $2\frac{1}{2}$ ರೂ ಗಳು ಕಡಿಮೆ ಕೊಡುತ್ತಾನೆ. ಅವನ ಮೊದಲಿನ ಆದಾಯವೆಷ್ಟು ?

ಹೊಸದಾಗಿ ಹೆಚ್ಚಿದ ಆದಾಯ 120 ರೂ. ಗಳು. ಇದಕ್ಕೆ ಈಗಿನ

ತೆರಿಗೆ 6 ಪೈ

1 ರೂ. ಗೆ. 6 ಪೈ.

120 ರೂ. ಗಳಿಗೆ $3\frac{3}{4}$ ರೂ. ತೆರಿಗೆ ಕಡಮೆ.

$2\frac{1}{2}$ ರೂ. ಮೊದಲಿಗಿಂತ ಈಗ ಕಡಮೆ ಕೊಡುವುದು.

$6\frac{1}{4}$ ಒಟ್ಟು ಕಡಮೆಯಾದ ಹಣ

ಚ ರಿ ತ್ರೆ.

—:o:—

[ತರಗತಿ IV.] ಪ ಪ್ಪ ಣಿ .

ಎರಡು ದಿವಸ ಬೋಧಿಸಬೇಕು.
ಕಾಲ= ೪೦ ನಿಮಿಷಗಳು.

[ಉಪಕರಣಗಳು= ಇಂಡಿಯಾ, ಮತ್ತು ಏಷ್ಯಾ ವ್ಯಾಪಗಳು, ಹಲಿಗೆಯಮೇಲೆ ಬರೆದಿರುವ ಇಂಡಿಯಾ ಪಠ, ಯುದ್ಧರಂಗದ ನಕ್ಷೆಗಳು, ಆಗಿನಕಾಲದ ಜನಗಳ ಆಕೃತಿ, ಉಡುಪು, ಆಯುಧ ಮುಂತಾದವುಗಳ ಚಿತ್ರಪಠಗಳು ಮೊದಲಾದವುಗಳನ್ನು ತಂದಿರಬೇಕು.]

॥ ಘಸ್ನೀಮಹಮ್ಮದ್[6]. ॥

ವಿಷಯ.	ಬೋಧನಾ ಕ್ರಮ.
೧. ಸಾಮಾನ್ಯ ವಿಷಯಗಳು. (೧) ಘಸ್ನೀಮಹಮ್ಮದನು, ಘಸ್ನೀ ಮನಿತನದ ಮೂಲ ಪುರುಷನಾದ ಸಬಕ್ತಿಗೀನನ ಮಗನು. (೨) ಕ್ರಿ; ಶಕ ೯೯೬ ರಲ್ಲಿ ತಂದೆಯು ಸಾಯಲು ಅದೇ ವರ್ಷದಲ್ಲಿಯೇ ಪಟ್ಟಕ್ಕೆ ಬಂದು, ೧೦೩೦ ರವರವಿಗೆ (೩೪ ವರ್ಷಗಳು) ಆಳಿದನು. (೩) ಇವನಿಗೆ ಸುಲ್ತಾನ್ ಮಹಮ್ಮದನೆಂದು ಬೇರೊಂದು ನಾಮವಿರುವುದು.	ಬಾಲಕರಿಗೆ ಈ ನಾಲ್ಕು ಸಾಮಾನ್ಯ ವಿಷಯಗಳನ್ನೂ ಪ್ರಶ್ನೆ ಮೂಲಕ ತಿಳಿಯುಪಡಿಸಿ ಉತ್ತರಗಳನ್ನು ಅವರಿಂದಲೇ ಸಾಧ್ಯವಾದಮಟ್ಟಿಗೂ ಹೊರಡಿಸಲು ಪ್ರಯತ್ನಪಡಬೇಕು. ಮತ್ತು ಇವನ ರಾಜಧಾನಿಯನ್ನು ಏಷ್ಯಾ ವ್ಯಾಪಿನಲ್ಲಿ ಯಾವಸ್ಥಳದಲ್ಲಿರುವುದೋ ಅದನ್ನು ತೋರಿಸುವಂತೆ ಹೇಳಬೇಕು.

೨. ಒಬ್ಬನು ರೂ. 1 ಕ್ಕೆ 8 ಪೈ. ಯಂತೆ ಲೋಕಲ್‌ಸೆಸ್ ಸೇರಿಸಿ 76 ರೂ. 8. ಆ. ಕಂದಾಯ ಕೊಡುತ್ತಾನೆ. ಅವನ ನಿಜವಾದ ಕಂದಾಯವೆಷ್ಟು ?

೩. ಒಬ್ಬನು ರೂ. 1 ಕ್ಕೆ 8 ಪೈ: ಯಂತೆ ತೆರಿಗೆ ಕೊಟ್ಟಮೇಲೆ ಅವನಲ್ಲಿ 1840 ರೂ. ಗಳು ಉಳಿಯುವುವು. ಅವನ ಒಟ್ಟು ಆದಾಯವೆಷ್ಟು ?

೪ ಇಂಕಂಟ್ಯಾಕ್ಸ್ ಪೌಂಡು 1 ಕ್ಕೆ 8 ಪೆನ್ನಿಗಳಿದ್ದದ್ದು 5 ಪೆನ್ನಿಗಳಿಗೆ ಇಳಿದ್ದರಿಂದ ಒಬ್ಬನಿಗೆ 5 ಪೌಂಡುಗಳು ಉಳಿದುವು. ಅವನ ಆದಾಯವೆಷ್ಟು ?

೫ ಒಬ್ಬನ ಆದಾಯವು ವರುಷ 1 ಕ್ಕೆ 240 ಪೌಂಡುಗಳು ಹೆಚ್ಚಿತು. ತೆರಿಗೆಯು ದರವು 9 ಪೆನ್ನಿಗಳಿದ್ದುದ್ದು 6 ಪೆನ್ನಿಯಾದ್ದರಿಂದ ಹೊದಲಿಗಿಂತ 3 ಪೌಂಡುಗಳು ಕಡಮೆ ತೆರಿಗೆ ಕೊಡುತ್ತಾನೆ. ಅವನ ಹೊದಲಿನ ಆದಾಯವೆಷ್ಟು ?

೬ ಒಬ್ಬನು ರೂ 1ಕ್ಕೆ ೦ ಪೈಯಂತೆ ತೆರಿಗೆ ಕೊಟ್ಟು ಉಳಿದ್ದರ $\frac{3}{4}$ ಭಾಗವನ್ನು ಗೃಹಕೃತ್ಯಕ್ಕೆ ವೆಚ್ಚಮಾಡಲು ಅವನಲ್ಲಿ 260 ರೂ 3 ಆಣೆ ಉಳಿದಾವು. ಅವನ ಆದಾಯವೆಷ್ಟು ?

೭ ಒಂದು ವರ್ಷದಲ್ಲಿ ಅರ್ಧದವರೆಗೆ ತೆರಿಗೆಯ ದರ ರೂ 1 ಕ್ಕೆ 1 ಆಣೆ. ಉಳಿದ ಅರ್ಧ 8 ಪೈ. ಹೀಗೆ ಇದ್ದುದರಿಂದ ಒಬ್ಬನು ತೆರಿಗೆ ಕೊಟ್ಟಮೇಲೆ ಅವನಲ್ಲಿ 1895 ರೂ. 13 ಆ. 8 ಪೈ ಉಳಿದುವು. ಅವನ ಆದಾಯವೆಷ್ಟು ?

ಇಂಕಂಟ್ಯಾಕ್ಸಿನ ದರ ರೂ 1-ಕ್ಕೆ 10 ಪೈ ಇದ್ದಾಗ ಒಬ್ಬನು 75 ರೂ. ಗಳ ತೆರಿಗೆ ಕೊಡುತ್ತಿದ್ದನು. ತೆರಿಗೆಯ ದರ ಕಡಮೆಯಾದ್ದರಿಂದ 52 ರೂ. 8 ಆಣೆ ಮಾತ್ರ ಕೊಡುತ್ತಾನೆ. ಅವನಿಗೆ ರೂ. 1 ಕ್ಕೆ ತೆರಿಗೆ ಎಷ್ಟು ಕಡಮೆಯಾಯಿತು ?

ಕೆ. ರಾಮಸ್ವಾಮಯ್ಯಂಗಾರ್.

ವಿದ್ಯಾದಾಯಿನಿ.

ಭಾಗ V.] ಮೇ ೧೯೦೦. [ಸಂಚಿಕೆ ೫.

ಎಡಿಟರವರ ನೋಟ್ಸ್.

ನಮ್ಮ ದೇಶದ ಪ್ರಾಚೀನವಿದ್ಯಾಭ್ಯಾಸಕ್ರಮಕ್ಕೂ ಈಗ ನಡೆಯುತಿರುವ ವಿದ್ಯಾಭ್ಯಾಸಕ್ರಮಕ್ಕೂ ಮುಖ್ಯವಾದ ಭೇದವೊಂದಿದೆ. ಪೂರ್ವದಲ್ಲಿ ವಿದ್ಯಾರ್ಥಿಗಳು ಅಭ್ಯಸಿಸುತಿದ್ದ ಶಾಸ್ತ್ರಗಳು ಪ್ರಾಯಶಃ ಆತ್ಮವಿಷಯಕವಾದವುಗಳೇ ಆಗಿದ್ದವು. ಬಹಿಃ ಪ್ರಪಂಚಕ್ಕೆ ಸಂಬಂಧಪಟ್ಟ ಪದಾರ್ಥಸ್ವರೂಪವನ್ನು ತಿಳಿಸುವ ಶಾಸ್ತ್ರಗಳನ್ನು ವಿಶೇಷವಾಗಿ ಆಗಿನವರು ವ್ಯಾಸಂಗಮಾಡುತಿರಲಿಲ್ಲ. ಅಂಥ ಶಾಸ್ತ್ರಗಳು ಭಾರತ ವರ್ಷದಲ್ಲಿ ವಿಶೇಷ ಅಭಿವೃದ್ಧಿಯನ್ನೂ ಹೊಂದಲಿಲ್ಲ. ವಿದ್ಯಾಭ್ಯಾಸವು ಪೂರ್ಣವಾಗಬೇಕಾದರೆ ವಿದ್ಯಾರ್ಥಿಗಳು ಉಭಯರೂಪವಾದ, ಅಂದರೆ ಅಂತಃ ಪ್ರಪಂಚಕ್ಕೆ ಸಂಬಂಧವಾದ ಮತ್ತು ಬಹಿಃ ಪ್ರಪಂಚಕ್ಕೆ ಸಂಬಂಧವಾದ, ಶಾಸ್ತ್ರಗಳನ್ನೂ ಅಭ್ಯಸಿಸಬೇಕು. ಪೂರ್ವದ ವಿದ್ಯಾಭ್ಯಾಸದಲ್ಲಿದ್ದ ಕೊರತೆಯನ್ನು ನವೀನವಾದ ವಿದ್ಯಾಭ್ಯಾಸವು ತಪ್ಪಿಸುತಲಿದೆ. ಆದರೆ ದೇಶಭಾಷೆಗಳಲ್ಲಿ ಈ ಹೊಸಶಾಸ್ತ್ರಗಳನ್ನು ಬೋಧಿಸಲು ಉಚಿತವಾದ ಪಾರಿಭಾಷಿಕಪದಗಳಿಲ್ಲದಿರುವುದರಿಂದ ಬಹಳ ಶ್ರಮವಾಗುತಿದೆಯೆಂಬುದು ಉಪಾಧ್ಯಾಯರೆಲ್ಲರಿಗೂ ಅನುಭವಸಿದ್ಧವಾಗಿಯೇ ಇದೆ. ಈ ನ್ಯೂನತೆಯನ್ನು ತಪ್ಪಿಸುವುದಕ್ಕಾಗಿ ಮದರಾಸ್ ಪಟ್ಟಣದಲ್ಲಿರುವ ದ್ರವಿಡಭಾಷಾಸಂಘವೆಂಬ ಒಂದು ಸಭೆಯುವರು ಒಂದು ಕವಿಪಟ್ಟಿಯನ್ನು ನಿಯಮಿಸಿ, ಆ ಕವಿಪಟ್ಟಿಯುವರು ಸಂಸ್ಕೃತದಿಂದ ತಕ್ಕ ಪಾರಿಭಾಷಿಕಶಬ್ದಗಳನ್ನು ನಿರ್ಣಯಿಸುವಂತೆ ಏರ್ಪಾಡುಮಾಡಿದಾರೆ. ಹೀಗೆ ಮಾಡಿದುದು ಬಹಳ ಮುಖ್ಯವಾದುದು. ಸಂಸ್ಕೃತಭಾಷೆಯಿಂದ ಪದಗಳನ್ನು ತೆಗೆಯುವುದರಿಂದ ಆ ಪದಗಳನ್ನು ದ್ರವಿಡಭಾಷೆಗಳೆಲ್ಲೆಲ್ಲ ಉಪಯೋಗಿಸಬಹುದು.

(೪) ಇವನು, ತಂದೆಯು ರಾಜಧಾನಿಯಾಗಿ ಮಾಡಿಕೊಂಡಿದ್ದ ಘುಸ್ನಿಯನ್ನು ತಾನೂ ರಾಜಧಾನಿಯನ್ನಾಗಿ ಮಾಡಿಕೊಂಡು ಇದ್ದದ್ದರಿಂದ ಘುಸ್ನೀಮಹಮ್ಮದನೆಂತಲೂ ಹೆಸರನ್ನು ಪಡೆದನು.

ಘುಸ್ನೀಮಹಮ್ಮದ್.

ಇವನು ಇಂಡಿಯಾ ದೇಶದ ಮೇಲೆ ದಂಡೆತ್ತಲು ಕಾರಣಗಳು:

(೧) ತಂದೆಯು ಕಾಲದಲ್ಲಿ ಯುದ್ಧಕ್ಕೆ ಹೋಗುತ್ತಿದ್ದಾಗ ಹಿಂದುಗಳ ಸೈನ್ಯವು ಹೆಚ್ಚಾಗಿದ್ದು ತಮ್ಮ ಸೈನ್ಯವು ಅಲ್ಪವಾಗಿದ್ದಾಗ್ಯೂ ಯುದ್ಧದಲ್ಲಿ ಹಿಂದುಗಳೇ ಬಹಳವಾಗಿ ಸೋಲುತ್ತಿದ್ದದ್ದರಿಂದ ತಾನೂ ಅವರ ದೇಶವನ್ನು ಸುಲಭವಾಗಿ ಜಯಿಸಬಹುದೆಂದು ತಿಳಿದಿದ್ದನು.

(೨) ತನ್ನ ಜುತ್ತವನ್ನು ಎಲ್ಲಾ ಕಡೆಯೂ ಹರಡಬೇಕೆಂಬ ಉದ್ದೇಶವು ಇತ್ತು.

(೩) ಅತ್ಯಂತ ಐಶ್ವರ್ಯವನ್ನು ಸಂಪಾದಿಸಬೇಕೆಂಬ ದುರಾಶೆ.

ದೇಶಕ್ಕೆ ಹನ್ನೆರಡುಸಾರಿ ದಂಡೆತ್ತಿ ಬಂದಿದ್ದನು.

ಮತ್ತು ಇವನ ತಂದೆಯು ಈ ಘುಸ್ನಿ ಸಂತತಿಗೆ ಮೂಲಪುರುಷನೆಂಬುದನ್ನು ತಿಳಿಯುವಂತೆ ಅನಂತರ ಪ್ರಶ್ನೆ ಮಾಡುತ್ತಾ ಹಲಿಗೆಯಮೇಲೆ ಈ ನಾಲ್ಕು ಸಾಮಾನ್ಯ ವಿಷಯಗಳನ್ನು ಬರಿಯಬೇಕು

ಘುಸ್ನೀಮಹಮ್ಮದನು ಇಂಡಿಯಾದೇಶದಮೇಲೆ ದಂಡೆತ್ತಿ ಬರುವುದಕ್ಕೆ ಇವೇ ಕಾರಣಗಳೆಂದು ಉಪಾಧ್ಯಾಯರು ಈ ಮೂರು ಕಾರಣಗಳನ್ನು ಮೊದಲು ತಾವು ತಿಳಿಸಿ ಅನಂತರ ಪ್ರತಿಯೊಬ್ಬರನ್ನೂ ಒಬ್ಬೊಬ್ಬ ಇಬ್ಬೊಬ್ಬನನ್ನಾಗಿ ಪ್ರಶ್ನೆಮಾಡುತ್ತಾ ಉತ್ತರಗಳನ್ನು ಬರಮಾಡಿಕೊಳ್ಳಬೇಕು.

ಅಮೇಲೆ ಬುದ್ಧಿಶಕ್ತಿಯಲ್ಲಿ ಕಡಮೆಯಾಗಿರುವ ಬಾಲಕರನ್ನು ಪುನಃ ಪ್ರಶ್ನೆಮಾಡಿ ಉತ್ತರಗಳನ್ನು ಅವರಿಂದಲೇ ಹೊರಡಿಸಲು ಪ್ರಯತ್ನಪಡಬೇಕು. ಮತ್ತು ಜ್ಞಾಪಕ ನಿಲ್ಲುವಂತೆ ಮಂಟಪ್ಪ ಮಾಡಬೇಕು.

ಈ ಮೂರು ಉದ್ದೇಶಗಳನ್ನು ಬರೆದುಕೊಳ್ಳುವಂತೆ ಹೇಳಬೇಕು. ಆದರೆ ತಾವು ಹಲಿಗೆಯಮೇಲೆ ಸ್ಪಷ್ಟವಾಗಿ ಬರೆದುಬಾಲಕರಿಗೆ ಬರೆದುಕೊಳ್ಳುವಂತೆ ಹೇಳುವುದು ಉತ್ತಮ. ಇದಕ್ಕಾಗಿ ಹನ್ನೆರಡಾವರ್ತಿ ಈ ದೇಶಕ್ಕೆ ಬಂದಿದ್ದನೆಂದು ತಿಳಿಸಬೇಕು. ಪುನರುಕ್ತಿಯನ್ನು ಮಾಡಬೇಕು. (ಸೇರಿದೆ)

ನರಳುತಕ್ಕವರು ಆತ್ಮವಿದ್ಯಾಭ್ಯಾಸದ ಮೂಲಕ ಅಜ್ಞಾನನಿವಾರಣೆಯನ್ನು ಮಾಡಿಕೊಳ್ಳುವದಕ್ಕಾಗುವದಿಲ್ಲ. ಸರಿಯಾದ ಪ್ರವೃತ್ತಿಮಾರ್ಗವಲಂಬನೆಯೇ ನಿವೃತ್ತಿಮಾರ್ಗದರ್ಶಕವಾಗುವದು. ಆದುದರಿಂದ ಸಾವಶಾನ್ಯವಾಗಿ ಅಜ್ಞಾನನಿವೃತ್ತಿಗೆ ಕಾರಣಭೂತರಾದವರೆಲ್ಲಾ ಗುರುಶಬ್ದಕ್ಕೆ ವಾಚ್ಯರಾಗುವುರು. ಬ್ರಿಟಿಷ್‌ಪ್ರಪಂಚದಲ್ಲಿ ಈ ಎರಡು ಪದವಿಗೂ ಅರ್ಹರಾದವರಲ್ಲಿ ಆರ್‌ನಲ್ಡ್‌ರವರಿಗಿಂತಲೂ ಅಧಿಕರಾರೂ ಇಲ್ಲ. ಇವರಿಂದ ಅಗರ್ಭನಿರ್ಭಾಗ್ಯರಾದ ಅನೇಕಸಾವಿರ ಜನರು ವಿದ್ಯಾವಂತರಾಗಿಯೂ ಜ್ಞಾನಿಗಳಾಗಿಯೂ ಐಶ್ವರ್ಯವಂತರಾಗಿಯೂ ಯಶೋವಂತರಾಗಿಯೂ ಅಮುಷ್ಮಿಕ ಸಾವಮ್ರಾಜ್ಯಕ್ಕೆ ಅರ್ಹರಾಗಿಯೂ ಆದರು. ಇವರ ಚರಿತ್ರೆಯು ಶ್ರವಣಮನನಗಳನ್ನು ಮಾಡಿದ ಎಲ್ಲರು ಕೈಲಾದಮಟ್ಟಿಗೂ ಪರೋಪಕಾರಿಗಳಾಗಬಹುದು. ಪ್ರಪಂಚದಲ್ಲಿ ಅನೇಕ ವಿಷಯಗಳಲ್ಲಿ ರೂಢಮೂಲವಾಗಿರುವ ಅಜ್ಞಾನಾಂಧಕಾರವನ್ನು ಜ್ಞಾನೋದಯಕ್ಕೆ ಸಾಧಕಗಳಾದಪಾಠಪ್ರವಚನಗಳಿಂದಲೂ ಹಿತೋಪದೇಶದಿಂದಲೂ ನಿವರ್ತಿಸಿಕೊಳ್ಳಬೇಕು, ಎಂಬಅಭಿಲಾಷೆಯೂ ಇವರಚರಿತ್ರೆಯಶ್ರವಣದಿಂದ ಹುಟ್ಟುವುದು. ಯಾವ ದೇಶದಲ್ಲಿ ಇಂಥಾ ಅಭಿಪ್ರಾಯಗಳು ವಿಶೇಷವಾಗಿ ಹುಟ್ಟುವವೋ, ಆ ದೇಶವು ಬಹು ಅಭಿವೃದ್ಧಿಸ್ಥಿತಿಯಲ್ಲಿರುವುದು. ಬ್ರಿಟಿಷ್‌ರಾಜ್ಯದ ಸಂಪತ್ತಿಗೂ ಬ್ರಿಟಿಷ್‌ಜನರು ಸ್ವಶಕ್ತಿಯಿಂದ ಜೀವಿಸುವದಕ್ಕೂ ಇಂಥಾ ಪಾಠಕರ ಬಾಹುಳ್ಯವೇ ಮುಖ್ಯಕಾರಣವು. ಅದು ಹಾಗಿರಲಿ. ಆರ್ನಲ್ಡ್‌ರವರ ಚರಿತ್ರೆಯನ್ನು ಪರಿಶೀಲಿಸಿ ನೋಡೋಣ.

ಆರ್ನಲ್ಡ್‌ರವರು ೧೭೯೫ನೆ ಇಸವಿ ಜೂನ್ ೨೩ರಲ್ಲಿ ವೈಟ್‌ದ್ವೀಪದಲ್ಲಿ ಜನಿಸಿದರು. ಇವರ ತಂದೆಗಳು ೧೮೦೦ನಲ್ಲಿ ಸ್ವರ್ಗಸ್ಥರಾದರು. ಇವರ ತಾಯಿ ಮತ್ತು ಸಹೋದರಿ ಇವರಿಬ್ಬರು ಇವರನ್ನು ಬಹಳ ಅಭಿಮಾನದಿಂದ ಪೋಷಿಸಿ ಇವರ ವಿದ್ಯಾಭ್ಯಾಸವನ್ನು ನೋಡಿಕೊಳ್ಳುತ್ತಾ ಬಂದರು. ೧೮೦೩ರಲ್ಲಿ ವೆಸ್ಟ್‌ಮಿನಿಸ್ಟರ್ ಪಾಠಶಾಲೆಗೆ ಕಳುಹಿಸಲ್ಪಟ್ಟರು. ಆ ಪಾಠಶಾಲೆಯು ಉಪಾಧ್ಯಾಯರಿಗೆ ಇವರಲ್ಲಿ ಅನ್ಯಾದೃಶವಾದ ಪ್ರೀತಿಯು ಹುಟ್ಟಿತು. ಪ್ರಾಯುಕವಾಗಿ ಯೋಗ್ಯರಾದ ಉಪಾಧ್ಯಾಯರು ಎಲ್ಲಾ ವಿದ್ಯಾರ್ಥಿಗಳಲ್ಲೂ ಸಮದೃಷ್ಟಿಯುಳ್ಳವರಾಗಿರುವರು. ಆದರೆ ಪಟುವಾಗಿಯೂ, ಶ್ರದ್ಧೆಯುಳ್ಳವರಾಗಿಯೂ, ಅನ್ಯಾದೃಶವಾದ ಗ್ರಹಣಶಕ್ತಿಯುಳ್ಳವರಾಗಿಯೂ ಇರುವ ವಿದ್ಯಾರ್ಥಿಗಳಲ್ಲಿ ಉಪಾಧ್ಯಾಯರ ಪ್ರೀತಿಯೂ ಹೆಚ್ಚಾಗಿರುವದುಂಟು. ಆರ್ನಲ್ಡ್‌ರವರಲ್ಲಿ ಈ ಪಾಠಶಾಲೆಯ ಉಪಾಧ್ಯಾಯರ ಪ್ರೀತಿಯೂ ಹೆಚ್ಚಾಗಿದ್ದುದಕ್ಕೆ ಇದೇ

ಈಗ ಸುಮಾರು ಮೂರುವರ್ಷಗಳ ಹಿಂದೆ ಉತ್ತರದೇಶದಲ್ಲಿ ಅನಾವೃಷ್ಟಿಯಿಂದ ಜನರು ಬಹಳವಾಗಿ ಶ್ರಮಕ್ಕೆ ಗುರಿಯಾಗಿದಾರೆಂದು ಅವರ ಸಹಾಯಕ್ಕಾಗಿ ಸರ್ವರೂ ಕೈಲಾದ ಸಹಾಯವನ್ನು ಮಾಡುವುದು ಅವಶ್ಯಕವೆಂದೂ ಇಲ್ಲಿ ತಿಳಿಸಿದ್ದೆವು. ದೈವದುರ್ವಿಲಸಿತದಿಂದ ಭಾರತವರ್ಷದ ಅದೇಭಾಗದಲ್ಲಿ ಪುನಃ ದುರ್ಭಿಕ್ಷವು ಒದಗಿದೆ. ಮೊತ್ತ ಹೋದಸಲಕ್ಕಿಂತಲೂ ಪ್ರಜಾಕ್ಷೋಭವು ಈಗ ವಿಶೇಷವಾಗಿ ಹೆಚ್ಚಾಗಿದೆ. ಇಂಥ ಸಮಯದಲ್ಲಿ ಎಲ್ಲರು ತಮ್ಮ ಕೈಲಾದ ಸಹಾಯವನ್ನು ಮಾಡಿ ಜನರ ಹಿಂಸೆಯನ್ನು ಕಡಮೆಮಾಡಬೇಕು. ಇದಕ್ಕಾಗಿ ನಮ್ಮ ಮೈಸೂರು ದೇಶದಲ್ಲಿ ಒಂದುಕಮಿಟಿಯು ಏರ್ಪಾಡಾಗಿದೆ. ಬಾಲಕರಿಗೆ ಈ ವಿಷಯವನ್ನು ತಿಳಿಸಿ ಅವರಿಂದಾಗುವ ದ್ರವ್ಯಸಹಾಯವನ್ನು ಪಡೆದು ತಮ್ಮ ಸಹಾಯದೊಡನೆ ಆ ಕಮಿಟಿಯವರಿಗೆ ಉಪಾಧ್ಯಾಯರು ತಲುಪುವಂತೆ ಮಾಡಬಹುದು. ಹಸ್ತಾಸಲ ಭೂತದಯೆಯವಿಷಯವಾಗಿ ಬಾಲಕರಿಗೆ ಉಪನ್ಯಾಸಮಾಡುವುದಕ್ಕಿಂತ ಇಂಥ ಒಂದು ಸತ್ಕಾರ್ಯವನ್ನು ಮಾಡಿಸುವುದರಿಂದ ಬಾಲಕರಿಗೆ ನಡತೆಯು ಹೆಚ್ಚಾಗಿ ಬರುವುದು. ಸೇರಿದ ದ್ರವ್ಯವನ್ನು ಕಮಿಟಿಯವರಿಗೆ ತಲಿಪಿಸಲು ಮಾರ್ಗವನ್ನು ಆಯಾ ತಾಲೂಕು ಅಮಲ್‌ದಾರರ ಮೂಲಕ ಅಥವಾ ಆಯಾ ಡಿಸ್ಟ್ರಿಕ್ಟ್ ಡೆಪ್ಯೂಟಿಕವಿಷನರವರ ಮೂಲಕ ತಿಳಿದುಕೊಳ್ಳಬಹುದು.

ಆರ್ನಲ್ಡ್‌ರವರ ಚರಿತ್ರೆ.

ಲೋಕದಲ್ಲಿ ಎಲ್ಲರಿಗೂ ಐದುವಿಧನಾದ ತಂದೆಗಳು ಉಂಟೆಂದು ಪಂಡಿತರು ಹೇಳುವರಷ್ಟೆ. ಇವರಲ್ಲಿ ಸರ್ವಶ್ರೇಷ್ಠನಾದ ತಂದೆ ವಿದ್ಯಾಗುರುವು, ಗುರುವೆಂದರೆ ಅಜ್ಞಾನವನ್ನು ಹೋಗಲಾಡಿಸುವನು. ಅಜ್ಞಾನವು ಐಹಿಕಸಂಬಂಧವಾದ ಅಜ್ಞಾನವು ಆಮುಷ್ಮಿಕಸಂಬಂಧನಾದ ಅಜ್ಞಾನವು. ಎಂದು ಎರಡುವಿಧವಾಗಿರುವುದು. ಇವುಗಳಲ್ಲಿ ಐಹಿಕಸಂಬಂಧವಾದ ಅಜ್ಞಾನವನ್ನು ತಪ್ಪಿಸತಕ್ಕವರಿಗೆ ಉಪಾಧ್ಯಾಯರೆಂಬದಾಗಿಯೂ ಆತ್ಮವಿದ್ಯೆಯು ವಿಷಯದಲ್ಲಿರುವ ಅಜ್ಞಾನವನ್ನು ಹೋಗಲಾಡಿಸುವವರು ಗುರುಗಳೆಂಬದಾಗಿಯೂ ವ್ಯವಹರಿಸುವರು. ಅವರೆ ಐಹಿಕವಿಷಯದಲ್ಲಿ ಅಜ್ಞಾನವುಳ್ಳವರು ಅನೇಕ ತಾಪತ್ರಯಗಳಿಗೆ ಗುರಿಯಾಗುವರು. ತಾಪತ್ರಯಗಳಿಗೆ ಸಿಕ್ಕಿ

ಲಿಲ್ಲ. ಈ ಕಾಲದಲ್ಲಿ ಆರ್ನಲ್ಡ್‌ರವರು ತಮ್ಮ ಗುರುಗಳೆ ಮೊದಲಾದವರಿಗೆ ಅನೇಕ ಲೇಖನಗಳನ್ನು ಬರೆದಿದಾರೆ. ಇವುಗಳ ಶಯ್ಯೆಯು, ಅಭಿವ್ಯಾಯವು, ಪಾಂಡಿತ್ಯವೂ ಇವೆಲ್ಲಾ ದೊಡ್ಡ ಪಂಡಿತರಾಗಿಯೂ, ಲೋಕವ್ಯವಹಾರಜ್ಞರಾಗಿಯೂ ಇರತಕ್ಕವರು ಬರೆದಂತೆ ತೋರುತ್ತವೆ. ಈ ಲೇಖನಗಳಿಂದಲೆ ಇವರು ಚಿಕ್ಕವರಾಗಿದ್ದಾಗ್ಯೂ ವಯಸ್ಸಿನಲ್ಲೂ ಜ್ಞಾನದಲ್ಲೂ, ಅನುಭವದಲ್ಲೂ ತಮಗಿಂತಲೂ ವೃದ್ಧರಾದವರ ಸಹವಾಸದಲ್ಲಿ ಅಭಿರುಚಿಯುಳ್ಳವರಾಗಿರುತ್ತಿದ್ದರೆಂಬದಾಗಿ ಸ್ಪಷ್ಟವಾಗಿ ಗೊತ್ತಾಗುತ್ತದೆ. ತಮಗೆ ಸಮಾನರಾದವರ ಮತ್ತು ತಮಗಿಂತ ಕಡಮೆಯಾದವರ ಸಹವಾಸದಲ್ಲಿ ಇವರು ಕಾಲಹರಣಮಾಡುವುದು ಬಹಳ ಕಡಮೆಯಾಗಿದ್ದಾಗ್ಯೂ ಅವರಲ್ಲಿ ಅನೇಕರು ಇವರಿಗೆ ಮಿತ್ರರಾಗಿದ್ದರು. ಇವರಿಗೆಲ್ಲಾ ಆರ್ನಲ್ಡ್‌ರವರು ಅನೇಕ ಕಾಗದಗಳನ್ನು ಬರೆದಿದಾರೆ. ಈ ಕಾಗದಗಳಲ್ಲಿಯೂ ಈ ಚಿಕ್ಕವಯಸ್ಸಿನಲ್ಲಿ ಇವರ ಸ್ವಭಾವವು ಎಷ್ಟು ಘನತೆಯುಳ್ಳದ್ದಾಗಿತ್ತೊ ಅದು ಸ್ಪಷ್ಟವಾಗುತ್ತದೆ.

ಭೂಮಿಯ ಚಲನೆಗಳು.

ಭೂಮಿಯು ಒಂದುಸ್ಥಳದಲ್ಲಿ ನಿಶ್ಚಲವಾಗಿದೆ ಎಂಬದಾಗಿಯೂ ಸೂರ್ಯ ಚಂದ್ರ ನಕ್ಷತ್ರಾದಿಗಳೆಲ್ಲಾ ಉದಯಿಸಿ ಭೂಮಿಯಮೇಲೆ ಆಕಾಶದಲ್ಲಿ ಸಂಚಾರ ಮಾಡಿ ಭೂಮಿಯ ಕೆಳಕ್ಕೆ ಅಸ್ತವಾಗಿ ಅದೃಶ್ಯವಾಗುವದೆಂಬದಾಗಿಯೂ ಇದರಿಂದ ಹಗಲು ರಾತ್ರಿಗಳಾಗುವವೆಂಬದಾಗಿಯೂ ಪೂರ್ವಿಕರು ಭಾವಿಸುತ್ತಿದ್ದರು. ಭೂಮಿಯು ಚಲನೆಯಿಂದ ಸೂರ್ಯ ಚಂದ್ರಾದಿಗಳು ಉದಯಾಸ್ತಮಯಗಳಾಗುವವೆಂಬದಾಗಿ ಯಾರೂ ತಿಳಿದುಕೊಂಡಿರಲಿಲ್ಲ. ಈಗಲೂ ಶಾಸ್ತ್ರ ಚಕ್ಷುಸ್ಸಿನಿಂದ ಗ್ರಹಚಲನೆಗಳನ್ನು ತಿಳಿದುಕೊಳ್ಳುವದಕ್ಕೆ ಶಕ್ತಿ ಇಲ್ಲದವರೆಲ್ಲಾ ಭೂಮಿಯು ನಿಶ್ಚಲವಾದ ವಸ್ತುವೆಂಬದಾಗಿಯೂ ಸೂರ್ಯ ಚಂದ್ರಾದಿಗಳು ಸಂಚಾರಮಾಡತಕ್ಕವುಗಳೆಂಬದಾಗಿಯೂ ತಿಳಿದುಕೊಂಡಿದಾರೆ. ಈ ಭಾಗದಲ್ಲಿ ನಿಶ್ಚಯಸ್ಥಿತಿಯನ್ನು ವ್ಯಕ್ತಪಡಿಸುವದಕ್ಕೋಸ್ಕರ ಈಗ ಪ್ಯಾರಿಸ್‌ನಲ್ಲಿ ನಡಿಯುತ್ತಲಿರುವ ಸಕಲವಸ್ತು ಪ್ರದರ್ಶನಶಾಲೆಯಲ್ಲಿ ಒಂದು ಯಂತ್ರವನ್ನು ಕಲ್ಪಿಸಿದಾರೆ. ಈ ಯಂತ್ರದ ಸಹಾಯದಿಂದ ಸೂರ್ಯನ

ಮುಖ್ಯಕಾರಣವು. ಈ ಪಾಠಶಾಲೆಯಲ್ಲಿ ಇವರು ೪ ವರುಷಗಳಿದ್ದರು. ತರುವಾಯ ವಿಂಚಿಸ್ಟರ್ ಕಾಲೇಜಿಗೆ ಸೇರಿದರು. ಅಲ್ಲಿ ೧೪ ಗಂಟೆಗಳವರೆಗೆ ವ್ಯಾಸಂಗವನ್ನು ಮಾಡಿದರು. ಈ ಕಾಲೇಜಿನಲ್ಲಿ ಡಾಕ್ಟರ್ ಗಾಡರ್ಡ್ ಡಾಕ್ಟರ್ ಗ್ಯಾಬೆಲ್ ಎಂಬ ಇಬ್ಬರು ಉಪಾಧ್ಯಾಯರು ಇದ್ದರು. ಇವರು ದೊಡ್ಡ ಪಂಡಿತರಾಗಿಯೂ ಅನೇಕ ಶಾಸ್ತ್ರಗಳಲ್ಲಿ ಬಹಳ ಪ್ರಜ್ಞೆಯುಳ್ಳವರಾಗಿಯೂ, ಅನ್ಯಾದೃಶವಾದ ಬೋಧನಾಶಕ್ತಿಯುಳ್ಳವರಾಗಿಯೂ ಇದ್ದರು. ಇವರು ಗಹನವಾದ ಶಾಸ್ತ್ರಗಳನ್ನು ಕೂಡ ಬಹಳ ಸುಲಭವಾಗಿ ತಿಳಿಸುತ್ತಿದ್ದರು. ಇವರ ಬೋಧನೆಯೂ ಅಸಾಧಾರಣವಾದ ಜ್ಞಾನಪ್ರದವಾಗಿಯೂ ಅನೇಕ ವಿಷಯಗಳಲ್ಲಿ ಅಜ್ಞಾನಾಂಧಕಾರಕ್ಕೆ ಪ್ರಚಂಡವಾದ ಬೇಸಗೆಯ ಸೂರ್ಯ ಕಿರಣಗಳಂತೆ ಆಚರಿಸುತ್ತಿತ್ತೆಂಬದಾಗಿಯೂ ಇವರ ವಿದ್ಯಾರ್ಥಿಗಳೆಲ್ಲಾ ಭಾವಿಸುತ್ತಿದ್ದರು. ಅರ್ನಲ್ಡರವರಾದರೊ ಇವರ ಪಾಠಗಳನ್ನು ಕೇಳಿ ಪರಮಾನಂದಭರಿತರಾಗಿ ಶಾಸ್ತ್ರಜ್ಞಾನವೆಂಬ ಸುಧಾಸೇವನೆಯಿಂದ ಮೈಮರೆತು ಆನಂದಪರವಶರಾಗುತ್ತಿದ್ದರು. ಇವರು ವಿದ್ವಾಂಸರಾಗಿ ರಗ್‌ಬಿಪಾಠಶಾಲೆಯ ಹೆಡ್‌ಮಾಸ್ಟರಾದಮೇಲೂ ಈ ಪಾಠಕರ ಬೋಧನೆಯನ್ನು ಸ್ಮರಿಸಿಕೊಂಡು ತಮ್ಮ ಜನ್ಮದಲ್ಲೆಲ್ಲಾ ತಾವು ನಿಜವಾಗಿ ನಿರ್ಮಲವಾದ ಸುಖವನ್ನನುಭವಿಸಿದ್ದು ವಿಂಚೆಸ್ಟರ್ ಕಾಲೇಜಿನಲ್ಲಿ ಗಾಡರ್ಡ್ ಮತ್ತು ಗ್ಯಬೆಲ್‌ರವರ ಶಿಷ್ಯರಾಗಿದ್ದಾಗಲೆಂದು ಹೇಳುತ್ತಿದ್ದರು. ಇವರು ಯುವಾಗ್ಯೂ ಸಹಪಾಠಿಗಳ ಸಹವಾಸವನ್ನು ವಿಶೇಷವಾಗಿ ಮಾಡುತ್ತಿರಲಿಲ್ಲ. ಅಂಥವರ ಸಹವಾಸದಲ್ಲಿ ಅಕಸ್ಮಾತ್ತಾಗಿ ಸೇರಿದರೊ ಅಲ್ಲಿ ಮೌನವನ್ನು ಧರಿಸುತ್ತಿದ್ದರು. ಇವರ ಸಹಪಾಠಿಗಳು ಅಟಪಾಟ, ಉಚ್ಛೃಂಖಲವಾದ ಸಂಭಾಷಣೆ, ಇವೇ ಮೊದಲಾದ ಯುವ್ವನಸ್ಥರಿಗೆ ಉಚಿತವಾದ ವ್ಯಾಪಾರಗಳಿಗೆ ಇವರನ್ನು ಎಳೆಯುತ್ತಲೂ ಇವರು ಅವುಗಳಲ್ಲೆಲ್ಲಾ ಉದಾಸೀನರಾಗಿರುವುದನ್ನು ನೋಡಿ ಇವರನ್ನು ಕೆಲಸಕ್ಕೆ ಬರದವರೆಂದು ಭಾವಿಸುತ್ತಲೂ ಇದ್ದರು. ಇದಕ್ಕೆ ಕಾರಣವಿತ್ತು. ಅರ್ನಲ್ಡರವರು ಯಾವಾಗ್ಯೂ ತಮಗಿಂತಲೂ ಹೆಚ್ಚಾಗಿ ಓದಿ ಒಳ್ಳೇ ಪಾಂಡಿತ್ಯವನ್ನು ಹೊಂದಿ, ಶಾಸ್ತ್ರಜ್ಞರಾಗಿಯೂ, ಲೋಕವ್ಯವಹಾರಜ್ಞರಾಗಿಯೂ ಇರುವ ಜನಗಳಲ್ಲಿ ಮಾತ್ರ ಸಲಿಗೆಯಿಂದ ಸೇರಿ ಸಲ್ಲಾಪಗಳನ್ನು ಮಾಡುತ್ತಿದ್ದರು. ಉಳಿದವರ ಸಹವಾಸದಲ್ಲಿ ಸೇರಿ ಮನಸ್ವಿ ಹರಟುವದರಲ್ಲಿ ಇವರಿಗೆ ಅಷ್ಟು ಅಭಿರುಚಿ ಇರಲಿಲ್ಲ. ಇದರಿಂದಲೆ ವ್ಯಾಸಂಗದಲ್ಲಿ ವಿಶೇಷ ಅಭಿರುಚಿ ಇಲ್ಲದ ವಿದ್ಯಾರ್ಥಿಗಳಿಗೆ ಇವರ ಸಹವಾಸದಲ್ಲಿಯೂ ಅಭಿರುಚಿ ಇರುತ್ತಿರ

ವಂತೆ ತೋರುತ್ತವೆ. ವಾಸ್ತವವಾಗಿ ಅವುಗಳು ಸಂಚರಿಸುವದಿಲ್ಲ. ನಾವು ಕೂತಿರತಕ್ಕ ಗಡಿಗಳು ಸಂಚರಿಸುತ್ತವೆ. ಹೀಗಿದ್ದಾಗ್ಯೂ ನಿಶ್ಚಲವಾದ ಪದಾರ್ಥಗಳು ಚಲಿಸುವಹಾಗೆಯೂ ಚಲಿಸುತ್ತಿರುವ ಪದಾರ್ಥವು ನಿಶ್ಚಲವಾಗಿರುವಹಾಗೆಯೂ ಹ್ಯಾಗೆ ತೋರುವವೋ ಹಾಗೆಯೇ ಒಂದು ಸೆಕಂಡಿಗೆ ಸುಮಾರು ೧೯ ಮೈಲಿಗಳ ಪ್ರಕಾರ ಭೂಮಿಯು ಸಂಚಾರವಾಡುತ್ತದೆ. ಇಷ್ಟು ವೇಗವಾಗಿ ಚಲಿಸುವ ಭೂಮಿಯ ಮೇಲೆ ನಾವಿರುವದರಿಂದಲೂ ಭೂಮಿಯು ದಿನಚಲನವು ಪಶ್ಚಿಮದಿಂದ ಪೂರ್ವಾಭಿಮುಖವಾಗಿರುವದರಿಂದಲೂ ಸೂರ್ಯಚಂದ್ರಾದಿಗಳು ಪೂರ್ವದಿಂದ ಪಶ್ಚಿಮಕ್ಕೆ ಸಂಚಾರವಾಡುವಂತೆ ತೋರುತ್ತದೆ.

ಭೂಮಿಯು ದಿನಚರ್ಯವು ವಿಷುವದ್ರೇಖೆಯ ಬಳಿಯಲ್ಲಿಯು ಒಂದು ಸೆಕಂಡಿಗೆ ೫೦೦ ಗಜಗಳಾಗಿರುವದು. ಧ್ರುವದಕಡೆಗೆ ಹೋದಹಾಗೆಲ್ಲಾ ಇದು ಕಡಮೆಯಾಗುವದು. ಯಾಕಂದರೆ, ಭೂಮಿಯು ವಿಷುವದ್ರೇಖೆಯ ಬಳಿಯಲ್ಲಿ ಸುತ್ತಳತೆಯಲ್ಲಿ ಬಹಳ ಹೆಚ್ಚಾಗಿಯೂ ಧ್ರುವಪ್ರದೇಶಗಳಿಗೆ ಹೋದಹಾಗೆ ಯೆಲ್ಲಾ ಕಡಿಮೆಯಾಗಿಯೂ ಇರುತ್ತದೆ, ಭೂಮಿಯು ಇಷ್ಟು ವೇಗವಾಗಿ ಸಂಚಾರವಾಡುತ್ತಿದ್ದರೆ ನಾವು ಅದರ ವೇಲುಭಾಗದಿಂದ ಬಿದ್ದುಹೋಗಬೇಕಷ್ಟೆ ಹಾಗೆ ಏತಕ್ಕೆ ಬೀಳುವದಿಲ್ಲ? ಭೂಮಿಯಮೇಲೆ ಎಸೆಯಲ್ಪಟ್ಟ ಪದಾರ್ಥಗಳೆಲ್ಲಾ ಪುನಃ ಭೂಮಿಯಮೇಲೆಯೇ ಏತಕ್ಕೆ ಬೀಳುತ್ತವೋ ಅದನ್ನು ಪರೀಕ್ಷಿಸಿದರೆ ಮೇಲಿನಪ್ರಶ್ನೆಗೆ ಉತ್ತರವು ದೊರೆಯುವದು. ಭೂಮಿಯು ಎಲ್ಲಾ ಭಾಗಗಳಲ್ಲಿಯೂ ಹಳ್ಳಿಗಳಲ್ಲಿ ಸಮುದ್ರವು ತಿಟ್ಟಾದ ಪ್ರದೇಶಗಳಲ್ಲಿ ಮನುಷ್ಯರು ತಮ್ಮ ವಾಸಕ್ಕೆ ಬೇಕಾದ ಮನೆಮಠಗಳನ್ನು ಮಾಡಿಕೊಂಡಿರತಕ್ಕ ಪ್ರದೇಶಗಳೂ ಇರುವವು. ನಾವು ನಿಂತಿರತಕ್ಕ ಸ್ಥಳವನ್ನು ಭೂಮಿಯೆಂಬದಾಗಿಯೂ ಮೇಲುಭಾಗವನ್ನು ಆಕಾಶವೆಂಬದಾಗಿಯೂ ಭಾವಿಸುತ್ತೇವೆ. ಮೇಲಕ್ಕೆ ಎಸೆಯಲ್ಪಟ್ಟ ಪದಾರ್ಥಗಳೆಲ್ಲಾ ನೆಲದಮೇಲಕ್ಕೆ ಬೀಳಬೇಕೆಂದು ನಿರೀಕ್ಷಿಸುತ್ತೇವೆ. ನಾವಿರತಕ್ಕ ಭೂಮಿಯಭಾಗಕ್ಕೆ ಯಾವದನ್ನು ಕೆಳಭಾಗವೆಂದು ತಿಳಿದುಕೊಂಡು ಇದೇಪ್ರಾ ಅಲ್ಲಿರತಕ್ಕ ಜನಗಳು ನಾವಿರತಕ್ಕ ಭಾಗವನ್ನು ಕೆಳಭಾಗವೆಂದು ತಿಳಿದುಕೊಂಡು ಇದಾರೆ. ಭೂಮಿಯು ಎಲ್ಲಾ ದಿಕ್ಕುಗಳಲ್ಲಿರತಕ್ಕ ಜನಗಳೂ ಕೂಡ ಅವರಿಗೆ ಪ್ರತಿದಿಕ್ಕಿನಲ್ಲಿರತಕ್ಕ ಜನಗಳ ಕಾಲುಗಳು ಅಲ್ಲಿನಭೂಮಿಯಮೇಲೆ ಇರುತ್ತದೆಂಬದಾಗಿಯೂ ಅವರ ತಲೆಗಳು ಪಾತಾಳದಕಡೆ ಇರುತ್ತವೆಂಬದಾಗಿಯೂ ಅಲ್ಲಿ

ಸುತ್ತಲೂ ಭೂಮಿಯೂ ಚಂದ್ರನೂ ಸುತ್ತುವದೂ, ಭೂಮಿಯುಸುತ್ತಲೂ ಚಂದ್ರನು ಸುತ್ತುವದೂ, ಚಂದ್ರನು ಭೂಮಿಯಸುತ್ತಲೂ ಸುತ್ತುವಾಗ್ಯೆ ಚಂದ್ರನ ಕಲೆಗಳು ಕಡಿಮೆಯಾಗುವ್ವದೂ ಹೆಚ್ಚಾಗುವದೂ, ಇದಲ್ಲದೆ ಇತರ ಗ್ರಹಚಲನಗಳೂ ಇವುಗಳೆ ಲ್ಲಾ ಪ್ರತ್ಯಕ್ಷಪ್ರಮಾಣವಾಗುವಂತೆ ತೋರಿಸುತ್ತಲಿದಾರೆ. ಇದನ್ನು ನೋಡಿ ತಿಳಿ ಸುಕೊಳ್ಳುವದು ಉದಪನ್ನರಾದವರಿಗೆ ಸಾಧ್ಯವು. ನಮ್ಮ ಇತರ ವಾಚಕರಿಗೆ ಕೂಡಿ ದವುಟ್ಟಿಗೂ ಈ ಸಂಗತಿಯನ್ನು ವ್ಯಕ್ತವಾಗಿ ತಿಳಿಸುವೆವು. ನಮ್ಮ ಕಳೆದ ಜುಲೈ ತಿಂಗಳಿನ ಸಂಚಿಕೆಯಲ್ಲಿ ಭೂಮಿಯು ಗೋಳಾಕಾರವಾಗಿರುವದೆಂದು ತೋರಿಸುವ ದಕ್ಕೆ ಬೇಕಾದ ದೃಷ್ಟಾಂತಗಳನ್ನು ತಿಳಿಸಿದೆವು. ಈಗ ಸೂರ್ಯಸಂಸ್ಥೆಯಕ್ಕೆ ಸೂ ರ್ಯನೇ ಮುಖ್ಯವರ್ತಿಯಾದದ್ದೆಂಬದಾಗಿಯೂ ಭೂಮಿಯೇ ಮೊದಲಾದ ಗ್ರಹಗಳೆ ಲ್ಲಾ ಸೂರ್ಯನ ಸುತ್ತಲೂ ಪ್ರದಕ್ಷಿಣವಾಡುವವೆಂಬದಾಗಿಯೂ, ಚಂದ್ರನು ಭೂಮಿ ಯಸುತ್ತಲೂ ಸುತ್ತುವನೆಂಬದಾಗಿಯೂ ತಿಳಿಸುತ್ತೇವೆ.

ಭೂಮಿಯು ೨೪ ಘಂಟೆಗಳಿಗೊಂದಾವರ್ತಿ ದೂರಿಯನೀಲೆ ಗಾಡಿಯು ಚಕ್ರವು ತಿರುಗುವಂತೆ ತಿರುಗುವದು. ಹೀಗೆ ತಿರುಗುವವೇಳೆಯಲ್ಲಿ ಸೂರ್ಯನಿಗೆ ಅಭಿ ಮುಖವಾಗಿರುವ ಭಾಗಕ್ಕೆ ಬೆಳಕುಬೀಳುವದು. ಅಭಾಗದಲ್ಲಿ ಹಗಲೆಂದು ವ್ಯವಹಾರ ವುಂಟಾಗುವ್ವದು. ಸೂರ್ಯನಿಗೆ ಪ್ರತ್ಯಭಿಮುಖವಾಗಿರುವ ಭಾಗದಲ್ಲಿ ಕತ್ತಲೆಯಾಗಿ ರುವದು ಅದೇರಾತ್ರಿಯೆಂದು ಭಾವಿಸಲ್ಪಡುವದು. ೨೪ ಘಂಟೆಗಳಿಗೊಂದು ಸಾರಿ ಭೂಮಿಯು ತಿರುಗುವದರಿಂದ ಭೂಮಿಯ ಪ್ರತಿಯೊಂದು ಭಾಗಕ್ಕೂ ೧೨ಘಂಟೆಗಳ ದಿಳಕೂ ೧೨ಘಂಟೆಗಳ ಕತ್ತಲೆಯೂ ಇರುವವ್ವು. ಹೀಗೆ ಹಗಲೂ ರಾತ್ರಿಯೂ ಸಮ ನಾಗಿರುವ್ವದು ವಿಷುವದ್ರೇಖೆಯು ಸವಿಾಪದಲ್ಲಿಯೇ ಈ ರೇಖೆಯಿಂದ ಉತ್ತರದಕ್ಷಿಣಗ ಳಿಗೆ ಹೋದಹಾಗೆಲ್ಲಾ ಋತುಗಳನ್ನನುಸರಿಸಿ ಹಗಲು ಹೆಚ್ಚಾದರೆ ರಾತ್ರಿಯು ಕಡ ಮೆಯಾಗಿಯೂ, ರಾತ್ರಿಯು ಹೆಚ್ಚಾದರೆ ಹಗಲು ಕಡಿಮೆಯಾಗಿಯೂ ಇರುವವ್ವು, ಇದಲ್ಲದೆ ಧ್ರುವಗಳ ಸವಿಾಪದಲ್ಲಿ ವರ್ಷಕ್ಕೆ ೬ತಿಂಗಳು ಹಗಲೂ ೬ತಿಂಗಳು ರಾತ್ರಿ ಯೂ ಪರಿಣಮಿಸುವದು. ಇದಕ್ಕೆ ಕಾರಣಗಳು ಮುಂದೆ ವ್ಯಕ್ತವಾಗುವವ್ವ. ಬೆಳಿಗ್ಯೆ ಸೂರ್ಯನು ಉದಯಿಸಿ ಆಕಾಶವಮಾರ್ಗವಾಗಿ ಸಾಯಂಕಾಲದಲ್ಲಿ ಅಸ್ತಮಯಿಸುವದು ಅನುಭವಸಿದ್ಧವಾಗಿದೆ. ನಾವು ರೈಲಿನಲ್ಲಿ ಸಂಚಾರಮಾಡುವಾಗ ನಾವು ನೋಡತಕ್ಕ ಧಕಲ ಪದಾರ್ಥಗಳೂ ನಾವು ಹೋಗತಕ್ಕ ದಿಕ್ಕಿಗೆ ಅಭಿಮುಖವಾಗಿ ಸಂಚಾರಮಾಡು

ಈಗ ಇಲ್ಲಿ ಮೂವರಿಗೋಸ್ಕರ ಒಂದೊಂದರ್ಥಕ್ಕೂ ಒಂದೊಂದು ಉದಾಹರಣೆಯು ಕೊಡೆಲ್ಪಡುವುದು. ಶಬ್ದಾನುಶಾಸನದ ಕ್ರಮವು ವಿಸ್ತಾರವಾಗಿರುವದರಿಂದ ಅದರಲ್ಲಿ ಹೇಳಿರುವಂತೆಯೇ ಇಲ್ಲಿಯೂ ಉದಹರಿಸಲ್ಪಡುವುದು.

ಸಂಪ್ರದಾನ ಸಾಮಾನ್ಯಕ್ಕೆ,—ಬ್ರಾಹ್ಮಣನಿಗೆ ಗೋವನ್ನು ಕೊಟ್ಟನು. ದೇವರಿಗೆ ಹೂವನ್ನು ಇತ್ತನು. ಎಂದು ಮೊದಲಾದ ದಾನಾರ್ಥಕ ಧಾತುಪ್ರಯೋಗವುಳ್ಳ ವಾಕ್ಯಗಳಲ್ಲಿ ದಾನೋದ್ದೇಶ್ಯ ವಾಚಕದಮೇಲೆ ಚತುರ್ಥಿ ಬರುವುದು ಎಂದು ತಿಳಿಯಬೇಕು. ಅಲ್ಲದೆ ಕೆಲವುಸಂದರ್ಭಗಳಲ್ಲಿ ದಾನಾರ್ಥಕ ಧಾತುಪ್ರಯೋಗವಿಲ್ಲದಿದ್ದರೂ, ಕೆನ್ನೆಗೆ ಹೊಡೆದನು. ಮರಕ್ಕೆ ಕಲ್ಲನ್ನು ಎಸೆದನು. ಮೊದಲಾದ ವಾಕ್ಯಗಳಲ್ಲಿ ಸಂಪ್ರದಾನತ್ವವನ್ನು ಬುದ್ಧಿಯಿಂದ ಪರಿಕಲಿಸಿ ಚತುರ್ಥಿಯನ್ನು ಉಪಯೋಗಿಸುವ ವಾಡಿಕೆಯುಂಟೆಂದುತಿಳಿಯಬೇಕು.

ಶಕ್ತ್ಯರ್ಥಕ್ಕೆ—ಮಲ್ಲನಿಗೆ ಮಲ್ಲನು ಶಕ್ತನು. ಅತನಿಗೆ ಈತನು ಸಮರ್ಥನು. ಹೀಗೆಯೇ ಶಕ್ತ್ಯರ್ಥಕವಾದ ಯಾವಶಬ್ದಗಳ ಯೋಗವಿದ್ದರೂ ಚತುರ್ಥಿಯನ್ನು ಉಪಯೋಗಿಸಬೇಕೆಂದು ತಿಳಿಯಬೇಕು. ಇದು ಶಬ್ದಮಣಿದರ್ಪಣದಲ್ಲಿ ಸ್ಪಷ್ಟವಾಗಿ ಹೇಳಿದ್ದರೂ ಸಾದೃಶ್ಯದಲ್ಲಿ ಅಂತರ್ಭೂತವಾಗುವುದೆಂದು ಮೇಲೆ ತಿಳಿಸಲ್ಪಟ್ಟೀದೆ.

ರುಚ್ಯರ್ಥಕ್ಕೆ,—ಧಾರ್ಮಿಕನಿಗೆ ಧರ್ಮವು ರುಚಿಯಾಗಿರುವುದು, ಗಣಪತಿಗೆ ಕಡುಬು ಸ್ವಾದುವಾಗಿರುವುದು. ರುಚಿಯೆಂಬುದೂ ಇಷ್ಟವೆಂಬುದೂ ಸ್ಥೂಲಬುದ್ಧಿಗಳಿಗೆ ಒಂದಾಗಿ ತೋರುತ್ತಿದ್ದರೂ, ಅವಾಂತರ ಭೇದವಿರುವದರಿಂದ ಇವು ಬೇರೆಬೇರೆ ಹೇಳಲ್ಪಟ್ಟಿರುವುವು. ಈ ಭೇದವು ಸಂಸ್ಕೃತ ವ್ಯಾಕರಣದಲ್ಲಿ ಸ್ಪಷ್ಟವಾಗಿ ತಿಳಿಸಲ್ಪಟ್ಟಿರುವುದರಿಂದ ಅದರಿಂದಲೇ ತಿಳಿದುಕೊಳ್ಳಬೇಕು. ಇದು ಭಾಷೆಯಲ್ಲಿ ಅವ್ಯವಸ್ಥಿತವಾಗಿರುವುದರಿಂದ ಇಲ್ಲಿ ಹೇಳಲು ಅಸಾಧ್ಯವಾಗಿ ತೋರುವುದು. ಆದರೂ ಸಾಮಾನ್ಯವಾಗಿ ರುಚಿಯೆಂದರೆ ಅತ್ಯಾಶೆಯಿಂತಲೂ ಇಷ್ಟವೆಂದರೆ ಸಾಮಾನ್ಯೇಚ್ಛಾಮಾತ್ರವೆಂತಲೂ, ತಿಳಿದುಕೊಳ್ಳಬಹುದು.

ಈರ್ಷ್ಯಾರ್ಥಕ್ಕೆ,—ಕವಿಗೆ ಕವಿಯು ಈರ್ಷ್ಯೆ ಮಾಡುವನು. ಕೆಟ್ಟವನು ಒಳ್ಳೆಯವನಿಗೆ ಸೈರಿಸನು. ಇಂಥ ಪ್ರಯೋಗಗಳನ್ನು ಸಂಸ್ಕೃತಭಾಷೆಯು ಸಂಸ್ಕಾರಾತಿಶಯದಿಂದ ಕನ್ನಡದಲ್ಲಿ ಉಪಯೋಗಿಸುವಂತೆ ತೋರುವುದೇ ಹೊರ್ತು, ಇದು ಭಾಷಾಶೈಲಿಗೆ ಸರಿಯಾದುದಲ್ಲವೆಂದು ತೋರುವುದು. ಇಂಥ ಸಂದರ್ಭಗಳಲ್ಲಿ ಕವಿಯು

ಇರಬೇಕೆ ಜನಗಳೂ ಪದಾರ್ಥಗಳೂ ಎಲ್ಲಾ ಪಾತಾಳಕ್ಕೆ ಬಿದ್ದುಹೋಗಬೇಕೆಂಬದಾ ಗಿಯೂ ವಿಚಾರಿಸುತ್ತಾರೆ. ಆದರೆ ಯಾವಭಾಗದಲ್ಲಿಯೂ ಜನಗಳೇ ಆಗಲೀ ಪದಾರ್ಥಗಳೇ ಆಗಲೀ ಬಿದ್ದುಹೋಗುವದಿಲ್ಲ. ಮೇಲೆ, ಕೆಳಗೆ ಎಂಬ ವ್ಯವಹಾರವು ಭೂಮಿಗೆ ಅಧೀನರಾದ ನಮಗೆ ಹೊರತು ಭೂಮಿಗೆ ಅಂಥಾ ವ್ಯವಹಾರವು ಇರುವದಿಲ್ಲ. ಆದರೆ ಭೂಮಿಯ ಎಲ್ಲಾ ಭಾಗಗಳಲ್ಲಿಯೂ ಜಂಗಮಾತ್ಮಕವಾದ ಪದಾರ್ಥಗಳೆಲ್ಲವೂ ಭೂಮಿಯನ್ನು ಬಿಟ್ಟು ಹೋಗದೇ ಅದನ್ನೇ ಅನುಸರಿಸಿಕೊಂಡಿರುವದಕ್ಕೆ ಯಾವದೊ ಒಂದು ಶಕ್ತಿಯು ಅದರಲ್ಲಿರಬೇಕು. ಈ ಶಕ್ತಿಗೆ ಆ ಭೂಮಿಯ ಆಕರ್ಷಣಶಕ್ತಿಯೆಂದು ಸಿದ್ಧಾಂತಿಗಳು ಹೇಳುವರು. ಸೂಜಿಗಲ್ಲು ಸೂಜಿಯನ್ನು ಎಳೆಯುವಂತೆ ಈ ಭೂಮಿಯ ಆಕರ್ಷಣಶಕ್ತಿಯು ಸಮಸ್ತ ಪದಾರ್ಥಗಳನ್ನೂ ಭೂಮಿಯನ್ನು ಬಿಟ್ಟು ಹೋಗದಂತೆ ಆಕರ್ಷಿಸಿ ಇಟ್ಟುಕೊಳ್ಳುವದು.

ಭೂಮಿಯು ಸೂರ್ಯನ ಸುತ್ತಲೂ ಸುತ್ತುವದಕ್ಕೆ ವಾರ್ಷಿಕಚಲನವೆಂದು ಹೆಸರು. ಅದು ಹಾಗೆ ಸೂರ್ಯನ ಸುತ್ತಲೂ ಒಂದಾವರ್ತಿ ಸುತ್ತುವದಕ್ಕೆ ಸುಮಾರು ೩೬೫| ದಿವಸಗಳಾಗುವವು. ಭೂಮಿಯು ಸೂರ್ಯನ ಸುತ್ತಲೂ ಹೋಗುವಕ್ಕೆ ಹಾದಿಯು ಕೋಳೀವೊಟ್ಟೆಯ ಆಕೃತಿಯುಳ್ಳದ್ದಾಗಿರುವದು. ಇಂಥಾ ಆಕೃತಿಯುಳ್ಳ ಮಧ್ಯದಲ್ಲಿಲ್ಲದೇ ಸ್ವಲ್ಪ ಒಂದು ಪಾರ್ಶ್ವದಲ್ಲಿರುವದರಿಂದ ಭೂಮಿಯು ಒಂದು ಕಾಲದಲ್ಲಿ ಬಹಳ ಸವಿಾಪದಲ್ಲಿಯೂ ಮತ್ತೊಂದುಕಾಲದಲ್ಲಿ ಸ್ವಲ್ಪ ದೂರದಲ್ಲಿಯೂ ಇರುವದು. ನಮಗೂ ಸೂರ್ಯನಿಗೂ ಸರಾಸರಿ ೯೦ ಕೋಟಿ ೩೮ ಲಕ್ಷ ಮೈಲಿಗಳಾಗುವವು.

ವ್ಯಾಕರಣ ಶಾಸ್ತ್ರ.

(೪೫ ನೆಯ ಪುಟದ ಶೇಷ.)

(ಮೇಲೆ ಹೇಳಿರುವಂತೆ ಗ್ರಂಥಕಾರರ ಆಶಯವನ್ನು ಉಪಾಧ್ಯಾಯರು ಚೆನ್ನಾಗಿ ಪರಿಶೀಲಿಸಿ ಬಾಲಕರಿಗೂ ತಿಳಿಸಿ ಉದಾಹರಣೆಗಳಲ್ಲಿ ತೋರಿಸಿ ಮನಸ್ಸಿಗೆ ಮುಂದುಬ್ಬಾಗುವಂತೆ ವಿವರಿಸಿ ಹೇಳಬೇಕು.)

ಈಗಿನ ವ್ಯವಹಾರದಲ್ಲಿ ಕೆಲವುತಿಳಿದಿದ್ದರೂ ಪ್ರಾಚೀನ ಗ್ರಂಥಗಳಲ್ಲಿ ದೊರಿಯುವುದರಿಂದ ಕೆಲವನ್ನು ಅಂಗೀಕರಿಸಿ ವಾಡಿಕೆಯಲ್ಲಿಲ್ಲದನ್ನು ಬಿಟ್ಟು ಎರಡರ ಸ್ಥಾನದಲ್ಲಿ ಈಗಿನ ಪ್ರಯೋಗಕ್ಕೆ ತಕ್ಕಂತೆ ಸೂತ್ರಗಳನ್ನು ಬುದ್ಧಿವಂತರು ಕಲ್ಪಿಸಬೇಕೆಂದುತೋರುತ್ತದೆ.

(ಸಶೇಷ)

(೬೬ ನೆಯ ಪುಟದ ಶೇಷ;)

೩. ಇವನು ಮಾಡಿದ ಯುದ್ಧಗಳಲ್ಲಿ ಮುಮುಖ್ಯವಾದವುಗಳು. ೧. ೪. ೧೦, ೧೫ನೆಯವುಗಳು ಮಾತ್ರ.

[ಯುದ್ಧಗಳ ವಿವರಣೆ]

(೧) ಒಂದನೇದು ೧೦೦೧ರಲ್ಲಿ ಲಾಹೋರಿನ ಜಯಪಾಲನಿಗೂ, ಘಜ್ನೀ ಮಹಮ್ಮದನಿಗೂ ನಡೆದು ಕೊನೆಗೆ ಘಜ್ನಿಮಹಮ್ಮದನಿಗೆ ಜಯವಾಯಿತು.

ಫಲಿತಾಂಶ.

ಜಯಪಾಲನು ಸೆರೆ ಸಿಕ್ಕಿ ತನ್ನ ಮಗ ಅನಂಗಪಾಲನಿಗೆ ರಾಜ್ಯವನ್ನು ಕೊಟ್ಟು ತಾನು ವಹ್ನಿಪ್ರವೇಶಮಾಡಿದನು.

ಬಾಲಕರಿಗೆ ಈ ವಿಷಯವನ್ನು ತಿಳಿಸಿ ಇವೇ ಮುಖ್ಯವಾದ ಯುದ್ಧಗಳೆಂತಲೂ ವಿಕ್ಕವುಗಳು ಅಷ್ಟು ಪ್ರಸಿದ್ಧವಾದವುಗಳಲ್ಲವೆಂತಲೂ ತಿಳಿಸಿ ಹಲಿಗೆಯುಮೇಲೆ ಬರೆಯುಬೇಕು.

ಇವನು ಮಾಡಿದ ಯುದ್ಧಕ್ಕೆ ಮೊದಲು ಹೇಳಿರುವ ವಿಷಯಗಳೇ ಕಾರಣಗಳೆಂದು ತಿಳಿಸಬೇಕು. ಮತ್ತು ಮೊದಲುಮಾಡಿದ ಯುದ್ಧದ ವಿಷಯಗಳನ್ನೂ ಫಲಿತಾಂಶವನ್ನೂ ಮತ್ತು ಇತರಿಗಳನ್ನೂ ತಿಳಿಯಪಡಿಸಿ ಹಲಗೆಯಲ್ಲಿ ಬರೆದು ಇಬ್ಬರು ಮೂವರು ಬಾಲಕರುಗಳಿಂದ ಪುನರುಕ್ತಿಯನ್ನು ಮಾಡಿಸಿ ಬರೆದುಕೊಳ್ಳುವಂತೆ ಹೇಳಬೇಕು. ಮತ್ತು ಇವನು ಯುದ್ಧ ಮಾಡಿದ ಸ್ಥಳವನ್ನು ಈ ಗುರ್ತಿನಿಂದ ಬೇರೆಯಾಗಿ ಬರೆದ ಮ್ಯಾಪಿನಲ್ಲಿ ಗುರ್ತು ಮಾಡಿ ಆ ಸ್ಥಳವನ್ನು ಮ್ಯಾಪಿನಲ್ಲಿ ಬಾಲಕರು ತೋರಿಸುವಂತೆ ಹೇಳಬೇಕು.

ಕವಿಯಲ್ಲಿ ಕರ್ಣ್ಯ ವಾಡುವನು ಕೆಟ್ಟವನು ಒಳ್ಳೆಯವನನ್ನು ಸೈರಿಸನು. ಎಂದ ವೊದಲಾಗಿ ಸಪ್ತಮಿ ದ್ವಿತೀಯ ಗಳನ್ನು ಹೇಳಬಹುದಾಗಿ ತೋರುವುದರಿಂದ ಈ ವಿಷಯದಲಿ ಚತುರ್ಥಿಯನ್ನು ವಿಧಿಸಿರುವುದು ಅಮ್ಮ ಮುಖ್ಯವಲ್ಲವೆಂದು ತೋರುವುದು

ಅಸೂಯಾರ್ಥಕ್ಕೆ,—ಧರ್ಮರಾಯನಿಗೆ ಕೌರವನು ಅಸೂಯೆಪಡುವನು. ರಾಮನಿಗೆ ರಾವಣನು ದೋಷವನ್ನಾರೋಪಿಸುವನು. ಇಲ್ಲಿಯೂ ಮೇಲೆಹೇಳಿದಂತೆ ಸಪ್ತಮಿಯಿಂದಲೆ ನಿರ್ವಹಿಸಬಹುದಾದುದರಿಂದ ಇದೂ ಅಮ್ಮ ಮುಖ್ಯವೆಂದು ತೋರುವುದಿಲ್ಲ.

ದ್ರೋಹಾರ್ಥಕ್ಕೆ,—ಅರಸನಿಗೆ ಇವನು ದ್ರೋಹಿ. ವೊದಲಾದುದೆಂದು ತಿಳಿಯುವುದು.

ಕ್ರೋಧಾರ್ಥಕ್ಕೆ,—ಕರ್ಣನಿಗೆ ಅರಸನು ಮುನಿವನು.

ಮತ್ಸರಕ್ಕೆ,—ಅಜ್ಜನಿಗೆ ಅಜ್ಜನು ಮತ್ಸರಿಸುವನು.

ಇವೆಲ್ಲವೂ ಕೋಪದಿಂದಲೇ ಉಂಟಾಗುವುದರಿಂದ ಒಂದರಲ್ಲೇ ಅಂತರ್ಭಾವವನ್ನು ಹೊಂದುವುದೆಂದು ಮೇಲೆ ಹೆಳಲ್ಪಟ್ಟತು. ಆದರೂ ಇಲ್ಲಿ ಸಪ್ತಮಿಯಾ ವಿಧಕ್ತಿಯಿಂದಲೇ ನಿರ್ವಹಿಸಬಹುದಾಗಿದೆಯಾದ್ದರಿಂದ ಇದೂ ಮುಖ್ಯವಲ್ಲವೆಂದು ತಿಳಿಯುವುದು.

ಭೀತ್ಯರ್ಥಕ್ಕೆ,—ಪಾಪಕ್ಕೆ ಅಂಜುವನು. ಸಂಸ್ಕೃತದಲ್ಲಿ ಭೂಯರ್ಥಕ ಶಬ್ದಗಳ ಯೋಗವಿದ್ದರೆ ಪಂಚಮಿಯಾ ವಿಧಕ್ತಿಯು ವಿಧಿಸಲ್ಪಟ್ಟದೆ. ಇಲ್ಲಿ ಚತುರ್ಥಿಯು ಹೇಳಲ್ಪಟ್ಟದೆ. ಆದರೆ ಭಾಷಾಶಾಸ್ತ್ರಿಗಳ ಅನುಸಾರವಾಗಿ ವ್ಯತ್ಯಸ್ತವಾಗಿ ಹೇಳಿರುವದ್ದರಿಂದ ಏನೂ ವಿರೋಧವಿಲ್ಲವೆಂದು ತಿಳಿಯಬೇಕು.

ಉನ್ನತ್ಯರ್ಥಕ್ಕೆ,—ಲೋಕಕ್ಕೆ ಇವನು ದೊಡ್ಡವನು.

ಸ್ವಭಾವಕ್ಕೆ,—ಕಪಿಗೆ ಚಪಲತೆ ಸಹಜವು.

ಅವನತಿಗೆ—ರಾವಣನಿಗೆ ಎರಗಿದನು.

ಇಷ್ಟಕ್ಕೆ,—ಯಾಜ್ಞಿಕನಿಗೆ ಸ್ವರ್ಗವು ಇಷ್ಟವು. ದನಕ್ಕೆ ಹುಲ್ಲು ಹಿತವು.

ಅನಿಷ್ಟಕ್ಕೆ,—ಲೋಕಕ್ಕೆ ಬರವು ಅನಿಷ್ಟವು. ಮಲ್ಲನಿಗೆ ವಜ್ರಮುಷ್ಟಿಯು ಬೆಳ್ಳೀದಲ್ಲ.

ಸಾದೃಶ್ಯಕ್ಕೆ;—ಗೋವಿಗೆ ಗವಯವು ಸವಾನವು.

ಪ್ರತಿನಿಧಿಗೆ,—ಜೇನುತುಪ್ಪಕ್ಕೆ ಸಕ್ಕರೆ ಸಲ್ಲುವುದು, ಎಂದು ವೊದಲಾಗಿ ಶಬ್ದಾನುಶಾಸನದಲ್ಲಿ ಹೇಳಿರುವ ೧೦೮ ನೆಯ ಸೂತ್ರದಲ್ಲಿ ಕೊಟ್ಟಿರುವ ವಿಷಯಗಳಿಗೆ ಪಂಚಮ್ಯ ಈ ಉದಾಹರಣೆಗಳೆಂದು ತಿಳಿದುಕೊಳ್ಳಬೇಕು. ಆದರೆ ಇಲ್ಲಿ ಕೊಟ್ಟಿರುವಂತೆ

ಗುಲ್ಮ—ಇದು ಉದರದ ಒಳಗಡೆಯಲ್ಲಿ ಜಠರದ ಎಡಭಾಗದಲ್ಲಿ ಇದೆ. ಇದು ಸುಮಾರು ೪ ಅಂಗುಲ ಉದ್ದವಾಗಿದೆ. ಇದು ಮಿದುವಾಗಿ ಸ್ಪಂಜಿನಂತೆಯೂ ಕಪ್ಪು ಮಿಶ್ರವಾದ ಕೆಂಪುಬಣ್ಣ ಉಳ್ಳದ್ದಾಗಿದೆ. ಇದು ನಾವು ಊಟಮಾಡಿದ ೪—೬ ಗಂಟೆಯಮೇಲೆ ರಕ್ತದಿಂದ ತುಂಬಿ ದೊಡ್ಡದಾಗುತ್ತದೆ. ಅನಂತರ ಕ್ರಮವಾಗಿ ಸಂಕುಚಿಸುತ್ತಾ ಸ್ವಭಾವಸ್ಥಿತಿಗೆ ಬರುತ್ತದೆ. ಗುಲ್ಮದಲ್ಲಿ ಬಿಳಿಯರಕ್ತ ಕಣಗಳು ಅಧಿಕವಾಗಿ ಉತ್ಪತ್ತಿಯಾಗುತ್ತವೆ. ಗುಲ್ಮವು ಕೆಲವು ಜ್ವರಗಳಲ್ಲಿ ದಪ್ಪವಾಗಿಯೂ, ಗಿಡ್ಡವಾಗಿಯೂ ಆಗುವದು. ಆಗ ಹೊಟ್ಟೆಯಲ್ಲಿ ಗೆಡ್ಡೆಯಿದೆ ಎಂದು ಹೇಳುತ್ತಾರೆ. ಇದುವರೆವಿಗೂ ಆಹಾರವನ್ನು ಜೀರ್ಣಮಾಡುವ ಅವದುವಗಳನ್ನು ಅವುಗಳ ಕಾರ್ಯಗಳನ್ನು ಕುರಿತು ಸ್ವಲ್ಪಮಟ್ಟಿಗೆ ತಿಳಿಸಿದೆವು. ಇನ್ನು ಆಹಾರವು ಜೀರ್ಣಿಸಿ ರಕ್ತಗತವಾಗುವ ರೀತಿಯನ್ನು ತಿಳಿಸುವದು ಬಹಳ ಅವಶ್ಯಕವಾಗಿರುವದು.

ನಾವು ಮೊದಲು ಆಹಾರವನ್ನು ತುತ್ತುತುತ್ತಾಗಿ ಅಗಲಿ ಅಥವಾ ಸಣ್ಣ ಚೂರುಗಳಾಗಿ ಅಗಲಿ ಮಾಡಿ ಬಾಯಿನಲ್ಲಿ ಹಾಕಿಕೊಂಡು ಸುಲಭವಾಗಿ ನುಂಗುವ ಹಾಗೆ ಹಲ್ಲುಗಳಿಂದ ಚೆನ್ನಾಗಿ ಅಗಿಯುತ್ತೇವೆ. ಆಹಾರವು ಬಾಯಿ ಒಳಕ್ಕೆ ಹೋದ ಕೂಡಲೇ ಬಾಯಲ್ಲರತಕ್ಕ (ಲಾಲಾಜಲ) ಜೊಲ್ಲಿನ ಗ್ರಂಥಿಗಳು ಜೊಲ್ಲನ್ನೇ ಅಧಿಕವಾಗಿ ಸುರಿಸುತ್ತವೆ. ಅಗಿಯುವಾಗ ಈ ಜೊಲ್ಲು ಆಹಾರದೊಡನೆ ಚೆನ್ನಾಗಿ ಕಲೆತು ಆಹಾರದಲ್ಲಿರುವ ಪಿಷ್ಟಪದಾರ್ಥಗಳನ್ನು ಸಕ್ಕರೆಯಾಗಿಮಾಡಿ ಬಾಯಲ್ಲಿರುವ ಲೋಮನಾಳಗಳ ಮಾರ್ಗವಾಗಿ ರಕ್ತದೊಡನೆ ಬೆರಸಿ ಶರೀರದ ಎಲ್ಲಾ ಭಾಗಗಳಿಗೂ ಹೋಗಿ ಸೇರುತ್ತದೆ. ಮಿಕ್ಕ ಆಹಾರಭಾಗವು ಅಲ್ಲಿಂದ ಮುಂದಕ್ಕೆ ಹೊರಟು ಗಂಟಲಿನ ಮಾರ್ಗವಾಗಿ ದೊಡ್ಡ ಅನ್ನನಾಳದಲ್ಲಿ ಇಳಿದು ಜಠರಕ್ಕೆ ಬಂದು ಬೀಳುವದು. ಅದು ಜಠರಕ್ಕೆ ಬಿದ್ದಕೂಡಲೇ ಅಲ್ಲಿರುವ ಜಠರದ ಗ್ರಂಥಿಗಳು ಜಠರಸಾರವನ್ನು ಸುರಿಯುವವು. ಮತ್ತು ಜಠರಭಿತ್ತಿಯ ಮಾಂಸಗಳು ಆಹಾರವನ್ನು ಚೆನ್ನಾಗಿ ತಿರುವಿಹಾಕುವವು. ಈರೀತಿಯಲ್ಲಿ ಜಠರಕೋಶದ ಮಾಂಸಖಂಡಗಳು ಶರೀರದ ಉತ್ತಮಪ್ರೋಷಣೆಗೆ ಅತ್ಯಾವಶ್ಯಕನಾದ ಸಸಾರಜನಕ ಪದಾರ್ಥಗಳನ್ನು ಚೆನ್ನಾಗಿ ಜೀರ್ಣಿಸಿ ಅಲ್ಲಿರುವ ಲೋಮನಾಳಗಳ ಮೂಲಕ ರಕ್ತಕ್ಕೆ ಸೇರುವಹಾಗೆ ಮಾಡುತ್ತದೆ. ಇಲ್ಲಿ ಜೀರ್ಣಿಸಲ್ಪಡದೆ ನಿಂತ ಆಹಾರವು ಮುಂದಕ್ಕೆ ಸಣ್ಣ ಕರಳುಗಳಿಗೆ ಹೋಗುವದು. ಅಲ್ಲಿ ಪಿತ್ತರಸ, ಮೇದೋಜೀರಕರಸ, ಕರುಳ ರಸಗಳು ಬಂದು ಚೆನ್ನಾಗಿ ಸೇರುವುದರಿಂದ

(೩) ನಾಲ್ಕನೆಯದು ೧೦೦೪ ರಲ್ಲಿ, ಸುಲ್ತಾನಮಹಮ್ಮದನು ಖಂದಕೂಡಲೆ ಜಯಪಾಲನ ಮಗ ಅನಂಗಪಾಲನು ಗ್ವಾಲಿಯರ್, ಉಜ್ಜಯಿನಿ, ಕೆನೌಜ್, ದಿಲ್ಲಿ, ಅಜ್ಮೀರ್ ದೇಶಗಳ ಧೊರೆಗಳನ್ನು ಸಹಾಯವಮಾಡಿಕೊಂಡು ಯುದ್ಧಕ್ಕಾಗಿ ಸೋತುಹೋದನು. ಈ ಯುದ್ಧವು 'ಪೆಷಾವರ್' ಬಳಿ ನಡೆದುದು.

ಫಲಿತಾಂಶ

ನಾಗರಕೋಟೆ ದೇವಾಲಯವು ಸುಲ್ತಾನ ಮಹಮ್ಮದನಿಂದ ಲೂಟಿ ಮಾಡಲ್ಪಟ್ಟು ಬಹುಧನವು ಕೈಸೇರಿತು. ಪದೇಪದೇ ಇವನು ಬರುವ ಆಶೆಯು ಅತಿಶಯಿಸಿತು.

ನಾಲ್ಕನೇಆವರ್ತಿ ಇವನು ದಂಡೆತ್ತಿ ಬಂದಾಗ ಯುದ್ಧವಾಡಿದ ಸ್ಥಳವನ್ನೂ ಅನಂಗಪಾಲನು ತನ್ನ ಸಹಾಯಕ್ಕೆ ಕರೆದುಕೊಂಡ ರಾಜರುಗಳ ದೇಶಗಳನ್ನೂ ಉಪಾಧ್ಯಾಯರು ಬಾಲಕರಿಗೆ ತೋರಿಸಿ [ಇಂಡಿಯಾಪಟದಲ್ಲಿ ತೋರಿಸಿ] ಅದನ್ನು ಹಲಗೆಯಮೇಲೆ ಬರೆದಿರುವ ವ್ಯಾಪಿನೆಲ್ಲಿ ಗುರ್ತುವಾಡಬೇಕು. ಯುದ್ಧ ನಡೆದ ಸ್ಥಳವನ್ನೂ ಈ ಗುರ್ತಿನಿಂದ ಸೂಚಿಸಬೇಕು.

ಫಲಿತಾಂಶವನ್ನು ಹಲಿಗೆಯ ಮೇಲೆ ಬರೆದು ಜಯಲಕ್ಷ್ಮಿಯು ಈ ಯುದ್ಧದಲ್ಲಿಯೂ ಹಿಂದುಗಳ ಕೈ ಬಿಟ್ಟುಬಿಟ್ಟಳೆಂದೂ ಮಹಮ್ಮದೀಯರ ಕೈ ಸೇರಿದಳೆಂದೂ ತಿಳಿಸಬೇಕು. ತಮ್ಮತಮ್ಮ ಪುಸ್ತಕಗಳಲ್ಲಿ ಬರೆದುಕೊಳ್ಳುವಂತೆ ಹೇಳಬೇಕು. ನಂತರ ಪುನರುಕ್ತಿಯನ್ನು ಮಾಡಬೇಕು.

(ಸಶೇಷ)

ಆಹಾರವು ಜೀರ್ಣವಾಗಿ ಶರೀರಕ್ಕೆ ಸೇರತಕ್ಕ ಕ್ರಮ.

(೪೯ ನೇ ಪುಟದ ಶೇಷ)

೬. ಪೀದೋಜೀರಕ—ಇದು ಜಠರದ ಹಿಂದುಗಡೆ ಒಂದು ದಾಕ್ಷಿಗೊಂಚಲಿನ ಪಾಟವಾಗಿರುವ ದೊಡ್ಡ ಗ್ರಂಥಿಯಾಗಿದೆ. ಇದರಲ್ಲಿ ಪಾದೋಜಿತಕವೆಂಬ ಹೆಸರುಳ್ಳ ಒಂದು ರಸವಿಶೇಷವು ಉತ್ಪತ್ತಿಯಾಗುತ್ತದೆ. ಇದು ಸಸಾರಜನಕ—ಮೇದಸ್ಸು ಶರ್ಕರ ಪಿಷ್ಟಾದಿಗಳನ್ನು ಜೀರ್ಣ ಮಾಡುತ್ತದೆ. ಇದರಲ್ಲಿ ಉತ್ಪತ್ತಿಯಾದ ಪೀದೋಜೀರಕ ರಸವು ಒಂದು ದೊಡ್ಡ ನಾಳದ ಪಾರ್ಶ್ವನಾಗಿ ಪಿತ್ತನಾಳವು ಕರುಳಿಗೆ ಸೇರುವ ಸ್ಥಳದಲ್ಲಿ ಕರುಳಿಗೆ ಸೇರುತ್ತದೆ.

ಲ್ಲವೂ ಅವಿರೂಪದಿಂದ ಗಾಳಿಯಲ್ಲಿ ಸೇರಿತೆಂದು ಕೊಂಚ ಆಲೋಚಿಸಿದವರೆಲ್ಲರೂ ಸುಲ ಭವಾಗಿ ತಿಳಿದುಕೊಳ್ಳಬಹುದು. ಈಪ್ರಕಾರವಾಗಿಯೇ ಪ್ರತಿದಿನವೂ, ಭೂಮಿಯಿಂದಲೂ, ನದಿ ಸಮುದ್ರ ಮೊದಲಾದ ಜಲಾಶಯಗಳಿಂದಲೂ ಅವಿರೂಪವಾಗಿ ನೀರು ಮೇಲಕ್ಕೆದ್ದು ಗಾಳಿಯಲ್ಲಿ ಸೇರುತಿರುವುದು.

ಹೀಗೆ ಸೂಕ್ಷ್ಮವಾದ ಅವಿರೂಪದಿಂದ ಏಳುವ ನೀರು, ಗಾಳಿ ಬೆಚ್ಚಗಿದ್ದಾಗ ಅಧಿಕವಾಗಿಯೂ, ತಣ್ಣಗಿದ್ದಾಗ ಅಲ್ಪವಾಗಿಯೂ ವಾಯುವಿನಲ್ಲಿ ಸೇರುತಿರುವುದು. ಗಾಳಿಯು ತಣ್ಣಗಾದಹಾಗೆಲ್ಲಾ ಅದಕ್ಕೆ ಜಲವನ್ನು ಧರಣಮಾಡುವ ಶಕ್ತಿ ತಗ್ಗುತ್ತ ಬರುವದರಿಂದ ಅದೃಶ್ಯರೂಪದಿಂದ ಸೇರಿದ ನೀರಾವಿ ಒಟ್ಟುಗೂಡಿ ದೃಶ್ಯ ರೂಪವನ್ನು ವಹಿಸಿ, ಭೂಮಿಗೆ ಸವಿಾಪದಲ್ಲಿರುವಂಥಾದ್ದು ಮಂಜುರೂಪದಿಂದ ನೆಲದ ಮೇಲೆ ಬೀಳುವುದು. ಹೀಗೆ ನೀರಾವಿಸೇರಿ ಸೂಕ್ಷ್ಮರೂಪವನ್ನು ಬಿಟ್ಟು ದೃಶ್ಯವಾದ ಸ್ಥೂಲರೂಪವನ್ನು ವಹಿಸುವುದು ಭೂಮಿಗೆ ಸವಿಾಪಕ್ಕಿಂತಲೂ ದೂರವಾದ ಉಪರಿ ಭಾಗದಲ್ಲಿ ವಿಶೇಷವಾಗಿ ನಡೆಯುತ್ತಿರುವುದು. ಈ ವಿಧವಾಗಿ ಆಕಾಶದಲ್ಲಿ ವಿಶೇಷವಾ ಗಿ ಸೇರಿ, ರೂಪವನ್ನು ವಹಿಸಿದ ಆವಿಯನ್ನೇ ನಾವು ಮೇಘಗಳೆನ್ನುವೆವು. ಉಪರಿ ಭಾಗದಲ್ಲಿ ಬಿಸಿಗಾಳಿ ತಣ್ಣಗಾದಾಗ ಮೊಟ್ಟಮೊದಲು ಚಿಕ್ಕಮೇಘವೇರ್ಪಟ್ಟು ಹಾಗೇರ್ಪಟ್ಟ ಮತ್ತೆ ಕೆಲವು ಎಳವಾಗಿ ಕೂಡಿಕೊಂಡು ದೊಡ್ಡಮೇಘವಾಗಿ ವರ್ಷಿಸುವುದು. ಮೇಘವೆಂಪರೆ—ಆಕಾಶದಲ್ಲಿ ಗಾಳಿಯೊಂದಿಗೆ ಸೇರಿದ ನೀರಾವಿಯ ಸಮುದಾಯವಲ್ಲದೇ ಮತ್ತೇನೂ ಅಲ್ಲ.

ಆಕಾಶದಲ್ಲೇರ್ಪಟ್ಟ ಪ್ರತಿಮೇಘದಿಂದಲೂ ಮಳೆಸುರಿಯದು. ಸೂರ್ಯೋದಯಾಸ್ತವಾನ ಸಮಯಗಳಲ್ಲಿ ಕಂಡುಬರುವ ಬಿಳುಪಾದ ಮೇಘಗಳನ್ನು ನಾವು ಬೇಸಿಗೆ ಕಾಲದಲ್ಲಿ ಸಹಿತ ವಿಶೇಷವಾಗಿ ನೋಡುತ್ತಿರುವೆವು. ಇವು ಆಕಾಶದ ಉಪರಿ ಭಾಗದಲ್ಲಿ ಬಹು ಉನ್ನತವಾಗಿರುವುವು. ಈ ಮೇಘಗಳು ಕೆಲವು ಸಮಯಗಳಲ್ಲಿ ಏದಾರುಮೈಲಿ ಎತ್ತರದಲ್ಲಿರುವವು. ಇವು ಸೂರ್ಯೋದಯಸಮಯದಲ್ಲಿ ಆಕಾಶವನ್ನು ಕವಿದುಕೊಂಡಿದ್ದು ಗಾಳಿಬೆಚ್ಚಗಾದ ಹಾಗೆಲ್ಲಾ ಕರಗಿಹೋಗಿ ಮರಳಿ ವಾಯುವಿನಲ್ಲಿ ಸೇರಿ ಅದೃಶ್ಯವಾಗುವುವು. ಈ ಹೇತುವಿನಿಂದಲೇ ಅಂಥಾ ಸಮಯಗಳಲ್ಲಿ ಪ್ರಾತಃ ಕಾಲದಲ್ಲಿ ಮೇಘಾವೃತವಾಗಿದ್ದ ಆಕಾಶವು ಮಧ್ಯಾಹ್ನಕ್ಕೆ ಮೇಘಶೂನ್ಯವಾಗಿ ನಿರ್ಮಲವಾಗುವುದು. ಇಂತಹಮೇಘಗಳೇ ಸಾಧಾರಣವಾಗಿ ಪರ್ವತಾಗ್ರಗಳನ್ನು ಕವಿದು

ಅದನ್ನಲ್ಲಿರತಕ್ಕ ಮೇದಸ್ಸು, ಪಿಷ್ಟಪದಾರ್ಥಗಳು, ಸಸಾರಜನಕವೂ ಚೆನ್ನಾಗಿ ಜೀರ್ಣಿಸಿ ರಕ್ತಗತವಾಗುವಹಾಗೆ ಮಾಡಲ್ಪಡುವುದು.

ಬಾಯಲ್ಲಿಯೂ, ಜಠರದಲ್ಲಿಯೂ, ಸುಮಾರಾಗಿ ಜೀರ್ಣಿಸಲ್ಪಟ್ಟ ಆಹಾರವು ಚಿಕ್ಕಕರುಳಿನಲ್ಲಿ ಚೆನ್ನಾಗಿ ಜೀರ್ಣಿಸಲ್ಪಡುವದು. ಆದುದರಿಂದ ಚಿಕ್ಕಕರುಳಿನಲ್ಲಿ ಆಹಾರಪದಾರ್ಥಗಳಲ್ಲಿರತಕ್ಕ ವಿಶಿಷ್ಟ ಸಾಮಗ್ರಿಗಳು ಹೆಚ್ಚು ಕಡಿಮೆ ಜೀರ್ಣಿಸಲ್ಪಡುವವು. ಪಿತ್ತರಸ, ಮೇದೋಜೀರಕರಸಗಳಿಂದ ಮೇದಸ್ಸು ಬಹಳ ಚೆನ್ನಾಗಿ ಕರಗಿ ಚಿಕ್ಕಕರಳುಗಳ ಒಳಭಾಗದಲ್ಲಿರುವ ರಸಾಯನಿನಾಳಗಳ ಮೂಲಕ ರಕ್ತಗತವಾಗುವದು. ಉಳಿದ ಆಹಾರಪದಾರ್ಥಗಳೆಲ್ಲಾ ಅಲ್ಲಿನ ಲೋಮನಾಳಗಳ ಮೂಲಕ ರಕ್ತಕ್ಕೆ ಸೇರುವುದು. ಉಳಿದ ಭಾಗವು ಕರುಳಿಗೆ ಹೋಗಿ ಅಲ್ಲಿಯೂ ಚೆನ್ನಾಗಿ ಜೀರ್ಣಿಸಲ್ಪಟ್ಟು ಗಟ್ಟಿಯಾಗಿ ದುರ್ವಾಸನೆಹೊಂದಿ ಮಲದ್ವಾರದ ವಾರ್ಗವಾಗಿ ಬಿಸಾಡಿಸಲ್ಪಡುವದು.

ಆಹಾರದಿಂದ ಆಗತಕ್ಕ ಪ್ರಯೋಜನಗಳು—

(೧) ಆಹಾರವು ನಮ್ಮ ಶರೀರದಲ್ಲಿ ನಶಿಸಿದ ಭಾಗವನ್ನೆಲ್ಲಾ ಹೊಸಪದಾರ್ಥದಿಂದ ಪುನಃ ಸರಿಮಾಡಿ ಒಳ್ಳೇ ಸ್ಥಿತಿಯಲ್ಲಿಡುವದು.

(೨) ಶರೀರವನ್ನು ಪುಷ್ಟಿಮಾಡಿ ಬೆಳಿಸುವದು.

(೩) ಶರೀರದಲ್ಲಿ ಶಾಖವನ್ನೂ, ಶಕ್ತಿಯನ್ನೂ ನೆಲೆಗೊಳಿಸುವದು.

ಮೇಘಗಳು.

ಇವು ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾಶಗಳೆಂಬ ಪಂಚಭೂತಗಳಿಂದ ನಿರ್ಮಿತವಾದುವೆಂದು ನಮ್ಮ ಪೂರ್ವಿಕರು ತಿಳಿದಿದ್ದರು. ಇದೇ ನಿಜವೆಂದು ಈಗಲೂ ಕೂಡ ಅನೇಕರು ತಿಳಿದಿರುವರು. ಆದರೆ ಇದು ನಿಜವಲ್ಲವೆಂಬುವದು ಮುಂದೆ ಹೇಳುವ ಶಾಸ್ತ್ರವಿಷಯದಿಂದ ವಿಶದವಾಗುವುದು.

ವಾಯುವಿನಲ್ಲಿ ಎಲ್ಲ ಕಾಲದಲ್ಲಿಯೂ ನೀರು ಸೇರಿರುವುದು. ನಾವು ಒಂದು ಮಡಕೆಯಲ್ಲಿ ನೀರುಹಾಕಿ ಬಯಲಲ್ಲಿಟ್ಟ ಪಕ್ಷದಲ್ಲಿ ಅದರಲ್ಲಿನ ನೀರು ಕ್ರಮಕ್ರಮವಾಗಿ ಇಂಗುತ್ತ ಬಂದು ಕೊನೆಗೆ ಅದೃಶ್ಯವಾಗುವುದು. ಮಡಕೆಯಲ್ಲಿದ್ದು ಅದೃಶ್ಯವಾದ ನೀರೆ

ಗಣಿತ.

—:o:—

1. ಒಬ್ಬ ದಿನಾಳಿಯ ಆಸ್ತಿಯು 675 ಪೌಂಡು. ಬಾಳುತ್ತದೆ. ಇವನಿಗಿರುವ ಒಟ್ಟು ಸಾಲದಲ್ಲಿ ಅರ್ಧಕ್ಕೆ ಪೌಂಡು. 1 ಕ್ಕೆ 15 ಷಿಲಿಂಗಿನಂತೆಯು ಉಳಿದರ್ಧಕ್ಕೆ 12 ಷಿಲಿಂಗಿನಂತೆಯೂ ಹಂಚಬಹುದಾದರೆ ಅವನ ಸಾಲ ವೆಷ್ಟು ?

ಒಟ್ಟು ಸಾಲದಲ್ಲಿ ಅರ್ಧಭಾಗಕ್ಕೆ ಪೌಂಡುಒಂದಕ್ಕೆ 15 ಷಿಲಿಂಗಿನಂತೆಯು, ಉಳಿದ ಅರ್ಧಕ್ಕೆ ಪೌಂಡು ಒಂದಕ್ಕೆ 12 ಷಿಲಿಂಗಿನಂತೆಯು ಕೊಡಬಹುದೆಂದಿದೆ. ಆದುದರಿಂದ ಒಟ್ಟು ಸಾಲಕ್ಕೆ ಸರಾಸರಿ ಪೌಂಡು ಒಂದಕ್ಕೆ

$\frac{15+12}{2} = \frac{27}{2}$ ಷಿಲಿಂಗಿನಂತೆ ಕೊಡಬಹುದೆಂದಾಯಿತು.

* ಇವನ ಆಸ್ತಿಯು $\frac{27}{2}$ ಷಿ ಅಥವಾ $\frac{27}{40}$ ಪೌಂಡು ಆದರೆ ಸಾಲದ ಮೊಬಲಗು 1 ಪೌಂಡು ಇವನ ಆಸ್ತಿಯು 675 ಪೌಂಡು ಆದುದರಿಂದ

ಒಟ್ಟುಸಾಲ $675 \times \frac{40}{27} = 25 \times 40$

$= 1{,}000$ ಪೌಂಡು.

2. A, B ಎಂಬಿಬ್ಬರ ಆದಾಯಗಳು 4:5 ಎಂಬ ಪ್ರಮಾಣದಲ್ಲಿವೆ. B ಯು ಪೌಂಡು ಒಂದಕ್ಕೆ 5 ಪೆನ್ಸಿನಂತೆ 9 ಪೌಂಡು, 1 ಷಿಲಿಂಗ್, 3 ಪೆನ್ಸ್ ತೆರಿಗೆಯನ್ನು ಕೊಡುತ್ತಾನೆ. A ಯ ಆದಾಯವೆಷ್ಟು ?

B ಯ ತೆರಿಗೆಯು ರೂಪದಲ್ಲಿ ಕೊಡುವುದು 9 ಪೌ. 1 ಷಿ. 3 ಪೆ.

ಆದರೆ 5 ಪೆ. ತೆರಿಗೆಯಾದರೆ ಆದಾಯವು 1 ಪೌ.

∴ ತೆರಿಗೆಯು 9 ಪೌ. 1 ಷಿ. 3 ಪೆ ಅಥವಾ 2175 ಪೆ, ಆದರೆ ಆದಾಯವು $\frac{2175}{5} = 435$ ಪೌಂಡು.

ಅಂದರೆ B ಯ ಆದಾಯವು 435 ಪೌಂಡಾಯಿತು. ಆದರೆ A, B ಯವರ ಆದಾಯಗಳು 4:5 ಅಂತೆ ಇವೆ. ಅಥವಾ

B ಯ ಆದಾಯ 5 ಆದರೆ A ಯದು 4.

B ಯ ,, 435 ,, A ಯದ

$\frac{4}{5} \times 435 = 348$ ಪೌ.

ಕೊಂಡಿರುವುವು. ಆದರೆ ವರ್ಷಮೇಘವು ಬೆಳ್ಳಗಿರದೆ ಕೊಂಚಮಟ್ಟಿಗೆ ನೀಲವರ್ಣವುಳ್ಳದ್ದಾಗಿರುವುದು. ಮೇಲೆಹೇಳಿದ ಮೇಘಗಳಿಗಿಂತ ಕೆಳಗಿದ್ದು ಭೂಮಿಗೆ ಸವಿಾಪದಲ್ಲಿರುವುದು. ಕೆಳಭಾಗದಲ್ಲಿ ನಾನಾಮುಖವಾಗಿ ಚೆದರಿರುವ ಚಿಕ್ಕಮೇಘಗಳು ವಾಯುವಶದಿಂದ ಒಂದಾಗಿಕೂಡಿ, ಕಪ್ಪುಕವಿದುಕೊಂಡು ವರ್ಷಮೇಘವಾಗುವುದು. ಇಂತಪ್ಪ ಮೇಘಗಳಲ್ಲಿ ಒಂದಾಗಿಕೂಡಿಕೊಂಡ ಆವಿಕಣಗಳು ದೊಡ್ಡಹನಿಗಳಾಗಿ ವರ್ಷರೂಪದಿಂದ ಭೂಮಿಯಮೇಲೆ ಸುರಿಯುವುವು. ಈ ಮಳೆಯುಮೇಘಗಳು ಸಾಧಾರಣವಾಗಿ ಭೂಮಿಗೆ ಒಂದುಮೈಲಿಯಿಂದ ಮೂರುಮೈಲಿ ಎತ್ತರದಲ್ಲಿರುವುವು. ಮಳೆಯುಎಲ್ಲಾ ದೇಶಗಳಲ್ಲಿಯೂ ಸಮನಾಗಿಲ್ಲದೇ ಕೆಲವು ದೇಶಗಳಲ್ಲಿ ಹೆಚ್ಚಾಗಿಯೂ, ಮತ್ತೆ ಕೆಲವು ದೇಶಗಳಲ್ಲಿ ಕಡಮೆಯಾಗಿಯೂ ಇರುವುದು.

ಆನೆಕಲ್ಲು :—ವಾಯುವಿನಲ್ಲಿ ಉಷ್ಣವು ಕಡಮೆಯಾದಹಾಗೆಲ್ಲಾ ಅದರೊಂದಿಗೆ ಅದೃಶ್ಯರೂಪದಲ್ಲಿ ಸೇರಿದ್ದ ನೀರಾವಿಯು ರೂಪವನ್ನು ವಹಿಸಿ ಮೇಘಗಳಾಗಿ ವರ್ಷಿಸುವುದೆಂದು ಹೇಳಿತಷ್ಟೆ. ಉಷ್ಣವೂ ಇನ್ನೂ ಬಹಳ ಕಡವೆಯಾದರೆ, ನೀರು ಘನೀಭವಿಸಿ ಕಠಿನರೂಪವನ್ನು ಹೊಂದಿ ಆನೆಕಲ್ಲಾಗುವುದು. ಆನೆಕಲ್ಲು ಘನೀಭವಿಸಿದ ನೀರೆಂದು ಪ್ರಾಯಶಃ ಎಲ್ಲರಿಗೂ ತಿಳಿದೇ ಇರುವುದು. ನೋಡುತಿದ್ದಹಾಗೆಯೇ ಅದು ಕರಗಿ ನೀರಾಗುವುದು. ಕೈಯಲ್ಲಿ ಹಿಡಿದರೆ ಕೊರೆಯುವ ಹಾಗಿರುವುದು. ಮತ್ತು ಬೇಗನೆ ಕರಗುವುದು. ಇದರಿಂದ ಆನೆಕಲ್ಲು ಉಷ್ಣಕಡಮೆಯಾದ ನೀರೆಂದು ತಿಳಿಯುವುದು.

ಗುಡುಗುಮಿಂಚು :—ಇವು ಏಕಕಾಲದಲ್ಲಿ ಉತ್ಪನ್ನವಾಗುವವು. ಆದರೆ ಬೆಳಕು ಧ್ವನಿಗಿಂತಲೂ ಬಹು ಚುರುಕಾಗಿ ಚಲಿಸುವದರಿಂದ ನಮಗೆ ಮೊದಲು ಮಿಂಚು ಕಾಣಿಸುವುದು ತದನಂತರ ಗುಡುಗು ಕೇಳಿಸುವುದು. ಮೇಘಗಳಲ್ಲಿ ವಿಶೇಷ ವಿದ್ಯುಕ್ತ್ಯ (Electricity) ಇರುವುದು. ಮೇಘಗಳು ತಮ್ಮಲ್ಲಿರುವ ವಿದ್ಯುತ್ಶಕ್ತಿಯ ಸಹಾಯದಿಂದ ಭೂಮಿಯಲ್ಲಿಯೂ ವಿದ್ಯುತ್ತನ್ನುಂಟುಮಾಡುವವು. ಈ ಎರಡು ವಿದ್ಯುತ್ತುಗಳೂ ಪರಸ್ಪರ ಆಕರ್ಷಿಸುತ್ತ ಮಧ್ಯದಲ್ಲಿರುವ ವಾಯುಪಟಲವನ್ನು ಭೇದಿಸಿ ಒಟ್ಟಿಗೆ ಕೂಡುವುವು. ವಾಯುವನ್ನು ಭೇದಿಸಿದಾಗ ವಾಯುಕಣಗಳಿಗೆ ವಿಶೇಷ ಚಲನೆಯುಂಟಾಗುವುವು. ಈಚಲನೆಯು ಶಬ್ದೋತ್ಪತ್ತಿಗೆ ಕಾರಣವು. ಈ ಶಬ್ದವನ್ನೇ ನಾವು ಗುಡುಗೆನ್ನುವೆವು. ಮತ್ತು ವಿದ್ಯುತ್ತುಗಳೆರಡೂ ಕೂಡುವಾಗ ವಿಶೇಷ ಉಷ್ಣೋತ್ಪತ್ತಿಯಾಗುವುವು. ಈ ಉಷ್ಣವೇ ತೇಜಸ್ಸು, ಈ ತೇಜಸ್ಸನ್ನೇ ನಾವು ಮಿಂಚೆನ್ನುವೆವು.

ಲಕ್ಕಾಗಿ ನಿರ್ಧರಿಸಲ್ಪಟ್ಟ ಬದಲಾವಣೆಗಳನ್ನು ಹೇಳಿರಿ.

III ಬೇಸಿಕ್‌ಕೌಲು (Treaty of Bassein) ಯಾವ ಸಂವತ್ಸರದಲ್ಲಿ ನಡೆಯಿತು? ಅದರ ಮುಖ್ಯ ಕರಾರುಗಳು ಯಾವವು? ಈ ಕರಾರು ಯಾರು ಯಾರಿಗೆ ನಡೆದಿದ್ದು?

IV ಕೆಳಗೆ ಸೂಚಿಸಿರುವ ಸಂವತ್ಸರಗಳಲ್ಲಿ ನಡೆದ ಸಂಗತಿಗಳು ಯಾವವು?

1764; 1784; 1795; 1806; 1818; 1856.

3 ನೆಯ ಭಾಗ.

I ಇವುಗಳ ಅರ್ಥವನ್ನು ವಿವರಿಸಿ;—

1. ಸವ.ಭಾಜಕವೃತ್ತ (Equator) 2. ಪರ್ಯಾಯದ್ವೀಪ (Peninsula) 3. ಭೂಶಿರ (Cape) 4. ಜಲಪಾತ (Water-fall) 5. ಜಲ ವಿಭಾಗಸ್ಥಳ (Water-shed)

II [a] ಜಿಬ್ರಾಲ್ಟರ್ (Gibraltar), ಬಿಹರಿಂಗ್ (Behring) ಜಲಸಂಧಿಗಳು ಯಾವಸಾಗರಗಳನ್ನು ಕೂಡಿಸುತ್ತವೆ?

ಸೆನಾಮ (Panama), ಕಾರಿನ್ತ್ (Corinth) ಭೂಸಂಧಿಗಳು ಯಾವ ದೇಶಗಳನ್ನು ಸಂಧಿಸುತ್ತವೆ?

(b) ಈ ನದಿಗಳ ಸಂಗಮದಲ್ಲಿರುವ ಪಟ್ಟಣಗಳಾವವು?

1. ಸಿಂಧು, ಕಾಬೂಲ್, 2. ಸಿಂಧು, ಪಂಜನದ; 3. ಗಂಗಾ, ಯಮುನಾ; 4. ಬಿಳಿಯ, ನೈಲ್, ನೀಲನೈಲ್.

(c) ಈ ಜನರು ಇಂಡಿಯಾದೇಶದ ಯಾವಭಾಗಗಳಲ್ಲಿದ್ದಾರೆ?

ಗೊಂಡರು (Khonds), ಕೋಲರು (Kols), ಸಂತಾಲರು (Santals), ದ್ರಾವಿಡರು (Dravidians), ಪಾರ್ಸಿಯವರು (Parsis) ಘೂರ್ಕರು (Ghoorkas).

III ಇವುಗಳು ಯಾವುವುಮತ್ತು ಯಾವ ದೇಶಗಳಲ್ಲಿವೆ?

1. ದಮಾಸ್ಕಸ್ (Damascus) 2. ಬಾಲ್ಮೋರಲ್ 3 (Balmoral), ಮನಿಲ (Manilla) 4. ಲಡೋಗ (Ladoga) 5. ಸಿಡ್ನಿ (Sidney) 6. ಮರ್ರೆ (Thr Murray) 7. ಸ್ನೋಡ್ (Snowdon) 8. ಅಮೆ

1899 ನೇ ಇಸವಿಯ ಪ್ರಶ್ನೆಪತ್ರಿಕೆ.

ಕಾಲ—10 ರಿಂದ 1 ಘಂಟೆಯ ವರೆವಿಗೆ.

ಹಿಂದೂದೇಶದ ಚರಿತ್ರೆ, ಭೂಗೋಳಶಾಸ್ತ್ರ ಮತ್ತು ನಕ್ಷೆ ಬರೆಯುವದು.

ಸೂಚನೆ—1ನೇ 2ನೇ 3ನೇ ಮತ್ತು ಪ್ರತ್ಯೇಕ ಪ್ರತ್ಯೇಕವಾಗಿ ಬರೆಯಿರಿ.

1 ನೆಯ ಭಾಗ.

I (1) ದೆಹಲಿಯು (Dehli) ಮೊದಲು ರಾಜಧಾನಿಯಾದದ್ದು, (2) ದಕ್ಷಿಣಹಿಂದೂಸ್ಥಾನಕ್ಕೆ ಮುಸಲ್ಮಾನರು ಮೊದಲು ದಂಡೆತ್ತಿದ್ದು, (3) ಚೀನಾ (China) ರಾಜ್ಯದಮೇಲೆ ದಂಡಯಾತ್ರೆಗೆ ಸೈನ್ಯವನ್ನು ಕಳುಹಿಸಿದ್ದು, (4) ತೈಮೂರ್ಲಂಗನ (Tamerlane's) ದಂಡಯಾತ್ರೆ, ಇವು ಯಾವಾಗ ಅಥವಾ ಯಾವ ಅರಸರಕಾಲದಲ್ಲಿ ನಡೆದವು.

II (a) ಮಲ್ಲಿಕ್ ಕಾಫೂರ್ (Malik Kafur. ತೋದಮಲ್ಲನು (Todar Mall ನಾದಿರ್‌ಷಹ (Nadir Shah), ನಾನಕ್‌ಷಹ (Nanak Shah); ಇವರು ನಡೆಸಿದ ಒಂದೊಂದು ಮುಖ್ಯಕೆಲಸವನ್ನು ತಿಳಿಸಿ.

(b) ಜೋಹರ್ (Johur), ಚೌತ್ (Chauth), ಬಾರಾಭಾಯಿ ಜೆಸಿಯಾ (Jazyia); ಅಂದರೇನು?

III (a) ಬಾಲಾಜಿ ವಿಶ್ವನಾಥನು (Balaji Viswanath) ಯಾವಾಗ ಪೇಷ್ವೆಯಾದನು? ಮಹರಾಷ್ಟ್ರದ ಅಡಳಿತಗಳೆಲ್ಲಾ ಇವನ ಕೈಪಶವಾದುದಕ್ಕೆ ಕಾರಣವೇನು?

(b) 2ನೇ ಪೇಷ್ವೆಯಾದ ಬಾಜಿರಾಯನು (Baji Rau) ಮರಾಟಿಯವರ ಅಭಿವೃದ್ಧಿಗೇನುಮಾಡಿದನು?

2 ನೆಯ ಭಾಗ.

I ನಾನಾಫರ್ನವಿಸ್ (Nana Farnavis,) ರಾಮು ನಾರಾಯಣ (Ram Narayana), ಸರ್‌ಡೇವಿಡ್‌ಬೇರ್ಡ್ (Sir David Baird), ಕರ್ನಲ್‌ಗಿಲ್ಲಿಸ್ಪಿ (Colonel Gillespie),

ಇವರುಗಳ ವಿಷಯವಾಗಿ ತಿಳಿದಮಟ್ಟಿಗೆ ಸಂಕ್ಷೇಪನಾಗಿ ಬರೆಯಿರಿ.

II ಲಾರ್ಡ್‌ಡಾಲ್‌ಹೌಸಿ (Lord Dalhousie) ಕಾಲದಲ್ಲಿ ಪ್ರಜಾನುಕೂ

ಬಾಲಿಕಾ ಪಾಠಶಾಲೆಗಳಿಗೆ ಮುಖ್ಯ ಅಥವಾ ಸಹಾಯೋಪಾಧ್ಯಾಯಿನಿಯರನ್ನಾಗಿ ನಿಯಮಿಸಿದಾರೆ. ಇವರ ಸಂಬಳಗಳು ತಿಂಗಳೊಂದಕ್ಕೆ ೭ ರೂ, ಇಂದ ೨೦ ರೂ. ನ ವರೆಗೂ ಯೋಗ್ಯತಾನುಸಾರವಾಗಿ ನಿಶ್ಚಯಿಸಲ್ಪಟ್ಟಿವೆ.

***

ವಿ॥ ಎಸ್ ವೆಂಕಟಾಚಿನ್ನಪ್ಪ ಎಂಬುವರನ್ನು ತಿಂಗಳೊಂದಕ್ಕೆ ೫೦ ರೂ. ಸಂಬಳದಮೇಲೆ ಬೆಂಗಳೂರು ಚಾಮರಾಜೇಂದ್ರಪೇಟೆಯಲ್ಲಿರುವ ಬಾಲಿಕಾ ಪಾಠಶಾಲೆಗೆ ಮುಖ್ಯೋಪಾಧ್ಯಾಯಿನಿಯರನ್ನಾಗಿ ನಿಯಮಿಸಿದಾರೆ

***

ಮಹಾರಾಣಿಯವರ ಬಾಲಿಕಾಪಾಠಶಾಲೆಯವರು ನಡೆಯಿಸುತಿರುವ ಮಾಸ ಪತ್ರಿಕೆಗೆ ಸರ್ಕಾರದವರು ೧೯೦೦ನೆ ಇಸವಿಯ ಆರಂಭದಿಂದ ತಿಂಗಳೊಂದಕ್ಕೆ ೫೦ ರೂ. ನಂತೆ ಸಹಾಯದ್ರವ್ಯ ಕೊಡುವುದಾಗಿ ಗೊತ್ತುಮಾಡಿದಾರೆ.

***

ವಿದ್ಯಾಭ್ಯಾಸ ಮಾಡುತಿರುವ ಮಕ್ಕಳಿಗೆ ಮೆಜಿಕ್‌ಲಾಂಟರ್ನ್‌ನ್ನು ತೋರಿಸುವುದಕ್ಕಾಗಿ ಮು॥ ರಾ॥ ಕೃಷ್ಣಸ್ವಾಮಿಐಂಗಾರ್ ಎಂಬುವರಿಗೆ ವರ್ಷದಲ್ಲಿ ೪ ತಿಂಗಳು, ತಿಂಗಳೊಂದಕ್ಕೆ ೪೦ ರೂ. ನಂತೆ ಸಹಾಯದ್ರವ್ಯವನ್ನು ಎರಡುವರ್ಷಕಾಲ ಕೊಡುವಂತೆ ನಿರ್ಣಯಿಸಿದಾರೆ. ಇವರು ಈ ಕೆಲಸಕ್ಕಾಗಿ ಡೆಪ್ಯೂಟಿ ಇನ್‌ಸ್ಪೆಕ್ಟರವರ ಜತೆಯಲ್ಲಿ ಆಯಾ ಡಿಸ್ಟ್ರಿಕ್ಟ್‌ಗಳಿಗೆ ಹೋಗಿ ಮಕ್ಕಳಿಗೆ ದರ್ಶನೀಯವಾದ ಪದಾರ್ಥಗಳನ್ನು ತಿಳಿಸಬೇಕೆಂದು ಗೊತ್ತಾಗಿದೆ.

***

ತರೀಕೆರೆಯಲ್ಲಿ ಒಂದು ಹಿಂದೂಸ್ಥಾನೀ ಸ್ಕೂಲ್ ಸ್ಥಾಪಿಸಲು ಸರ್ಕಾರದ ಹುಕುಮು ಆಗಿದೆ. ಈ ಸ್ಕೂಲಿಗೆ ತಿಂಗಳೊಂದಕ್ಕೆ ೪೫ ರೂ. ಖರ್ಚಿಗಾಗಿ ಸರ್ಕಾರದವರು ಗೊತ್ತುಮಾಡಿದಾರೆ.

***

ಎಫ್. ಎ, ಪರೀಕ್ಷೆಯಲ್ಲಿ ತೇರ್ಗಡೆಯಾದ ಸೌ॥ ರುಕ್ಮಿಣಿಯಮ್ಮ ಎಂಬುವರು ಮಹಾರಾಣೀ ಬಾಲಿಕಾಪಾಠಶಾಲೆಯಲ್ಲಿ ತಿಂಗಳೊಂದಕ್ಕೆ ೧೫೦ ರೂ. ಸಂಬಳದಮೇಲೆ ಸಹಾಯೋಪಾಧ್ಯಾಯಿನಿಯರಾಗಿ ತಾತ್ಕಾಲಿಕವಾಗಿ ನಿಯಮಿಸಲ್ಪಟ್ಟಿ

***

ಸನ್ (Tde Amazon) 9. ಎಲಿಫಾಂಟ (Elephanta) 10. ಸುಂದರವನ (The Sandarbans).

IV. 1. ಏಷ್ಯಾಖಂಡದಲ್ಲಿ ಬ್ರಿಟಿಷರಿಗೆ ಸೇರಿದ ರಾಷ್ಟ್ರಗಳು. (Colonies)
2. ಪೃಥುವಿಯುಲ್ಲಿ ಅತ್ಯಂತ ವಿಸ್ತಾರವಾದ ಮರುಭೂಮಿ. (Desert)
3. ಸಿಂಹಳ ದ್ವೀಪದ ಕೇವೆ ಪಟ್ಟಣಗಳು. (Seaport towns)
4. ಯೂರೋಪ್ ಖಂಡದಲ್ಲಿ ಅತ್ಯಂತ ಮಳೆ ಹುಯ್ಯುವೆಸ್ಥಳ.
5. ಯೂರೋಪ್‌ಖಂಡದಲ್ಲಿರುವ 4 ಜ್ವಾಲಾಮುಖಿಗಳು. (Volcanoes)
6. ಸಿಂಧುನದಿಯ ದಡದಮೇಲಿರುವ 4 ಮುಖ್ಯಪಟ್ಟಣಗಳು.
ಇವುಗಳ ಹೆಸರುಗಳನ್ನು ಮಾತ್ರ ಬರೆಯಿರಿ.

V (a) ಮೈಸೂರು ದೇಶದ ಮೇರೆಗಳನ್ನೂ ಮತ್ತು ಮುಖ್ಯಬೆಳೆಗಳನ್ನೂ ತಿಳಿಸಿ
(b) ಮದರಾಸ್ ಅಧಿಸತ್ಯದ (Madras Presidency) ಮಧ್ಯಭಾಗದ ಜಿಲ್ಲೆಗಳಾವುವು?

VI (a) ಇವುಗಳು ಎತಕ್ಕೆ ಪ್ರಸಿದ್ಧವಾಗಿವೆ?
1. ಮಾಂಚಸ್ಟರ್ (Manchester) 2. ಷೆಫೀಲ್ಡ್ (Sheffield) 3. ನ್ಯೂರೆಂಬರ್ಗ್ (Nurnberg) 4. ಕಿಂಬರ್ಲಿ (Kimberley) 5. ರಾಮೇಶ್ವರಿ (Rrmeswaram) 6. ನಂಜನಗೂಡು (Nanjangud) 7. ಸೊರಬ. (Sorab) 8. ಹಳೇಬೀಡು (Halebid) 9. ಬನಾರಿಸ್. (Banares) 10. ರಾಣಿಗಂಜ್ (Raniganj).
(b) ಇಂಗ್ಲೆಂಡಿನಿಂದ ಇಂಡಿಯುಕ್ಕೆ ಇರುವ ಕೇವಲ ಸವಿಾಪವಾದ ಮಾರ್ಗವನ್ನು ವಿವರಿಸಿರಿ.

ವಿದ್ಯಾಭ್ಯಾಸದ ಇಲಾಖೆಯ ಸಮಾಚಾರಗಳು:

ಮಹಾರಾಣೀ ಬಾಲಿಕಾಪಾಠಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ವಿತಂತುಗಳಲ್ಲಿ ಕೆಲವರನ್ನು ಹೊಸಕೋಟೆ, ಕ್ಲೋಸ್‌ಪೇಟೆ ಮುಂತಾದ ಸ್ಥಳಗಳಲ್ಲಿರುವ

ಎಲ್ಲರಿಗೂ ತಿಳಿಸಬೇಕೆಂದೇ ಈ ಗ್ರಂಥಕಾರರು ಪ್ರವರ್ತಿಸಿರುವರು. ಆದುದರಿಂದ ಇದನ್ನು ಓದುವವರೆಲ್ಲರಿಗೂ, ಈ ಗ್ರಂಥಕಾರರು ಲೋಕಕ್ಕೆ ಚಮತ್ಕಾರವನ್ನುಂಟು ಮಾಡುವದರಲ್ಲಿ ತಾವು ಶ್ರಮಪಟ್ಟರ ವುದು ಚನ್ನಾಗಿ ತಿಳಿದುಬರುವುದು. ಇದರಿಂದ ಬಾಲರ ಬುದ್ಧಿಯೂ ಚಮತ್ಕೃತವಾಗುವುದು.

ಈ ಗ್ರಂಥದ ವಿಷಯಗಳು ಕೆಲವು ಇಂಗ್ಲೀಷ್ ಗ್ರಂಥಗಳಿಂದಲೂ, ದುರ್ಗೇಶ ನಂದಿನೀ, ಕಪಾಲಕುಂಡಲ, ಸತ್ಯವತೀಚರಿತ್ರೆ, ಮೊದಲಾದ ಕನ್ನಡದಲ್ಲಿ ಪರಿವರ್ತಿಸಿರುವ ಅನೇಕ ಗ್ರಂಥಗಳಿಂದಲೂ ಸಂಗ್ರಹಿಸಲ್ಪಟ್ಟು, ಹನ್ನೊಂದು ಅಧ್ಯಾಯಗಳನ್ನಾಗಿ ಕಲ್ಪಿಸಿ ಪ್ರತಿಯೊಂದು ಅಧ್ಯಾಯದಲ್ಲೂ ಒಂದೊಂದು ವಿಷಯವನ್ನು ಗರ್ಭೀಕರಿಸಿ ಹೇಳಿರುವದರಿಂದಲೂ ಎಲ್ಲವೂ ಒಂದೇ ಪುಸ್ತಕದಲ್ಲಿ ತಿಳಿದುಬರುವುದರಿಂದಲೂ, ಈ ನವೀನಪದ್ಧತಿಯು ಸ್ವಲ್ಪಮಟ್ಟಿಗಾದರೂ ಓದಿದವರ ಮನಸ್ಸುಟ್ಟದಿರದೆಂದು ನಂಬುತ್ತೇವೆ.

ಇದರ ಭಾಷಾಶೈಲಿಯು ಕೂಡಿದಮಟ್ಟಿಗೂ ಸುಲಭವಾಗಿರುವದರಿಂದ ಇದಕ್ಕೆ ಸುಬೋಧದರ್ಪಣವೆಂಬ ಹೆಸರನ್ನು ಕೊಟ್ಟಿರುವುದು ಸಾರ್ಥಕವಾಗಿರುವುದು. ಹೊಸದಾಗಿ ಪುಸ್ತಕವನ್ನು ಬರೆಯುವವರಿಗೂ ಇದರ ಶೈಲಿಯು ಸ್ವಲ್ಪ ಸಹಾಯವನ್ನು ಮಾಡಬಹುದು.

ಆದುದರಿಂದ ಈ ಪುಸ್ತಕವನ್ನು ಓದಬೇಕೆಂದಪೇಕ್ಷೆಯುಳ್ಳವರೆಲ್ಲರೂ, ಗ್ರಂಥಕಾರರಿಗೂ, ಮೈಸೂರು ಗಾರ್ಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ನಿಗೂ ಬರೆದು ತರಿಸಿಕೊಳ್ಳಬಹುದು, (ಇದರ ಕ್ರಯ ೧—೬—೦).

ಕೆನ್ಯೂಟನ ಕಥೆ.

ಒಂದಾನೊಂದುಕಾಲದಲ್ಲಿ ಇಂಗ್ಲೆಂಡ್‌ದೇಶಕ್ಕೆ ಕೆನ್ಯೂಟನು ದೊರೆಯಾಗಿದ್ದನು. ಇವನು ಆ ದೇಶವನ್ನು ಗೆದ್ದು, ಅಲ್ಲಿನ ಜನರು ಮೆಚ್ಚುವಂತೆ, ಬಹಳ ದರ್ಪದಿಂದಲೂ, ಬಹು ಧರ್ಮದಿಂದಲೂ, ರಾಜ್ಯಭಾರಮಾಡುತಿದ್ದನು. ಸ್ವಲ್ಪ ಶಕ್ತಿಯುಳ್ಳವರನ್ನೇ ಹೊಗಳುವರು. ಅದರೊಳಗೆ ರಾಜರನ್ನು ಹೊಗಳುವುದು ಹೆಚ್ಚು. ರಾಜರಲ್ಲಿಯೂ ಸ್ವಲ್ಪ ಪ್ರಸಿದ್ಧಿಗೊಂಡ ರಾಜರನ್ನು ಹೊಗಳತಕ್ಕವರು ಅನೇಕಮಂದಿ. ಹೊಗ

ಈಸಲ ಮಿಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಮೂರುಮಂದಿ ವಿದ್ಯಾರ್ಥಿನೀಯರಿಗೂ ಎಫ್. ಎ. ಪರೀಕ್ಷೆಗಾಗಿ ಮಹಾರಾಣೀ ಬಾಲಿಕಾಪಾಠಶಾಲೆಯಲ್ಲಿ ಓದಲು ಒಬ್ಬೊಬ್ಬರಿಗೆ ತಿಂಗಳೊಂದಕ್ಕೆ ೫ ರೂ. ನಂತೆ ಸ್ಕಾಲರ್‌ಷಿಪ್ ಗೊಕ್ಕಾಗಿದೆ.

* * *

ಮ॥ ಕಾ॥ ಬಿ. ನಂಜುಂಡಯ್ಯ ಬಿ. ಎ, ಯವರು, ಮ॥ ರಾ॥ ಆರ್ ಅಳ್ವಾರ್ ಐಂಗಾರರವರು, ಇವರಿಬ್ಬರೂ ಹೊಸದಾಗಿ ಮಹಾರಾಣೀ [illegible] ಶಾಲೆಗೆ ಸಹಾಯೋಪಾಧ್ಯಾಯರಾಗಿ ಕಳುಹಿಸಲ್ಪಟ್ಟಿದ್ದಾರೆ.

ಗ್ರಂಥನಿಮರ್ಶೆ.

ಮ॥ ರಾ॥ ರಾ॥ ಜಿ. ರಾಘವೇಂದ್ರರಾಯರೆಂಬುವರು ನಾನಾದೇಶದ ಭೂತಭವಿಷ್ಯದ್ವರ್ತಮಾನಗಳನ್ನು ಬಾಲರಿಗೆ ಸುಲಭವಾಗಿ ತಿಳಿಸಬೇಕೆಂದುದ್ದೇಶಿಸಿ, ಸುಬೋಧದರ್ಪಣವೆಂಬ ಹೆಸರಿನಿಂದ ಒಂದು ಬುಕ್ಕನ್ನು ಬರೆದು ಒಳ್ಳೆಕಾಗದದಲ್ಲಿ ಒಳ್ಳೇ ಅಕ್ಷರಗಳಿಂದ ಮೈಸೂರು ಗಾ॥ಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಪ್ರೆಸ್ಸಿನಲ್ಲಿ ಅಚ್ಚುಹಾಕಿಸಿ, ಒಂದು ಪುಸ್ತಕವನ್ನು ನಮ್ಮಲ್ಲಿ ಕಳುಹಿಸಿರುವರು. ಇದನ್ನು ಗ್ರಂಥಕರ್ತರು ಕಳುಹಿಸಿಕೊಟ್ಟದ್ದಕ್ಕಾಗಿ ನಾವು ಬಹಳ ಕೃತಜ್ಞರಾಗಿ ಆತ್ಯಾದರದಿಂದ ಆಮೂಲಾಗ್ರವಾಗಿ ಓದಿನೋಡಲು ಅಲ್ಲಿರುವ ಚಿತ್ತೋತ್ಪತ್ತಿಗಳಿಂದ ಬಹಳ ಆನಂದಪಟ್ಟೆವು. ಇದು ಗ್ರಂಥಕಾರರು ತಮ್ಮ ಪೀಠಿಕೆಯಲ್ಲಿ ಬರೆದಿರುವಂತೆ ವಿಷಯಗಳಿಗೆ ಪರಸ್ಪರ ಸಂಬಂಧಗಳು ಇಲ್ಲದಿದ್ದರೂ ಕಥಾರೂಪವಾಗಿ ಬರೆದಿರುವದರಿಂದ ಬಾಲರಿಗೆ ಆಶ್ಚರ್ಯವನ್ನುಂಟುಮಾಡದೆ ಇರದು.

ಮತ್ತು ಇದರಲ್ಲಿ ಇವರು ಸೂಚಿಸಿರುವ ವಿಷಯಗಳು ಕೆಲವು ಈಗಿನ ಆಚರಣೆಯಲ್ಲಿ ಇಲ್ಲವೆಂದು ಈ ಪ್ರಪಂಚವನ್ನರಿಯದ ಸ್ಥೂಲಮತಿಗಳಿಗೆ ತೋರುತಿದ್ದಾಗ್ಯೂ ಪ್ರಪಂಚವನ್ನು ಪರಿಶೀಲಿಸುತ ಬರುವ ಕಾಲತ್ರಯವೇತ್ತೃಗಳಿಗೆ ಇಂತಹ ನಡೆನುಡಿಗಳೂ ಲೋಕದಲ್ಲಿ ಸಂಭವಿಸಬಹುದೆಂದು ತೋರುವುದು. ಇಂತಹ ಚಮತ್ಕಾರವನ್ನು

ವಿದ್ಯಾದಾಯಿನಿ

ಭಾಗ ೪.] ಜೂಲೈ ೧೯೦೦. [ಸಂಚಿಕೆ ೬.

ಎಡಿಟರವರ ನೋಟ್ಸ್.

ಜನರು ದೊಡ್ಡ ಪರೀಕ್ಷೆಗಳನ್ನು ಕೊಟ್ಟ ಮಾತ್ರದಿಂದಲೆ, ಉಪಾಧ್ಯಾಯರಾಗಿರುವುದಕ್ಕೆ, ಎಲ್ಲರೂ ಅರ್ಹರಾಗಿರುವರೆಂದು ಹೇಳುವುದಕ್ಕೆ ಆಗುವುದಿಲ್ಲ. ಕೆಲವರಲ್ಲಿ ಮಾತ್ರ ಸ್ವಭಾವಜನ್ಯವಾದ ನಿರ್ವಾಹಶಕ್ತಿಯೂ ಬೋಧನಾಶಕ್ತಿಯೂ ಇರುವುವು. ಬಾಲಕರ ಸ್ವಭಾವವನ್ನು ತಿಳಿಯದ, ನಿರ್ವಾಹಶಕ್ತಿಯೂ ಬೋಧನಾಶಕ್ತಿಯೂ ಇಲ್ಲದ ಉಪಾಧ್ಯಾಯರು ಹಾಸ್ಯಕ್ಕೆ ಈಡಾಗುವುರಲ್ಲದೆ, ಬಾಲಕರಿಗೆ ಇರುವ ಗುರುಭಕ್ತಿಯನ್ನು ಕೂಡ ಹೋಗಲಾಡಿಸಲು ಕಾರಣರಾಗುವುರು. ಬಾಲಕರ ಸ್ವಭಾವವನ್ನು ತಿಳಿಸೋಣದರಿಂದಲೂ ಬೋಧನಾಶಕ್ತಿಯನ್ನು ಕಲ್ಪಿಸಿಕೊಡೋಣದರಿಂದಲೂ, ಉಪಾಧ್ಯಾಯರಾಗತಕ್ಕವರಿಗೆ ತಕ್ಕಮಟ್ಟಿಗೆ ನಿರ್ವಾಹಶಕ್ತಿಯು ಲಭಿಸುವುದು. ಸ್ವಭಾವಜನ್ಯವಾದ ನಿರ್ವಾಹಶಕ್ತಿ, ಬೋಧನಾಶಕ್ತಿಯುಳ್ಳವರಿಗೂ ಕ್ರಮವನ್ನು ಅರಿಯೋಣವರಲ್ಲಿ ವಿಶೇಷ ಪ್ರಯೋಜನ ಉಂಟೆಂಬುದರಲ್ಲಿ ಸಂದೇಹವಿಲ್ಲವಲ್ಲ.

* * *

ನಮ್ಮ ಸಂಸ್ಥಾನದಲ್ಲಿ ದೇಶಭಾಷೆಯನ್ನು ಬೋಧಿಸತಕ್ಕ ಉಪಾಧ್ಯಾಯರನ್ನು ಕ್ರಮವಾಗಿ, ಉಪಾಧ್ಯಾಯರಾಗುವುದಕ್ಕೆ ಅರ್ಹರನ್ನಾಗಿ ಮಾಡುವ ಉದ್ದೇಶದಿಂದ ಇಟ್ಟಿರುವ ಪಾಠಶಾಲೆಗಳಲ್ಲಿ (ನಾರ್ಮಲ್‌ಸ್ಕೂಲ್ಸ್) ತಿದ್ದುಪಾಟುಮಾಡಿ, ಕಳುಹಿಸುತ ಇರುವುವರಿಂದ ಈಗ ತಕ್ಕಮಟ್ಟಿಗೆ ಪ್ರಯೋಜನವು ತೋರಿಬರುತಿರುವುದು. ಶಿಕ್ಷಿತರಾದ ಉಪಾಧ್ಯಾಯರು ಕೆಲಸವನ್ನು ಜೆನ್ನಾಗಿ ಮಾಡುವರೆಂದು ಸ್ಕೂಲ್ ಡೆಪ್ಯುಟಿ ಇನ್‌ಸ್ಪೆಕ್ಟರುಗಳು ಅಭಿಪ್ರಾಯಪಡುವರು. ಈಗ ಸಾಧಾರಣವಾಗಿ ನಾರ್ಮಲ್ ಸ್ಕೂಲಿನಲ್ಲಿ ಶಿಕ್ಷಿತರಾಗಿ ತೇರ್ಗಡೆಯಾದವರಿಗೆ ಉಪಾಧ್ಯಾಯ ಕೆಲಸವನ್ನು ಕೊಡುವ

ಳುವುದೆಂದರೆ ಒಬ್ಬರಲ್ಲಿ ಇಲ್ಲದ ಗುಣವನ್ನು ಹೆಚ್ಚಾಗಿ ಇದೆಯೆಂದು ಹೇಳುವುದು. ಹೀಗೆ ಹೇಳೋಣದರಿಂದ ಕೆಲವರು ಉಬ್ಬಿ ಬೇಕಾದುದನ್ನು ಕೊಡುವರು. ತಮಗೆ ಬೇಕಾದುದು ಸಿಕ್ಕುವೆಯೆಂದು ಅಲ್ಪಜನರು ಹೊಗಳುವರು. ತಿಳಿದವರು ಹೊಗಳುವರನ್ನು ನಂಬರು; ಅವರನ್ನು ಪ್ರೀತಿಯಿಂದ ಕಾಣರು. ಆದರೆ ತಿಳಿಯದವರು ಬಹಳಮಂದಿ. ಹೀಗೆ ಕೆನ್ಯೊಟನನ್ನು ಅನೇಕರು ಹೊಗಳುತಿದ್ದರು. ತಿಳಿದ ಕೆನ್ಯೊಟನು ಇವರು ಹೊಗಳುವುದನ್ನು ಕೇಳಿ ಅಸಹ್ಯ ಪಡುತಿದ್ದನು. ಹೊಗಳುವರಲ್ಲಿ ಕೆಲವರು ಅವನನ್ನು 'ನನಗೆ ಸಮಾನಾದವನು ಯಾರೂ ಇಲ್ಲವೆಂತಲೂ, ಮತ್ತೆ ಕೆಲವರು, ನಿನ್ನವಾತಿಗೆ ಬಿಟ್ಟಗುಟ್ಟಗಳೇ ನಡುಗುವುವೆಂತಲೂ' ಇನ್ನೂ ಕೆಲವರು 'ಸಮುದ್ರವೂ ಅಪ್ಪಣೆಯಾದರೆ ದಾರಿಬಿಡುವುದೆಂತಲೂ' ಹೊಗಳುತಿದ್ದರು. ಈ ಹೊಗಳುವಿಕೆಯನ್ನು ಕೇಳಲಾರದೆ, ಕೆನ್ಯೊಟನು, ಹೊಗಳುವ ಈ ಪರಿವಾರ ಜನರಿಗೆ ಅವಮಾನವಾಗಿ, ಬುದ್ಧಿಕಲಿಸಬೇಕೆಂದು, ಒಂದುದಿನ ಅವರುಗಳೊಡನೆ ಸಮುದ್ರತೀರಕ್ಕೆ ಹೋದನು. ಆಗಲೂ ಅವರು, ಎಂದಿನಂತೆ ಹೊಗಳಲಿಕ್ಕೆ ಒಬ್ಬೊಬ್ಬರಾಗಿ ಪೈಪಲುಮಾಡಿದರು. ಆಗ ದೊರೆಯು 'ಓಃ ನನ್ನ ಶಕ್ತಿಯು ಅಂಥಾದ್ದೆ ಒಳ್ಳೇದು! ಯಾರಾದರೂ ಹೋಗಿ ಒಂದು ಕುರ್ಚಿಯನ್ನು ತೆಗೆದುಕೊಂಡು ಬನ್ನಿ' ಎಂದನು. ಯಾರೋ ಓಡಿಹೋಗಿ ಒಂದು ಕುರ್ಚಿಯನ್ನು ತಂದು ಹಾಕಿದರು. ದೊರೆಯು ಅಲೆಗಳು ಹೊಡೆಯುವ ಸ್ಥಳದಲ್ಲಿ ಕುರ್ಚಿಯನ್ನು ಹಾಕಿಸಿ ಕೂತುಕೊಂಡನು. ಪರಿವಾರದವರೆಲ್ಲರೂ ಸುತ್ತಲೂ ನಿಂತುಕೊಂಡರು. ಒಂದು ಕ್ಷಣದಲ್ಲಿಯೆ ಅಲೆಯು ಬಂದು ಧೊರೆಯ ಕಾಲಿಗೆ ಹೊಡೆಯಿತು. ದೊರೆಯು ಹೊಗಳುತಿದ್ದವರ ಮುಖವನ್ನು ನೋಡಿ 'ಅಲೆಗಳು ನೀವು ಇನ್ನು ಮುಂದೆ ಬರಲಾಗದು. ನನ್ನಆಜ್ಞೆಯ ಹಿಂದಕ್ಕೆ ಹೋಗಿ' ಎಂದನು. ಹೊಳೆನೀರಿಗೆ ಡೊಣೆನಾಯಕನೆಪ್ಪಣೆಯೆ, ಎಂಬಂತೆ ಸಮುದ್ರದ ಅಲೆಗೆ ಈ ರಾಜನ ಅಪ್ಪಣೆಯೆ, ಅವುಗಳ ಪಾಡಿಗೆ ಅವುಗಳು ಹೊಡೆಯುತಲಿದ್ದವು. ಕಾಲೆಲ್ಲಾ ತೋಯಿದುಹೋಯಿತು. ಆಗ ದೊರೆಯು ಎದ್ದು ಅವರ ಮುಖಗಳನ್ನು ನೋಡಿದನು. ಅವರೆಲ್ಲರೂ ಬೆಪ್ಪರಾಗಿ ತಲೆತಗ್ಗಿಸಿದರು. ಆಮೇಲೆ ದೊರೆಯು ಅವರನ್ನು ನೋಡಿ 'ಇನ್ನು ಮುಂದಾದರೂ ಚೆನ್ನಾಗಿ ತಿಳಿಯಿರಿ. ದೊರೆಯುನಿಮ್ಮಂತೆ ಒಬ್ಬ ಮನುಷ್ಯನೇ. ಎಲ್ಲವನ್ನೂ ನಿರ್ಮಾಣಮಾಡಿದ ಆ ದೇವರ ಆಜ್ಞೆಗೆ ಮಾತ್ರ ಇವುಗಳು—ಒಳಗಾಗುವೆ ವಿನಾ ಮನುಷ್ಯನ ಆಜ್ಞೆಗೆ ಅಲ್ಲ.'

ಶುದ್ಧಿಕರಣಾಂಗಗಳು.

ನಮ್ಮ ಶರೀರದಲ್ಲಿ ಉತ್ಪತ್ತಿಯಾದ ಕಲ್ಮಷಗಳನ್ನು ಶರೀರದಿಂದ ಹೊರಗೆ ವಿಸರ್ಜನೆ ಮಾಡುವ ಅಂಗಗಳಿಗೆ ಶುದ್ಧಿಕರಣಾಂಗಗಳು ಅಥವಾ ವಿಸರ್ಜನಾಂಗಗಳೆಂದು ಹೆಸರು. ಶರೀರದಲ್ಲಿ (೧) ಶ್ವಾಸಕೋಶಗಳು (೨) ಮೂತ್ರಜನಕಾಂಗಗಳು (೩) ಚರ್ಮ, ಇವೆ ಮುಖ್ಯ ಶುದ್ಧಿಕರಣಾಂಗಗಳು. ಶ್ವಾಸಕೋಶಗಳು ನಮ್ಮ ಶರೀರದಲ್ಲಿ ಉತ್ಪತ್ತಿಯಾದ ಇಂಗಾಲಾಮ್ಲಾದಿ ಕಲ್ಮಷಗಳನ್ನು ಹೊರಗೆ ವಿಸರ್ಜನೆ ಮಾಡತಕ್ಕ ಕ್ರಮವನ್ನು ಉಚ್ಛ್ವಾಸ ನಿಶ್ವಾಸ ಪ್ರಕರಣದಲ್ಲಿ ತಕ್ಕಮಟ್ಟಿಗೆ ತಿಳಿಸಿದ್ದೇವೆ.—

ಮೂತ್ರಜನಕಾಂಗ. ಇವುಗಳನ್ನ ಮೂತ್ರಪಿಂಡಗಳೆಂದೂ ಹೇಳುತ್ತಾರೆ. ಇವು ಉದರಾಂತರ್ದೇಶದಲ್ಲಿ ಕಳಗಡೆ ಬೆನ್ನುಮೂಳೆಗೆ ತಗಲಿದಹಾಗೆ ಅದರ ಮುಂಭಾಗದಲ್ಲಿದೆ. ಇವು ಎಡಬಲ ಮೂತ್ರಜನಕಾಂಗಗಳಾಗಿವೆ. ಇವು ಗೇರುಬೀಜದ ಹಾಗಿವೆ. ಇವುಗಳಿಗೆ ಆಯಾರ್ಟಾ ಎಂಬ ದೊಡ್ಡ ಶುದ್ಧರಕ್ತ ನಾಳದಿಂದ ಒಂದು ಸಣ್ಣ ಶುದ್ಧ ರಕ್ತನಾಳವು ರಕ್ತವನ್ನು ತೆಗೆದುಕೊಂಡುಬರುತ್ತದೆ ಮೂತ್ರಜನಕಾಂಗಗಳಲ್ಲಿ ಸಂಚರಿಸುವ ರಕ್ತದಿಂದಲೇ ಮೂತ್ರವು ಉತ್ಪತ್ತಿಯಾಗುವದು. ಹೀಗೆ ಮೂತ್ರೋತ್ಪತ್ತಿಯಾಗುವದರಿಂದ ರಕ್ತದಲ್ಲಿದ್ದ ಕೆಲವು ಕಲ್ಮಷಗಳೆಲ್ಲಾ ಬೇರೆ ಮಾಡಲ್ಪಟ್ಟು ರಕ್ತವು ಮೂತ್ರಪಿಂಡದಿಂದ ಶುದ್ಧನಾಗಿ ಹೊರಗೆಹೋಗುತ್ತದೆ. ಈ ಮೂತ್ರಪಿಂಡಗಳಲ್ಲಿ ಮೂತ್ರಕ್ಷಾರವು ಸಾರಜನಕವು ಬೇರೆಮಾಡಲ್ಪಟ್ಟು ನೀರಿನಸಂಗಡ ಕಲೆತು ಎರಡು ಮೂತ್ರಪಿಂಡಗಳು ಒಳಗಡೆ ಮಧ್ಯಭಾಗದಲ್ಲಿ ಹುಟ್ಟುವ ಎರಡು ಮೂತ್ರನಾಳಗಳಲ್ಲಿ ಹರಿದು ಮೂತ್ರಕೋಶಕ್ಕೆ ಬಂದು ಸೇರುವವ್ವ. ಇಲ್ಲಿ ಮೂತ್ರವು ಸೇರಿದಮೇಲೆ ಮೂತ್ರ ವಿಸರ್ಜನೆ ಮಾಡಬೇಕೆಂಬದಾಗಿ ತೋರುತ್ತದೆ. ಮೂತ್ರಕೋಶದಲ್ಲಿ ತುಂಬಿದ್ದ ಮೂತ್ರವು ಮೂತ್ರದ್ವಾರದ ಮಾರ್ಗವಾಗಿ ಹೊರಗೆ ಬರುತ್ತದೆ. ನಾವು ಮೂತ್ರವಿಸರ್ಜನೆಯನ್ನು ದಿನಕ್ಕೆ ೪-೫ ವೃತ್ತಿ ಮಾಡಿದರೂ ಪ್ರತಿ ನಿಮಿಷದಲ್ಲಿಯೂ ಮೂತ್ರಪಿಂಡಗಳಲ್ಲಿ ಮೂತ್ರವು ಉತ್ಪತ್ತಿಯಾಗಿ ಮೂತ್ರನಾಳಗಳ ಮಾರ್ಗವಾಗಿ ಮೂತ್ರಕೋಶದಲ್ಲಿ ಬಂದು ತುಂಬಿರುತ್ತದೆ.

ಪದ್ಧತಿಯು ಇರುವುದರಿಂದ ಇನ್ನು ಸ್ವಲ್ಪಕಾಲದಲ್ಲಿ ಬಾಲವಿದ್ಯಾಭ್ಯಾಸವು ನಮ್ಮ ಸಂಸ್ಥಾನದಲ್ಲಿ ಉತ್ತಮಸ್ಥಿತಿಗೆ ಬರಬಹುದು

***

ಅದರೆ ಆಂಗ್ಲೋವರ್ನಾಕ್ಯುಲರ್ ಸ್ಕೂಲುಗಳಿಗೂ, ಕೆಲವು ಸಂದರ್ಭದಲ್ಲಿ ಹೋಬಳಿಸ್ಕೂಲುಗಳಿಗೂ ಮೆಟ್ರಿಕ್ಯುಲೇಷನ್, ಎಫ್. ಎ.; ಬಿ. ಎ. ಪರೀಕ್ಷೆಗಳಲ್ಲಿ ತೇರ್ಗಡೆಯಾದವರನ್ನು ಹೆಡ್‌ಮ್ಯಾಸ್ಟರ್, ಅಸಿಸ್ಟೆಂಟ್‌ಮ್ಯಾಸ್ಟರ್‌ಗಳನ್ನಾಗಿ ನಿಯಮಿಸುವರಷ್ಟೆ. ಇವರುಗಳು ನಾರ್ಮಲ್‌ಸ್ಕೂಲುಗಳಲ್ಲಿ ಓದಿ ಪ್ರಯೋಜನ ಪಡೆಯುವುದಕ್ಕೆ ಅವಕಾಶವಿಲ್ಲದಿರುವುದರಿಂದ, ಅನುಭವಶಾಲಿಗಳಾಗುವವರಿಗೂ, ಪಾಠಶಾಲಾಭಿವೃದ್ಧಿಗೆ ಕುಂಟುಕವುಂಟಾಗುವಸಂಭವವುಂಟು.

ಈ ಕೊರತೆಯನ್ನು ಹೋಗಲಾಡಿಸುವುದಕ್ಕೋಸ್ಕರ, ಮೆಟ್ರಿಕ್ಯುಲೇಷನ್, ಎಫ್. ಎ. ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ವಿದ್ಯಾಭ್ಯಾಸದ ಇಲಾಖೆಯಲ್ಲಿ ಉಪಾಧ್ಯಾಯರ ಕೆಲಸವನ್ನು ಅಪೇಕ್ಷಿಸುವರು, ನಾರ್ಮಲ್‌ಸ್ಕೂಲಿನಲ್ಲಿ ಆರುತಿಂಗಳಕಾಲ, ವಿದ್ಯಾಭ್ಯಾಸಕ್ರಮ, ಶಾಲಾಕ್ರಮ ಮುಂತಾದವುಗಳನ್ನು ತಿಳಿದುಕೊಂಡು, ಟ್ರೇನಿಂಗ್ ಪರೀಕ್ಷೆಯಲ್ಲಿ ತೇರ್ಗಡೆಯಾಗಲು ಅವರಿಗೆ ತಕ್ಕ ಪ್ರೋತ್ಸಾಹಕೊಡುವುದು ಒಳ್ಳೇದು.

***

ಇದಕ್ಕಾಗಿ ಮದ್ರಾಸ್ ಟ್ರೇನಿಂಗ್‌ಕಾಲೇಜಿನಲ್ಲಿ ಶಿಕ್ಷಿತರಾಗಿ, ಎಲ್. ಟಿ. ಡಿಗ್ರಿಯನ್ನು ಪಡೆದು ತಕ್ಕಮಟ್ಟ ಅನುಭವವುಳ್ಳ ಒಬ್ಬ ಉಪಾಧ್ಯಾಯರನ್ನು ಮೈಸೂರು ಗೌ॥ ನಾರ್ಮಲ್‌ಸ್ಕೂಲಿಗೆ ಸೇರಿದಹಾಗೆ, ಮರಿಮಲ್ಲಪ್ಪನವರ ಸ್ಕೂಲನ್ನು ಪ್ರಾಕ್ಟಿಸಿಂಗ್‌ಸ್ಕೂಲಾಗಿ ಮಾಡಿ, ಮೆಟ್ರಿಕ್ಯುಲೇಷನ್, ಎಫ್. ಎ. ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳನ್ನು ಮಾತ್ರ ಅಲ್ಲಿ ತಯಾರು ಮಾಡುವ ಏರ್ಪಾಡುಮಾಡಿ, ನಮ್ಮ ಶೀಮೆಯ ಬಾಲಕರ ವಿದ್ಯಾಭಿವೃದ್ಧಿಯನ್ನು ಉತ್ತಮಸ್ಥಿತಿಗೆ ತಂದು, ವಿದ್ಯಾಭ್ಯಾಸದ ಇಲಾಖೆಯು ಇನ್‌ಸ್ಪೆಕ್ಟರ್ ಜನರಲ್ ಮೆ॥ ಭಾಭಾಸಾಹೇಬರವರು ಖ್ಯಾತಿಯನ್ನು ಪಡೆಯುವರೆಂದು ಕೋರುತ್ತೇವೆ.

***

ಈ ಮಾಹೆ ಆರನೇತಾರೀಖಿನದಿವಸ, ಶುಭಮುಹೂರ್ತದಲ್ಲಿ ನಮ್ಮ ಶ್ರೀಮನ್ಮಹಾರಾಜ ಶ್ರೀಕೃಷ್ಣರಾಜಒಡೆಯರ್ ಬಹದೂರವರಿಗೆ ವಿವಾಹಮಹೋತ್ಸವವು ಬೆಳೆಯಿತು.

ಗಳುಳ್ಳದ್ದಾಗಿ ಕಾಣಬರುವದು. ಇವುಗಳೇ ಬೆವರನ್ನು ಹೊರಗೆತರುವ ಸೂಕ್ಷ್ಮನಾಳಗಳು. ಈ ಪೊರೆಯಲ್ಲಿ ರಕ್ತನಾಳಗಳೂ ನರಗಳೂ ಇಲ್ಲ. ಆದುದರಿಂದ ಚರ್ಮವನ್ನು ಸೂಜಿಯಿಂದ ಸ್ವಲ್ಪ ಚುಚ್ಚಿದರೆ ರಕ್ತವೂ ಬರುವದಿಲ್ಲ; ನೋವುವದೂ ಇಲ್ಲ. ಕೆಳಗಿನ ಪೊರೆಯಲ್ಲಿ ರೋಮನಾಳಗಳೂ ನರಗಳ ಸಣ್ಣ ಕವಲುಗಳೂ ಇವೆ. ಇವುಗಳಿಂದಲೇ ಚರ್ಮದ ಬೆಳವಣಿಕೆಗೆ ಬೇಕಾದ ಸಾಮಗ್ರಿಗಳು ಮತ್ತು ಚರ್ಮಕ್ಕೆ ಕಾಂತಿ ಉಂಟುಮಾಡುವ ಪದಾರ್ಥಗಳೂ ಉತ್ಪತ್ತಿಯಾಗುತ್ತವೆ. ಕೆಳಗಿನ ಪೊರೆಯು ಬಹಳ ಮೃದುವಾಗಿಯೂ ಮೇದಸ್ಸಿನಿಂದ ಕೂಡಿದ್ದಾಗಿಯೂ ಇದೆ. ಇದರಿಂದಲೇ ದೇಹದ ಶಾಖವು ಹೊರಗೆ ಹೋಗುವಹಾಗೆ ಕಾಪಾಡಲ್ಪಡುತ್ತದೆ. ಮತ್ತು ಶರೀರಕ್ಕೆ ಉರ ಟನ್ನು ಉಂಟುಮಾಡುತ್ತದೆ. ಈ ಭಾಗದಲ್ಲಿ ಸ್ವೇದಗ್ರಂಥಿಗಳು ಅಡಗಿವೆ. ಕೆಳಗಿನ ಪೊರೆಯಲ್ಲಿ ಅನೇಕ ಮೇಮನಾಳಗಳು ಇರುವದರಿಂದ ಸ್ವೇದಗ್ರಂಥಿಗಳಿಗೆ ಬೇಕಾದ ರಕ್ತವನ್ನು ಸರಬರಾಜು ಮಾಡಲ್ಪಡುತ್ತದೆ. ಆದರಿಂದ ಸ್ವೇದಗ್ರಂಥಿಗಳಲ್ಲಿ ಸ್ವೇದ (ಬೆವರು) ಉತ್ಪತ್ತಿಯಾಗಿ ಸಣ್ಣನಾಳಗಳ ಮಾರ್ಗವಾಗಿ ಚರ್ಮದ ಮೇಲ್ಭಾಗಕ್ಕೆ ಬರುತ್ತದೆ. ಈ ಭಾಗದಲ್ಲಿ ಸ್ವೇದಗ್ರಂಥಿಗಳಲ್ಲದೆ ಮೇದೋಗ್ರಂಥಿಗಳೆಂಬ ಇನ್ನೂ ವಿಧವಾದ ಗ್ರಂಥಿಗಳಿವೆ. ಈ ಗ್ರಂಥಿಗಳು ಕೂದಲಿನ ಬುಡಗಳನ್ನು ಆವರಿಸಿಕೊಂಡು ಅವುಗಳ ಬೆಳೆಯುವಿಕೆಗೆ ಬೇಕಾದ ದ್ರವವನ್ನು ಕೊಡುತ್ತವೆ. ಚರ್ಮದ ಮೇಲ್ಭಾಗದ ಲ್ಲಿರುವ ಸಣ್ಣ ಕಣಗಳು ನಶಿಸಿದಾಗ ಕೆಳಗಿನ ಪೊರೆಯಲ್ಲಿರುವ ಕಣಗಳು ಆ ನಶಿಸಿದ ಕಣಗಳ ಸ್ಥಳವನ್ನು ಆಕ್ರಮಿಸುತ್ತವೆ. ಸ್ವೇದಗ್ರಂಥಿಗಳಲ್ಲಿ ಯಾವಾಗಲೂ ಬೆವರು ಉತ್ಪತ್ತಿಯಾಗುತ್ತಲೇ ಇದೆ. ಬೆವರು ಸಾಧಾರಣವಾಗಿ ಕ್ಷಾರಸ್ವಭಾವವುಳ್ಳ ನೀರಾ ಗಿದೆ. ಇದರಲ್ಲಿ ಸ್ವಲ್ಪ ಕ್ಷಾರವು ನಿಮ್ಮುನಾಮ್ಲ ಅಥವಾ ಜಿಡ್ಡು (ಮೇದಸ್ಸು) ಇವು ಗಳಿಂದ ಕೂಡಿದೆ. ಸ್ವಲ್ಪ ಇಂಗಾಲಾಮ್ಲವೂ ಸೇರಿದೆ. ಬೆವರು ಸ್ವಲ್ಪವಾಗಿ ದ್ದಾಗ ಜಾಗ್ರತೆಯಾಗಿ ಒಣಗುವದರಿಂದ ನಮ್ಮ ಕಣ್ಣಿಗೆ ಚೆನ್ನಾಗಿ ಕಾಣಿಸುವದಿಲ್ಲ. ಬಿಸಲುಕಾಲದಲ್ಲೂ ಹೆಚ್ಚಾಗಿ ಶ್ರಮಪಟ್ಟು ಕೆಲಸಮಾಡಿದಾಗಲೂ ಬೆವರು ಅಧಿಕವಾಗಿ ಸುರಿಯುತ್ತದೆ. ಆಗ ನಮ್ಮ ಚರ್ಮದಮೇಲೆಲ್ಲಾ ತುಂತುರುಗಳಾಗಿ ನಿಲ್ಲುತ್ತದೆ. ಆಗ ಇದು ನಮ್ಮ ಕಣ್ಣಿಗೆ ಚೆನ್ನಾಗಿ ಗೋಚರವಾಗುತ್ತದೆ. ಶರೀರದಲ್ಲಿ ಬೆವರು ಧಾರಾ ಳವಾಗಿ ಉಂಟಾಗುವದರಿಂದ ಶರೀರದಲ್ಲಿ ಉತ್ಪತ್ತಿಯಾದ ಅಧಿಕ ಶಾಖವು ಕಡಮೆ ಯಾಗುವದು.

ಹೀಗೆ ಮೂತ್ರವಿಸರ್ಜನೆಯಿಂದ ರಕ್ತದಲ್ಲಿರುವ ಕೆಲವು ಕ್ಷಾರಗಳು ಮತ್ತು ಸಾರ ಜನಕವು ಬೇರೆಮಾಡಲ್ಪಡುತ್ತವೆ. ಬಳಿಕ ಶುದ್ಧಿಮಾಡಲ್ಪಟ್ಟ ರಕ್ತವು ದೊಡ್ಡ ಮಲಿನರಕ್ತನಾಳಗಳ ಮೂಲಕ ಹೃದಯದ ಬಲಗಡೆಯ ಮೇಲ್ಭಾಗಕ್ಕೆ ಸೇರುವದು. ಮೂತ್ರಪಿಂಡಗಳಲ್ಲಿ ಅಧಿಕವಾಗಿ ರಕ್ತಸಂಚಾರ ಮಾಡಿದರೆ ಅಧಿಕವಾಗಿ ಮೂತ್ರೋತ್ಪತ್ತಿಯಾಗುವದು. ಮತ್ತು ವಿಸರ್ಜನೆಯಾಗುವದು. ಹೇಗೆಂದರೆ ಛರ್ಮಕಾಲದಲ್ಲಿ ರಕ್ತವು ಶರೀರದ ಒಳಭಾಗದಲ್ಲಿರುವ ಅಂಗಗಳಲ್ಲೇ ಅಧಿಕವಾಗಿ ಸಂಚಾರ ಮಾಡುವದರಿಂದ ಆಗ ಮೂತ್ರಪಿಂಡಕ್ಕೂ ಅಧಿಕವಾಗಿಹೋಗಿ ಹೆಚ್ಚಾಗಿ ಮೂತ್ರೋತ್ಪತ್ತಿಯಾಗುವದು. ಬಿಸಲುಕಾಲದಲ್ಲಿ ಶರೀರದ ಹೊರಭಾಗದಲ್ಲಿರುವ ಅವಯವಗಳಿಗೆ (ಚರ್ಮ) ರಕ್ತವು ಹೆಚ್ಚಾಗಿ ಸಂಚಾರ ಮಾಡುವದರಿಂದ ಬೆವರು ಬರುವದು ಅಲ್ಲದೆ ಮೂತ್ರೋತ್ಪತ್ತಿಯು ಕಡಮೆಯಾಗುವದು.

ಮೇಲೆಹೇಳಿದ ಸಂಗತಿಗಳಿಂದ ಮೂತ್ರಪಿಂಡಕ್ಕೂ ಚರ್ಮಕ್ಕೂ ಸವಿಾಪಸಂಬಂಧವುಂಟೆಂದು ತಿಳಿಯಬರುತ್ತದೆ. ಇವುಗಳು ಪರಸ್ಪರ ಕೆಲಸವನ್ನು ಮತ್ತೊಂದು ಕಾಲಾನುಗುಣವಾಗಿ ಮಾಡುತ ವೆ.

ಚರ್ಮವೂ ಅದರ ಕಾರ್ಯಗಳು.

ಚರ್ಮ ಅಥವಾ ತ್ವಕ್ಕು ಶರೀರವ ಎಲ್ಲಾ ಭಾಗಗಳನ್ನು ಮುಚ್ಚಿಕೊಂಡು ಸಮಸ್ತ ಅಂಗಗಳನ್ನೂ ಕಾಪಾಡುತ್ತದೆ. ಚರ್ಮದಲ್ಲಿ ಎರಡು ಪರೆಗಳಿವೆ. ಇವುಗಳಲ್ಲಿ ಮೇಲ್ಪೊರೆಯು ಗಟ್ಟಿಯಾಗಿ (ಪ್ರಕಾಶವಾಗಿಯೂ) ಸಣ್ಣಗಿರುವ ಗುಂಡಾದ ಹುರುಪೆಯಿಂದ ಮಾಡಲ್ಪಟ್ಟಿದೆ. ಈ ಹುರುಪೆಯು ನಾವು ಮೈಯನ್ನು ಕೆರದಾಗ ಬೆಳ್ಳಗೆ ಬೂದಿಯಹಾಗೆ ಬರುತ್ತದೆ. ಅಲ್ಲದೆ ಇತರ ಕಾರಣಗಳಿಂದಲೂ ಉದುರುತ್ತವೆ. ಹೀಗೆ ಉದುರಿ ಪ್ರತಿಯಾಗಿ ಬೇರೆ ಹೊಸ ಹುರುಪೆಯು ಉತ್ಪತ್ತಿಯಾಗುತ್ತಾ ಇರುತ್ತವೆ.

ಈ ಮೇಲಪೊರೆಯು ಅಂಗೈ—ಅಂಗಾಲುಗಳಲ್ಲಿ ಬಹಳ ದಪ್ಪವಾಗಿ ಇದೆ. ಆದುದರಿಂದ ಆ ಭಾಗಗಳು ಸ್ವಲ್ಪ ಒರಟಾಗಿಯೂ ದಪ್ಪವಾಗಿಯೂ ಇವೆ. ಈ ಮೇಲೆಪೊರೆಯನ್ನು ನಾವು ಸೂಕ್ಷ್ಮದರ್ಶಕ ಯಂತ್ರದಿಂದ ನೋಡಿದರೆ ಅನೇಕ ಸಣ್ಣರಂಧ್ರ

(೧) ರಾಜ್ಯವುಘುಸ್ನಿಗೆಸೇರಿತು.

(೨) ಸಿಂಧೂನದಿಗೆ ಪೂರ್ವಕಡೆಯಲ್ಲಿರುವ ದೇಶಗಳಲ್ಲಿ ಮಹಮ್ಮದೀಯರುತಮ್ಮ ಅಧಿಕಾರವನ್ನುಸ್ಥಾಪಿಸುವುದಕ್ಕೆ ಪ್ರಾರಂಭವಾಯಿತು.

(೩) ತುರುಕರು ಹಿಂದೂಸ್ಥಾನದಲ್ಲಿ ಸ್ಥಾಪಿಸುವ ಮಹಮ್ಮದೀಯ ರಾಜ್ಯಕ್ಕೆ ಇದು ಅಸ್ತಿಭಾರವಾಯಿತು.

(೪) ಮತ್ತು ಲಾಹೋರಿನಲ್ಲಿ ತನ್ನ ಸೈನ್ಯದ ತಾಣ್ಯವನ್ನು ಇಟ್ಟನು.

ಹನ್ನೆರಡನೆಯದು ೧೦೨೪ ರಲ್ಲಿ ಪುನಃ ದಂಡನ್ನು ತೆಗದುಕೊಂಡು ಬಂದನು. ಒಡನೆ ಗುಜರಾತ್ ದೇಶದಲ್ಲಿದ್ದ ಸೋಮನಾಥ ದೇವಾಲಯಕ್ಕೆ ಮುತ್ತಿಗೆ ಹಾಕಿದನು. ಬ್ರಾಹ್ಮಣರೂ ರಾಜಪುತ್ರರೂ ಬಹಳನಾಗಿ ಕಾದಿ ಯುದ್ಧಮಾಡುವುದಕ್ಕೆ ಶಕ್ತಿಸಾಲದೆ ದೇವಾಲಯವನ್ನು ಶತ್ರುವಿನ ವಶಮಾಡಿದರು.

॥ ಫಲಿತಾಂಶ ॥

(೧) ದೇವಾಲಯದಲ್ಲಿದ್ದ ವಿಗ್ರಹವನ್ನು ಸುಲತ್ತಾನನು ಛೇದಿಸಿ ವಿಗ್ರಹಭೇದಿ ಎಂಬ ಹೆಸರನ್ನು ಹೊಂದಿದನು.

(೨) ಬಹುಬೆಲೆಯುಳ್ಳ ರತ್ನಾಭರಣಗಳನ್ನು ಸ್ವಾಧೀನಪಡಿಸಿಕೊಂಡನು.

ಇತರ ಯುದ್ಧಗಳು ನಡೆದ ಇಸವಿಗಳು.
(೨) ೧೦೧೫ ರಲ್ಲಿ (೩) ೧೦೦೬ (೪) ೧೦೧೦ (೬) ೧೦೧೫, (೭) ೧೦೧೩, (೮) ೧೦೧೫, (೯) ೧೦೧೯, (೧೧) ೧೦೨೩ ರಲ್ಲಿ,

ದಂಜಾಬಿನಮೇಲೆ ಬರಬೇಕಾಗಿರುವದರಿಂದಲೂ ಈ ಸ್ಥಳದಲ್ಲೇ ಪದೇಪದೇ ಯುದ್ಧವು ಕೈಗೂಡುತ್ತಾ ಬರುವುದೆಂದು ತಿಳಿಸಬೇಕು. ಫಲಿತಾಂಶವನ್ನು ಹಲಗೆಯಮೇಲೆ ಬರೆದು ಪುನರುಕ್ತಿಯನ್ನು ಮಾಡಿ, ಬರೆದುಕೊಳ್ಳುವಂತೆ ತಿಳಿಸಬೇಕು. ಬರೆದತರುವಾಯು ಕೆಲವುಮಂದಿ ಬಾಲಕರನ್ನು ಏನೇನು ಬರೆದುಕೊಂಡಿರುವರೆಂಬುವದನ್ನು ಪ್ರಶ್ನೆಮಾಡಿ ತಿಳಿದುಕೊಳ್ಳಬೇಕು.

ಹಿಂದುಗಳಲ್ಲಿ ನಿಷ್ಕರುಣಿಯಾದ ಈ ಧೊರೆಯು ಪುರಾತನ ಕಟ್ಟಡವಾದ ಈ ದೇವಾಲಯವನ್ನು ಹಾಳುಮಾಡಿದ್ದಕ್ಕೋಸ್ಕರ ಹಿಂದುಗಳ ವ್ಯಸನವನ್ನು ಅಷ್ಟಿಷ್ಟೆಂದು ಹೇಳುವುದಕ್ಕೆ ಸಾಧ್ಯವಿಲ್ಲವೆಂದು ಮಾದ್ರಿಗಾಗಿ ಹಳೇಬೀಡು, ಬೇಲೂರು ಮುಂತಾದ ದೇವಾಲಯಗಳ ಚಿತ್ರಪಠಗಳನ್ನೂ ತಂದು ತೋರಿಸಬೇಕು. ಮತ್ತು ಇವನು ಮಾಡಿದ ಈ ನಾಲ್ಕು ಯುದ್ಧಗಳಲ್ಲಿಯೂ ಹಿಂದುಗಳಿಗೆ ಪರಾಜಯವಾಯಿತೆಂದು ಅವರಿಂದಲೇ ಹೇಳಿಸಬೇಕು.

ಇವರ ಫಲಿತಾಂಶವನ್ನೂ ಬರೆದುಕೊಳ್ಳುವಂತೆ ಹೇಳಬೇಕು. ತಾವೂ ಹಲಿಗೆಯುನೀಲೆ ಬರೆದಿರಬೇಕು.

ಇವನ್ನು ಬಾಲಕರಿಗೆ ಸಾಧಾರಣವಾಗಿ ತಿಳಿಸಿದ್ದರೆ ಸಾಕು. ಆದರೆ ಈ ಇಸವಿಗಳಲ್ಲಿ ನಡೆದಿರುವ ಯುದ್ಧಗಳು ಕೆಲವಲ್ಲಿ ಪರಾಜಯವೂ ಮಹಮ್ಮದನಿಗೆ ಪ್ರಾಪ್ತಿಯಾ

ಚರ್ಮದಿಂದ ಆಗುವ ಪ್ರಯೋಜನಗಳು.

(೧) ಶರೀರದಲ್ಲಿ ಉತ್ಪತ್ತಿಯಾದ ನೀರೂ, ಇಂಗಾಲಾಮ್ಲವೂ, ಶಾಖವೂ ಹೊರಗೆಹೋಗುವಹಾಗೆ ಮಾಡುತ್ತದೆ. (೨) ಮತ್ತು ಹೊರಗಿನ ವಾಯುವಿನಿಂದ ಸ್ವಲ್ಪ ಆಮ್ಲಜನಕವನ್ನು ಹೀರುತ್ತದೆ. (೩) ದೇಹದ ಪ್ರತಿ ಅಂಗಗಳನ್ನು ಅದರ ದರ ಸ್ಥಳದಲ್ಲಡುತ್ತದೆ. ಮತ್ತು ನೋವನ್ನು ತಿಳಿಸುವ ನರಗಳ ಕವಲುಗಳನ್ನು ಕಾಪಾಡುತ್ತದೆ. (೪) ಶರೀರದ ಶೀತೋಷ್ಣಗಳನ್ನು ತಿಳಿಸುತ್ತದೆ. ಶರೀರ ಕಾರ್ಯಾಂಗಗಳಲ್ಲಿ ನಡೆಯುವ ಮುಖ್ಯಕಾರ್ಯಗಳಾವುವೆಂದರೆ—

(೧) ಶ್ವಾಸಕೋಶಗಳು ಶರೀರದಲ್ಲಿ ಉತ್ಪತ್ತಿಯಾದ ಇಂಗಾಲಾಮ್ಲವನ್ನೂ ನೀರು ಹೊರಗೆ ಬಿಸಾಡಿಬಿಟ್ಟು ರಕ್ತವನ್ನು ಶುದ್ಧಮಾಡಿ ಶರೀರದ ಪೋಷಣೆಗೆ ಅತ್ಯಾವಶ್ಯಕವಾದ ಆಮ್ಲಜನಕವನ್ನು ತೆಗೆದುಕೊಳ್ಳುತ್ತವೆ. (೨) ಮೂತ್ರಜನಕಾಂಗಗಳು ಮೂತ್ರಸ್ರಾವವನ್ನೂ ಸಾರಜನಕವನ್ನೂ ಹೊರಗೆ ಬಿಸಾಡಿ ರಕ್ತವನ್ನು ಶುದ್ಧಮಾಡುತ್ತವೆ. (೩) ಚರ್ಮವು ನಮ್ಮ ಶರೀರದಲ್ಲಿ ಉತ್ಪತ್ತಿಯಾದ ಬೆವರನ್ನೂ ಅದರಸಂಗಡ ಸ್ವಲ್ಪ ಇಂಗಾಲಾಮ್ಲವನ್ನೂ ವಿಸರ್ಜಿಸಿ ಶರೀರ ಪೋಷಣೆಗೆ ಅತ್ಯಾವಶ್ಯಕವಾದ ಆಮ್ಲಜನಕವನ್ನು ಸ್ವಲ್ಪಮಟ್ಟಿಗೆ ಹೀರುತ್ತದೆ ಈರೀತಿಯಲ್ಲಿ ಇವುಗಳು ಶರೀರದಲ್ಲಿ ಉತ್ಪತ್ತಿಯಾದ ಕಲ್ಮಷಗಳೂ ಶರೀರದಲ್ಲಿ ನಿಂತು ಬಾಧೆಯುಂಟಾಗದಹಾಗೆ ಹೊರಗೆ ಬಿಡುತ್ತದೆ.

ಚರಿತ್ರೆ.

(೧೦೮ನೇ ಪುಟದ ಶೇಷ;)

ಎರಡನೆಯ ದಿವಸ

ಹಿಂದಿನ ದಿವಸದ ಪಾಠವನ್ನು ಕೇಳಬೇಕು.

(೩) ಹತ್ತನೆಯುದು, ೧೦೨೦ರಲ್ಲಿ ಘಜ್ನಿ ವಂಹಮ್ಮದನು ಘಜ್ನಿಯಿಂದ ಬರುವಾಗ ಲಾಹೋರಿನಲ್ಲಿ ಆಗ ಆಳುತ್ತಿದ್ದ ಆನಂಗಪಾಲನ ಮಗ ಏನೇ ಜಯಪಾಲನು ಇವನನ್ನು ಎದುರಿಸಿ ಸೋತುಹೋದನು.

‖ಫಲಿತಾಂಶ‖

ಸುಲ್ತಾನ ಮಹಮ್ಮದನು ತಾನು ಈ ದೇಶಕ್ಕೆ ಬಂದಬಂದಾಗೆಲ್ಲಾ ಹಿಂದುಗಳು ಪದೇ ಪದೇ ಸೋಲುತ್ತಾ ಬಂದಿರುವುದರಿಂದಲೂ ಅವನಿಗೆ ಯಾವ ಅಡ್ಡಿಯೂ ಇಲ್ಲದಿರುವುದರಿಂದಲೂ, ಇವನು ತನ್ನ ದೇಶದಿಂದ ಈ ದೇಶಕ್ಕೆ ಪ್ರವೇಶಿಸಬೇಕಾದರೆ

ಕಿಂಡರ್‌ಗಾರ್ಟ್ನ.

(೯೬ ನೇ ಪುಟದ ಶೇಷ)

ನಂತರ ಬಾಲಕರಿಂದ ಘನದ ಮೇಲ್ಭಾಗ, ಬುಡ, ಮುಂಭಾಗ, ಹಿಂಭಾಗ, ಬಲ ಭಾಗ, ಎಡಭಾಗ ಇವುಗಳನ್ನು ಒಂದು ಕಡ್ಡಿಯಿಂದ ತೋರಿಸುವಂತೆ ಹೇಳಿ ಘನಕ್ಕೆ ಆರು ಮೈಗಳೂ, ಎಂಟು ಮೂಲೆಗಳೂ, ಹನ್ನೆರಡು ಅಂಚುಗಳೂ ಇರುವದನ್ನು ತಿಳಿಸಬೇಕು. ಇದರಿಂದ ಗಣನಾಶಕ್ತಿಯು ವೃದ್ಧಿಯಾಗುವದು. ತರುವಾಯು ಚಂಡಿಗೆ ಒಂದೇ ಮೈ ಇರುವದೆಂಬ ಅಂಶವನ್ನು ಗಮನಿಸಬೇಕು.

ಈ ವಿಷಯಗಳು ತಿಳಿದನಂತರ ಒಂದು ಕಡ್ಡಿಯಿಂದ ಘನದ ಉದ್ದ, ಅಗಲ, ಎತ್ತರ ಇವುಗಳನ್ನು ಅಳೆಯುವಂತೆ ತೋರಿಸಿಕೊಟ್ಟು ಅವೆಲ್ಲಾ ಸಮನಾಗಿವೆಯೆಂದು ತಿಳಿಸಬೇಕು. ಇದರಿಂದ ಮಕ್ಕಳಿಗೆ ಉದ್ದ, ಅಗಲ, ಎತ್ತರವೆಂಬ ಶಬ್ದಾರ್ಥಗಳ ಯಥಾರ್ಥಜ್ಞಾನವುಂಟಾಗುವದು. ತರುವಾಯ ಗೋಡೆ ಕಂಬ, ಮೇಜು, ಕುರ್ಚಿ, ಇವುಗಳ ಎತ್ತರ, ಅಗಲ, ಉದ್ದವನ್ನು ಅಳತೆಮಾಡಿಸಬೇಕು. ಒಂದು ಪೊಳದುದ್ದ ಕಟ್ಟಿಗೆಯನ್ನು ಮುರಿದು ಇವುಗಳ ಅಳತೆ ಮಾಡುವರೆಂದೂ ಈ ದೇಶದಲ್ಲಿ ಬಟ್ಟೆಗಳನ್ನು ಪೊಳಗಟ್ಲೆಯಾಗಿ ಲೆಕ್ಕಮಾಡಿ ತೆಗೆದುಕೊಳ್ಳುವರೆಂದೂ ಹೇಳಿ ಕೆಲವು ಪಂಚೆಗಳಿಗೆ ಪೊಳವನ್ನು ಹಾಕಿಸಿ ಪೊಳವೆಂಬ ಶಬ್ದಾರ್ಥದ ಯಥಾರ್ಥಜ್ಞಾನವನ್ನುಂಟುಮಾಡಬೇಕು. ತರುವಾಯ ಬೆಂಚು, ಗೋಡೆ, ಮೇಜು ಮೊದಲಾದ ಪದಾರ್ಥಗಳ ಮೈ (ಮೇಲ್ಮೈ) ಯನ್ನು ತೋರಿಸುವಂತೆ ಪ್ರಶ್ನೆಮಾಡಬೇಕು.

ಈ ಪ್ರಕಾರದಲ್ಲಿ ಮಕ್ಕಳಿಗೆ ಚಂಡು, ಘನ ಈ ಎರಡರ ಪರಿಚಯವು ಪೂರ್ತಿಯಾಗಿ ಆದಮೇಲೆ ಸಿಲಿಂದರ (ಆಕೃತಿ) ವನ್ನು ತೆಗೆದುಕೊಂಡು ಮೇಲ್ಕಂಡರೀತಿಯಲ್ಲಿಯೇ ಅದರ ಹೆಸರು, ಮೈಗಳು, ಆಕಾರ, ಅಂಚು ಇವುಗಳ ವಿಷಯವಾಗಿ ಪ್ರಶ್ನೆಮಾಡಿ ತಿಳಿಸಿಕೊಟ್ಟು ಈ ಸಿಲಿಂದರವು ಚಂಡಿನಂತೆ ಉರುಳುವದೆಂದೂ ಘನದಂತೆ ನಿಂತುಕೊಳ್ಳುವದೆಂದೂ ಹೇಳಿಸಿ ಚಂಡು ಘನಗಳಿಗೂ ಇದಕ್ಕೂ ಇರುವ ಸಾಮ್ಯವನ್ನು ಹೇಳಿಸಬೇಕು. ಇವಲ್ಲದೆ ಸಿಲಿಂದರಕ್ಕೆ ಚಂಡಿಗಿಂತ ಹೆಚ್ಚು ಮೇಲ್ಮೈಗಳೂ, ಘನಕ್ಕಿಂತ ಕಡಮೆ ಮೈಗಳೂ ಇರುವೆಂತಲೂ ತಿಳಿಸಿಕೊಟ್ಟು ಮೇಲ್ಮೈ, ಅಂಚು ಇವುಗಳನ್ನು ಪ್ರತಿಯೊಂದು ಆಕೃತಿಗೂ ಎಣಿಸುವಂತೆ ಹೇಳಬೇಕು.

ಇವನು ೧೦೩೦ ರಲ್ಲಿ ಕಾಲವಾದನು. ಆಂತು ೩೪ ಸಂವತ್ಸರಗಳು ರಾಜ್ಯನಾಳಿದನು.

೪. ಸುಲ್ತಾನನ ಗುಣಗಳು.

ಬಹುಶೌರ್ಯವೂ, ವಿವೇಕವೂ, ಧೈರ್ಯವೂ, ನ್ಯಾಯಾನ್ಯಾಯಗಳನ್ನು ತೀರ್ಮಾನಿಸುವುದರಲ್ಲಿ ಸೈರಣೆಯೂ ವಿದ್ವಾಂಸರಲ್ಲಿ ಪ್ರೀತಿಯೂ ಮತ್ತು ಧಾರಾಳತ್ವವೂ ತುಂಬಿದ್ದವು.

ಮತ್ತು ತನ್ನ ರಾಜಧಾನಿಯಾದ ಘಜ್ನಿಯಲ್ಲಿ ಒಂದು ಪಾಠಶಾಲೆಯನ್ನು ಕಟ್ಟಿಸಿದನು.

ಗಿರುವದೆಂದು ತಿಳಿಸಬೇಕು. ಮತ್ತು ಯಾರು ಯುದ್ಧಕ್ಕೆ ಬಂದಾಗ್ಯೂ ಈ ದೇಶವು ಸಂಪತ್ಸಮೃದ್ಧಸ್ಥಾನವಾದ್ದರಿಂದ ಬಂದು ಲೂಟಿ ಮಾಡಿಕೊಂಡು ಹೋಗುತ್ತಲೇ ಇದ್ದರೆಂತಲೂ, ನಮ್ಮ ದೇಶದ ಜನರು ಅವರನ್ನು ಒಗ್ಗಟ್ಟಿಲ್ಲದೆ ಬಿಟ್ಟುಬಿಡುತ್ತಿದ್ದರೆಂದೂ ಈ ಐಕಮತ್ಯವಿಲ್ಲದ್ದರದೆಸೆಯಿಂದ ಇಂಡಿಯಾ ದೇಶದ ಐಶ್ವರ್ಯವೆಲ್ಲಾ ಅಳಿದುಹೋಗಿ ಕ್ಷೀಣದೆಸೆಗೆ ಬರುತ್ತಿರುವುದೆಂತಲೂ ತಿಳಿಸಬೇಕು. ನಂತರ ತನ್ನ ದೇಶಕ್ಕೆ ಹೋದ ಮೇಲೆ ೧೦೩೦ ರಲ್ಲಿ ತೀರಿಹೋದದ್ದನ್ನು ತಿಳಿಸಬೇಕು.

ಇಷ್ಟೆ ಸದ್ಗುಣಗಳಿದ್ದಾಗ್ಯೂ ದುರಾಸೆಯು ಬಹಳವಾಗಿದ್ದದ್ದರಿಂದಲೂ, ಹಿಂದುದೇಶಕ್ಕೆ ಬಂದುಬಂದು ಎಷ್ಟು ದ್ರವ್ಯವನ್ನು ಹೊತ್ತುಕೊಂಡು ಹೋಗಿ ತನ್ನ ದೇಶಕ್ಕೆ ತುಂಬುತ್ತಿದ್ದಾಗ್ಯೂ ಇವನಲ್ಲಿದ್ದ ಗುಣಗಳಿಗಾಗಿ ಸಂತೋಷಪಡಬೇಕೆಂದು ತಿಳಿಸಿ ಇವನಗುಣಗಳನ್ನು ಹಲಗೆಯ ಮೇಲೆ ಬರೆಯುಬೇಕು. ಇವನಕಾಲದಲ್ಲಿ ನಡೆದವಿಷಯಗಳನ್ನೆಲ್ಲಾ ಒಟ್ಟು ಪುನರಾವರ್ತನೆ ಮಾಡಬೇಕು.

[ಸೂಚನೆ—(೧) ಉಪಾಧ್ಯಾಯರು ಈತನ ವಿಷಯವನ್ನು ಮೂರುದಿವಸಗಳ ಪಾಠಕ್ಕೆ ಇಟ್ಟುಕೊಂಡು ಬೋಧಿಸಿದರೆ ಸರ್ವೋತ್ತಮವಾಗಿರುವುದು.]

ಎಚ್. ಸೂರ್ಯನಾರಾಯಣಪ್ಪ,

ಆ. ಅ. ಮಾಸ್ಟರ್,

ಆರ್ಯಬಾಲಿಕಾಪಾಠಶಾಲಾ. ಬೆಂಗಳೂರು.

ರವು ಸೇರು-ಕೊಳಗ-ಕೆಂಬ-ಲಿಂಗ-ತೊಂಬೆ-ಇವುಗಳಹಾಗಿರುವದೆಂದು ಹೇಳಿಸಿ ಆ ವುಗಳ ಪ್ರಯೋಜನವನ್ನು ತಿಳಿಸತಕ್ಕದ್ದು.

ಕೆಲವುಬಾಲಕರು ಒಟ್ಟುಗೂಡಿ ಘನ, ಚೆಂಡುಗಳು, ಸಿಲಿಂದರಗಳು ಇವುಗ ಳಿಂದ ಕಟ್ಟಡಗಳನ್ನು ಕಟ್ಟುವಂತೆ ಹೇಳಬೇಕು. ಆ ಕಟ್ಟಡಗಳಲ್ಲಿರುವ ವಸ್ತುಗಳನ್ನು ಹೇಳಿಸಿ ಆ ವಸ್ತುಗಳ ಉಪಯೋಗವನ್ನು ತಿಳಿಸಿಕೊಡಬೇಕು. ಘನ-ಸಿಲಿಂದರ ಇವು ಗಳನ್ನು ಅಳತೆ ಮಾಡುವಾಗ ಅಂಗುಲವೆಂಬ ಶಬ್ದವನ್ನು ಉಪಯೋಗಿಸಿ ಅದರ ಅರ್ಥ ವನ್ನು ತಿಳಿಸಬೇಕು. ಮೇಲೆಹೇಳಿರುವ ರೀತಿಯಲ್ಲಿ ಉಪಾಧ್ಯಾಯನು ತನಗೆ ಸಮ ಯೋಚಿತವಾಗಿರುವಂತೆ ತೋರುವ ವಿಷಯಗಳನ್ನು ಪದಾರ್ಥಗಳ ಆಕಾರ, ಜನರ ಕೆಲಸ, ಮುಂತಾದ ವಿಷಯಗಳ ಜ್ಞಾನವನ್ನು ಬಾಲಕರಲ್ಲುಂಟುಮಾಡಬೇಕು.

ನಾಲ್ಕನೆ ಅಧ್ಯಾಯ ೩ ನೇ ಪ್ರಕರಣ.

ಪ್ರತಿ ಕರಣಗಳಿಗೂ ಒಂದಕ್ಕೊಂದು ಸಂಬಂಧವಿಟ್ಟು ಶಿಕ್ಷಣವನ್ನು ನಡೆಸತ ಕ್ಕದ್ದೆಂದು ಪ್ರೊಬೆಲ್ಲನು ಎರಡನೇ ಕರಣಕ್ಕೂ ಇದಕ್ಕೂ ಸಂಬಂಧವಿಟ್ಟೇ ಇರುವನು.

ಉಪಕರಣ:—ಈ ಕರಣದ ಪೆಟ್ಟಿಗೆಯಲ್ಲಿ ಎಂಟು ಸಣ್ಣ ಘನಗಳಿಂದ ಕೂಡಿದ ಒಂದು ದೊಡ್ಡ ಘನವಿರುವದು. ಹಿಂದಿನ ಕರಣಗಳಲ್ಲಿ ಹೇಳಿದಂತೆ ಪೆಟ್ಟಿಗೆಯನ್ನು ಹಂಚಿ ಮುಚ್ಚಳವನ್ನು ತೆಗೆಯುವದಕ್ಕಾಗಿ ಕೆಳಗಿನ ಅಂಶಗಳಿಗೆ ಗಮನ ಕೊಡಬೇಕು. ಯಾವವೆಂದರೆ:—ಮುಕ್ಕಳ ಪೆಟ್ಟಿಗೆಯ ಮೇಲಿನ ಬಿರುಕಿನಲ್ಲಿ ಹೆಬ್ಬೆರಳಿನ ಉಗುರನ್ನು ಇಡುವಂತೆ ಹೇಳಿ ಅರ್ಧ ಅಂಗುಲದಷ್ಟು ಮುಚ್ಚಳವನ್ನು ಹೊರಕ್ಕೆ ಎಳೆದು ಪೆಟ್ಟಿಗೆ ಯನ್ನು ಬೆಂಚಿನಮೇಲೆ ಬೋರಲುಹಾಕಿ (ತಲೆಕೆಳಗಾಗಿ ಮಾಡಿ) ಮುಚ್ಚಳವನ್ನು ಸೆಳೆ ದುಬಿಟ್ಟು ನಿಧಾನವಾಗಿ ಪೆಟ್ಟಿಗೆಯನ್ನು ಮೇಲಕ್ಕೆತ್ತುವಂತೆ ಹೇಳಬೇಕು. ನಂತರ ಪೆಟ್ಟಿಗೆಯನ್ನು ಬೆಂಚಿನಮೇಲೆ ಸಮಾನಾಂತರದಲ್ಲಿಡುವದಕ್ಕೆ ಅಪ್ಪಣೆಮಾಡಿ ಮುಚ್ಚಳ ವನ್ನು ಪೆಟ್ಟಿಗೆಯಲ್ಲಿಯೇ ಕರಣವಾಗಿಡುವಂತೆ ಹೇಳಬೇಕು. ಪೆಟ್ಟಿಗೆಯನ್ನು ವೇಲ ಕ್ಕೆ ತೆಗೆಯುತ್ತಲೆ ದೊಡ್ಡದಾದ ಘನವು ನಿಲ್ಲುವದು. ಅಭ್ಯಾಸವು ಮುಗಿದನಂತರ ಪೆ ಟ್ಟಿಗೆಯನ್ನು ಘನದಮೇಲಕ್ಕೆ ಬೋರಲು ಹಾಕಿ ಮುಚ್ಚಳವನ್ನು ಸಂದಿನಲ್ಲಿ ಸ್ವಲ್ಪ ಒತ್ತಿ ತಟ್ಟನೆ ಮೇಲಕ್ಕೆ ಪೆಟ್ಟಿಗೆಯನ್ನು ತಿರುವಿ ಮುಚ್ಚಳವನ್ನು ಮುಚ್ಚಿಸಬೇಕು. ಹೀಗೆ ಪೆಟ್ಟಿಗೆಯಿಂದ ಘನವು ನಿಲ್ಲುವಹಾಗೆ ಮಾಡುವದೂ ಚನ್ನಾಗಿ ಅಭ್ಯಾಸ ಮಾಡಿ ಸುವದರಿಂದಲ್ಲದೆ ಸುಲಭವಾಗಿ ಸಾಧ್ಯವಾಗುವದಿಲ್ಲ.

ಇನ್ನೊಂದು ಅಭ್ಯಾಸದಲ್ಲಿ ಚಂಡು ಯಾವದರಹಾಗೆ ಓಡುತ್ತದೆಂದು ಪ್ರಶ್ನೆ ಮಾಡಿದರೆ ರೈಲಿನಹಾಗೆ—ಕುದುರೆಯಹಾಗೆ—ಗಾಲಿಯಹಾಗೆ ಎಂಬ ಉತ್ತರವು ಸಹಜವಾಗಿ ಬರುವದು. ಈಗ ರೈಲು, ಕುದುರೆ ಮುಂತಾದ ವಿಷಯಗಳನ್ನೂ ಅವುಗಳ ಪ್ರಯೋಜನವನ್ನೂ ತಿಳಿಸಿಕೊಡಬೇಕು. ಇದರಿಂದ ಕೆಲವು ಉಪಯೋಗವಾದ ಪ್ರಾಣಿಗಳ ಸ್ವಭಾವವೂ ಪ್ರಯೋಜನಕರವಾದ ವಸ್ತುಗಳ ವಿಷಯವೂ ಮಕ್ಕಳಿಗೆ ತಿಳಿಯುವದು.

ತರುವಾಯ ಘನವು ಯಾವವಸ್ತುವಿನಂತಿರುವದೆಂದು ಪ್ರಶ್ನೆಮಾಡಿದರೆ ಮನೆ, ಪೆಟ್ಟಿಗೆ ಇವುಗಳಂತಿರುವದೆಂದು ಹೇಳುವರು. ಅವುಗಳನ್ನು ಕಟ್ಟುವವರು ಅಥವಾ ಮಾಡುವವರು, ಅವುಗಳ ಉಪಯೋಗ ಈ ಸಂಗತಿಗಳನ್ನು ಹೇಳಬೇಕು. ತರುವಾಯ ಒಂದು ಕಡ್ಡಿಯನ್ನು ಚಂಡು, ಘನ ಇವುಗಳಲ್ಲಿ ಮಾಡಿರುವ ಸಂದಿನಲ್ಲಿಟ್ಟು ಚಂಡಿನವ್ಯಾಸ, ಘನದಕರ್ಣ ಮುಂತಾದವುಗಳನ್ನು ಹೇಳಬೇಕು. ಇಂಥ ಅಭ್ಯಾಸಗಳನ್ನು ಮಾಡಿಸುವಾಗೆಲ್ಲ ಆ ಪದಗಳನ್ನೇ ಉಪಯೋಗಿಸಿ ಬಾಲಕರಿಗೆ ಆ ಪದಗಳನ್ನು ಮುಂದಿಟ್ಟು ಮಾಡಿಸಬೇಕು. ಈ ಕಠಿಣವಾದ ಪದಗಳನ್ನು ಮಕ್ಕಳಿಗೆ ಎತಕ್ಕೆ ತಿಳಿಸಬೇಕೆಂದು ಉಪೇಕ್ಷೆ ಮಾಡಲಾಗದು. ಯಾಕಂದರೆ ಮಕ್ಕಳಿಗೆ ಹೇಳಿಕೊಟ್ಟ ವಿಷಯವನ್ನು ತಿಳಿದುಕೊಳ್ಳುವ ಶಕ್ತಿಯುಂಟು. ಆದರೆ ಆ ವಿಷಯವನ್ನು ವಿವರಿಸಿ ಹೇಳುವದಕ್ಕೆಮಾತ್ರ ಶಕ್ತಿ ಇರುವದಿಲ್ಲ.

ಮಕ್ಕಳ ಮನೋಧರ್ಮವು ಮೊದಲು ಬಣ್ಣದಕಡೆಗೆ ತಿರುಗಿ ತರುವಾಯ ರೂಪ ಅಥವಾ ಆಕಾರದಮೇಲೆ ಬೀಳುವುದರಿಂದ ಮೊದಲನೇ ಕರಣವನ್ನು ಬಣ್ಣದ ವಿಷಯದಲ್ಲಿಯೂ, ಎರಡನೇ ಕರಣವನ್ನು ಆಕಾರದ ವಿಷಯವಾಗಿಯೂ, ಇರಬೇಕೆಂದು ಮಕ್ಕಳ ಮನೋಧರ್ಮವನ್ನು ತಿಳಿದು ಫ್ರೊಬೆಲ್ಲರವರು ಹೀಗೆ ಕ್ರಮಪಡಿಸಿರುವರು. ಈ ಕರಣದಲ್ಲಿ ಕಟ್ಟಡಗಳನ್ನು ಕಟ್ಟುವದಕ್ಕೆ ಉಪಕ್ರಮಿಸಬಹುದು. ಹ್ಯಾಗಂದರೆ ಘನಕ್ಕೆ ಇರುವ ಎಜ್ಜದಲ್ಲಿ ಒಂದು ಕಡ್ಡಿಯನ್ನು ಸಿಕ್ಕಿಸಿದರೆ ಅದು ನೆಲವನ್ನು ಸಮುಮಾಡುವ "ಹಂಸಪಾದ" ದಹಾಗೂ ಮೊಸರನ್ನು ಕಡೆಯುವ ಕಡಗೊಲು (ಮಂತು) ಇರುವಹಾಗೂ ಇರುವದೆಂದು ಊಹೆಗೊಟ್ಟು ಅವುಗಳ ಉಪಯೋಗವನ್ನು ಹೇಳಿಸಬೇಕು. ಆ ಕಡ್ಡಿಯನ್ನು ತಾವಾಗಿ ಉಪಯೋಗಿಸಿಕೊಂಡು ಬಡಗಿಯು ಕೊಡತಿ (ಆಕೃತಿ ೪) ಯಹಾಗಿರುವದೆಂದು ಸೂಚಿಸಿ ಅವನ ಉದ್ಯೋಗವನ್ನು ತಿಳಿಸಿಕೊಡಬೇಕು. ಸಲಿಂದ

ನಿಷೇವು ಎಂಬ ಪದಗಳ ಅರ್ಥವನ್ನು ತಿಳಿಸಿ ಆಯಾ ಸಂಖ್ಯೆಗಳನ್ನೂ ಹೇಳಿಸಬಹುದು. ಹೀಗೆಯೇ ಕೆಲವು ಸಂಖ್ಯೆಗಳ ಗುಣಾಕಾರವನ್ನು ಭಾಗಾಹಾರವನ್ನೂ ನಿದರ್ಶನಪೂರ್ವಕವಾಗಿ ಕಲಿಸಬೇಕು.

॥ಅಂಕಗಣಿತ॥

I (1) 301,302,303 ಇವುಗಳನ್ನು ಗುಣಿಸಿ ಇವುಗಳ ಮೊತ್ತದಿಂದ ಸುಲಭ ರೀತಿಯಿಂದ ಭಾಗಿಸಿ ?

(2) 24,35,50,68,12,60,118 ಇವುಗಳ ಮಹತ್ತಮ ಸಾಮಾನ್ಯ ಅಪವರ್ತನವೆಷ್ಟು ?

II 1998, ಮತ್ತು 1998 ಇವುಗಳ ಮೊತ್ತ, ಅಂತರ, ಭಾಗಲಬ್ಧಗಳ ಒಟ್ಟಿಗೆ, 16000 ನ್ನು ಸೇರಿಸಿದರೆ ಎಷ್ಟಾಗುವದು ?

III (1) $\frac{7}{5-2\frac{2}{3}} \div \frac{3-\frac{2}{3-1\frac{1}{2}}}{4-1\frac{1}{2}} - \frac{5}{7}$ ರ $\left\{\frac{1}{1\frac{3}{7}} + \frac{5}{6}$ ರ $\frac{3\frac{1}{3}-2\frac{1}{2}}{\frac{47}{21}-2}\right\}$ ರ $\frac{3}{7}$ ಇದರ ಬೆಲೆಯನ್ನು 3 ರೂಪಾಯಿಗಳ ದಶಮಾಂಶಕ್ಕೆ ತೆಗೆದುಕೊಂಡುಬನ್ನಿ.

(2) $\frac{(\cdot 0246 - \cdot 008) + \cdot 72 \times \cdot 009}{\cdot 4 \times \cdot 6 \times \cdot 346}$ ಇದರ ಬೆಲೆ ಎಷ್ಟು ?

IV ಒಬ್ಬ ಅಧಿಕಾರಿಗೆ 15 ಪೌಂಡು ಸಂಬಳ ಹೆಚ್ಚಾದಾಗ್ಯೂ ಇಕಂಪ್ಟಾಕ್ಸ್ ಪೌಂಡಿಗೆ, 8 ಪೆನ್ನಿ ಇದ್ದದ್ದು 5 ಪೆನ್ನಿ ಆದದ್ದರಿಂದ ಅತನು ಮೊದಲು ಕೊಡುತ್ತಾ ಇದ್ದುದಕ್ಕಿಂತಲೂ, 4 ಪಿ, 8 ಪೆನ್ಸ್ ಕಡಮೆ ಕೊಡುತ್ತಾನೆ. ಅತನಿಗೆ ಈಗ ಬರುವ ತಲಬು ಎಷ್ಟು ?

ಮೊದಲನೇ ಅಭ್ಯಾಸದಲ್ಲಿ ಮಕ್ಕಳಿಂದ ಘನವನ್ನು ಅಳತೆ ಮಾಡಿಸುವದೂ ಹಸರು ಹೇಳಿಸುವದೂ ಮೈಗಳನ್ನು (ಮುಖಗಳನ್ನು) ಮೂಲೆಗಳನ್ನು ಅಂಚುಗಳನ್ನು ಎಣಿಸಿಸುವದೂ ಮಾಡಬೇಕು. ತರುವಾಯ ಈ ದೊಡ್ಡ ಘನವನ್ನು ಭಾಗಗಳಾಗಿ ಪ್ರತ್ಯೇಕಿಸಬಹುದೆಂದು ಮಕ್ಕಳಿಂದ ತಿಳಿದುಬಂದನಂತರ (ತರಗತಿಯಲ್ಲಿ ೧೦ ಮಂದಿ ಬಾಲಕರಿದ್ದಾರೆಂದು ಭಾವಿಸೋಣ) ಮಕ್ಕಳನ್ನು ಬೆಂಚಿನಮೇಲೆ ಸಾಲಾಗಿರುವ ಘನಗಳನ್ನು ಎಣಿಸುವಂತೆ ಹೇಳಿದರೆ ಮಕ್ಕಳಲ್ಲಿ ಒಬ್ಬನು "ಒಂದು" ಎನ್ನುತ್ತಲೆ ಮತ್ತೊಬ್ಬನು "ಎರಡು" ಎನ್ನುವನು. ಹೀಗೆ ೧೦ ೩. ೩. ೪. . . . . ೧೦ರ ವರಿವಿಗೂ ಎಣಿಕೆ ಮಾಡಿಸಿದ ನಂತರ ಮಕ್ಕಳನ್ನು ಆ ಘನದ ಮೇಲ್ಭಾಗ, ಕೆಳಭಾಗ, ಬಲಭಾಗ, ಎಡಭಾಗ, ಮುಂಭಾಗ, ಹಿಂಭಾಗಗಳನ್ನು ತೋರಿಸುವಂತೆ ಹೇಳಬೇಕು. ತರುವಾಯ ಎಡಗೈಯಿಂದ ಘನದ ಎಡಭಾಗವನ್ನು ಪ್ರತ್ಯೇಕಿಸುವಂತೆ ಮಕ್ಕಳಿಗೆ ಹೇಳಿ ಉಪಾಧ್ಯಾಯನು ತನ್ನ ಘನವನ್ನು ಪ್ರತ್ಯೇಕಿಸಿ ತೋರಿಸಬೇಕು. ತರುವಾಯ ಪ್ರತಿಭಾಗಕ್ಕೂ "ಅರ್ಧ" ವೆಂಬ ಪದವನ್ನು ಹೇಳಿ ಅದರ ಅರ್ಥವನ್ನು ಮಕ್ಕಳ ಮನಸ್ಸಿನಲ್ಲಿ ನಡುವಂತೆ ಪ್ರಶ್ನೆಮಾಡಿ ತಿಳಿಸಿಕೊಡಬೇಕು. ನಂತರ ಮಕ್ಕಳನ್ನು ಎಣಿಸುವದಕ್ಕೆ ಹೇಳಬೇಕು. ಮೊದಲನೆಯವನು ಒಂದು, ಎರಡು. ಎನ್ನುವನು. ಹೀಗೆ ಉಳಿದವರು ೩-೪, ೫-೬, ... ೧೩-೧೪, ವರಿಗೂ ಹೇಳುವರು. ತರುವಾಯ ಒಟ್ಟು ಘನಗಳೆಷ್ಟಾದವೆಂದೂ, ಅರ್ಧವಾಗಿ ಪ್ರತ್ಯೇಕಿಸಿದ ನಂತರ ಎಷ್ಟಾದವೆಂದು ಕೇಳಿ ಪೂರ್ವದ ಪೂರ್ಣಘನಗಳಿಗೂ ಅರ್ಧ ಘನಗಳಿಗೂ ಇರುವ ಸಂಬಂಧವನ್ನು ಹೇಳಿಕೊಟ್ಟು ಅರ್ಧಘನಗಳು ಪೂರ್ಣಘನಗಳ ಇಮ್ಮಡಿಯಾಗಿರುವವೆಂದು ಹೇಳಿಸಬೇಕು. ಇದೇ ಮಕ್ಕಳು ಭಿನ್ನಾಂಶವನ್ನು ಕಲಿಯುವದಕ್ಕೆ ಮೊದಲು. ತರುವಾಯ ವಿಲೋಮ ಕ್ರಮದಲ್ಲಿ ಎಣಿಸುವಂತೆ ಹೇಳಬೇಕು. ಕಡೆಯವನು ೧೪-೧೩ ಎಂದರೆ ಉಳಿದವರು ಕ್ರಮವಾಗಿ ೧೨-೧೧, ೧೦-೯ . . . . . ೪-೩ ರ ವರಿವಿಗೂ ಎಣಿಸುವದಕ್ಕೆ ಅಭ್ಯಾಸ ಮಾಡಿಸಬೇಕು. ತರುವಾಯ ಒಂದು ಮಗುವನ್ನೆ ಅದರ ಬಲಭಾಗದಲ್ಲಿರುವ ಅರ್ಧ ಘನವನ್ನು ಮುಟ್ಟಿ ಮುಟ್ಟುವಂತೆ ಹೇಳಿ ಎರಡೆಂದು ಹೇಳಿಸಬೇಕು. ತರುವಾಯ ಉಳಿದವರು ಕ್ರಮವಾಗಿ ೪-೬, ೮-೧೦, ... ೨೪ ರ ವರಿಗೂ ಎಣಿಸುವರು. ನಂತರ ವಿಲೋಮ ಕ್ರಮದಲ್ಲಿಯೂ (ಎರಡೆರಡಾಗಿ ಕಳೆಯುತ್ತ) ೨೪-೨೨-೨೦ . . . . . ೨ ರ ವರಿಗೂ ಹೇಳಿಸಬೇಕು. ತರುವಾಯ ಸರಿ-ಸಮ, ಬೆಸದ

ಗಳೂರಿಂದ ಮೈಸೂರಿಗೆ ಹೊರಡುವನು. ಮೈಸೂರಿಗೂ ಬೆಂಗಳೂರಿಗೂ 85 ಮೈಲಿಗಳಿಾದರೆ ಯಾವ ಸ್ಥಳದಲ್ಲಿ ಒಬ್ಬರಿಗೊಬ್ಬರಿಗೆ ಭೇಟಿಯಾಗುವದು? ಬೆಂಗಳೂರು ರೈಲ್ ಗಂಟೆಗೆ 13 ಮೈಲ್. ಮೈಸೂರು ರೈಲ್ ಗಂಟೆಗೆ 12 ಮೈಲ್ ಮೇರೆ ನಡೆಯುವದು.

XI 15 ಯಮ್ಮೆಗಳು ತಿನ್ನುವ ಮೇವನ್ನು 18 ಕುದುರೆಗಳು ತಿನ್ನುವವು, 40 ಹಸುಗಳು 24 ಕುದುರೆಗಳು ತಿನ್ನುವ ತಿಂಡಿಯನ್ನು ತಿನ್ನುವವು. 70 ಕುರಿಗಳಿಗೆ 44 ಹಸುಗಳ ಮೇವು ಬೇಕಾಗುವದು. 86 ಕುರಿಗಳಿಗೆ 160 ಕುರಿಮರಿಗಳ ತಿಂಡಿಯನ್ನು ಕೊಡಬೇಕು. 5 ಕುರಿಮರಿಗಳ ಮೇವಿಗೆ 1 ರೂ. 8 ಆಣೆ ಖರೀದಿಯಾದರೆ 90 ಹಸುಗಳ ಮೇವಿಗೆ ಬೆಲೆಯೇನು?

XII ಒಬ್ಬನು ತನ್ನ ಮಗಳ ಮದುವೆಗೋಸ್ಕರ ವರ್ಷ 1 ಕ್ಕೆ ಶೇಕಡ 6 ರೂ. ಮೇರೆಗೆ 350 ರೂ. ಗಳನ್ನೂ, ತಿಂಗಳು 1 ಕ್ಕೆ ಶೇಕಡ $8\frac{1}{3}$ ಆಣೆ ಮೇರೆ 450 ರೂ, ಗಳನ್ನೂ ಒಂದೇದಿನ ಸಾಲ ತೆಗೆದುಕೊಂಡು ಸ್ವಲ್ಪಕಾಲದಮೇಲೆ 865 ರೂ, ಗಳನ್ನು ಕೊಟ್ಟು ಅಸಲು, ಬಡ್ಡಿ ಸಹ ತೀರಿಸಿದನು. ಹಾಗಾದರೆ ಬಡ್ಡಿಯನ್ನು ಎಷ್ಟುದಿನಕ್ಕೆ ಕೊಟ್ಟನು?

ಎಚ್. ಸೂರ್ಯನಾರಣಪ್ಪ.

ಕೂಚ್‌ಬೆಹಾರ್‌ರಾಜ್ಯ.

ಕೂಚ್‌ಬಿಹಾರ್‌ರಾಜ್ಯವು ಬಂಗಾಳಕ್ಕೆ ಉತ್ತರದಿಕ್ಕಿನಲ್ಲಿದೆ. ಈ ದೇಶದ ವಿಸ್ತೀರ್ಣ ೧೩೦೨ ಚದರಮೈಲ್. ಜನಸಂಖ್ಯೆ (೧೯೧೧ರಲ್ಲಿ) ೬೦೨೦೪೮. ರಾಜ್ಯದ ಉತ್ಪನ್ನ ೧೫ಲಕ್ಷ ರೂಪಾಯಿಗಳು. ಈ ದೇಶದಲ್ಲಿ ಹಲವು ಸಣ್ಣನದಿಗಳು ಹರಿಯುತ್ತವೆ. ಹಿಮಾಲಯದಿಂದ ಹೊಡೆದುಕೊಂಡುಬರುವ ಒಂದುಮಣ್ಣಿನಿಂದ ದೇಶವು ಸಾರವತ್ತಾಗಿದೆ. ಆದರೂ ಪೂರ್ವದಿಕ್ಕಿನಲ್ಲಿ ಕೆಲವು ಕಾನುಗಳುಂಟು. ವ್ಯವಸಾ

V ಒಂದು ತಾಮ್ರದ ಪಾತ್ರೆಯನ್ನು ಶೇಕಡಾ 7 ರೂಪಾಯಿಗಳ ಲಾಭಕ್ಕೆ ಮಾರಿದರೆ ಶೇಕಡಾ 12 ರೂ. ಗಳ ನಷ್ಟಕ್ಕೆ ಮಾರಿದರೆ ಬರುವದಕ್ಕಿಂತಲೂ $\frac{1}{8}$ ರೂ. ಗಳು ಹೆಚ್ಚು ಬರುವದು. ಅಸಲು ಖರೀದಿ ಎಷ್ಟು ?

VI 21 ಹಸುಗಳಿಗೂ, 54 ಕುದುರೆಗಳಿಗೂ 3700 ರೂ. ಗಳು ಮತ್ತು 31 ಹಸುಗಳಿಗೂ 20 ಕುದುರೆಗಳಿಗೂ 3516 ರೂ. ಆದರೆ 1 ಕುದುರೆಗೂ 1 ಹಸುವಿಗೂ ಬೆಲೆ ಯೇನು ?

VII ಟ್ಯ 1 ಕ್ಕೆ 64 ಪೌ, 17 ಷಿ, $7\frac{1}{2}$ ಪೆನ್ಸ್ ಮೇರೆ 147 ಟ್ಯ, 17 ಹಂ. 3 ಕ್ವಾ, 20 ಪೌಂ, 15 ಔನ್ಸ್ ಬೆಲೆಯನ್ನು ರೂಢಿಗಣಿತದ ಕ್ರಮದಿಂದ ಮಾಡಿ.

VIII A,B,C,D ಎಂಬುವರಿಗೆ 7500 ರೂ. ಗಳನ್ನು ಹಂಚಬೇಕು. ಹ್ಯಾಗಂದರೆ, A ಎಂಬುವನಿಗೆ 7 ಬಂದರೆ B ಗೆ 5 ಬರುವಂತೆಯೂ, B ಗೆ 4 ಬಂದರೆ C ಗೆ $4\frac{1}{2}$ ಬರುವಂತೆಯೂ, C 8 ಬಂದರೆ D ಗೆ $6\frac{1}{2}$ ಬರುವಂತೆಯೂ ಪ್ರತಿಯೊಬ್ಬರಿಗೂ ಹಂಚಿ.

IX ಬೆಂಗಳೂರಲ್ಲಿ A,B,C ಎಂಬ ಸಾಹುಕಾರರು ಒಂದು ಬಂಗಲೆಯನ್ನು ಒಂದು ಸಂವತ್ಸರಕ್ಕೆ 1050 ರೂ. ಬಾಡಿಗೆಗೆ ತೆಗೆದುಕೊಳ್ಳುವರು. ಈ ಬಂಗಲೆಯಲ್ಲಿ A ಯು ಒಂದು ಸಂವತ್ಸರ ವಾಸವಿಡುವನು. B ಯು 8 ತಿಂಗಳುಗಳು ವಾಸ್ತವಿರುವನು. C ಯು B ಇರುವ ಕಾಲದಲ್ಲಿ 4 ತಿಂಗಳುಗಳ ಕಾಲವಾಸ್ತವಿರುವನು. ಇವರಲ್ಲಿ ಯಾರ್ಯಾರು ಎಷ್ಟೆಷ್ಟು ಬಾಡಿಗೆಯನ್ನು ಕೊಡಬೇಕು ?

X (1) 43 ಅಡಿ, 9 ಅಂಗುಲ ಉದ್ದವಿರುವ ಒಂದು ಚಿಕ್ಕ ಮನೆಗೆ ಗಜಕ್ಕೆ 4 ಷಿ, $4\frac{1}{2}$ ಪೆನ್ನಿಯಂತೆ ಬಾಳುವ ಜಮುಖಾನವನ್ನು ಹಾಸಲು, 6 ಪೌ, 6 ಷಿ, 6 ಪೆ, ಬೇಕಾದರೆ ಚಿಕ್ಕ ಮನೆಯು ಅಗಲವೆಷ್ಟು ?

(2) ರಾಮನು ಮೈಸೂರಿಂದ ಬೆಳಿಗ್ಗೆ $10\frac{3}{4}$ ಗಂಟೆಗೆ ಬೆಂಗಳೂರಿಗೆ ಹೊರಡುವನು. ಕೃಷ್ಣನು ಬೆಂಗಳೂರಿಂದ ಪ್ರಾತಃಕಾಲ $7\frac{1}{2}$ ಗಂಟೆಗೆ ಬೆಂ

೧೦ಲಕ್ಷ ರೂಪಾಯಿಮೊಟ್ಟಸಿ ಹೊಸದಾಗಿ ಒಂದು ಅರಮನೆಯನ್ನು ಕಟ್ಟಸಿದಾರೆ. ಈ ಮಹಾರಾಜರ ಹೆಸರು ಶ್ರೀ॥ನಾರಾಯಣಭೂಪಬಹದೂರ್. ಇವರ ವಯಸ್ಸು ೩೬ ವರುಷಗಳ.. ಇವರು ೧೮೭೯ರಲ್ಲಿ ಕೇಶವಚಂದ್ರಸೇನರ ಮಗಳಾದ ಸುನೀತಿದೇವಿಯನ್ನು ಮದುವೆಯಾದರು. ಈ ವಿವಾಹದಿಂದಲೇ ಕಲ್ಕತ್ತಾ ಬ್ರಹ್ಮಸಮಾಜದಲ್ಲಿ ಎರಡು ಪಂಗಡಗಳಾದುವು.

ಆ ಕಾಲದಲ್ಲಿ ಹಿಂದೂದೇಶದ ಬ್ರಹ್ಮಸಮಾಜಕ್ಕೆ ಪ್ರಧಾನಾಧ್ಯಕ್ಷರಾಗಿದ್ದ ಕೇಶವಚಂದ್ರಸೇನನು ಬಹು ಪ್ರಯತ್ನಪಟ್ಟು ೧೮೭೨ರಲ್ಲಿ ಮದುವೆಯ ಶಾಸನವೊಂದನ್ನು ಏರ್ಪಡಿಸಿದರು. ಈ ಆಕ್ಟಿನಪ್ರಕಾರ ಮದುವೆಯಾಗತಕ್ಕ ವರನವಯಸ್ಸು ೧೮, ಮದುವೆಯು ಹೆಣ್ಣಿನವಯಸ್ಸು ೧೪ ಇವುಗಳಿಗಿಂತ ಕಡಮೆಯಾಗಿರಬಾರದು; ವಧೂವರರು ೨೦ ವರುಷಕ್ಕಿಂತ ಕಡೆಮೆಯವಾಗಿದ್ದರೆ ತಂದೆತಾಯಿಗಳ ಅಥವಾ ಪೋಷಕರ ಲಿಖಿತಮೂಲಕವಾದ ಅಪ್ಪಣೆಯಿರಬೇಕು; ಜಾತಿಭೇದವಿಲ್ಲದೆ ಯಾವ ಜಾತಿಯವರೇ ಆಗಲಿ ಪರಸ್ಪರ ವಿವಾಹಮಾಡಿಕೊಳ್ಳಬಹುದು. ಹೆಂಡತಿ ಬದುಕಿರುವಾಗ ಗಂಡನಾಗಲಿ, ಗಂಡನು ಬದುಕಿರುವಾಗ ಹೆಂಡತಿಯಾಗಲಿ ಪುನಃ ಮದುವೆಮಾಡಿಕೊಳ್ಳಕೂಡದು; ಅವರಲ್ಲಿ ಒಬ್ಬರ ಮರಣಾನಂತರ ಯಾರೇ ಆಗಲಿ ಪುನರ್ವಿವಾಹಮಾಡಿಕೊಳ್ಳಬಹುದು.

ಸರ್ ೧೮೭೮ನೇ ವರುಷದ ಪ್ರಾರಂಭದಲ್ಲಿ ಕೇಶವಚಂದ್ರಸೇನರ ಮಗಳನ್ನು ಕೂಚ್‌ಬಿಹಾರದ ಮಹಾರಾಜರಿಗೆ ಕೊಟ್ಟು ಮದುವೇಮಾಡಬೇಕೆಂದು ನಿರ್ಣಯವಾಯಿತು. ಆಗ ಹುಡುಗಿಗೆ ೧೪ ವರುಷಗಳು ತುಂಬಿರಲಿಲ್ಲ; ಮಹಾರಾಜರವಯಸ್ಸು ೧೬ಕ್ಕಿಂತಲೂ ಕಡೆಮೆ, ಸಮಾಜದ ನಾಯಕನಾಗಿ, ಮೇಲೆಹೇಳಿದ ವಿವಾಹಶಾಸನಕ್ಕೆ ಮೂಲಕಾರಣನಾದವನೇ ಇಂತಹ ಮದುವೆಗೆ ಒಪ್ಪಿಕೊಳ್ಳುವ್ರದು ಯೋಗ್ಯವಲ್ಲವೆಂತಲೂ, ವಧೂವರರು ಆ ಶಾಸನದಲ್ಲಿ ವಿಧಿಸಲ್ಪಟ್ಟಂತೆ ಪ್ರಾಪ್ತವಯಸ್ಕರಾಗದ್ದರಿಂದ ಆ ವಿವಾಹವು ವಿಧಿಯಂತೆ ನಡೆಯಲ್ಪಟ್ಟಿಲ್ಲವೆಂತಲೂ, ವರನು ಬ್ರಹ್ಮಸಮಾಜಕ್ಕೆ ಸೇರದ ಹಿಂದುವಾದ್ದರಿಂದ ವಿಗ್ರಹಾರಾಧನೆಯು ಕರ್ಮಗಳಿಂದ ವಿವಾಹ ನಡಿಸಲ್ಪಡುವ್ರದೆಂತಲೂ ಕುಲಾಚಾರವನ್ನನುಸರಿಸಿ ಮಹಾರಾಜನು ಬಹುಭಾರ್ಯಾಪರಿಗ್ರಹಮಾಡಬಹುದೆಂತಲೂ ಆಕ್ಷೇಪಿಸಿ, ಬ್ರಹ್ಮಸಮಾಜದ ಸಾಮಾಜಿಕರಲ್ಲಿ ಪ್ರಮುಖರಾದ ಅನೇಕರು ಈ ಮದುವೆ ನಡೆಯಕೂಡದೆಂದು ನಿಷೇಧಿಸಿದರು. ಅದಕ್ಕೆ ಕೇಶವಸೇನನು ಇದು ವಿವಾಹ

ಯಕೊಡುತ್ತಿರುವ ನೆಲದಲ್ಲಿ ಮುಕ್ಕಾಲುಭಾಗದಲ್ಲಿ ಬತ್ತ ಬೆಳೆಯುವುದು. ಉಳಿದುದರ ಲ್ಲಿ ಇತರ ಧಾನ್ಯಗಳೂ ಹೊಗೆಯುಸೊಪ್ಪು ಬೆಳೆಯಿಸಲ್ಪಡುವವು.

ಈ ದೇಶದಲ್ಲಿ ರಾಜಧಾನಿಯೊಂದು ಹೊರತಾಗಿ ಪಟ್ಟಣಗಳಾಗಲಿ ಹಳ್ಳಿಗ ಳಾಗಲಿ ಇಲ್ಲ. ಜನರೆಲ್ಲರೂ ತಮ್ಮ ತಮ್ಮ ಹೊಲಗಳಲ್ಲಿಯೂ ತೋಟಗಳಲ್ಲಿಯೂ ಮನೆಕಟ್ಟಿಕೊಂಡು ನಾಸವಮಾಡುವರು. ಈ ದೇಶಕ್ಕೆ ಪೂರ್ವಕಾಲದಲ್ಲಿ ಕಾಮರೂಪ ವೆಂಬ ಹೆಸರಿತ್ತು. ಇಲ್ಲಿನ ರಾಜವಂಶಸ್ಥರಲ್ಲಿ ಪ್ರಸಿದ್ಧನಾದ ನರನಾರಾಯಣನೆಂಬುವ ನು ೧೫ನೆ ಶತಮಾನದಲ್ಲಿ ಆಳುತಿದ್ದನು. ಆತನು ಕಾಮರೂಪದೇಶವನೆಲ್ಲ ಜಯಿಸಿ, ಆಸ್ಸಾಮಿನಲ್ಲಿ ಅನೇಕ ದೇವಾಲಯಗಳನ್ನು ಕಟ್ಟಿಸಿ, ಅವುಗಳಲ್ಲಿ ತನ್ನ ಹೆಸರಿ ನ ಹಲವು ಶಾಸನಗಳನ್ನು ಕೆತ್ತಿಸಿದನು. ಈಚೆಗೆ ಮುಸಲ್ಮಾನರ ಆಳಿಕೆಯಲ್ಲಿ ಈ ದೇ ಶವು ಸ್ವಾತಂತ್ರ್ಯವನ್ನು ಕಳೆದುಕೊಂಡು ಅನೇಕ ತೊಂದರೆಗಳಿಗೆ ಸಿಕ್ಕಿತು,

೧೮೨೬ನೆ ಇಸವಿಯಲ್ಲಿ ಈ ದೇಶದ ರಾಜನು ಕಾಲನಾಗುವಾಗ್ಗೆ ಹ ತ್ತುತಿಂಗಳ ವಯುಸ್ಸಿನ ಮಗನೊಬ್ಬನು ಮಾತ್ರವಿದ್ದನು. ಆದುದರಿಂದ ಅವನ ಬಾ ಲ್ಯದಶೆಯಲ್ಲಿ ಇಂಗ್ಲಿಷರು ರಾಜ್ಯವನ್ನು ವಶಪಡಿಸಿಕೊಂಡು, ಅದನ್ನು ಆಳಲಿಕ್ಕೆ ತಕ್ಕ ಅಧಿಕಾರಿಗಳನ್ನೇರ್ಪಡಿಸಿ, ದೇಶವನ್ನು ಉತ್ತಮಸ್ಥಿತಿಗೆ ತಂದರು. ಆ ಕಾಲದಲ್ಲಿ ಜವಿಾ ನುಗಳೆಲ್ಲ ಅಳತೆಮಾಡಲ್ಪಟ್ಟು ಕ್ರಮವಾದ ಕಂದಾಯ ಹಾಕೋಣವಾಯಿತು, ಪೊ ಲೀಸಿನ ಏರ್ಪಾಡು, ಪಾಠಶಾಲೆಗಳು, ಒಳ್ಳೇ ಸೇತುವೆಗಳು, ರಸ್ತೆಗಳು, ಪೋಸ್ಟಾಫೀ ಸುಗಳು ತಕ್ಕಹಿಟಪಾಲು ಇವುಗಳೆಲ್ಲಾ ಏರ್ಪಟ್ಟವು. ಆ ರಾಜಕುಮಾರನಿಗೆ ಪಾಟ್ನಾ ನಗರದಲ್ಲಿ ಕೆಲವುದಿನ ಇಂಗ್ಲಿಷ್ ವಿದ್ಯಾಭ್ಯಾಸಮಾಡಿಸಿ, ತರುವಾಯ ಕಲ್ಕತ್ತೆಯಲ್ಲಿ ರಾಜಧಾನಿಯ ಶಾಸ್ತ್ರಪಾಠಶಾಲೆಯಲ್ಲಿ ಮೂರುವರುಷಕಾಲ ಉಪನ್ಯಾಸಗಳನ್ನು ಕೇ ಳಲು ಕಳುಹಿಸಲಿಕ್ಕೆ ಏರ್ಪಾಟಾಯಿತು. ೧೮೪೫ರಲ್ಲಿ ಈತನು ಮೊದಲನೆಯ ಸಲ ಇಂಗ್ಲೆಂಡಿಗೆ ಹೋಗಿದ್ದನು. ೧೮೫೮ರಲ್ಲಿ ಪ್ರಾಪ್ತವಯಸ್ಕನಾಗಲು ಈತ ನಿಗೆ ಪಟ್ಟಾಭಿಷೇಕವಾಯಿತು. ಈಚೆಗೆ ಮಹಾರಾಜನೆಂಬ ಬಿರುದುಕೊಡಲ್ಪಟ್ಟಿತು.

ಈತನು ಹೊಸದಾಗಿ ರಾಜಮಾರ್ಗಗಳನ್ನು ಮಾಡಿಸಿ, ಪಾಠಶಾಲೆಗಳನ್ನೇರ್ಪಡಿಸಿ, ದೇಶವನ್ನು ಒಳ್ಳೇಸ್ಥಿತಿಗೆ ತರುತ್ತಿದಾನೆ. ಇವರ ರಾಜಧಾನಿ ಕೂಚ್‌ಬಿಹಾರ್ ಈ ಪಟ್ಟಣದಲ್ಲಿ ಹತ್ತುಸಾವಿರ ಪ್ರಜೆಗಳಿದಾರೆ. ಇದರಲ್ಲಿ ಒಂದು ಹೈಸ್ಕೂಲೂ, ಹಲವು ಇತರ ಪಾಠಶಾಲೆಗಳೂ, ಒಂದು ಕಲಾಶಾಲೆಯೂ ದೊಡ್ಡವೈದ್ಯಶಾಲೆಯೂ ಇವೆ.

ಗ್ಲೆಂಡಿನಿಂದ ಬಂದರು. ಈ ದಂಪತಿಗಳು ಇಂಗ್ಲೆಂಡಿನಿಂದ ಬಂದಮೇಲೆ ತಮಗೆ ಜನಿಸಿದ ಶಿಶುವಿಗೆ "ವಿಕ್ಟರ್" ಎಂದು ಮಹಾರಾಣಿಯವರ ಹೆಸರನ್ನಿಟ್ಟರಂತೆ

ಹುಲಿ ಬೇಟೆ.

ಅಮರಾವತಿ ಎಂಬುವುದು ಒಂದು ಪಟ್ಟ[illegible]
ನೆಂಬ ಒಬ್ಬ ದೊರೆ. ಅವನಿಗೆ ಅಮಲಸಿಂಹನೆಂಬ ಒಬ್ಬ ಮಂತ್ರಿಯೂ, ಅಮರಪುತ್ರನೆಂಬ ಒಬ್ಬ ಮಗನೂ ಇದ್ದರು. ಮಂತ್ರಿಯು ಇಷ್ಟಾನುಸಾರವಾಗಿ ಅಮರಪುತ್ರನನ್ನು ಒಬ್ಬ ಗುರುವಿನಲ್ಲಿ ಬಿಟ್ಟು ಬೇಕಾದ ವಿದ್ಯೆಯನ್ನು ಕಲಿಸಿದನು ತನಗೆ ತಿಳಿದ ವಿದ್ಯೆಯನ್ನೆಲ್ಲಾ ಗುರುವು ಆ ಅಮರಪುತ್ರನಿಗೆ ಕಲಿಸಿದಮೇಲೆ ಒಂದುದಿನ ಆ ದೊರೆಯುಮಗನನ್ನು ಕರೆದುಕೊಂಡು ದೊರೆಯ ಓಲಗಕ್ಕೆ ಬಂದನು. ಅಮರಪುತ್ರನು ತಂದೆಯನ್ನು ನೋಡಿದೊಡನೆ ಅವನಿಗೆ ನಮಸ್ಕಾರ ಮಾಡಿ, ಮಂತ್ರಿಗೆ ವಂದಿಸಿ ಸ್ವಲ್ಪ ದೂರದಲ್ಲಿ ಮರ್ಯಾದೆಯಿಂದ ನಿಂತನು. ದೊರೆಯು ಗುರುವನ್ನು ಮರ್ಯಾದೆಯಿಂದ ಉಪಚರಿಸಿ, ಮಗನನ್ನು ಆದರಿಸಿ ಕುಳ್ಳಿರಿಸಿಕೊಂಡನು. ನಂತರ ಒಬ್ಬರಿಗೊಬ್ಬರು ಕ್ಷೇಮಲಾಭವನ್ನು ವಿಚಾರಿಸಿದಮೇಲೆ, ದೊರೆಯು ಗುರುವನ್ನು ನೋಡಿ, "ತಾವು ಬಂದುದೇನು. ಅಮರಪುತ್ರನೇನಾದರು ತಮಗೆ ಅಪಚಾರ ಮಾಡಿದನೆ? ಅಥವಾ ತಾವು ಅಮರಪುತ್ರನಲ್ಲೇನಾದರೂ ದೋಷವನ್ನು ಎಣಿಸೋಣವಾಯಿತೆ? ಸಂಕೋಚಪಡದೆ ತಿಳಿಸಬೇಕೆನ್ನಲು, ಗುರುವು ನಗುತಾ "ಅಮರಪುತ್ರನು ಇಷ್ಟುಸ್ವಲ್ಪಕಾಲದಲ್ಲೇ ನನ್ನ ವಿದ್ಯೆಯನ್ನೆಲ್ಲಾ ಕಲಿತು, ತಮ್ಮ ಮನಸ್ಸನ್ನು ಸಂತೋಷಪಡಿಸಲಿಕ್ಕೆ ಬಂದಿರುತ್ತಾನೆ" ಎಂದನು. ಆಗ ರಾಜನು ಆ ಸಭೆಯಲ್ಲಿಯೇ ಅಮರಪುತ್ರನ ವಿದ್ಯೆ, ಬುದ್ಧಿಯನ್ನು ಪರೀಕ್ಷಿಸಿ, ಸಂತೋಷಪಟ್ಟು ಗುರುವಿಗೆ ಮತ್ತೆ ವಂದಿಸಿ, ಶಾಲು, ತೋಡೆ ಮುಂತಾದ್ದನ್ನು ಕೊಟ್ಟು, ಮಾರನೆಯದಿವಸ ಅಮರಪುತ್ರನ ಬಿಲ್ಲುವಿದ್ಯೆಯನ್ನು ನೋಡಲು

ಪೂತ್ರವಿಲ್ಲದೆ ಮುಖ್ಯವಾದುದಂತಲೂ, ಪರನು ಬ್ರಹ್ಮಸಮಾಜ ಮತಾಭಿವೃದ್ಧಿಯೆಂತಲೂ ವಿವಾಹದಲ್ಲಿ ವಿಗ್ರಹಾರಾಧಕರ ಆಚಾರಗಳೊಂದಕ್ಕೂ ಅವಕಾಶವಿಲ್ಲವೆಂತಲೂ, ಈ ವಿವಾಹನಡೆಯುವುದು ಈಶ್ವರಾಜ್ಞೆಯೆಂತಲೂ, ಹೇಳಿ ಮದುವೆ ಮಾಡಿಸಿಬಿಟ್ಟನು. ಆದರೆ ಆ ದೇವೇಂದ್ರಸೇನನ ಅಪ್ಪಣೆಯಿಲ್ಲದೆಯೇ ಮದುವೆಯಲ್ಲಿ ವಿಗ್ರಹಾರಾಧಕರ ಆಚಾರಗಳೆಲ್ಲ ನಡೆದುವು. ಮದುವೆಯಾದಮೇಲೆ ಬ್ರಹ್ಮಸಮಾಜದ ಮುಖ್ಯಸ್ಥರಲ್ಲಿ ಹಲವರು ಈತನ ಸಂಬಂಧವನ್ನು ಬಿಡಿಸಿಕೊಂಡು, ಹಿಂದೂ ಬ್ರಹ್ಮಸಮಾಜವನ್ನು ಬಿಟ್ಟು ಸಾಧಾರಣ ಬ್ರಹ್ಮಸಮಾಜವೆಂಬ ಹೆಸರಿನಿಂದ ಮತ್ತೊಂದು ಸಮಾಜವನ್ನು ಸ್ಥಾಪಿಸಿಕೊಂಡರು. ೧೮೭೫ರಲ್ಲಿ ಈ ಮದುವೆಯಾದಮೇಲೆ ಮಹಾರಾಜರು ಎರಡನೆಯಸಲ ಇಂಗ್ಲೆಂಡಿಗೆ ಹೋಗಿದ್ದರು.

ಸ್ವ ೧೮೭೭ರಲ್ಲಿ ಶ್ರೀ ವಿಕ್ಟೋರಿಯಾಚಕ್ರವರ್ತಿನಿಯವರಿಗೆ ೫೦ ವರುಷಗಳು ಅವಿಚ್ಛಿನ್ನವಾಗಿ ರಾಜ್ಯಪರಿಪಾಲನೆಮಾಡಿದ್ದಕ್ಕಾಗಿ ಹರಿಗಿದ ಜೂಬಿಲಿಮಹೋತ್ಸವಕ್ಕೆ ಈ ಮಹಾರಾಜರವರು ತಮ್ಮ ರಾಣಿಯವರೊಂದಿಗೆ ಇಂಗ್ಲೆಂಡಿಗೆಹೋಗಿ ಶ್ರೀಮಹಾರಾಜ್ಞಿಯವರ ಸಂದರ್ಶನವನ್ನುಮಾಡಿ, ಅವರಿಂದ ಹೆಚ್ಚಾದ ಸನ್ಮಾನವನ್ನು ಪಡೆದರು. ಇದುವರೆಗೆ ಈ ದೇಶಪರಿಪಾಲಕರಾದ ಮಹಾರಾಜರು ಯಾರೂ ಇಂಗ್ಲೆಂಡಿಗೆ ವಿಶೇಷವಾಗಿ ಹೋಗಿಬಾರದೆ ಇರುವಲ್ಲಿ ಕೂಚ್‌ಬಿಹಾರದ ಮಹಾರಾಜರೇ ಹೊಟ್ಟಮೊದಲು ತಮ್ಮ ರಾಣಿಯವರನ್ನು ಕರೆದುಕೊಂಡು, ಸಮುದ್ರದಮೇಲೆ ಪ್ರಯಾಣಮಾಡಿ ಇಂಗ್ಲೆಂಡಿಗೆ ಹೋಗಿ, ಗೋಷಾಪದ್ಧತಿಯನ್ನು ಬಿಡುವುದಕ್ಕೆ ಅವಕಾಶವನ್ನು ಕೊಟ್ಟದ್ದು ಆ ದಂಪತಿಗಳು ವಿಲಾಯತಿಯಲ್ಲಿ ಎಲ್ಲರ ಆದರಣೆಗೆ ಪಾತ್ರರಾಗಲು ಕಾರಣವಾಯಿತು.

ಕೂಚ್‌ಬಿಹಾರ್ ರಾಣಿಯಾದ ಸುನೀತಿದೇವಿಯು ೧೮೬೫ರಲ್ಲಿ ಜನಿಸಿದರು. ಈಕೆ ತನ್ನ ಮಕ್ಕಳೊಂದಿಗೆ ೧೮೮೩ನೇ ಏಪ್ರಿಲಿನಲ್ಲಿ ಇಂಗ್ಲೆಂಡಿಗೆ ಹೋಗಿ ಎರಡನೆಯ ಶ್ರೀ ವಿಕ್ಟೋರಿಯಾಚಕ್ರವರ್ತಿನಿಯವರ ಸಂದರ್ಶನವಾಡಿ, ಅವರಿಂದ ಸನ್ಮಾನವನ್ನಿಟ್ಟು, ಅದೇ ಡಿಸೆಂಬರಿನಲ್ಲಿ ಸುರಕ್ಷಿತನಾಗಿ ತಮ್ಮ ದೇಶಕ್ಕೆ ಬಂದುಸೇರಿದರು. ಈಕೆ ಇಂಗ್ಲೀಷನ್ನು ದಾರಾಳವಾಗಿ ಮಾತನಾಡಲಿಕ್ಕೂ, ಓದಲಿಕ್ಕೂ ಬರೆಯಲಿಕ್ಕೂ ಕಲಿತಿದ್ದಾರೆ. ಇವರು ಸ್ವದೇಶವನ್ನು ತಲಪಿದ [illegible]

ದಿದ್ದರು. ಅವರಪುತ್ರನು ವಾರನೆಯುಬೆಳಿಗ್ಗೆ ಬೇಟೆಗೆ ಬರುವನೆಂದು ಕಾಡಿನಲ್ಲಿದ್ದ ಬೇಡರೆಲ್ಲರೂ ಬಹಳ ಸಾಹಸದಿಂದ ಸಿಕ್ಕಿದಷ್ಟು ಹುಲಿಗಳನ್ನು ಸಿದ್ಧಪಡಿಸಿರಬೇಕೆಂದು ಕಾಡೆಲ್ಲಾ ಹುಡುಕಾಡುತ್ತಿದ್ದರು. ವಾರನೆಯ ಬೆಳಿಗ್ಗೆ ದೊರೆ ಮಂತ್ರಿ, ಅವರಪುತ್ರ ಅವನ ಗುರುವು ಸೊಗಸಾದ ಕುದುರೆಗಳನ್ನೇರಿಕೊಂಡು ಬಾಣ ಬಿಲ್ಲುಗಳನ್ನು ತೆಗೆದು ಕೊಂಡು ಕಾಡನ್ನು ಹೊಕ್ಕು, ಬಲೆಗೆ ಸಿಕ್ಕಿಹಾಕಿದ ಹುಲಿಯನ್ನು ಹೊಡೆಯುವುದು ಮೇಲಲ್ಲವೆಂದು, ಹುಲಿಗಳಿರತಕ್ಕ ಗವಿಗಳ ಕಡೆಗೆ ನುಗ್ಗಿ, ಹೊದರಿನಲ್ಲಿ ಅಡಗಿಕೊಂಡಿದ್ದ ಹುಲಿಗಳನ್ನು ಕೆಣಕಿ, ಅವುಗಳು ಮೇಲೆ ಬೀಳಲಿಕ್ಕೆ ಹಾರಿದಾಗ ಅವರಪುತ್ರನೇ ಮುಂದಾಗಿ ಬಾಣಬಿಟ್ಟು, ಸೀಳಿಹಾಕುತಿರಲು, ಕಾಡಿನಲ್ಲಿದ್ದ ಬೇಡರೆಲ್ಲರೂ ಕೊಂಬು ದೊಣ್ಣೆಗಳನ್ನು ನಿಂತಲ್ಲೆ ಬಿಟ್ಟು, ಬೆರಗಾಗಿ ಮೂಗಿನಮೇಲೆ ಬೆಟ್ಟು ಇಟ್ಟುಕೊಂಡರು. ದೊರೆಯು ಮಗನನ್ನು ಬಾಚಿ ತಬ್ಬಿಕೊಂಡನು; ಮಗನು ಗುರುವಿನ ಪಾದಕ್ಕೆರಗಿದನು, ಮಂತ್ರಿಯು ಜಯಜಯು ಎಂದು ಹೊಗಳುತಿದ್ದನು.

ಮಾವಿನಮರವನ್ನು ಕುರಿತು.

೧ ಮಾವಿನಮರವು ಬೆಳೆಯುವ ಸ್ಥಳ.—ಮಾವಿನಮರ ಇದು ಇಂಡಿಯಾ ಮತ್ತು ಎಷ್ಯಾಖಂಡದ ಪೂರ್ವಭಾಗದಲ್ಲಿ ಬೆಳೆಯುತ್ತದೆ. ಯಾವ ಸ್ಥಳದಲ್ಲಿ ಹೆಚ್ಚಾಗಿ ಬೆಳೆಯುತ್ತದೆ ಅಂದರೆ ಇಂಡಿಯಾದೇಶದಲ್ಲಿ.

೨ ವರ್ಣನೆ.—ಮಾವಿನಗಿಡದಲ್ಲಿ ಕಶೀಮಾಡದ ಗಿಡವು ೩೦-೪೦ ಅಡಿಗಳ ಎತ್ತರ ಬೆಳೆಯುತ್ತದೆ. ಕಶೀಮಾಡಿದಗಿಡವು ೧೦-೧೫ ಅಡಿ ಬೆಳೆಯುತ್ತದೆ. ಇದರ ಎಲೆಯು ಅಗಲವಲ್ಲಿ ಚಿಕ್ಕದಾಗಿಯೂ ಉದ್ದವಾಗಿಯೂ ಹಸುರುಬಣ್ಣವಾಗಿಯೂ ಉದ್ದವಾದ ತೊಟ್ಟು ಕಡ್ಡಿಗಳಿಂದ ಕೂಡಿ ಮಿಂಚುತ್ತಲೂ ಇರುತ್ತದೆ. ಇದರ ಹೂವ್ವುಗಳು ಬಿಳಿಯ ಗೊಂಚಲುಗಳಾಗಿರುವ ಬಿಡುತ್ತದೆ. ಒಂದೊಂದು ಗೊಂಚಲಿನಲ್ಲಿ ೧೫-೨೦ ಹಣ್ಣುಗಳು ಬಿಡುತ್ತದೆ. ಇವರ ಕೊಂಬೆಗಳು ಬಲವಾಗಿರುವದಿಲ್ಲ. ಇದರ ಕೊಂಬೆ

ಹತ್ತರಿದ್ದ ಕಾಡಿಗೆ ಹೋಗಬೇಕೆಂತಲೂ, ಅಲ್ಲಿ ಹುಲಿ ಬೇಟೆಯಾಡಬೇಕೆಂತಲೂ ನಿರ್ಧರಿಸಿದನು. ಒಡನೆಯೇ ಮಂತ್ರಿಯನ್ನು ಬೇಟೆಗಾಗಿ ಹೊರಡಿಸಲು ಮೂರನೆಯ ದಿನ ದೊರೆಯು ಬರುವುದರೊಳಗಾಗಿ ಹುಲಿಗಳು ಸಿಕ್ಕಬೇಕೆಂದು ಅವರು ನಾನಾ ಪ್ರಯತ್ನವನ್ನು ಮಾಡಿದರು. ಒಂದುಕಡೆ ಕಾಡುಜಲುಗಿಡ ಬಿದರಮಿಳೆ ಇರುವಕಡೆ ನಾಲ್ಕಾರು ಕಾವಿಗಳನ್ನು ಕಟ್ಟಿದರು. ಇನ್ನೊಂದು ದೊಡ್ಡಮರದ ಕೆಳಗೆ ಒಂದು ಕಟ್ಟಿ ಇರಲು, ಹುಲಿಯು ನೀರು ಕುಡಿಯಲಿಕ್ಕೆ ಅಲ್ಲಿಗೆ ಬರುವುದೆಂದು, ಮರದ ನೆರಳಲ್ಲಿ ಬೋನನ್ನು ಇಟ್ಟು, ಬೋನನ್ನು ಸೊಪ್ಪು ಸೊದೆಯುಂದ ಮುಚ್ಚಿ, ಬೋನಿನಲ್ಲಿ ಜಿಂಕೆಯನ್ನು ಕಟ್ಟಹಾಕಿ ಬೋನಿನ ಬಾಗಿಲನ್ನು ಮೇಲಕ್ಕೆತ್ತಿ, ಮರದ ಕೊಂಬೆಗೂ ಬಾಗಿಲಿಗೂ ಹಗ್ಗವನ್ನು ಕಟ್ಟಿ, ಹುಲಿಯು ಬಂದು ಜಿಂಕೆಯನ್ನು ಎಳೆದೊಡನೆ ಬಾಗಿಲು ಬಿದ್ದು ಹುಲಿಯು ಸಿಕ್ಕಿಹೋಗುವಂತೆ ಮಾಡಿದ್ದರು. ಮತ್ತೆ ಕೆಲವು ಕಡೆಯಲ್ಲಿ ಬಲವಾದ ಬಲೆಗಳನ್ನು ಬೀಸಿ, ಬಲೆಯು ಮುಖ್ಯವಲ್ಲಿ ಪದನವನ್ನು ಸೇರಿಸಿದ್ದರು. ದೊಡ್ಡ ದೊಡ್ಡ ಮರಗಳ ನೆರಳಲ್ಲಿ, ತಂಪಾಗಿರುವಕಡೆ ಒಂದು ವಿಧವಾದ ಅಂಟನ್ನು ತಯಾರು ಮಾಡಿ, ಅಲ್ಲಿ ಉದಿರಿದ್ದ ದೊಡ್ಡದೊಡ್ಡ ಎಲೆಗಳಿಗೆ ಹಚ್ಚಿ, ಆ ಎಲೆಗಳನ್ನು ಹರಡಿದ್ದರು ಹುಲಿಯು ಆ ನೆರಳಿಗೆ ಬಂದೊಡನೆ ಕಾಲಿಗೆ ಆ ಎಲೆಗಳು ಅಂಟುವುವು. ಕಾಲಿನ ಪಂಜದಲ್ಲಿ ಎನ್ನಾದರೂ ಸ್ವಲ್ಪ ತಗಲಿಕೊಂಡರೆ ಒಡನೆಯೇ ಅವನ್ನು ತೆಗೆದುಹಾಕುವುದು ಹುಲಿಯ ಪದ್ಧತಿ. ಎಲೆಗಳು ಹತ್ತಿಕೊಂಡರೆ ಎಲೆಗಳನ್ನು ಉದರಿಸಲು ಮುಖದಿಂದ ಪ್ರಯತ್ನಿಸಿಕೊಳ್ಳಲಿಕ್ಕೆ ಹೋಗುವುದು. ಆಗ ಮುಖಕ್ಕೂ ವಿಶೇಷವಾಗಿ ಎಲೆಗಳು ಅಂಟಿಕೊಳ್ಳುವುದು. ಹುಲಿಯು ನಿಶ್ಶೆಯು ಬಹು ಸೂಕ್ಷ್ಮ. ವಿಶೇಷ ಅಂಟಿಕೊಂಡೊಡನೆಯೇ ಹುಲಿಗೆ ಕಚಕುಳಿ ಇಟ್ಟಂತೆಯಾಗಿ, ತಲೆಯನ್ನು ಒದರುವುದು; ಆಗ ತಲೆಗೆಲ್ಲಾ ಎಲೆಗಳು ಅಂಟುಕೊಳ್ಳುವುವು. ಹುಲಿಯು ರೇಗಿಕೊಂಡು, ಅಬ್ಬರಿಸಿ ಬಿದ್ದು ಹೊರಳಲಿಕ್ಕೆ ಪ್ರಯತ್ನಿಸುವುದು. ಮೈ, ಕಣ್ಣು ಎಲೆಗಳಿಂದ ಮುಚ್ಚಿಕೊಂಡು, ಕಣ್ಣು ಕಾಣದೆ ಹೇಗಾಡುತಿರುವಾಗ, ನೋಡಿಕೊಂಡಿದ್ದು ಸುತ್ತಲೂ ಬಲೆಯೊಡ್ಡುವುದು. ಆಗಬಲೇಲಿ ಸಿಕ್ಕಿಸಿಕೊಂಡು ಹೊಡಿಯುವುದು ಇಂಥಾ ಶಿಕಾರಿಗೆ ಸಿದ್ಧಪಡಿಸಿಕೊಂಡಿದ್ದರು. ಇನ್ನೊಂದುಕಡೆಯಲ್ಲಿ ಯಾವಾಗಲೂ ಹುಲಿ ಸಂಚಾರವಿರುವ ಸ್ಥಳವನ್ನು ನೋಡಿ, ದೊಡ್ಡಮರಕ್ಕೆ ಮೇಲುಗಡೆಯಲ್ಲಿ ಅಟ್ಟಳಿಯನ್ನು ಕಟ್ಟಿ, ಸ್ವಲ್ಪ ದೂರದಲ್ಲಿ ಇನ್ನೊಂದು ಮರದ ಬುಡಕ್ಕೆ ಕುರಿಯನ್ನು ಕಟ್ಟಿ, ಹುಲಿ ಬರುವುದನ್ನೇ ಕೆಲವರು ಕಾ

ಬಣ್ಣ ಮಾಡುತ್ತಾರೆ. ಹಿಂಡುಹುನಗಳು ಇದರ ಎಲೆಯನ್ನು ಮದುವೆ ಮುಂಜಿ ಮುಂತಾದ ಶುಭಾಶುಭ ಕೆಲಸಗಳಿಗೆ ಇವನ್ನು ತೋರಣಮುಂತಾದ್ದಕ್ಕೆ ಉಪಯೋಗಿಸುತ್ತಾರೆ. ಇದರ ರೆಂಬೆಗಳು ಸೌದೆಗೂ ಉಪಯೋಗಿಸುತ್ತಾರೆ. ಇದರ ಮರವನ್ನು ತೊಲೆ ಮತ್ತು ಮನೆಸಾಮಾನುಗಳಿಗೆ ಉಪಯೋಗಿಸುತ್ತಾರೆ, ಮತ್ತು ಈದೇಶದ ನದಿಗಳನ್ನು ದಾಟುವಾಗ ಉಪಯೋಗಿಸೆಲ್ಪಡುವ ದೋಣಿಯು ಈ ಮರದಿಂದ ಮಾಡಲ್ಪಡುತ್ತದೆ ಇದರ ಗಾಟೆಯಲ್ಲಿ ಬೀಜವಿರುತ್ತದೆ. ಅದನ್ನು ಉದುಶಂಕೆ ಭೇದಿ ಮುಂತಾದ ರೋಗಗಳಿಗೆ ನೀರಿನಲ್ಲಿ ತೇದು ಔಷಧವಾಗಿ ಉಪಯೋಗಿಸುತ್ತಾರೆ. ಒಣಗಿಸಿರುವ ಹುಳಿಕಾಯಿಗಳ ಚೂರುಗಳನ್ನು ಹುಣಸೆಹಣ್ಣಿಗೆ ಬದಲಾಗಿ ಉಪಯೋಗಿಸುತ್ತಾರೆ. ಇದರಲ್ಲಿ ರಸಪುರಿ, ಬಾದಾಮಿ, ಅಮಿನಿ, ಸುಲ್ತಾನ್‌ಲಡ್ಡು, ಮುಲ್‌ಗೋವಾ, ಕರಿಮಾವು, ಸಕ್ಕರಗುಟ್ಲಿ, ಜೀರಿಗೆಮಾವು ಎಂಬದಾಗಿ ಅನೇಕತರಹಗಳುಂಟು.

ಗೋವಿಂದಮ್ಮ,
ರನೇಕ್ಲಾಸ್ ಚಾಮರಾಜಪೇಟೆ,
ವೆ. ವೆ. ಸ್ಕೂಲ್, ಮೈಸೂರು.

ಸೂಚನೆಗಳು ಮತ್ತು ಸಮಾಚಾರಗಳು.

ಕೋಲಾರದ ಹೈಸ್ಕೂಲು ಸಹಾಯೋಪಾಧ್ಯಾಯರಾದ ವೆ॥ ಕೃಷ್ಣಸ್ವಾ ಮೈಯಂಗಾರ್ ಎಂ. ಎ. ಯವರಿಗೆ ಬೆಂಗಳೂರು ಸೆಂಟ್ರಲ್ ಕಾಲೇಜಿಗೆ ಹಾಲಿ ಇರ ತಕ್ಕ ತಲಬಿನಮೇಲೆಯೇ ವರ್ಗಾಯಿಸಲ್ಪಟ್ಟಿರುತ್ತಾರೆ.

ಬೆಂಗಳೂರು ಸೆಂಟ್ರಲ್ ಕಾಲೇಜು ಸಹಾಯೋಪಾಧ್ಯಾಯರಾದ ವೆ॥ ವಿ. ಲಕ್ಷ್ಮಣಯ್ಯ ಬಿ. ಎ. ಯವರು ಚಿತ್ರದುರ್ಗದ ಹೈಸ್ಕೂಲು ಹೆಡ್ ಮಾಸ್ಟರ ನ್ನಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ.

ಯನ್ನು ಹಿಡಿದು ಜಗಿದರೆ ಮುರಿದುಹೋಗುವದು. ಇದು ಚೆಗುರಿದಾಗ ಕೆಂಪು ಬಿಳುಪು ಎಲೆಗಳಿಂದ ಕೂಡಿ ಕಣ್ಣಿಗೆ ನೋಡುವದಕ್ಕೆ ಬಹಳ ಆನಂದನಾಗಿರುವದು. ಕೆಂಪು ಎಲೆಗಳು ಹೆಚ್ಚಾಗಿ ಬಿಟ್ಟಾಗ ಕಾಯಿಗಳು ಕಮ್ಮಿಯಾಗುವದು. ಇದರ ಕಾಯಿಗಳು ಕೊನೆಗಳಿಂದಕೂಡಿ ನೋಡುವದಕ್ಕೆ ರಮಣೀಯವಾಗಿರುವದು, ಇದರ ಕಾಯಿಗಳ ಸಿಪ್ಪೆಯು ಒಗರಾಗಿರುವದು. ದಪ್ಪಕಾಯಿಗಳ ಸಿಪ್ಪೆಯು ಹಳಿಯವಾಗಿರುವದು. ಹಣ್ಣಿನ ಸಿಪ್ಪೆಯು ರುಚಿಯಾಗಿಯೂ ಸುವಾಸನೆಯಾಗಿಯೂ ಮಧುರನಾದ ರಸದಿಂದಲೂ ಯುಕ್ತವಾಗಿ ಇರುತ್ತದೆ. ಇದರ ಹಣ್ಣಿನಲ್ಲಿ ನಾವು ತಿನ್ನತಕ್ಕ ಭಾಗವು ಶೀಯಾಗಿಯೂ ಮೈದುವಾಗಿಯೂ ಇರುವ ನಾಟೆಯು ಮೇಲುಭಾಗವು ಯಾವದಂದರೆ—ಸಿಪ್ಪೆಗೂ ನಾಟೆಗೂ ಮಧ್ಯದಲ್ಲಿರುವ ಭಾಗ.

೩ ಬೆಳೆಯುವ ಕ್ರಮ.—ಇದನ್ನು ಮಳೆಗಾಲದಲ್ಲಿ ನೆಡಬೇಕು. ಸ್ವಲ್ಪ ಎತ್ತರವಾದ ಭೂಮಿಯಲ್ಲಿ ಹಾಕಿದರೆ ಹಣ್ಣುಗಳು ರುಚಿಯಾಗಿರುವದು ಎಂದು ಹೇಳುತ್ತಾರೆ. ಇದನ್ನು ಯಾವ ಪ್ರದೇಶದಲ್ಲಿ ಹಾಕಿದರೂ ಬೆಳೆಯುತ್ತದೆ. ಹೂವುಗಳು ಬಿಟ್ಟದಿವಸ ಮಳೆಗಾಳಿಬರಕೂಡದೆಂದು ಹೇಳುತ್ತಾರೆ. ಮಂಜುಬಿದ್ದರೆ ಒಳ್ಳೇದೆಂದು ಹೇಳುತ್ತಾರೆ. ಕಶೀವಾವಿನಗಿಡದಲ್ಲಿ ಹಣ್ಣುಗಳು ಬಿಡನೇ ಇದ್ದರೆ ಬುಡವನ್ನು ಸ್ವಲ್ಪ ಕಡಿದು ೧-೨ ಅಡಿಗಳು ಅಗೆದು ಆಮೇಲೆ ಸ್ವಲ್ಪ ಗೊಬ್ಬರವನ್ನು ಹಾಕಿದರೆ ಹಣ್ಣು ಬಿಡುತ್ತದೆ. ಇದು ೭—೮ ಅಡಿ ಬೆಳೆದಮೇಲೆ ಪುತ್ತಲೂ ೩-೪ ಅಡಿ ಅಗೆದು ೧ ಅಡಿ ಎತ್ತರ ಗೊಬ್ಬರವನ್ನೂ ಅದಕ್ಕೆ ಸರಿಯಾದ ಮಣ್ಣನ್ನೂ ಹಾಕಬೇಕು. ಕೊಂಬೆಯನ್ನು ಕತ್ತರಿಸಿದರೆ ಗಿಡವು ಸೊಂಪಾಗಿ ಬೆಳೆದು ನೋಡುವದಕ್ಕೆ ಬಹಳ ಜನವಾಗಿರುತ್ತದೆ.

ಪಕ್ವವಾಡುವವಿಧ.—ಇದು ಗಿಡದಮೇಲೆ ದೊರಹಣ್ಣಾದರೆ ಅದನ್ನು ಕಿತ್ತು ತಂದು ತೊಳದು ಮರಳಿನಲ್ಲಿ ಅರ್ಧವೂ ಮೇಲಕ್ಕೆ ಅರ್ಧವೂ ಕಾಣಿಸುವಹಾಗೆ ಹೂಳಿಟ್ಟು ಒಂದುದಿವಸ ಹೂಳಿಟ್ಟದ್ದಮೇಲೆ ತೆಗೆದುಕೊಂಡುಬಂದು ಹುಲ್ಲಿನಲ್ಲಿ ಘಾಳಿಬರುವ ಹಾಗೆ ಎರಡುದಿವಸವವರಿಗೂ ಇಟ್ಟದ್ದು ಆಮೇಲೆ ತೆಗೆದರೆ ಹೊಂಬಣ್ಣವಾಗಿ ಪಕ್ವವಾಗಿರುವದು. ಆದರೆ ಒಣಹುಲ್ಲಿನಲ್ಲಡೆಹಾಕಿ ಪಕ್ವವಾಡುವದು ರೂಢಿಯಾಗಿದೆ.

೪ ಉಪಯೋಗ.—ಇದರ ಹಣ್ಣು ಬಹಳ ಮಧುರನಾಗಿರುವದರಿಂದ ಜನಗಳು ಭಕ್ಷಿಸುತ್ತಾರೆ. ಬೀಜದಕಾಯಿನಿಂದ ಅನೇಕವಿಧ ಉಪ್ಪಿನಕಾಯಿಗಳನ್ನು ಹಾಕಿ ತಿನ್ನುತ್ತಾರೆ. ಬಂಗಾಳ ಮುಂತಾದ ದೇಶದಲ್ಲಿ ಇದರ ಎಲೆಗಳಿಂದಲೂ ತೊಗಟೆಯಿಂದಲೂ

ವಿದ್ಯಾದಾಯಿನಿ

ಭಾಗ V.] ಜೂಲೈ ೧೯೦೦.

ಎಡಿಟರವರ ನೋಟ್ಸ್.

ತಪ್ಪಿಲ್ಲದೆ ಮಾತಾಡುವುದು, ಬರೆಯುವುದು ವಿದ್ಯಾಭ್ಯಾಸವಾಡಿರುವುದಕ್ಕೆ ದೊಡ್ಡಗುರುತೆಂದು ಇಂಗ್ಲೀಷಿನವರಲ್ಲಿ ಸಾಮಾನ್ಯವಾಗಿ ಗೊತ್ತಾಗಿದೆ. ಇಂಗ್ಲೀಷು ಭಾಷೆಯನ್ನು ಸರಿಯಾಗಿ ಕಲಿತಿರುವರು ತಪ್ಪಾಗಿ ಮಾತಾಡುವುದನ್ನಾಗಲಿ, ಬರೆಯುವುದನ್ನಾಗಲಿ ಹೀನಾಯವನ್ನಾಗಿ ಎಣಿಸುವುದು ವಾಡಿಕೆಯಾಗಿದೆ. ಕನ್ನಡಭಾಷೆಯ ವಿಷಯದಲ್ಲಿ ಇಷ್ಟುಮಟ್ಟಿನ ನಿಯಮವಿದ್ದಂತೆ ತೋರುವುದಿಲ್ಲ. ಆ ಭಾಷೆಯನ್ನು ತಕ್ಕ ಮಟ್ಟಿಗೆ ಬಲ್ಲ ಉಪಾಧ್ಯಾಯರು, ಇತರರು ಕೆಲವರು ಸಹ ಮಾತಾಡುವುದರಲ್ಲು ಬರೆಯುವುದರಲ್ಲೂ ಅಸಾಧುವಾಗಿಯೇ ನಡೆದುಕೊಳ್ಳುವರು. ಇದಕ್ಕೆ ಕನ್ನಡಭಾಷೆಯಲ್ಲಿರುವ ಅವ್ಯವಸ್ಥೆಯೊಂದು ಕಾರಣವೇನೋ ಸರಿ. ಆದರೆ ಹೀಗೆ ಅಸಾಧುವಾಗಿ ಮಾತಾಡುವವರ ಅಥವಾ ಬರೆಯುವವರ ಅಜಾಗರೂಕತೆಯೂ ಒಂದು ದೊಡ್ಡ ಕಾರಣವಾಗಿದೆಯೆಂಬುವದರಲ್ಲಿ ಸಂಶಯವಿಲ್ಲ. ಜಾಗರೂಕನಾದವನಿಗೆ 'ವಂದು' ಎಂದು ಬರೆಯವಕಡೆ 'ಒಂದು' ಎಂದು ಬರೆಯುವುದು ಕಷ್ಟವಾಗಲಾರದು. ಆದರೂ ತಕ್ಕ ಮಟ್ಟಿಗೆ ವಿದ್ಯಾಶಾಲಿಗಳಾದವರಲ್ಲಿ ಸಹ ಈ ತೆರನಾದ ತಪ್ಪುಗಳನ್ನು ಮಾಡುವುದು ಅನೇಕಕಡೆ ನೋಡಿದೇವೆ. ಇಂಥ ದೋಷಗಳಿಗೆ ಭಾಷೆಯಲ್ಲಿರುವ ಅವ್ಯವಸ್ಥೆಯನ್ನು ಸಾಕ್ಷಿಯಾಗಿ ಕೋರುವುದು ಸರಿಯಲ್ಲ. ಭಾಷೆಯೆಂಬುವ ಮನುಷ್ಯರ ಮಾತು ಬರೆವಣಿಗೆಯನ್ನು ಬಿಟ್ಟು ಬೇರೇ ಇಲ್ಲ. ಆದುದರಿಂದ ಆಯಾ ಭಾಷೆಯನ್ನು ತಕ್ಕಮಟ್ಟಿಗೆ ತಿಳಿದಿರುವವರು ಆಯಾಭಾಷಾಸ್ವರೂಪಕ್ಕನುಗುಣವಾಗಿ ನಡೆದುಕೊಳ್ಳುವುದರಿಂದ ಭಾಷೆಯುಸ್ಥಿತಿಯೇ ಕ್ರಮವಾಗಿ ಒಳ್ಳೇದಾಗುವುದು.

* * *

ಶಿವಮೊಗ್ಗ ಕಾಲೇಜು ಸಹಾಯೋಪಾಧ್ಯಾಯರಾದ ಮೂ॥ ಎಸ್. ವೆಂಕಟರಮಣಾಚಾರ್ ಬಿ. ಎ. ಯವರನ್ನು ಕೋಲಾರದ ಹೈಸ್ಕೂಲು ಸಹಾಯೋಪಾಧ್ಯಾಯರಾದ ಮೂ॥ ಕೃಷ್ಣಸಾಮ್ಯಯ್ಯಂಗಾರ್ರ ಬದಲಿಗೆ ವರ್ಗಾಯಿಸಲ್ಪಟ್ಟಿರುತ್ತೆ.

ಈ ಕೆಳಗೆ ಕಾಣಿಸಿರುವ ಹೈಸ್ಕೂಲುಗಳ ಸಂಸ್ಕೃತ ಮುನಷೀರುಗಳ ವರ್ಗಾವರ್ಗಿ ಮಂಜೂರು ಮಾಡಲ್ಪಟ್ಟಿರುತ್ತೆ.

ಮೂ॥ ಸಾಂಬಶಾಸ್ತ್ರಿಗಳನ್ನು ಚಿಕ್ಕಬಳ್ಳಾಪುರದಿಂದ ಚಿತ್ರದುರ್ಗಕ್ಕೂ,

ಮೂ॥ ಡಿ. ರಾಮಾನುಜೈಯ್ಯಂಗಾರ್ರನ್ನು ಚಿತ್ರದುರ್ಗದಿಂದ ಚಿಕ್ಕಮಗಳೂರಿಗೂ,

ಮೂ॥ ಅನಂತಕೃಷ್ಣ ಮಾಚಿಕೆರನ್ನು ಜಿಕ್ಕಮಗಳೂರಿಂದ ಕೋಲಾರಕ್ಕೂ ವರ್ಗಾಯಿಸಿರುತ್ತೆ.

(೧) ಎಸ್. ದೊರಸಾಮ್ಯಯ್ಯಂಗಾರ್. (೨) ಎಸ್. ರಾಮಸ್ವಾಮ್ಯಯ್ಯಂಗಾರ್ ಎಂಬ ಇಬ್ಬರಿಗೂ ಈ ವರುಷ ವ್ಯವಸಾಯ ಶಾಸ್ತ್ರವನ್ನು ಓದಲು ವೇತನವು ಮಂಜೂರು ಮಾಡಲ್ಪಟ್ಟಿರುತ್ತೆ.

ಮೈಸೂರು ಮಹಾರಾಣಿ ಬಾಲಿಕಾ ಪಾಠಶಾಲೆಯು ಸಹಾಯೋಪಾಧ್ಯಾಯಿನಿಯಾದ ಸಾ॥ ಗೌರಮ್ಮನೆಂಬುವರಿಗೆ ಅರ್ಧತಲಬಿನಮೇಲೆ (೨೫) ಎರಡುವರೆ ವರುಷಗಳು ಮುಂದಿನ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಓದಲು ರಜಾ ಮಂಜೂರು ಮಾಡಲ್ಪಟ್ಟಿರುತ್ತೆ. ಮತ್ತು ಈಕೆಯು ಯಜಮಾನರಾದ ರಾಮಣ್ಣ ಎಂಬುವರನ್ನು ಈಕೆಯ ಬದ್ಲಿ ನೋಡಲು ಮಾಹೆಯೊಂದಕ್ಕೆ ೧೫ ರೂಪಾಯಿನ ತಲಬಿನಮೇಲೆ ಅಕ್ಟಿಂಗ್ ತರೀಕು ಮೊಕರರೂರು ಮಾಡಲ್ಪಟ್ಟಿರುತ್ತೆ.

ಮಳವಳ್ಳಿ ಆಂಗ್ಲೋವರ್ನಾಕ್ಯುಲರ್ ಸ್ಕೂಲು ಹೆಡ್ ಮಾಸ್ಟರು ಮೂ॥ ಎಂ. ಪುಟ್ಟಣ್ಣ ಎಂಬುವರು ೨೦ ರೂಪಾಯಿನಿಂದ ೨೫ ರೂ. ಗಳಿಗೆ ಪ್ರಮೋಷನ್ ಮಾಡಲ್ಪಟ್ಟಿರುತ್ತಾರೆ.

ಆರ್ನಲ್ಡ್‌ರವರ ಚರಿತ್ರೆ.

ಪಾಠಗಳನ್ನು ಗಟ್ಟಿಮಾಡುವುದಕ್ಕೆ ಅನುಕೂಲವಾದ ಕಾಲವು ಪ್ರಾತಃಕಾಲವು. ಹೊತ್ತಿಗೆಮುಂಚೆ ಸಾಯಂಕಾಲದ ಭೋಜನವನ್ನು ಪೂರೈಸಿಕೊಂಡು ರಾತ್ರೆ ೯ ಘಂಟೆ ಒಳಗಾಗಿ ಮಲಗಿಕೊಂಡು, ಬೆಳಿಗ್ಗೆ ೪ ಅಥವಾ ೫ ಘಂಟೆಗಳಿಗೆ ಎದ್ದು ಕ್ಲೃಪ್ತವಾಗಿ ಪಾಠಗಳನ್ನು ಓದಿ ಚಿಂತಿಸಿ ಗಟ್ಟಿಮಾಡತಕ್ಕವರು ಕೆಲವು ವರ್ಷಗಳಲ್ಲಿಯೇ ಸಕಲಶಾಸ್ತ್ರವಿಶಾರದರಾಗಿ ಬಹಳ ಧನವಂತರಾಗಿಯೂ, ಯಶೋವಂತರಾಗಿಯೂ, ಆರೋಗ್ಯಭಾಗ್ಯವುಳ್ಳವರಾಗಿಯೂ ಆಗುವರು. ಈ ವಿಷಯವನ್ನು ತಿಳಿಯದೆ ಪೂರ್ವಾಪರಗಳನ್ನರಿಯದ ವಿದ್ಯಾರ್ಥಿಗಳು ರಾತ್ರೆ ಬಹಳಹೊತ್ತಿನವರೆಗೂ ಓದುವರು. ಹಗಲೆಲ್ಲಾ ದೇಹಕ್ಕೂ ಬುದ್ಧಿಗೂ ಬಹಳ ಕೆಲಸವು ಇರುವುದು. ರಾತ್ರೆ ವೇಳೆಯಲ್ಲಿ ಇವೆರಡಕ್ಕೂ ವಿಶ್ರಾಂತಿಯು ಆವಶ್ಯಕವಾಗಿರುವುದು. ಆಕಾಲದಲ್ಲಿ ವಿಶ್ರಾಂತಿಯನ್ನು ಕೊಡದೆ ರಾತ್ರಿ ಬಹಳಹೊತ್ತಿನವರೆಗೂ ಓದುತ್ತಿದ್ದರೆ ಆರೋಗ್ಯವು ಕೆಡುವುದು, ನೇತ್ರಪಾಟವವೂ ಕಡಿಮೆಯಾಗುವುದು. ಚಿಕ್ಕವಯಸ್ಸಿನಲ್ಲಿಯೇ ಕನ್ನಡಕವಾ ಹಾಕಿಕೊಳ್ಳತಕ್ಕ ಅವಸ್ಥೆಯು ಬರುವ್ರದು. ಇಷ್ಟು ತೊಂದರೆಗಳನ್ನು ಅನುಭವಿಸಿದಾಗ್ಯೂ ಓದಿದ್ದನ್ನು ಮನಸ್ಸಿನಲ್ಲಿಟ್ಟುಕೊಳ್ಳತಕ್ಕ ಶಕ್ತಿಯು ಸಂಪೂರ್ಣವಾಗಿರುವುದಿಲ್ಲವಾದುದರಿಂದ, ಓದಿದ ವಿಷಯಗಳು ಜ್ಞಾಪಕದಲ್ಲಿರುವದಿಲ್ಲ. ಹೊತ್ತಿಗೆಮುಂಚೆ ಮಲಗಿಕೊಂಡು ೮—೪ ಘಂಟೆಗಳವರೆಗೂ ದೇಹಕ್ಕೂ ಬುದ್ಧಿಗೂ ವಿಶ್ರಾಂತಿಯನ್ನು ಕೊಟ್ಟು, ಹೊತ್ತಿಗೆಮುಂಚೆ ಎದ್ದು ವ್ಯಾಸಂಗಮಾಡತಕ್ಕ ವಿದ್ಯಾರ್ಥಿಗಳಿಗೆ ಚಿಂತನೆಗೂ, ಓದಿದ್ದನ್ನು ಜ್ಞಾಪಕದಲ್ಲಿಟ್ಟುಕೊಳ್ಳುವದಕ್ಕೂ ತಕ್ಕಸ್ಥಿತಿಯಲ್ಲಿ ದೇಹವೂ ಬುದ್ಧಿಯೂ ಇರುವವು. ಈ ಅಂಶವನ್ನು ಆರ್ನಲ್ಡ್‌ರವರು ಪರ್ಯಾಲೋಚಿಸಿ ಹೊತ್ತಿಗೆಮುಂಚೆ ಏಳತಕ್ಕ ಅಭ್ಯಾಸವನ್ನು ಮಾಡಲಾರಂಭಿಸಿದರು. ಆದರೆ ಅನೇಕದಿವಸಗಳವರೆಗೂ ಹೊತ್ತಿಗೆಮುಂಚೆ ಏಳುವದೂ ಇವರಿಗೆ ಬಹಳ ಕಷ್ಟವಾಗಿ ಪರಿಣಮಿಸಿತ್ತು. ಆದಾಗ್ಯೂ ಈ ಕಷ್ಟವನ್ನು ಜಯಿಸಿ, ಪ್ರಯತ್ನವಿಲ್ಲದೆ ಹೊತ್ತಿಗೆಮುಂಚೆ ಏಳುವ ಶಕ್ತಿಯನ್ನು ಕೆಲವು ದಿವಸಗಳೊಳಗಾಗಿ ಸಂಪಾದಿಸಿಕೊಂಡರು. ಒಂದುದಿವಸವೂ ತಪ್ಪದೆ ಪ್ರತಿದಿವಸವೂ ಬೆಳಗಿನಹೊತ್ತು ಹೊಸಪಾಠವನ್ನು ಗಟ್ಟಿಮಾಡುವ

ಈ ವಿಧವಾದ ಭಾಷಾಭಿವೃದ್ಧಿಯಲ್ಲಿ ಉಪಾಧ್ಯಾಯರು ಮಾಡಬೇಕಾದುದು ಬಹಳವಾಗಿದೆ. ಬಾಲಕರಲ್ಲಿ ಅನುಕರಣಶಕ್ತಿಯು ಹೆಚ್ಚಾಗಿರುವುದರಿಂದ ದೊಡ್ಡವರು ಶುದ್ಧವಾಗಿ ಭಾಷೆಯನ್ನು ಪ್ರಯೋಗಿಸುತ್ತಿದ್ದರೆ ಅದರಂತೆ ತಾವೂ ಮಾಡುವುದನ್ನು ಅನಾಯಾಸವಾಗಿ ಕಲಿಯುವರು. ಉಪಾಧ್ಯಾಯರು ಎಲ್ಲ ಭಾಗದಲ್ಲೂ ಮಕ್ಕಳಿಗೆ ನಿದರ್ಶನವಾಗಿರಬೇಕು. ಹೀಗೆ ಪ್ರತಿಯೊಬ್ಬ ಉಪಾಧ್ಯಾಯರೂ ಮಾಡಿ, ಅವರ ಹತ್ತಿರ ಓದಿದವರೆಲ್ಲರು ಸಾಧುವಾಗಿ ಮಾತಾಡುವುದನ್ನು ಬರೆಯುವುದನ್ನು ಕಲಿತು ಕೊಂಡರೆ ಭಾಷೆಯು ಎಷ್ಟು ಬೇಗ ವ್ಯವಸ್ಥಿತವಾಗಬಹುದು!

***

ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನೂ ಹೇಳಬಹುದು. ಆದರೆ ಅದು ಹಿಂದೆ ಹೇಳಿದಷ್ಟು ಮುಖ್ಯವಾದ ಅಂಶವಾಗದಿರಬಹುದು. ಸರಿಯಾಗಿ ವಿದ್ಯಾಭ್ಯಾಸಮಾಡಿದವರಿಗೆ ಆಂದವಾಗಿ ಬರೆಯುವುದು ಬರಬೇಕು. ಈಗ ಕೆಲವರು ಹಾಗೆ ಬರೆಯುವುದು ಅನಾವಶ್ಯಕವೆಂದು ಭಾವಿಸುವರು. ಲೇಖಕರಾಗದಿರುವವರಿಗೆ ಬರೆಯುವುದಕ್ಕೆ ಮಾತ್ರ ಬಂದರೆ ಸಾಕೆಂದು ಅವರು ನಂಬುವರು. ಇದು ಸರಿಯಲ್ಲ. ಪ್ರಯತ್ನ ಪಟ್ಟರೆ ಚೆನ್ನಾಗಿ ಬರೆಯುವುದನ್ನು ಎಲ್ಲರಿಗೂ ಕಲಿಸಬಹುದು. ಆದುದರಿಂದ ಉಪಾಧ್ಯಾಯರು ಈ ವಿಷಯವಾಗಿ ಗಮನಕೊಡಬೇಕು. ಪಾಠಶಾಲೆಯಲ್ಲಿರುವ ಉಪಾಧ್ಯಾಯರಿಗೆಲ್ಲ ಚೆನ್ನಾಗಿ ಬರೆಯುವುದಕ್ಕೆ ಬಾರದಿರಬಹುದು. ಅಂಥ ಸಂದರ್ಭಗಳಲ್ಲಿ ಚೆನ್ನಾಗಿ ಬರೆಯುವ ಉಪಾಧ್ಯಾಯರೊಬ್ಬರನ್ನು ಎಲ್ಲ ತರಗತಿಗಳಿಗೂ ಬರವಣಿಗೆಯನ್ನು ಅಭ್ಯಾಸಮಾಡಿಸುವುದಕ್ಕೆ ನಿಯಮಿಸಬೇಕು. ಹೀಗೆ ಮಾಡುವುದರಿಂದ ಆ ಪಾಠಶಾಲೆಯ ಬಾಲಕರಿಗೆ ಮೊದಲಿಂದಲೂ ಏಕರೀತಿಯಾಗಿಯೇ ಬರೆಯುವುದೂ ಬರುವುದು.

ವೈಲ್‌ದ್ವೀಪವು ಈ ಕಾಲದಲ್ಲಿ ನಾವಿಕರ ಹಡಗುಗಳು ಇಳಿಯತಕ್ಕ ಸ್ಥಳವಾಗಿತ್ತು. ಆಕಾಲದಲ್ಲಿ ಯುದ್ಧವೂ ನಡಿಯುತ್ತಿತ್ತು. ಆ ಯುದ್ಧದ ವೃತ್ತಾಂತಗಳನ್ನು ನಾವಿಕರಲ್ಲಿಯೂ, ಯೋಧರಲ್ಲಿಯೂ, ಪರಾಕ್ರಮಶಾಲಿಗಳಾದವರ ಚರಿತ್ರೆಗಳನ್ನು ಬಹಳ ಆದರದಿಂದ ಕೇಳುತ್ತಿದ್ದರು. ಇವರ ಕಥಾಶ್ರವಣವನ್ನು ಮಾಡುವದು ಪ್ರತಿನಿತ್ಯದಲ್ಲಿಯೂ ಇವರ ಆಟಪಾಟಗಳ ಕಾಲವನ್ನು ಅಪಹರಿಸುತ್ತಿತ್ತು. ಇವರ ಗ್ರಂಥಗಳಲ್ಲಿ ಶೂರರ ಗುಣಾತಿಶಯವರ್ಣನೆಗೆ ಈ ಯೋಧರಿಂದ ಇವರು ಕೇಳಿದ ಕಥೆಗಳು ಬಹಳ ಸಹಾಯವನ್ನು ಮಾಡಿದವು. ಇದೇನಾಶ್ಚರ್ಯವಲ್ಲ. ನಾವು ಯಾವ ಗ್ರಂಥಗಳನ್ನು ಓದುತ್ತೇವೋ ಅಂಥಾ ಗ್ರಂಥಗಳಲ್ಲಿ ಉಪಹರಿಸಲ್ಪಟ್ಟ ಶೂರರ ಗುಣಾತಿಶಯಗಳಲ್ಲಿ ಆಶ್ಚರ್ಯವೂ ಅವುಗಳನ್ನು ಅನುಸರಿಸುವರಿಗೆ ಶ್ರದ್ಧೆಯೂ, ನಾವೂ ಅವರಂತೆ ಪ್ರಸಿದ್ಧಪುರುಷರಾಗಬೇಕೆಂಬ ಆಶೆಯೂ ಇವುಗಳೆಲ್ಲಾ ನಿಸರ್ಗವಾಗಿ ಹುಟ್ಟುವವು. ಆರ್ನಲ್ಡ್‌ರವರು ಅನ್ಯಾದೃಶನಾದ ಭೂತದಯೆಯನ್ನೂ, ಅಜ್ಞಾನಾಂಧಕಾರದಲ್ಲಿ ಮುಳಗಿರತಕ್ಕ ಜನಗಳನ್ನು ಜ್ಞಾನವಂತರನ್ನಾಗಿ ಮಾಡಬೇಕೆಂಬ ಅಪೇಕ್ಷೆಯನ್ನೂ ಹೊಂದಿದ್ದು, ಇವರು ಪಠಿಸಿದ ಮಹಾಕಾವ್ಯಗಳಲ್ಲಿಯೂ, ಇವರು ಶ್ರವಣ ಮಾಡಿದ ಮಹಾಪುರುಷರ ಚರಿತ್ರೆಗಳಲ್ಲಿಯೂ, ಇವರಿಗೆ ಉಂಟಾದ ಜ್ಞಾನದಿಂದಲೇ ಆಗಿರುವವು.

ಕಾವ್ಯ ನಾಟಕ ಮೊದಲಾದ ಗ್ರಂಥಗಳನ್ನು ಪಠಿಸಿ ಅವುಗಳಲ್ಲಿ ಪಾಂಡಿತ್ಯವನ್ನು ಸಂಪಾದಿಸಿಕೊಂಡ ತರುವಾಯ, ಪ್ರಪಂಚದ ಆಡಳಿತಗಳು ವಾಸ್ತವವಾಗಿ ಯಾವರೀತಿಯುಳ್ಳಿರುತ್ತವೋ ಅವುಗಳನ್ನು ತಿಳಿದುಕೊಳ್ಳಬೇಕೆಂದು ಇವರಿಗೆ ಆಸಕ್ತಿಯು ಉಂಟಾಯಿತು. ಇವಕ್ಕೋಸ್ಕರ ಭೂಗೋಳಶಾಸ್ತ್ರವನ್ನೂ, ಚರಿತ್ರೆಯನ್ನೂ ಓದುವದಕ್ಕೆ ಉಪಕ್ರಮಿಸಿದರು. ಸಾಮಾನ್ಯವಾಗಿ ಈ ವಿಷಯದಲ್ಲಿ ಬರಿಯಲ್ಪಟ್ಟ ಗ್ರಂಥಗಳಲ್ಲಿ ಪರಸ್ಪರ ವಿರೋಧಗಳಿರುವದೂ ಉಂಟು. ಇದರಲ್ಲಿ ಯಥಾರ್ಥಾಂಶವನ್ನು ಗೊತ್ತುಮಾಡುವುದಕ್ಕೋಸ್ಕರ ಚರಿತ್ರೆಗಳ ವಿಷಯದಲ್ಲಿಯೂ, ಭೂಗೋಳದ ವಿಷಯದಲ್ಲಿಯೂ ಬೇರೆಬೇರೆ ಗ್ರಂಥಕರ್ತರುಗಳಿಂದ ಬರೆಯಲ್ಪಟ್ಟ ಪುಸ್ತಕಗಳನ್ನು ತರಿಸಿಕೊಂಡು ಅವುಗಳನ್ನು ಸಮಗ್ರವಾಗಿ ಓದಿ ಈ ಪುಸ್ತಕಗಳಲ್ಲಿ ತೋರುತಕ್ಕ ಭೇದಗಳನ್ನೆಲ್ಲಾ ಗೊತ್ತುಮಾಡಿ ಅವುಗಳನ್ನು ತಿಳಿದ ಪಂಡಿತರಲ್ಲಿ ಚರ್ಚಿಸಿ, ನಿಜವಾದ ವಿಷ

ದಕ್ಕೂ ಹಲೇ ಪಾಠವನ್ನು ಚಿಂತಿಸುವದಕ್ಕೂ ನಿಯಮವಾಗಿ ಇಟ್ಟುಕೊಳ್ಳಬೇಕೆಂದು ಆರ್ನಲ್ಡ್‌ರವರು ಉದ್ದೇಶವಮಾಡಿದ್ದರು. ಆದರೆ ಈ ಉದ್ದೇಶಕ್ಕೆ ಅನೇಕ ವಿಘ್ನಗಳು ಬರುತ್ತಿದ್ದವು. ಎಂಥಾ ವಿಘ್ನಗಳು ಬಂದಾಗ್ಯೂ ಅವುಗಳನ್ನು ಲಕ್ಷ್ಯವಮಾಡದೆ ವ್ಯಾಸಂಗವಮಾಡುತ್ತಿರಬೇಕೆಂದು ಇವರು ಸಂಕಲ್ಪವಮಾಡಿದರು. ಆದರೆ ಅನೇಕವೇಳೆ ಈ ಸಂಕಲ್ಪವು ನಡೆಯುತ್ತಿರಲಿಲ್ಲ. ಇದಕ್ಕಾಗಿ ವಿಷಾದಿಸಿ ಪುನಃ ಪುನಃ ಸಂಕಲ್ಪವನ್ನು ಮಾಡುತ್ತಾ ಕಲವು ವರ್ಷಗಳೊಳಗಾಗಿ ಅನಾರೋಗ್ಯರೂಪವಾದ ವಿಘ್ನವೊಂದು ವಿನಾ, ಬಾಕಿ ವಿಘ್ನಗಳೇನು ಬಂದಾಗ್ಯೂ ಅವು ತಮ್ಮ ವ್ಯಾಸಂಗಕ್ಕೆ ವಿರೋಧವಾಗದಂತೆ ಮಾಡಿಕೊಂಡರು. ಇವರ ಸಹಪಾಠಿಗಳಲ್ಲಿ ಅನೇಕರು ಬೆಳಗಿನವೇಳೆಯಲ್ಲಿ ಕಾರ್ಯಾಂತರಗಳಿಗೆ ಇವರನ್ನು ಎಳೆಯಬೇಕೆಂದು ಪ್ರಯತ್ನಮಾಡಿ, ಭಗ್ನಮನೋರಥರಾಗಿ, ಇವರ ಸ್ಥೈರ್ಯವನ್ನು ನೋಡಿ ಆಶ್ಚರ್ಯಪಡುತ್ತಿದ್ದರು.

ನಮ್ಮ ದೇಶದಲ್ಲಿ ರಾವಣಾಯಣವು ಹ್ಯಾಗೆ ಹೃದಯಂಗಮವಾದ ಗ್ರಂಥವೋ ಪಾಶ್ಚಾತ್ಯರಲ್ಲಿ "ಇಲಿಯಡ್" ಎಂಬ ಗ್ರಂಥವು ಹಾಗೆಯೇ ಜಗನ್ಮೋಹಕವಾದದ್ದು. ಈ ಗ್ರಂಥವನ್ನು ಗ್ರೀಸ್ ಭಾಷೆಯಿಂದ ಪೋಪ್‌ರವರು ಇಂಗ್ಲಿಷಿಗೆ ತರ್ಜುಮೆ ಮಾಡಿರುತ್ತಾರೆ. ಆರ್ನಲ್ಡ್‌ರವರು ಈ ಗ್ರಂಥವನ್ನು ಅನೇಕಾವರ್ತಿ ಓದಿದರು. ಕೆಲವು ವರ್ಷಗಳಲ್ಲಿಯೇ ಪುಸ್ತಕವಿಲ್ಲದೆ ಈ ಗ್ರಂಥವನ್ನು ಮೊದಲಿಂದ ಕೊನೆಗೂ ಒಪ್ಪಿಸತಕ್ಕ ಶಕ್ತಿಯನ್ನು ಸಂಪಾದಿಸಿಕೊಂಡರು. ಇಂಗ್ಲಿಷ್ ಕಾವ್ಯಗಳಲ್ಲಿ ಪ್ರಸಿದ್ಧಿಗೆ ಬಂದಿದ್ದ ಮಹಾಕಾವ್ಯ ಗ್ರಂಥಗಳೆಲ್ಲಾ ಇವರಿಗೆ ಕಂಠಸ್ಥವಾಗಿದ್ದವು. ಇನ್ನೂ ವಿದ್ಯಾರ್ಥಿಗಳಾಗಿರುವಾಗಲೇ ಬ್ರಿಟಿಷ್‌ಪಾರ್ಲಿಮೆಂಟಿಗೆ ಪಿತೃಪ್ರಾಯರಾದಂಥಾ "ಸೈಮ್ಡಿವಾಂಟ್‌ಫರ್ಟ್" ಎಂಬುವರ ವಿಷಯದಲ್ಲಿ ಇವರು ವಿನೋದಾರ್ಥವಾಗಿ ಬರೆದ ಒಂದು ಪದ್ಯಕಾವ್ಯವು ಇವರಿಗೆ ಕವಿಕುಲಸಾರ್ವಭೌಮರಲ್ಲಿ ಒಂದು ಸ್ಥಳವನ್ನು ಸಂಪಾದಿಸಿಕೊಟ್ಟಿತು. ಏಳನೇ ವಯಸ್ಸಿನಲ್ಲಿ ನಾರ್ಥಂಬರ್‌ಲೆಂಡಿಗೆ ಪ್ರಭುಗಳಾದ "ಪರ್ಸಿ" ಎಂಬುವರ ವಿಷಯದಲ್ಲಿ ಒಂದು ನಾಟಕವನ್ನು ಬರೆದರು. ಈ ಗ್ರಂಥದಲ್ಲಿ ವಿಶೇಷ ವಿದ್ವತ್ಪ್ರದರ್ಶನವಾಗಿಲ್ಲ. ಆದಾಗ್ಯೂ ಈ ನಾಟಕದಲ್ಲಿ ಭಾಷೆಯೂ, ನಾಟಕಲಕ್ಷಣಗಳೂ ಶಾಸ್ತ್ರವನ್ನೆನುಸರಿಸಿ ಇವೆ. ಇಷ್ಟು ಚಿಕ್ಕವಯಸ್ಸಿನಲ್ಲಿ ವ್ಯಾಕರಣ, ಛಂದಸ್ಸು, ನಾಟಕ ಮೊದಲಾದವುಗಳಲ್ಲಿ ಇಂಥಾ ಪ್ರಜ್ಞೆಯನ್ನು ಹೊಂದಿದ್ದನ್ನು ನೋಡಿದರೆ ಪರಮಾಶ್ಚರ್ಯವಾಗುತ್ತದೆ.

ವ್ಯಾಕರಣಶಾಸ್ತ್ರ.

೧೦೬ನೆಯ ಪುಟದ ಶೇಷ.

ಆಶೀರರ್ಥಕ್ಕೆ.—ದೇವದತ್ತನಿಗೆ ಮಂಗಳವಾಗಲಿ, ಕೃಷ್ಣನಿಗೆ ದೀರ್ಘಾಯುವಾಗಲಿ, ಮೊದಲಾದ ಕೆಲವು ಪ್ರಯೋಗಗಳಲ್ಲಿ, ಮಂಗಳ, ದೀರ್ಘಾಯು, ಮೊದಲಾದ ಇಷ್ಟಾರ್ಥಕಶಬ್ದಗಳು ಇರುವುದರಿಂದ ಅವುಗಳ ಅರ್ಥವನ್ನೆ ಆಗಲಿ ಎಂಬ ಕ್ರಿಯಾಪದದಿಂದ ಆಶಂಸಿಸುವುದು ಸೂಚಿತವಾಗುವುದಾದಕಾರಣ ದೇವದತ್ತನಿಗೆ ಎಂದು ಚತುರ್ಥಿ ಬಂದಿರುವುದು.

ಆದರೆ ಕೆಲವರು, ಶತ್ರುವಿಗೆ ನಾಶವಾಗಲಿ, ಅವನಿಗೆ ಕೇಡಾಗಲಿ, ಎಂದು ಮೊದಲಾದ ಕೆಲವು ಪ್ರಯೋಗಗಳಲ್ಲಿ ನಾಶಮೊದಲಾದುವು ಇಷ್ಟಾರ್ಥರೂಪಗಳಲ್ಲದಿರುವುದರಿಂದ ಅದರ ಆಶಂಸನವು ತೋರುವದಿಲ್ಲವಾಗಿ, 'ಆಶಿಷ್ಯೇದ್ವೇಶ್ಯ' ಎಂಬ ಸೂತ್ರಕ್ಕೆ ಉದಾಹರಣೆಯಾಗುವುದಿಲ್ಲ. ಮತ್ತು ಚತುರ್ಥ್ಯರ್ಥವಿಧಾಯಕವಾದ ಇತರ ಯಾವ ಸೂತ್ರಕ್ಕೂ ಇಲ್ಲಿ ಪ್ರವೃತ್ತಿಯಿಲ್ಲ. ಆದುದರಿಂದ ಇಂತಹ ಪ್ರಯೋಗಗಳು ಹೇಗೆ ಸಾಧುಗಳೆಂದು ಶಂಕಿಸುವರು. ಆದರೂ ಇಲ್ಲಿ ನಾಶ, ಕೇಡು, ಮೊದಲಾದುವು ಸಾಮಾನ್ಯವಾಗಿ ಅನಿಷ್ಟವೆಂದು ತೋರುತ್ತಿದ್ದಾಗ್ಯೂ ಶತ್ರುಗಳ ನಾಶವು ತನಗೆ ಇಷ್ಟವಾಗಿಯೇ ತೋರುವುದರಿಂದ ಚತುರ್ಥಿಬಂದಿರುವುದೆಂದು ತಿಳಿಯಬೇಕು.

ಹೀಗೆಯೇ ಸ್ವಾಹಾ, ಸ್ವಧಾ, ವಷಟ್, ಎಂಬ ಅವ್ಯಯಗಳ ಯೋಗವಿದ್ದಾಗ್ಯೂ ಚತುರ್ಥಿಯು ಬರುವುದು.

ಉದಾಹರಣೆ—ಅಗ್ನಿಗೆ ಸ್ವಾಹಾಕಾರಂ, ಪಿತೃಗಳಿಗೆ ಸ್ವಧಾಕಾರಂ, ಇಂದ್ರನಿಗೆ ವಷಟ್ಕಾರಂ, ಎಂದು ಮೊದಲಾದವುಗಳನ್ನು ಊಹಿಸಿಕೊಳ್ಳಬೇಕು. ಇಲ್ಲಿ ಸ್ವಾಹಾಮೊದಲಾದ ಶಬ್ದಗಳ ಯೋಗವಿದ್ದಾಗ ಚತುರ್ಥಿಯನ್ನುಪಯೋಗಿಸಬೇಕೆಂದು ಸಾಮಾನ್ಯವಾಗಿ ಹೇಳಿದ್ದರೂ, ದೇವತೆಗಳನ್ನುದ್ದೇಶಿಸಿ ಹೇಳುವಾಗ ಸ್ವಾಹಾಕಾರವೆಂದೂ ಪಿತೃದೇವತೆಗಳನ್ನುದ್ದೇಶಿಸಿ ಹೇಳುವಾಗ ಸ್ವಧಾಕಾರವೆಂದೂ, ದೇವತೆಗಳನ್ನು ಆಹ್ವಾನಮಾಡುವ ಸಂದರ್ಭದಲ್ಲಿ ವಷಟ್ಕಾರವೆಂದೂ, ಹೇಳಬೇಕೆಂದು ನಮ್ಮ ವೈದಿಕರು ಹೇಳುವುದರಿಂದ ಅದಕ್ಕೆ ಅನುಸಾರವಾಗಿ ಮೂರು ಉದಾಹರಣೆಗಳು ತೋರಿಸಲ್ಪಟ್ಟವೆ.

ಯವನ್ನು ಗೊತ್ತುಮಾಡುತ್ತಿದ್ದರು. ಇದಲ್ಲದೆ ಭೂಗೋಳಶಾಸ್ತ್ರವನ್ನು ಪಠಿಸಿ ಅವುಗಳಿಗೆ ಅನುಸಾರವಾಗಿ ಸ್ವಯಂ ಒಂದು ಗೋಳವನ್ನು ಕಲ್ಪಿಸಿ ಅವುಗಳಮೇಲೆ ದೇಶಗಳನ್ನೆಲ್ಲಾ ಪ್ರತ್ಯೇಕಪ್ರತ್ಯೇಕವಾಗಿ ತಿಳಿಯುವಂತೆ ಬರೆಯುತ್ತಿದ್ದದಲ್ಲದೆ ಪ್ರತಿಒಂದು ದೇಶದ ಭೂಪಟವನ್ನೂ ಬರೆದ, ಅದರಲ್ಲಿ ಆಯಾಯದೇಶದಲ್ಲಿ ತಿಳಿದುಕೊಳ್ಳತಕ್ಕ ಮುಖ್ಯಾಂಶಗಳನ್ನು ಗುರುತುಮಾಡುತ್ತಿದ್ದರು. ಭೂಗೋಳ ಮತ್ತು ಚರಿತ್ರೆಯಲ್ಲಿ ಇವರ ಜ್ಞಾಪಕಶಕ್ತಿಯು ಅದ್ಭುತವಾಗಿತ್ತು. ಒಂದುದಿನ ಇವರ ತಂದೆಗಳು ಲೋಕಾಭಿರಾಮವಾಗಿ ಒಂದೆರಡು ವಿಷಯಗಳನ್ನು ಇವರೊಡನೆ ಚರ್ಚಿಸಲು, ಆ ವಿಷಯಕ್ಕೆ ಸಂಬಂಧಪಟ್ಟ ಸಾಮಾನ್ಯವಾದ ಪಂಡಿತರಿಗೂ ಕೂಡ ತಿಳಿಯದೇ ಇರತಕ್ಕ ಅನೇಕ ಸೂಕ್ಷ್ಮವಾದ ವಿಷಯಗಳನ್ನು ಬಹಳ ವಿಸ್ತಾರವಾಗಿ ಹೇಳಿದ್ದನ್ನು ಕೇಳಿ ಅವರು ಬಹಳ ಆಶ್ಚರ್ಯಪಟ್ಟು, ಪ್ರೋತ್ಸಾಹಾರ್ಥವಾಗಿ ಅವರಲ್ಲಿ ಇಲ್ಲದೇ ಇದ್ದ ಭೂಗೋಳ ಮತ್ತು ಚರಿತ್ರೆಗೆ ಸಂಬಂಧಪಟ್ಟ ಅನೇಕ ಪುಸ್ತಕಗಳನ್ನು ತರಿಸಿಕೊಟ್ಟರು. ಈ ಹೊಸಪುಸ್ತಕಗಳು ಇವರ ಗ್ರಂಥಾವಲೋಕನಾಸಕ್ತಿಯನ್ನು ಇನ್ನೂ ವಿಶೇಷವಾಗಿ ಹೆಚ್ಚಿಸಿತು. ಕೆಲವುದಿವಸಗಳೊಳಗಾಗಿ ಇವರ ಜ್ಞಾಪಕಶಕ್ತಿಯು ಅದ್ಭುತವಾಗಿ ಪರಿಣಮಿಸಿತು. ಭೂಗೋಳ ಮತ್ತು ಚರಿತ್ರೆಗಳಲ್ಲಿ ಯಾವ ಗ್ರಂಥವನ್ನು ಓದಿದಾಗ್ಯೂ ಒಂದಾವರ್ತಿ ಓದಿ ಪೂರಯಿಸುವದರೊಳಗಾಗಿ ಅದು ಕಂಠಸ್ಥವಾಗುತ್ತಿತ್ತು. ಇದನ್ನು ಇವರ ಸಹಪಾಠಿಗಳು ಪರೀಕ್ಷಿಸಿ ಆಶ್ಚರ್ಯಪಟ್ಟು, ಈ ವಿಷಯದಲ್ಲಿ ಇವರು ಅಂಶಪುರುಷರೆಂದು ಹೇಳಿಕೊಳ್ಳುತ್ತಿದ್ದರು. ಇವು ಶುದ್ಧ ಅಸಂಗತವಾದ ಮಾತು. ಸೋಮಾರಿಗಳು ಹೀಗೆ ಹೇಳಿಕೊಳ್ಳುವುದು ಸಹಜ. ಪುರುಷಕಾರದಿಂದ ಸಿದ್ಧಿ ಆಗದೇ ಇರತಕ್ಕ ಕೆಲಸವೇ ಇಲ್ಲ ಈ ತತ್ವವನ್ನು ತಿಳಿದುಕೊಂಡು ಆರ್ನಲ್ಡ್‌ರವರು ಪುನಃಪುನಃ ಗ್ರಂಥಾವಲೋಕನೆಯನ್ನು ಮಾಡಿ ಕ್ರಮಕ್ರಮವಾಗಿ ಪರಿಚಯವುಳ್ಳ ವಿಷಯಗಳಲ್ಲಿ ಏಕಸಂಧಿಗ್ರಾಹಿಗಳಾಗಿ ಪರಿಣಮಿಸಿದರು. ಒಬ್ಬ ಮನುಷ್ಯ ಮಾಡಿದ ಕೆಲಸವು ಮತ್ತೊಬ್ಬನಿಗೆ ಅಸಾಧ್ಯವಲ್ಲ. ಆದರೆ ಅಂಥಾ ಕೆಲಸವನ್ನು ಮಾಡುವದಕ್ಕೆ ಅದೇ ವಿಧವಾದ ಕೆಲಸವನ್ನು ಮಾಡಿ ಯಶಸ್ಸನ್ನು ಸಂಪಾದಿಸಿದವರು ಹ್ಯಾಗೆ ಮೆಹನತ್ತು ಮಾಡಿದರೋ, ಹಾಗೆಯೇ ಮೆಹನತ್ತು ಮಾಡುವದು ಅವಶ್ಯಕ. ಇದನ್ನು ತಿಳಿದುಕೊಂಡು ಇದಕ್ಕನುಸಾರವಾಗಿ ವಿದ್ಯಾರ್ಥಿಗಳು ವಿದ್ಯಾರ್ಜನೆಯಲ್ಲಿ ತಕ್ಕ ಮೆಹನತ್ತನ್ನು ಮಾಡುತ್ತಾ ಬರಬೇಕು.

ಮೇಲೆಹೇಳಿದ ಉದಾಹರಣೆಗಳಲ್ಲಿ ಆ ಸೂತ್ರಕ್ಕೆ ಪ್ರವೃತ್ತಿ ಯಿಲ್ಲವೆಂಬಭಿಪ್ರಾಯದಿಂದ ಈಸೂತ್ರವು ಮಾಡಲ್ಪಟ್ಟಿರುವುದು.

ಆದುದರಿಂದ ಬಿಳ್ಳಿಂಚು, ಕಸ್ಪೆಯ ಚಂಡಿಕೆಗಳು, ಬರ ಲೋಕನಾಶಗಳಿಗೆ ಸೂಚಕವಾಗಿರುವುದು ಕಾರಣಗಳಲ್ಲ ; ಎಂದು ತಿಳಿಯಬೇಕು.

ಯಾತರದೆಸೆಯಿಂದ ಇತರ ವಸ್ತುವಿಗೆ ನಿಂದೆಯನ್ನು ಬೋಧಿಸುವುದೊ, ಮತ್ತು ಒಂದುವಾಕ್ಯದಲ್ಲಿ ಅಂಥಾ ಬಗೆಧಾತುವಿಗೆ ಪ್ರಯೋಗವಿದ್ದು ಆಬಗೆ ಧಾತುವಿನ ಕರ್ಮವನ್ನು ಬೋಧಿಸುವಶಬ್ದದಮೇಲೂ ವಿಕಲ್ಪದಿಂದ ಚತುರ್ಥಿಯನ್ನುಪಯೋಗಿಸ ಬೇಕೆಂದು ಸೂಚಿಸುವುದಕ್ಕಾಗಿ " ಬಗೆತಃಕರ್ಮಣಿನಾಯತೊವಜ್ಞಾ " ಎಂಬ ಸೂತ್ರವು ಮಾಡಲ್ಪಟ್ಟಿರುವುದು. ಆದುದರಿಂದ " ಅವನನಾತಂತೃಣಕ್ಕೆಬಗೆದಂ " ಎಂದು ಮೊದಲಾದ ಪ್ರಯೋಗಗಳು ಸಾಧುಗಳಾಗುವುವು. ಇಂತಹ ಪ್ರಯೋಗಗಳು ಸಂಸ್ಕೃತದಲ್ಲಿ ಬಹಳ ಪ್ರಚುರವಾಗಿದ್ದರೂ ಭಾಷೆಯಲ್ಲಿ ಪ್ರಾಯಿಕವಾಗಿರುವುದರಿಂದ ಈ ಸೂತ್ರವು ಭಾಷೆಗೆ ಅಷ್ಟು ಉಪಯೋಗಕರವಲ್ಲವೆಂದು ತೋರುವುದು. ಆದರೂ ಭಾಷಾಗ್ರಂಥಸ್ಥ ಪ್ರಯೋಗಗಳನ್ನು ಸಾಧಿಸುವುದಕ್ಕೆ ಸ್ವಲ್ಪಮಟ್ಟಿಗೆ ಸಾಧಕವಾಗಿರುವುದರಿಂದ ಇಲ್ಲಿ ಹೇಳಲ್ಪಟ್ಟಿದೆ.

ಶಾಖ ಪ್ರಕರಣ.

ಮನುಷ್ಯಶರೀರವು ಸುತ್ತಲೂ ಇರುವ ಇತರ ಪದಾರ್ಥಗಳಿಗಿಂತ ಶಾಖವಾಗಿದೆ ; ಅಲ್ಲದೆ ಛಳಿ ದಿವಸಗಳಲ್ಲೂ ಬಿಸಲು ದಿವಸಗಳಲ್ಲೂ ಒಂದೇ ಸಮವಾಗಿ ಶಾಖವು ಶ್ರಿದ್ಧಾಗಿದೆ. ಮನುಷ್ಯಶರೀರವು ಯಾವಾಗಲೂ ಉಷ್ಣವನ್ನು ನಿಶ್ವಾಸದ ಮೂಲಕವೂ ಬೆವರಿನ ಮೂಲಕವೂ ಮಲಮೂತ್ರಗಳ ಸಂಗಡಲೂ ಹೊರಗೆ ಬಿಡುತ್ತಿರುತ್ತದೆ. ಹೀಗೆ ಶರೀರದಿಂದ ಶಾಖವು ಹೊರಗೆ ಹೋಗುತ್ತಲೇ ಇದ್ದರೂ ಶರೀರದಲ್ಲಿ ಅದು ಉದ ಒಂದೇ ರೀತಿಯಾಗಿರುವದರಿಂದ ಕಾರಣವನ್ನು ನಾವು ತಿಳಿಯುವದು ಬಹಳ ಅವಶ್ಯಕ ನಾಗಿದೆ. ಶರೀರದಿಂದ ಹೊರಗೆ ಬಿಡಲ್ಪಟ್ಟ ಶಾಖವು ಶರೀರದಲ್ಲಿ ಉತ್ಪತ್ತಿಯಾದ

ಇದರಂತೆ ಹಿಂದೆಹೇಳಿದ ಸೂತ್ರಗಳಿಗೆ ವಿಷಯಗಳಾಗದ, ಮೋಕ್ಷಕ್ಕೆ ತತ್ವ ಜ್ಞಾನವು ಕುಂಡಲಕ್ಕೆ ಚಿನ್ನವು ತೇರಿಗೆ ಮರವು ಮೊದಲಾದ ವಾಕ್ಯಗಳಲ್ಲಿ ಚತುರ್ಥಿ ಯನ್ನುಪಯೋಗಿಸುವುದು ಲೋಕದಲ್ಲಿ ವಾಡಿಕೆಯಾಗಿರುವುದರಿಂದ ಇದಕ್ಕೆ ಸಾಧುತ್ವ ವನ್ನು ಬೋಧಿಸಲು, 'ತಾದರ್ಥ್ಯೆ' ಎಂಬ ಸೂತ್ರವು ಮಾಡಲ್ಪಟ್ಟಿರುವುದು. ಇಲ್ಲಿ ತಾದರ್ಥ್ಯವೆಂದರೆ, ಅದಕ್ಕೋಸ್ಕರ ಇದು, ಎಂಬುವಾದರ ಭಾವವು, ಇದು ತೋರುತ್ತಿದ್ದರೆ, ಯಾವುದಕ್ಕೆ ಯಾವ ವಸ್ತುವು ಮೂಲಕಾರಣವಾಗಿರುವುದೋ ಆ ವಸ್ತುವಾಚಕ ಶಬ್ದದಮೇಲೆ ಚತುರ್ಥಿಯು ಬರುವುದು. ಎಂದರೆ ನಿರ್ದಿಷ್ಟ ಕಾರ್ಯವಾಚಕ ಶಬ್ದಕ್ಕೆ ಚತುರ್ಥಿಯನ್ನು ಸೇರಿಸಬೇಕೆಂದು ತಾತ್ಪರ್ಯವಾಗುವುದು. ಇಲ್ಲಿ ಕಾರಣವಾಚಕ ಶಬ್ದಗಳ ಪ್ರಯೋಗವು ಅತ್ಯಾವಶ್ಯಕವಾಗಿರುವುದು. ಆ ಕಾರಣವು ನಿಮಿತ್ತಕಾರಣ ವಾಗಲಿ, ಉಪಾದಾನ ಕಾರಣವಾಗಲಿ ಆಗಿರಬಹುದು. ನಿಮಿತ್ತಕಾರಣವೆಂದರೆ ತಾನು ಕಾರ್ಯದಲ್ಲಿ ಬೆರೆಯದೆ ಕಾರ್ಯವನ್ನು ಮಾತ್ರ ಹುಟ್ಟಿಸುವುದು. ಹ್ಯಾಗೆಂದರೆ ಗಡಿಗೆಯು ಆಗಬೇಕಾದರೆ, ಮಣ್ಣು, ಚಕ್ರ, ದೊಣ್ಣೆ, ಮೊದಲಾದುವು ಅದರಲ್ಲಿ ಸೇರದೆ ಅದನ್ನು ಮಾತ್ರ ಹುಟ್ಟಿಸಿ ತಾವು ಬೇರೆಯಾಗುವುದರಿಂದ ಅವು ನಿಮಿತ್ತಕಾರಣಗಳೆಂದು ತಿಳಿಯ ತಕ್ಕದ್ದು. ಇಲ್ಲಿ ಎರಡು ವಿಧವಾದ ಕಾರಣಗಳಿಗೂ ಗ್ರಹಣವಾಡಬಹುದಾದುದರಿಂದ, ಮೋಕ್ಷಕ್ಕೆ ತತ್ವಜ್ಞಾನವು, ಎಂದು ನಿಮಿತ್ತಕಾರಣಕ್ಕೂ, ಕುಂಡಲಕ್ಕೆ ಚಿನ್ನವು ಎಂದು ಮೊದಲಾದುದು ಉಪಾದಾನ ಕಾರಣಕ್ಕೂ ಉದಾಹರಿಸಲ್ಪಟ್ಟಿರುವುವು.

ಮತ್ತು ಲೋಕಕ್ಕೆ ಕೇಡನ್ನು ಸೂಚಿಸುವ ಭೂತಗಳ ವಿಕಾರಗಳಿಂದ ಸೂ ಚಿಸಲ್ಪಡುವವನಾವುದೋ ಅದನ್ನು ಬೋಧಿಸುವ ಶಬ್ದದಮೇಲೂ ಚತುರ್ಥಿಯನ್ನುಪ ಯೋಗಿಸಬಹುದೆಂದು, ಉತ್ಪಾತೇನಜಾಜ್ವಲ್ಯೈ, ಎಂಬ ಸೂತ್ರದಿಂದ ಹೇಳಲ್ಪಟ್ಟಿರು ವುದು.

ಇದಕ್ಕೆ:—ಬರಕ್ಕೆ ಬೆಳ್ಳಿಂಚು, ಲೋಕನಾಶಕ್ಕೆ ಕಪ್ಪೆಯಚಂಡಿಕೆ, ಮೊದ ಲಾದುವು ಉದಾಹರಣೆಗಳು. ಇಲ್ಲಿ ಸ್ಥೂಲಮತಿಗಳಿಗೆ, ಬೆಳ್ಳಿಂಚು, ಕಪ್ಪೆಯಚಂಡಿಕೆ ಮೊದಲಾದುವು. ಬರ, ಲೋಕನಾಶಾರ್ಥಗಳಿಗಾಗಿ ಎಂದು ತೋರುವದರಿಂದ, 'ತಾ ದರ್ಥ್ಯೆ' ಎಂಬ ಸೂತ್ರದಿಂದಲೇ ಚತುರ್ಥಿಯನ್ನು ಮಾಡಬಹುದೆಂದು ತೋರುವುದು. ಆದಾಗ್ಯೂ ತಾದರ್ಥ್ಯವೆಂಬ ಸೂತ್ರದಲ್ಲಿ ಒಂದು ಕಾರ್ಯವಾಗಿಯೂ, ಒಂದು ಕಾರಣ ವಾಗಿಯೂ ತೋರುತ್ತಿದ್ದರೆ ಅಲ್ಲಿ ಚತುರ್ಥಿ ಬರುವುದೆಂದು ಅರ್ಥವಾಗುವುದರಿಂದ

ನಮ್ಮ ಶರೀರದಲ್ಲಿ ಎಲ್ಲೆಲ್ಲಿಯೂ ರಕ್ತನಾಳಗಳಿವೆ. ಈ ನಾಳಗಳಲ್ಲಿ ಪ್ರವಹಿಸುವ ರಕ್ತವು ಶರೀರ ಉತ್ತಮಪೋಷಣೆಗೆ ಅತ್ಯವಶ್ಯಕನಾದ ಪೋಷಣಾದ್ರವ್ಯಗಳನ್ನು ಬೇಕಾದ ಕಡೆಗೆ ತಂದು ಒದಗಿಸುತ್ತದೆ. ಉತ್ಪತ್ತಿಯಾದ ಕಲ್ಮಷಗಳನ್ನು ಎಲ್ಲೆಲ್ಲಿಗೆ ಸಾಗಿರಬೇಕೋ ಅಲ್ಲಲ್ಲಿಗೆ ಸಾಗಿಸುತ್ತದೆ. ಮತ್ತು ಅಮ್ಲಜನಕವನ್ನು ಶಾಖವನ್ನೂ ಒಂದುಕಡೆಯಿಂದ ಮತ್ತೊಂದುಕಡೆಗೆ ಸಾಗಿಸುತ್ತದೆ. ಆದುದರಿಂದ ಶರೀರದಲ್ಲಿ ಒಂದುಕಡೆಯಲ್ಲಿ ಶಾಖವನಷ್ಟದಿಂದ ಶೈತ್ಯವು ಹೆಚ್ಚಿದರೆ ಮತ್ತೊಂದುಕಡೆಯಿಂದ ಶಾಖವಾಗಿರುವ ರಕ್ತವು ನುಗ್ಗಿ ಅಲ್ಲಿಯ ಶಾಖವನ್ನುಂಟುಮಾಡುವದು. ಅಲ್ಲದೆ ಹೆಚ್ಚು ಕೆಲಸದಿಂದ ಶರೀರದಲ್ಲಿ ಒಂದುಕಡೆ ಶಾಖವು ಹೆಚ್ಚಾದರೆ ಮತ್ತೊಂದುಕಡೆಯಲ್ಲಿನ ತಣ್ಣಗಿರುವ ರಕ್ತವು ಆ ಭಾಗಕ್ಕೆ ನುಗ್ಗಿ ಶಾಖವನ್ನು ತಗ್ಗಿಸುವದು. ಇವುಗಳಿಲ್ಲಾ ಶರೀರದಲ್ಲಿ ರಕ್ತವು ಒಂದೇಸಮನಾಗಿ ಪರಿಚಲನೆಯಾಗುವದರಿಂದ ಉಂಟಾಗುವವು. ಈ ರೀತಿಯಲ್ಲಿ ಶರೀರದ ಶಾಖವು ಎಲ್ಲಾ ಭಾಗಗಳಲ್ಲಿಯೂ ಸ್ವಲ್ಪ ಹೆಚ್ಚುಕಡಿಮೆ ಒಂದೇಸಮನಾಗಿರುವದು.

ನರಮಂಡಲ.

ಹಿಂದಿನಪ್ರಕರಣಗಳಲ್ಲಿ ನಾವು ಶರೀರದಲ್ಲಿ ನಾನಾಅವಯವಗಳು ಮಾಡುವ ಮುಖ್ಯಕಾರ್ಯಗಳನ್ನು ತಕ್ಕಮಟ್ಟಿಗೆ ಹೇಳಿದೆವು. ಈಕಾರ್ಯಗಳೆಲ್ಲಾ ಜ್ಞಾನಾಭಿವೃದ್ಧಿಗೆ ಮುಖ್ಯಾಶ್ರಯವಾದ ನರಮಂಡಲದಿಂದುಂಟಾಗುತ್ತವೆ. ಮತ್ತು ಅದರ ಅಧೀನದಲ್ಲಿರುತ್ತವೆ. ನರಮಂಡಲವೂ ಶರೀರದ ರಕ್ಷಣೆಗೂ ಶರೀರದಲ್ಲೆಲ್ಲಾ ಏಚ್ಛಿಕಾನೈಚ್ಛಿಕ ಕಾರ್ಯಗಳು ನಡಿಯುವುದಕ್ಕೆ ಮುಖ್ಯಕಾರಣವಾಗಿರುವದರಿಂದ ಶರೀರದಲ್ಲಿ ಉಚ್ಚಸ್ಥಾನವನ್ನುಹೊಂದಿದೆ. ನರಮಂಡಲವು ಮನೋಧಿಷ್ಠಾನ ಜೀವಿತಾಧಿಷ್ಠಾನ, ಎಂದು ಎರಡು ಭಾಗಗಳಾಗಿವೆ. ಮೆದುಳು ಮೆದುಳುಬಳ್ಳಿ ಇವುಗಳಿಂದ ಹೊರಡುವ ನರಗಳೂ ಮನೋಧಿಷ್ಠಾನಕ್ಕೆ ಸೇರಿವೆ. ಜೀವಿತಾನಧಿಷ್ಠಾನಕ್ಕೆ ಅನೇಕವಾದ ಚೈತನ್ಯಗ್ರಂಥಿಗಳು ಅವುಗಳಿಂದ ಹೊರಡುವ ನರಗಳು ಸೇರಿವೆ. ನರಮಂಡಲವು ಶರೀರಕ್ಕೆ ಮುಖ್ಯನಾದ ಅವಯವವನಾದುದರಿಂದ ಅದು ಗಟ್ಟಿಯಾಗಿರುವ ತಲೆಬುರುಡೆಯಲ್ಲಿ ಕಾಪಾಡಲ್ಪಟ್ಟಿದೆ. ಇದಕ್ಕೆ ಸಂಬಧಪಟ್ಟ ಮೆದಳುಬಳ್ಳಿಯು ಬೆನ್ನು ಮೂಳೆಗಳೊಳಗೆ ಇರುವ ನಳ್ಳಿಯಲ್ಲಿ ಕಾಪಾಡಲ್ಪಟ್ಟಿದೆ. ಈಪೆದಳಿನಲ್ಲಿ ಶರೀರದ ಇತರಭಾಗಗಳಿಗಿಂತ ಅತಿಸೂಕ್ಷ್ಮವಾದ ರಕ್ತನಾಳಗಳಿಂದ ರಕ್ತವು ಸಂಚರಿಸುತ್ತದೆ. ಮೆದುಳಿನಲ್ಲಿ ನಮ್ಮ ಪಂಚೇಂ

ಶಾಖವು ಸಮನಾಗಿಯೇ ಇರುವದು. ನಮ್ಮ ಶರೀರಸಾಮಗ್ರಿಗಳಲ್ಲಿ ಇಂಗಾಲವೂ ಜಲಜನಕವೂ ಬಹಳವಾಗಿರುವವು. ಶ್ವಾಸೋಚ್ಛ್ವಾಸಗಳ ವಿಷಯವಾಗಿ ಹೇಳುವಾಗ ನಾವು ಉಚ್ಛ್ವಾಸದ ಮೂಲಕ ಹೊರಗಿನ ವಾಯುವನ್ನು ತೆಗದುಕೊಳ್ಳುತ್ತೇವೆಂದು ಹೇಳಿದೆವು. ಹೀಗೆ ತೆಗದುಕೊಂಡ ಹೊರಗಿನ ವಾಯುವಿನಲ್ಲಿ ಆಮ್ಲಜನಕವೂ ಅಧಿಕವಾಗಿದೆಯೆಂತಲೂ ಅದು ನಮ್ಮ ಶ್ವಾಸಕೋಶಗಳ ಮೂಲಕ ರಕ್ತಗತವಾಗಿ ಶರೀರದ ಎಲ್ಲಾ ಭಾಗಗಳಿಗೂ ವ್ಯಾಪಿಸುತ್ತದೆ ಎಂದು ಹೇಳಿದೆವು. ಈ ಆಮ್ಲಜನಕವು ಶರೀರದಲ್ಲಿರುವ ಇಂಗಾಲ ಜಲಜನಕಗಳೊಡನೆ ಸಂಯೋಗವಾಗುವದರಿಂದ ಇಂಗಾಲಾಮ್ಲವೂ ನೀರೂ ಉಂಟಾಗುವದಲ್ಲದೆ ಶಾಖವೂ ಉಂಟಾಗುವದು. ನಮ್ಮ ಶ್ವಾಸಕೋಶಗಳ ಮೂಲಕ ನಾವು ತೆಗದುಕೊಳ್ಳುವ ಆಮ್ಲಜನಕವು ನಮ್ಮ ಶರೀರಸಾಮಗ್ರಿಗಳ ಸಂಗಡ ಸಂಯೋಗವಾಗುವದೇ ಶರೀರದಲ್ಲಿ ಶಾಖೋತ್ಪತ್ತಿಯಾಗುವದಕ್ಕೆ ಕಾರಣವಾಗಿದೆ. ಆದರೆ ಕೆಲವು ಭಾಗಗಳಲ್ಲಿ ಶಾಖವು ಅಧಿಕ ಉತ್ಪತ್ತಿಯಾಗುತ್ತದೆ. ಹೇಗೆಂದರೆ ಶರೀರದಲ್ಲಿ ಮಾಂಸಖಂಡಗಳು ಬಹಳವಾಗಿರುವದರಿಂದಲೂ ಚಲನಾದಿ ಕಾರ್ಯಗಳು ಅವುಗಳಿಂದ ನಡಿಯುವುದರಿಂದಲೂ ಅವುಗಳಲ್ಲಿ ಶಾಖವು ಹೆಚ್ಚಾಗಿ ಉತ್ಪತ್ತಿಯಾಗುವದು. ಮಾಂಸಖಂಡಗಳಿಗಿಂತ ಶಾಖವು ಕಡಮೆಯಾಗಿ ಪಿತ್ತಜನಕಾಂಗ ಮೆದುಳು ಇವುಗಳಲ್ಲಿ ಉತ್ಪತ್ತಿಯಾಗುವದು. ಅದೇ ಮನುಷ್ಯಜೀವವಿರುವರಿಗೆ ಪ್ರತಿ ಅವಯವದಲ್ಲಿಯೂ ಸ್ವಲ್ಪ ಹೆಚ್ಚು ಕಡಮೆ ಶಾಖವು ಉತ್ಪತ್ತಿಯಾಗುತ್ತಲೇ ಇರುವದು. ನಾವು ಹಿಂದೆ ಚಲನಾದಿ ಕಾರ್ಯಗಳಿಂದ ಶಾಖವು ಹೆಚ್ಚಾಗಿ ಉತ್ಪತ್ತಿಯಾಗುವದೆಂದು ಹೇಳಿದೆವು. ಮನುಷ್ಯನು ಯಾವ ಕೆಲಸವನ್ನು ಮಾಡದೆ ಇರುವಾಗ ಅವನಲ್ಲಿ ಉತ್ಪತ್ತಿಯಾಗುವ ಶಾಖವೂ ಶಕ್ತಿಯೂ ಅವನು ತೆಗೆದುಕೊಳ್ಳುವ ಆಹಾರದಿಂದಲೇ ಉಂಟಾಗುವವು. ಸಸಾರಜನಕದಿಂದಲೂ ಶರ್ಕರಪಿಷ್ಟಾದಿಗಳಿಗಿಂತಲೂ ಅವನಲ್ಲಿ ಶಾಖವು ಹೆಚ್ಚಾಗಿ ಉತ್ಪತ್ತಿಯಾಗುವದು. ಆದುದರಿಂದ ಥಳಿ ದೇಶಗಳಲ್ಲಿ ಉಷ್ಣದೇಶಕ್ಕಿಂತ ಹೆಚ್ಚಾಗಿ ಜಿಡ್ಡು ಪದಾರ್ಥಗಳನ್ನು ತಿನ್ನಬೇಕಾಗಿದೆ

ಮೇಲೆ ಶಾಖೋತ್ಪತ್ತಿಯಾಗುವ ವಿಧಾನಗಳನ್ನು ಹೇಳಿದೆವು, ಅಲ್ಲದೆ ಕೆಲವು ಅಂಗಗಳಲ್ಲಿ ಇತರ ಅಂಗಗಳಿಗಿಂತ ಹೆಚ್ಚಾಗಿ ಉತ್ಪತ್ತಿಯಾಗುವದೆಂಬುವದನ್ನು ತಿಳಿಸಿದೆವು. ಹೀಗೆ ಇರುವಾಗ ಶರೀರದ ಎಲ್ಲಾ ಭಾಗಗಳಲ್ಲೂ ಒಂದೇಸಮನಾಗಿರುವದಕ್ಕೆ ಏನು ಕಾರಣವೆಂಬುವದನ್ನು ನಾವು ಅವಶ್ಯಕವಾಗಿ ವಿಚಾರಿಸಿ ತಿಳಿಯಬೇಕಾಗಿದೆ.

ವನ್ನಿಟ್ಟವರಾರೆ. ಆ ಯಂತ್ರಕ್ಕೆ ಕೆಲವು ತಂತಿಗಳನ್ನು ತಗಲಿಸಿದವರೆ. ಆ ಯಂತ್ರದಲ್ಲಿ ವಿದ್ಯುಚ್ಛಕ್ತಿಯು ಉತ್ಪತ್ತಿಯಾಗಿ ಈ ತಂತಿಗಳ ಮಾರ್ಗವಾಗಿ ನಾವು ಕೊಟ್ಟ ಸಮಾಚಾರವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತೆಗದುಕೊಂಡುಹೋಗುವ ಹಾಗೆ ನಮ್ಮ ಶರೀರದ ಎಲ್ಲಾ ಭಾಗಗಳಿಗೂ ನರಮಂಡಲದಲ್ಲಿ ಉತ್ಪತ್ತಿಯಾದ ಒಂದು ಶಕ್ತಿಹೋಗಿ ಅವುಗಳ ಕೆಲಸಗಳನ್ನು ನಿರ್ಣಯವಾಡುತ್ತದೆ.) ಆ ತಂತಿಗಳಲ್ಲಿ ಯಾವದಾದರು ಒಂದನ್ನು ನಾವು ಕತ್ತರಿಸಿದರೆ ಅದರಮಾರ್ಗವಾಗಿ ಹೋಗುವ ಸಮಾಚಾರ ಅಲ್ಲೇ ನಿಲ್ಲುವದು. ಹೀಗೆ ನಮ್ಮ ಶರೀರದಲ್ಲಿ ಯಾವ ನರಗಳಿಗೆ ಅಪಾಯ ಬಂದರೆ ಅದು ಹೋಗತಕ್ಕ ಅಂಗವು ಸರಿಯಾಗಿ ಕೆಲಸಮಾಡುವದಿಲ್ಲ.

ಜೀವಿತಾಧಿಷ್ಠಾನ ಮತ್ತು ಅದಕ್ಕೆ ಸೇರಿದ ಮುಖ್ಯನರಗಳು

ನಾವು ಮೇಲೆ ವಿವರಿಸಿದ ಬೆನ್ನುಮೂಳೆಯಲ್ಲಿರುವ ನಲ್ಲಿಯಲ್ಲಿದೆಯೆಂದು ತಿಳಿಸಿದೆವು. ಈ ನಲ್ಲಿಯಿಂದ ಹುಟ್ಟಿದ ನರಗಳು ಬೆನ್ನುಮೂಳೆಯ ಎರಡುಪಾರ್ಶ್ವಗಳನ್ನು ಬಿಟ್ಟು ಹೊರಡುವಾಗ ಸಣ್ಣಸಣ್ಣ ಕವಲಾಗಿ ಒಡೆದು ಬೆನ್ನು ಮೂಳೆಗಳ ಎರಡು ಮಾರ್ಗಗಳಲ್ಲಿಯೂ ಇರುವ ಗ್ರಂಥಿಗಳಿಗೆ ಹೋಗುತ್ತವೆ, ಈ ಗ್ರಂಥಿಗಳು ಒಂದರ ಮೇಲೊಂದು ಇದೆ. ಒಂದಕ್ಕೊಂದಕ್ಕೆ ಅತಿಸೂಕ್ಷ್ಮವಾದ ನರಗಳಿಂದ ಸೇರಿಸಲ್ಪಟ್ಟ ಬೆನ್ನುಮೂಳೆಯ ಉಭಯಪಾರ್ಶ್ವಗಳಲ್ಲಿಯೂ ಒಂದೊಂದು ಗ್ರಂಥಿಗಳಾಗಿದೆ. ಈ ಗ್ರಂಥಿಗಳು ಕತ್ತಿನಿಂದ ನಡುವಿನಮೂಳೆಯ ಕೊನೆವರಿಗೂ ಇವೆ. ಇವುಗಳಿಂದ ಅನೇಕ ಸೂಕ್ಷ್ಮನರಗಳು ಹೊರಟು ಎದೆಯಲ್ಲಿರತಕ್ಕ ಶ್ವಾಸಕೋಶಗಳು, ರಕ್ತಕೋಶ (ಹೃದಯ) ಮತ್ತು ರಕ್ತನಾಳಗಳಿಗೆ ಹೋಗುತ್ತವೆ. ಮತ್ತು ಉದರಾಂತರ್ದೇಶದಲ್ಲಿರುವ ಜಠರ, ಕರುಳುಗಳು, ಪಿತ್ತಜನಕಾಂಗ, ಗುಲ್ಮ, ಮೂತ್ರಜನಕಾಂಗಗಳಿಗೆ ಹೋಗುತ್ತವೆ. ಈ ನರಗಳ ಸಹಾಯದಿಂದ ಮೇಲಿಹೇಳಿದ ಅವಯವಗಳೆಲ್ಲಾ ಅದರದರ ಕಾರ್ಯಗಳನ್ನು ಸರಿಯಾಗಿ ಮಾಡುತ್ತವೆ.

ದ್ರಿಯಗಳಿಗೆ ಮುಖ್ಯಾಂಶವಾದ ನರಗಳು ಉತ್ಪನ್ನವಾಗಿವೆ. ಇವುಗಳಿಂದಲೆ ನಮ್ಮ ದರ್ಶನ-ಗ್ರಹಣ-ಶ್ವಾಸ-ರುಚಿ-ತಿಳುವಳಿಕೆ ಇವುಗಳೆಲ್ಲಾ ನಡೆಯುವವು. ಮತ್ತು ಮೆದಳು, ಬುದ್ಧಿ, ಗ್ರಹಣ, ಶಕ್ತಿ, ಭಾವ, ಸುಖದುಃಖಾದಿಗಳನ್ನುಂಟುಮಾಡುವ ಅವಯವವಾಗಿದೆ. ಮೆದಳುಬಳ್ಳಿಯಿಂದಲೂ ೩೩ ಜತೆ ನರಗಳು ಹೊರಟು ಶರೀರವನ್ನೆಲ್ಲಾ ಆಚ್ಛಾದಿಸಿಕೊಂಡಿರುವ ಚರ್ಮಕ್ಕೂ ಅದರಲ್ಲಿರುವ ಗ್ರಂಥಿಗಳಿಗೂ ಶರೀರದ ಚಲನಾದಿ ಕಾರ್ಯಗಳನ್ನೆಲ್ಲಾ ಉಂಟುಮಾಡುವ ಮಾಂಸಖಂಡಗಳಿಗೂ ಹೋಗಿ ಅವುಗಳು ಸರಿಯಾಗಿ ಕೆಲಸಮಾಡುವಹಾಗೆ ಮಾಡುತ್ತವೆ. ಈ ನರಗಳಿಗೆ ಏನಾದರೂ ಅಪಾಯ ಉಂಟಾದರೆ ಇವುಗಳು ಹೋಗಿಸೇರುವ ಅವಯವಗಳು ಕಾರ್ಯಗಳು ಅಕ್ರಮವಾಗುವವು. ಕೆಲವು ವೇಳೆಗಳಲ್ಲಿ ನಿಂತೇ ಹೋಗುವವು. ಮೆದಳುಬಳ್ಳಿಯಿಂದ ಚರ್ಮ ಮಾಂಸಖಂಡಗಳಿಗೆ ಹೋಗುವ ನರಗಳು ಕವಲುಕವಲಾಗಿ ಒಡೆದು ಅವುಗಳಲ್ಲಿ ಪ್ರಸರಿಸಿಕೊಂಡಿವೆ. ಈ ನರಗಳಲ್ಲಿ ಒಂದುವಿಧವಾದ ನರಗಳು ಆಯಾ ಅಂಗಗಳಿಗೆ ಏನಾದರೂ ಅಪಾಯಸಂಭವಿಸಿದಾಗ ಅದನ್ನು ಮಿದುಳಿಗೆ ತಿಳಿಸುತ್ತವೆ, ಕೂಡಲೆ ಇನ್ನೊಂದುವಿಧವಾದ ನರಗಳಿಂದ ಆ ಅವಯವಗಳು ಆಗ ಮಾಡತಕ್ಕ ಕಾರ್ಯಗಳನ್ನು ನಿಯಮಿಸುವುವು. ಉದಾಹರಣೆ-ನಾವು ಮಾರ್ಗದಲ್ಲಿ ನಡೆಯುತ್ತಿರುವಾಗ ಕಾಲಿಗೆ ಒಂದು ಮುಳ್ಳುಚುಚ್ಚಿದರೆ ಅದು ಆ ಭಾಗದಲ್ಲಿರುವ ನರದ ಕವಲುಗಳ ಮೂಲಕ ಸಣ್ಣನರಗಳಿಗೆ ತಿಳಿದು ಇವನ್ನು ಮಿದಳಿಗೆ ತೆಗೆದುಕೊಂಡುಹೋಗುತ್ತವೆ. ಈ ನರಗಳಿಗೆ ಜ್ಞಾನವಾಹಿಗಳೆಂದು ಹೆಸರು. ಆಗ ನಮಗೆ ನೋವು ಉಂಟಾಗುತ್ತದೆ. ನಾವು ತಿಳಿಯುವಷ್ಟರಲ್ಲಿ ಮಿದುಳುನಿಂದ ಇನ್ನೊಂದು ವಿಧವಾದ ನರಗಳ ಮಾರ್ಗವಾಗಿ ಕಾಲನ್ನು ತಕ್ಷಣವೆ ಎತ್ತುವದಕ್ಕೆ ಪ್ರಜ್ಞೆ ಬರುವದು. ಆಗ ಥಟ್ಟನೆ ನಾವು ಕಾಲನ್ನು ಎತ್ತಿನೋಡಿ ಮುಳ್ಳನ್ನು ತೆಗೆದುಹಾಕುವದಕ್ಕೆ ಪ್ರಯತ್ನಿಸುತ್ತೇವೆ. ಈ ನರಗಳಿಗೆ ಕ್ರಿಯಾವಾಹಿನಿಗಳೆಂದು ಹೆಸರು. ಹೀಗೆ ಎರಡುವಿಧವಾದ ನರಗಳಲ್ಲಿ ಯಾವದೊಂದು ನರಕ್ಕೆ ಅಪಾಯಸಂಭವಿಸಿದರೆ ಇವುಗಳು ಹೋಗಿ ಸೇರುವ ಅವಯವಗಳ ಕಾರ್ಯಗಳು ಕ್ರಮವಾಗಿ ನಡಿಯುವದಿಲ್ಲ. (ನರಮಂಡಲವನ್ನು ನಾವು ಸದಾಚಾರವನ್ನು ಒಂದುಕಡೆಯಿಂದ ಮತ್ತೊಂದುಕಡೆಗೆ ವಿದ್ಯುಚ್ಛಕ್ತಿಸಹಾಯದಿಂದ ತೆಗದುಕೊಂಡುಹೋಗುವ ಇಲಾಖೆಗೆ ಹೋಲಿಸಬಹುದು. ಮಿದಳು ಸದಾಚಾರವನ್ನು ಕಳುಹಿಸತಕ್ಕ ಮುಖ್ಯ ಆಫೀಸ್‌ಆಗಿದೆ. ಈ ಆಫೀಸಿನಲ್ಲಿ ವಿದ್ಯುಚ್ಛಕ್ತಿ ಉತ್ಪತ್ತಿಯಾಗುವ ಒಂದು ಯಂತ್ರ

ಅಸ್ತನಾಗದಿರುವನು. ಕರ್ಕಸಂಕ್ರಾಂತಿಯಲ್ಲಿ ಸೂರ್ಯನು ಪ್ರಕಾಶಿಸುವಕಾಲವು ದಿನೇ ದಿನೇ ಕಡಮೆಯಾಗುತ್ತಾ ಬಂದು ಜಲವಿಷುವದ ದಿವಸ ಅಹೋರಾತ್ರಿಗಳು ಒಂದೇ ಸಮವಾಗುವವು. ಜಲವಿಷುವದಲ್ಲಿಯೂ ಸೂರ್ಯನು ಪ್ರಕಾಶಿಸುವ ಕಾಲವು ದಿನೇ ದಿನೇ ಕಡಮೆಯಾಗುತ್ತಾ ಮಕರಸಂಕ್ರಾಂತಿಯ ದಿವಸ ಹಗಲು ಸಂವತ್ಸರದ ಎಲ್ಲಾ ದಿವಸಗಳ ಹಗಲಿಗಿಂತಲೂ ಕಡಮೆಯಾಗಿರುವದು. ರಾತ್ರಿಯು ಎಲ್ಲಾ ದಿವಸಗಳಿಗಿಂತಲೂ ಹೆಚ್ಚಾಗಿರುವದು. ಮಕರಸಂಕ್ರಾಂತಿಯಲ್ಲಿ ಹಗಲು ಕ್ರಮವಾಗಿ ದಿನೇದಿನೇ ಹೆಚ್ಚುತ್ತಾ ಮಹಾವಿಷುವದಿವಸ ಹಗಲೂ ರಾತ್ರಿಗಳೊಂದೇಸಮವಾಗುವವು. ಆದುದರಿಂದ ಮಕರಸಂಕ್ರಾಂತಿಯಲ್ಲಿಯೂ ಮಹಾವಿಷುವದಲ್ಲಿಯೂ ಹಗಲುಗಳು ಹೆಚ್ಚುತ್ತಾ ಬರುವವು. ಕರ್ಕಸಂಕ್ರಾಂತಿಯಲ್ಲಿಯೂ ಜಲವಿಷುವದಲ್ಲಿಯೂ ಕಡಮೆಯಾಗುತ್ತಾ ಬರುವವು. ಇದು ಉತ್ತರಧ್ರುವದಲ್ಲ ನಿಯತಕ್ಕ್ರಮ, ದಕ್ಷಿಣಧ್ರುವದಲ್ಲಿ ಇದೇ ರೀತಿಯಲ್ಲಿ ನಡೆದಾಗ್ಯೂ ಉತ್ತರಧ್ರುವದಲ್ಲಿ ಆಗುವದಕ್ಕೆ ವ್ಯತ್ಯಸ್ತವಾಗಿರುವದು. ಆದರೆ ಉತ್ತರಧ್ರುವದಲ್ಲಿ ಮಹಾವಿಷುವ ವೇಳೆಯಲ್ಲಿ ದಕ್ಷಿಣಧ್ರುವದಲ್ಲಿ ಜಲವಿಷುವವಾಗುವದು. ಉತ್ತರಧ್ರುವದಲ್ಲಿ ಕರ್ಕಸಂಕ್ರಾಂತಿಯಾಗುವಾಗ ದಕ್ಷಿಣಧ್ರುವದಲ್ಲಿ ಮಕರ ಸಂಕ್ರಾಂತಿಯಾಗುವದು.

ಈ ಋತುಧರ್ಮಗಳಿಗೆ ಕಾರಣಭೂತವಾದದ್ದು ಔಷ್ಣ್ಯವು. ಸೂರ್ಯನು ಆಕಾಶದಲ್ಲಿ ಬಹಳ ಹೊತ್ತಿದ್ದರೆ ಸೂರ್ಯನಿಂದ ಬರತಕ್ಕ ಔಷ್ಣ್ಯವು ಹೆಚ್ಚಾಗುವದು, ಇದಲ್ಲದೆ ಸೂರ್ಯನು ನೆತ್ತಿಗೆ ಸರಿಯಾಗಿ ಬಂದಹಾಗೆಲ್ಲಾ ಔಷ್ಣ್ಯವು ಹೆಚ್ಚುವದುಂಟು. ಆದುದರಿಂದ ಮಹಾವಿಷುವ ಕರ್ಕಸಂಕ್ರಾಂತಿಗಳು, ಜಲವಿಷುವ ಮಕರಸಂಕ್ರಾಂತಿಗಳಿಗಿಂತಲೂ ಹೆಚ್ಚಾದ ಶಾಖವುಳ್ಳವುಗಳಾಗಿರುತ್ತವೆ. ವಿಷುವದ್ರೇಖೆಯ ಸಮೀಪದಲ್ಲಿ ಎಲ್ಲಾ ದಿವಸಗಳಲ್ಲಿಯೂ ಹಗಲೂ ೧೨ಘಂಟೆಗಳುಳ್ಳದ್ದಾಗಿರುತ್ತವೆ. ಆದರೆ ಈ ರೇಖೆಯಬಳಿಯಲ್ಲಿ ಸೂರ್ಯನು ವರ್ಷಕ್ಕೆ ಎರಡುದಿವಸಗಳು ವಿನಾ ನೆತ್ತಿಗೆ ಸರಿಯಾಗಿರುವದಿಲ್ಲ. ಈ ಭಾಗಗಳಲ್ಲಿ ಎರಡು ಮಳೆಗಾಲಗಳೂ, ಎರಡು ಬಿಸಲುಕಾಲಗಳೂ ಇರುವವು. ಉತ್ತರಾಯಣದಲ್ಲಿ ಸೂರ್ಯನಬೆಳಕೂ, ಔಷ್ಣ್ಯವೂ ವಿಷುವದ್ರೇಖೆಯ ಉತ್ತರಭಾಗಗಳಲ್ಲಿ ವಿಶೇಷವಾಗಿ ಬೀಳುವವು. ಆಗ ಈ ಭಾಗಗಳಲ್ಲಿ ಬೇಸಿಗೆ ಎನ್ನಿಸಿಕೊಳ್ಳುವದು. ಆದೇ ಕಾಲದಲ್ಲಿ ವಿಷುವದ್ರೇಖೆಯ ದಕ್ಷಿಣಭಾಗದಲ್ಲಿರತಕ್ಕ ಪ್ರದೇಶಗಳಿಗೆಲ್ಲಾ ಸೂರ್ಯನಬೆಳಕೂ ಔಷ್ಣ್ಯವೂ ಕಡಮೆಯಾಗಿ ಬೀಳುವವು. ಆ ಭಾಗದಲ್ಲಿ

ಋತುಗಳು.

ಒಂದು ಮಾರವ ಗೋಳದವೀಲೆ ಒಂದುವರ್ಷದವರಿವಿಗೂ ಸೂರ್ಯನಸ್ಥಾನವನ್ನು ಪ್ರತಿದಿನವೂ ಒಂದು ಕ್ಲುಪ್ತವಾದ ಘಂಟೆಯಲ್ಲಿ ನಾವು ಗುರುತುಮಾಡುತ್ತಾ ಖಾದರೆ ಆ ಗುರುತುಗಳೆಲ್ಲಾ ಒಂದು ವಿಕಾರಾಕಾರದೆಲ್ಲರುವವು. ಆ ಚಕ್ರಕ್ಕೆ ರವಿಮಾರ್ಗ (Ecliptic) ಎಂದು ಹೆಸರು. ಈ ರವಿಮಾರ್ಗವನ್ನೂ, ವಿಷುವದ್ರೇಖೆಯನ್ನೂ (Eqator) ಅದೇ ಗೋಳದವೀಲೆ ಬರೆದದ್ದೇ ಆದರೆ ಒಂದನ್ನೊಂದೂ ಎರಡುಸ್ಥಳಗಳಲ್ಲಿ ಸಂಧಿಸುವವು. ಹೀಗೆ ಸಂಧಿಸುವ ಎರಡುಪ್ರದೇಶಗಳಿಗೂ ಅಯನಗಳೆಂದು ಹೆಸರು. ರವಿಮಾರ್ಗದಲ್ಲಿ ಅಯನಗಳಿಗೆ (Equinoctial Points) ಸಮದೂರದಲ್ಲಿರತಕ್ಕ ಸ್ಥಳಗಳಿಗೆ ಅಯನಾಂತರ (Solstical Points) ಗಳೆಂದು ಹೆಸರು. ಅಯನಗಳೂ (Equinestial Poiuts) ಮತ್ತು ಅಯನಾಂತರಗಳೂ(Solsti-cal Points) ರವಿಮಾರ್ಗವನ್ನು ೪ ಸಮಭಾಗಗಳನ್ನಾಗಿ ಭಾಗಿಸುವವು. ಆದರೆ ಸೂರ್ಯನೀಗವು ಅದರಮಾರ್ಗದಲ್ಲಿ ವ್ಯತ್ಯಸ್ತವಾಗಿರುವದರಿಂದ ಸಮಕಾಲಗಳಲ್ಲಿ ಈ ನಾಲ್ಕು ಭಾಗಗಳೂ ಸೂರ್ಯನಿಂದ ಸಂಚರಿಸಲ್ಪಡುವದಿಲ್ಲ. ಈ ನಾಲ್ಕು ಕಾಲಗಳಿಗೂ ಇಂಗ್ಲೀಷ್‌ಶಾಸ್ತ್ರಕರ್ತರು ನಾಲ್ಕು ಋತುಗಳೆಂದು ಹೇಳುವರು. ನಮ್ಮ ಶಾಸ್ತ್ರದಲ್ಲಿ ಇವುಗಳಿಗೆ ಮಹಾವಿಷುವ, ಕರ್ಕಸಂಕ್ರಾಂತಿ, ಜಲವಿಷುವ, ಮಕರಸಂಕ್ರಾಂತಿ ಎಂಬ ಹೆಸರುಗಳನ್ನು ಕೊಟ್ಟಿರುವರು. ಈ ಮಹಾವಿಷುವದ ಅವಧಿಯು ೯೨ ದಿವಸಗಳೂ ೨೨ ಘಂಟೆಗಳಾಗಿರುವವು. ಕರ್ಕಸಂಕ್ರಾಂತಿಯಕಾಲ ೯೩ದಿವಸಗಳೂ ೧೪ ಘಂಟೆಗಳಾಗಿರುವವು, ಜಲವಿಷುವ ೪೯ದಿವಸಗಳೂ ೧೩।ಘಂಟೆಗಳು. ಮಕರಸಂಕ್ರಾಂತಿ ೪೯ದಿವಸಗಳೂ ೧ಘಂಟೆ.

ಹಗಲಿನ ದೈರ್ಘ್ಯ :—

ಸೂರ್ಯನು ಅಯನಗಳಲ್ಲಿರುವಾಗ ವಿಷುವದ್ರೇಖೆಯುಮೇಲೂ ಇರುವನು. ಆದುದರಿಂದ ಆ ದಿವಸಗಳಲ್ಲಿ ಹಗಲೂ ರಾತ್ರಿಗಳು ಒಂದೇಸಮವಾಗಿರುವವು. ಮಹಾವಿಷುವದಲ್ಲಿ ಸೂರ್ಯನು ಪ್ರತಿದಿವಸವೂ ಧ್ರುವನಕ್ಷತ್ರದಕಡೆಗೆ ಜರುಗುತ್ತಾ ಬರುವನು. ಕರ್ಕಸಂಕ್ರಾಂತಿಯುದಿವಸ ಅವನು ಧ್ರುವನಕ್ಷತ್ರಕ್ಕೆ ಬಹಳ ಸವಿಾಪದಲ್ಲಿರುವನು. ಕರ್ಕಸಂಕ್ರಾಂತಿಯುದಿವಸ ಸೂರ್ಯನು ಸಂವತ್ಸರದ ವಿಕ್ಕದಿವಸಗಳಿಗಿಂತ ಹೆಚ್ಚುಕಾಲ

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ಇಂಗ್ಲೀಷು ವ್ಯಾಕರಣ ಮತ್ತು ಭಾಷೆ.	೨ ನೇ ಭಾಗಕ್ಕೆ ಹಾಸನದ ಗೌರ್ನಮೆಂಟ್ ಹೈಸ್ಕೂಲ್ ಹೆಡ್ಮಾಸ್ಟರು ಮೆ॥ ಎಸ್. ಕ್ರೆಸ್. ಬಿ. ಎ. ಯವರು, ೧ ನೇ ಭಾಗಕ್ಕೆ ತುಮಕೂರು ಗೌರ್ನಮೆಂಟ್ ಹೈಸ್ಕೂಲ್ ಹೆಡ್ಮಾಸ್ಟರು ಮೆ॥ ರಾ॥ ಸಿ ಕೃಷ್ಣರಾವ್ ಬಿ. ಎ ಯವರು.
ಇಂಗ್ಲೀಷು ಬರವಣಿಗೆ ಮತ್ತು ಉಕ್ತಲೇಖನ.	ಮೈಸೂರು ಮೆಸ್ಸರ್ಸ್ ವಿ.ಕೆ.ಕೆ ಹೈಸ್ಕೂಲ್ ಪ್ರಿನ್ಸಿಪಲ್ ರೆವರೆಂಡ್ ಯಿ. ಯಸ್ ಯಡ್ವರ್ಡ್ಸ್‌ರವರು.
ಲೋವರ್ ಸೆಕೆಂಡರಿಪರೀಕ್ಷೆಗೆ ಭಾಷಾಂತರ.	ಮೈಸೂರು ಎಜ್ಯುಕೇಷನ್ ಡಿಪಾರ್ಟ್‌ಮೆಂಟ್ ಟ್ರಾನ್ಸ್‌ಲೇಟರು ಮೆ॥ ಎಂ. ಬಿ. ಶ್ರೀನಿವಾಸೈಯ್ಯಂಗಾರ್ ಎಂ ಎ. ಯವರು.
ಲೋವರ್‌ಸೆಕೆಂಡರಿ ಇಂಗ್ಲೀಷು ವಿದ್ಯಾರ್ಥಿಗಳಿಗೆ ಮಾತ್ರ ಗಣಿತ.	ಮೈಸೂರು ಮಹಾರಾಣಿಯವರ ಕಾಲೇಜು ಹೆಡ್ಮಾಸ್ಟರು ಮೆ॥ ಎಸ್ ವಲ್ಲಾರಿ ರಾವ್ ಬಿ. ಎ. ಯವರು.
ರೇಖಾ ಮತ್ತು ಬೀಜಗಣಿತ ಇಂಗ್ಲೀಷುವಿದ್ಯಾರ್ಥಿಗಳಿಗೆ ಮಾತ್ರ.	ಬೆಂಗಳೂರು ಸೆಂಟ್ರಲ್ ಕಾಲೇಜು ಮಾಥೆಮಾಟಿಕ್ಸ್ ಪ್ರೊಫೇಸರಾದ ಮೆ॥ ಆರ್. ವೆಂಕಟರಾಮೈಯ್ಯ ಬಿ. ಎ. ಯವರು.
ಗಣಿತ. ಲೋವರ್ ಮತ್ತು ಅಪ್ಪರ್ ಸೆಕೆಂಡರಿ ಪರೀಕ್ಷೆಗೆ (ಇಂಗ್ಲೀಷು ವಿದ್ಯಾರ್ಥಿಗಳಿಗೆ ಹೊರ್ತು)	ಕೋಲಾರದ ಗೌರ್ನಮೆಂಟ್ ಹೈಸ್ಕೂಲ್ ಹೆಡ್ಮಾಸ್ಟರು ಮೆ॥ ಯಮ್. ಕೆ. ಶ್ರೀಮಲಾಚಾರ್ ಬಿ. ಎ. ಯವರು.
ಅಪ್ಪರ್ ಸೆಕೆಂಡರಿ ಪರೀಕ್ಷೆಗೆ-ರೇಖಾ, ಕ್ಷೇತ್ರ ಮತ್ತು ಬೀಜಗಣಿತ ಲೋವರ್ ಸೆಕೆಂಡರಿ ಪರೀಕ್ಷೆಗೆ ಕ್ಷೇತ್ರಗಣಿತ.	ಮೈಸೂರು ಮಹಾರಾಜಾ ಕಾಲೇಜ್ ಸಹಾಯೋಪಾಧ್ಯಾಯರಾದ ಮೆ॥ ಎಸ್. ಆರ್. ಕೃಷ್ಣಮೂರ್ತಿ ಬಿ. ಎ. ಯವರು.

ಚಳಿಗಾಲವು ನೆಲಗೊಂಡಿರುವದು. ದಕ್ಷಿಣಾಯನದಲ್ಲಿ ವಿಷುವದ್ರೇಖೆಯು ದಕ್ಷಿಣದಲ್ಲಿ ಬೇಸಿಗೆಯೂ ಅದರ ಉತ್ತರಭಾಗದಲ್ಲಿ ಚಳಿಗಾಲವೂ ಇರುವವು. ಈ ೨ ಮುಖ್ಯವಾದ ಋತುಗಳು. ಇವಕ್ಕೆಲ್ಲಾ ಭೂಮಿಯ ಚಲನೆಯಿಂದಲೂ, ಭೂಮಿಗೂ ಸೂರ್ಯನಿಗೂ ಇರತಕ್ಕ ಸಂಬಂಧದಿಂದಲೂ ಸೂರ್ಯನಬೆಳಕು ವಿಷುವದ್ರೇಖೆಯ ಉತ್ತರಕ್ಕೂ ದಕ್ಷಿಣಕ್ಕೂ ಬೀಳುವದು ಮುಖ್ಯಕಾರಣವು. ಇತರ ಋತುಗಳು ಸೂರ್ಯನಬೆಳಕೂ ಭೂಮ್ಯಾವೂ ವಿಷುವದ್ರೇಖೆಯ ಪೂರ್ವ ಮತ್ತು ದಕ್ಷಿಣಭಾಗದ ಪ್ರದೇಶದಲ್ಲಿ ಹೆಚ್ಚು ಕಡಮೆಯಾಗಿ ಬೀಳುವದರಿಂದ ಉಂಟಾಗತಕ್ಕವುಗಳಾಗಿರುತ್ತವೆ.

ಸರ್ಕುಲರುಗಳು.

೧೯೦೦—೧೯೦೧ ನೇ ಸಾ॥ ನಂ॥ ೧. ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ರವರ ಆಫೀಸಿನಿಂದ.

ತಾ॥ ೧೯೦೦ ನೇ ಇಸವಿ ಜುಲೈ ೧೨.

ಬೆಂಗಳೂರು.

ಎಲ್ಲಾ ಎ. ವಿ. ಸ್ಕೂಲು ಮತ್ತು ಹೈಸ್ಕೂಲುಗಳ ಮುಖ್ಯೋಪಾಧ್ಯಾಯರುಗಳಿಗೆ.

ಕೋಲಾರದ ಹೈಸ್ಕೂಲು ಅಸಿಸ್ಟೆಂಟ್ ಮ್ಯಾಸ್ಟರು ಮೆ॥ ಎ. ಕೃಷ್ಣಾಚಾರ್ ಎಂಬುವರಿಂದ ರಚಿತವಾಗಿರುವ ಭಾಷಾಂತರ ಬೋಧನಿಯು ಮೊದಲನೇ ಭಾಗವು ೧ ಮತ್ತು ೨ ನೇ ತರಗತಿಗಳಲ್ಲಿ ಭಾಷಾಂತರಾಭ್ಯಾಸ ಮಾಡಿಸಲು ಉಪಯೋಗಿಸುವದಕ್ಕೆ ತಕ್ಕದ್ದಾಗಿರುತ್ತದೆ.

(ರುಜು)

ಎಚ್. ಜೆ. ಬಾಬಾ,

ಇನ್ಸ್‌ಪೆಕ್ಟರ್ ಜನರರ್.

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ಅಪ್ಪರ್ ಸೆಕೆಂಡರಿಪರೀಕ್ಷೆಯ ಹಿಂದುಸ್ಥಾನೀ ಟೆಕ್ಸ್ಟ್, ಹಿಂದುಸ್ಥಾನಿ ಮತ್ತು ಪರಿಷಿರ್ಯಭಾಷೆಯ ಭಾಷಾಂತರ. ಮತ್ತು (ಲೋವರ್‌ಸೆಕೆಂಡರಿ ಪರೀಕ್ಷೆಗೆ) ಹಿಂದೂಸ್ಥಾನೀ ಟೆಕ್ಸ್ಟ್, ವ್ಯಾಕರಣ ವಾಕ್ಯರಚನೆ, ಹಿಂದುಸ್ಥಾನೀ ಕೈಬರಹ, ಪರಿಷಿರ್ಯಕೈಬರಹ, ಪರಿಷಿರ್ಯಭಾಷಾಂತರ. ಡಿ ಉಕ್ತಲೇಖನ ಡಿ ಕೈಬರಹ	ಮೈಸೂರು ಮುಂಡಿವೊಹಲ್ಲಾದಲ್ಲಿರುವ ಮೌಲ್ವಿಸಯ್ಯದ್ ಮಹಬುಬಿ ಸಾಹೇಬರವರು. ಬೆಂಗಳೂರು ಹಿಂದೂಸ್ಥಾನಿ ಸ್ಕೂಲುಗಳ ಡೆಪ್ಯುಟಿ ಇನ್‌ಸ್ಪೆಕ್ಟರ್ ಮೆ॥ ಸೈಯದ್‌ತಾಜಾಪೀರಾಖ ಬಿ. ಎ. ಯವರು ಹಿಂದುಸ್ಥಾನಿ ಮತ್ತು ಪರಿಷಿರ್ಯ ಭಾಷೆಯ ಟ್ಯಾಬಿಲೇಟರ್.
ಅಪ್ಪರ್‌ಸೆಕೆಂಡರಿಯ ಪರೀಕ್ಷೆಯುಹಿಂದುಸ್ಥಾನಿ ಚರಿತ್ರೆ, ಭೂಗೋಳ, ಗಣಿತ, ರೇಖಾ ಮತ್ತು ಬೀಜಗಣಿತ, ಕ್ಷೇತ್ರಗಣಿತ, ವ್ಯವಸಾಯ, ಆರೋಗ್ಯ, ಶಾರೀರಶಾಸ್ತ್ರ ಮತ್ತು ಲೋವರ್‌ಸೆಕೆಂಡರಿ ಪರೀಕ್ಷೆಯ ಹಿಂದೂಸ್ಥಾನೀ ಭಾಷಾಂತರ, ಗಣಿತ ಹಿಂದೂದೇಶದ ಚರಿತ್ರೆ, ಭೂಗೋಳ, ನಕ್ಷೆಬರೆಯುವದು, ಆರೋಗ್ಯ ಮತ್ತು ವ್ಯವಸಾಯಶಾಸ್ತ್ರಗಳಿಗೆ.	ಬೆಂಗಳೂರು ಕೋಟೆ ಬಳಿ ಲಷ್ಕರ್ ಲೈನಲ್ಲಿರುವ ಮೆ॥ ಮಹಮ್ಮದ್‌ಬೇಗ್ ಬಿ. ಎ. ಯವರು.

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ಕನ್ನಡಟೆಕ್ಸ್ಟ್-(ಅಪ್ಪರ್‌ಸೆಕೆಂಡರೀಪರೀಕ್ಷೆಗೆ) ಕನ್ನಡವ್ಯಾಕರಣ-(ಲೋಪರ್‌ಸೆಕೆಂಡರಿಪರೀಕ್ಷೆಗೆ)	ಮೈಸೂರು ಗೌರ್ನಮೆಂಟ್ ಓರಿಯಂಟಲ್ ಸಂಸ್ಕೃತ ಪುಸ್ತಕಭಂಡಾರದ ಲೈಬ್ರರಿಯರ್ ಮೆ॥ ಎಸ್. ಜಿ. ನರಸಿಂಹಾಚಾರ್ಯರು.
ಕನ್ನಡಟೆಕ್ಸ್ಟ್—(ಲೋವರ್‌ಸೆಕೆಂಡರೀಪರೀಕ್ಷೆಗೆ) ಕನ್ನಡವ್ಯಾಕರಣ (ಅಪ್ಪರ್ ...)	ಮೈಸೂರು ಗೌರ್ನಮೆಂಟ್ ಕನ್ನಡ ಸ್ಕೂಲ್ ಸಹಾಯೋಪಾಧ್ಯಾಯರಾದ ಮೆ॥ ಡಿ. ವೆಂಕಟನಾರಣಯ್ಯನವರು.
ವಾಕ್ಯರಚನೆ-(ಲೋವರ್ ಮತ್ತು ಅಪ್ಪರ್‌ಸೆಕೆಂಡರೀ ಪರೀಕ್ಷೆಗಳಿಗೆ.	ಮೆ॥ ರಾ॥ ಆರ್. ನರಸಿಂಹಾಚಾರ್ಯರು ಎಂ. ಎ. ಶಾಸನದ ಜಲಾಖ.
ಕನ್ನಡ ಉಕ್ತಲೇಖನ- ಲೋವರ್‌ಸೆಕೆಂಡರಿಪರೀಕ್ಷೆಗೆ)	ಮೈಸೂರು ಎಡ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್ ರವರ ಆಫೀಸಿನ ಮ್ಯಾನೇಜರ್ ಮೆ॥ ಸಿ. ವಾಸುದೇವಯ್ಯನವರು.
ಕನ್ನಡಬರವಣಿಗೆ-(ಲೋವರ್‌ಸೆಕೆಂಡರಿಪರೀಕ್ಷೆಗೆ	ಮೈಸೂರು ವೆಸ್ಲ್ಯನ್ ಮಿಷನ್ ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಮೆ॥ ಎಂ. ಎ. ರಾಮಾನುಜೈಯ್ಯಂಗಾರ್ಯರವರು.
ಹಿಂದುಸ್ತಾನೀ ವ್ಯಾಕರಣ ಮತ್ತು ಫಾರಸೀ ಭಾಷಾ ಪುಸ್ತಕಗಳು (ಅಪ್ಪರ್‌ಸೆಕೆಂಡರೀ ಪರೀಕ್ಷೆಗೆ) ಮತ್ತು ಫಾರಸಿ ವ್ಯಾಕರಣ ಮತ್ತು ಉಕ್ತ ಲೇಖನ ಇತರ ಭಾಷಾಪುಸ್ತಕಗಳು (ಲೋವರ್‌ಸೆಕೆಂಡರೀಪರೀಕ್ಷೆಗೆ)	ಮೈಸೂರು ಗೌರ್ನಮೆಂಟ್ ನಾರ್ಮಲ್ ಸ್ಕೂಲು ಹಿಂದುಸ್ತಾನಿ ಮುನಸಿಯುವರು ಮೆ॥ ಮೌಲ್ವಿವಿಸಾರ್‌ಹುಯಾತ್ ಸಾಹೇಬರವರು.

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ಅಪ್ಪರ್ ಸೆಕೆಂಡರಿಪರೀಕ್ಷೆಯ ಹಿಂದುಸ್ಥಾನೀ ಟೆಕ್ಸ್ಟ್, ಹಿಂದುಸ್ತಾನಿ ಮತ್ತು ಪರಿಷಿಯರ್ಟ್ ಭಾಷೆಯ ಭಾಷಾಂತರ. ಮತ್ತು (ಲೋವರ್ ಸೆಕೆಂಡರಿ ಪರೀಕ್ಷೆಗೆ) ಹಿಂದೂಸ್ತಾನೀ ಟೆಕ್ಸ್ಟ್, ವ್ಯಾಕರಣ ವಾಕ್ಯರಚನೆ, ಹಿಂದುಸ್ತಾನೀ ಕೈಬರಹ, ಪರಿಷಿಯರ್ಟ್ ಕೈಬರಹ, ಪರಿಷಿಯರ್ಟ್ ಭಾಷಾಂತರ. ಡಿ ಉಕ್ತಲೇಖನ ಡಿ ಕೈಬರಹ	ಮೈಸೂರು ಮುಂಡಿವೊಹಲ್ಲಾದಲ್ಲಿರುವ ಮೌಲ್ವಿಸಯ್ಯದ್ ಮಹಬೂರ್ಬಿ ಸಾಹೇಬರವರು. ಬೆಂಗಳೂರು ಹಿಂದೂಸ್ತಾನಿ ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರ್ ಮೆ॥ ಸೈಯದ್ತಾಜಾಪೀರಾರ್ಟ್ ಬಿ. ಎ. ಯವರು ಹಿಂದುಸ್ತಾನಿ ಮತ್ತು ಪರಷಿಯರ್ಟ್ ಭಾಷೆಯ ಟ್ಯಾಬಿಲೇಟರ್.
ಅಪ್ಪರ್ಸೆಕೆಂಡರಿಯ ಪರೀಕ್ಷೆಯಹಿಂದುಸ್ತಾನಿ ಚರಿತ್ರೆ, ಭೂಗೋಳ, ಗಣಿತ, ರೇಖಾ ಮತ್ತು ಬೀಜಗಣಿತ, ಕ್ಷೇತ್ರಗಣಿತ, ವ್ಯವಸಾಯ, ಆರೋಗ್ಯ, ಶಾರೀರಶಾಸ್ತ್ರ ಮತ್ತು ಲೋವರ್ಸೆಕೆಂಡರಿ ಪರೀಕ್ಷೆಯ ಹಿಂದೂಸ್ತಾನೀ ಭಾಷಾಂತರ, ಗಣಿತ ಹಿಂದೂದೇಶದ ಚರಿತ್ರೆ, ಭೂಗೋಳ, ನಕ್ಷೆಬರೆಯುವದು, ಆರೋಗ್ಯ ಮತ್ತು ವ್ಯವಸಾಯಶಾಸ್ತ್ರಗಳಿಗೆ.	ಬೆಂಗಳೂರು ಕೋಟೆ ಬಳಿ ಲಷ್ಕರ್ ಲೈನ್ನಲ್ಲಿರುವ ಮೆ॥ ಮಹಮ್ಮದ್ಬೇಗ್ ಬಿ. ಎ. ಯವರು.

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ಕನ್ನಡಟೆಕ್ಸ್ಟ್-(ಅಪ್ಪರ್‌ಸೆಕೆಂಡರೀಪರೀಕ್ಷೆಗೆ) ಕನ್ನಡವ್ಯಾಕರಣ-(ಲೋಅರ್‌ಸೆಕೆಂಡರಿಪರೀಕ್ಷೆಗೆ)	ಮೈಸೂರು ಗೌರ್ನಮೆಂಟ್ ಓರಿಯಂಟಲ್ ಸಂಸ್ಕೃತ ಪುಸ್ತಕಭಂಡಾರದ ಲೈಬ್ರಿಯರ್ ಮೆ॥ ಎಸ್. ಜಿ. ನರಸಿಂಹಾಚಾರ್ಯರು.
ಕನ್ನಡಟೆಕ್ಸ್ಟ್—(ಲೋವರ್‌ಸೆಕೆಂಡರೀಪರೀಕ್ಷೆಗೆ) ಕನ್ನಡವ್ಯಾಕರಣ (ಅಪ್ಪರ್ ...)	ಮೈಸೂರು ಗೌರ್ನಮೆಂಟ್ ಕನ್ನಡ ಸ್ಕೂಲ್ ಸಹಾಯೋಪಾಧ್ಯಾಯರಾದ ಮೆ॥ ಡಿ. ವೆಂಕಟನಾರಣಯ್ಯನವರು.
ವಾಕ್ಯರಚನೆ-(ಲೋವರ್ ಮತ್ತು ಅಪ್ಪರ್‌ಸೆಕೆಂಡರೀ ಪರೀಕ್ಷೆಗಳಿಗೆ.	ಮೆ॥ ರಾ॥ ಆರ್. ನರಸಿಂಹಾಚಾರ್ಯರು ಎಂ. ಎ. ಶಾಸನದ ಇಲಾಖೆ.
ಕನ್ನಡ ಉಕ್ತಲೇಖನ- ಲೋವರ್‌ಸೆಕೆಂಡರಿಪರೀಕ್ಷೆಗೆ)	ಮೈಸೂರು ಎಜ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್ ರವರ ಆಫೀಸಿನ ವ್ಯಾನೇಜರ್ ಮೆ॥ ಸಿ. ವಾಸುದೇವಯ್ಯನವರು.
ಕನ್ನಡಬರವಣಿಗೆ-(ಲೋವರ್‌ಸೆಕೆಂಡರಿಪರಿಕ್ಷೆಗೆ	ಮೈಸೂರು ವೆಸ್ಲ್ಯನ್ ಮಿಷನ್ ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಮೆ॥ ಎಂ. ಎ. ರಾಮಾನುಜೈಯ್ಯಂಗಾರ್ರವರು.
ಹಿಂದುಸ್ತಾನೀ ವ್ಯಾಕರಣ ಮತ್ತು ಫಾರಸೀ ಭಾಷಾ ಪುಸ್ತಕಗಳು (ಅಪ್ಪರ್‌ಸೆಕೆಂಡರೀ ಪರೀಕ್ಷೆಗೆ) ಮತ್ತು ಫಾರಸಿ ವ್ಯಾಕರಣ ಮತ್ತು ಉಕ್ತ ಲೇಖನ ಇತರ ಭಾಷಾಪುಸ್ತಕಗಳು (ಲೋವರ್‌ಸೆಕೆಂಡರೀಪರೀಕ್ಷೆಗೆ)	ಮೈಸೂರು ಗೌರ್ನಮೆಂಟ್ ನಾರ್ಮಲ್ ಸ್ಕೂಲು ಹಿಂದುಸ್ತಾನಿ ಮುನಷಿಯವರು ಮೆ॥ ಮೌಲ್ವಿವಿಖಾರ್‌ಹುಯಾತ್ ಸಾಹೇಬರವರು.

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ಭೌತಿಕಶಾಸ್ತ್ರ—ಅಪ್ಪರ್‌ಸೆಕೆಂಡರೀಪರೀಕ್ಷೆ—ಭೌತಿಕಭೂಗೋಳಶಾಸ್ತ್ರ (ಲೋವರ್‌ಸೆಕೆಂಡರಿಪರಿಕ್ಷೆ-ಭೂಗೋಳ, ನಕ್ಷೆ ಅಪ್ಪರ್‌ಸೆಕೆಂಡರೀಪರೀಕ್ಷೆ.	ಮೈಸೂರು ಮಹಾರಾಣಿ ಕಾಲೇಜಿನ ಸಹಾಯೋಪಾಧ್ಯಾಯರಾದ ಮೆ॥ ಕೆ. ಸಂಜೀವಸೆಟ್ಟಿ ಬಿ. ಎ. ಯವರು.
ಲೋವರ್‌ಸೆಕೆಂಡರೀಪರೀಕ್ಷೆಯು ಹಿಂದೂಚರಿತ್ರೆ ಮತ್ತು ಅಪ್ಪರ್‌ಸೆಕೆಂಡರೀ ಪರೀಕ್ಷೆಯ ಚರಿತ್ರೆ	ಲೋವರ್ ಮತ್ತು ಅಪ್ಪರ್‌ಸೆಕೆಂಡರೀಪರೀಕ್ಷೆ ಹಿಂದೂಚರಿತ್ರೆಯು ೨ನೇ ಭಾಗಕ್ಕೆ ತುಮಕೂರು ಸ್ಕೂಲ್‌ಗಳ ಅಸಿಸ್ಟೆಂಟ್ ಡೆಪ್ಯೂಟಿಇನ್‌ಸ್ಪೆಕ್ಟರ್ ಮೆ। ಯಸ್. ಶಾಮರಾವ್ ಬಿ. ಎ. ಯವರು, ಮತ್ತು ಲೋವರ್ ಸೆಕೆಂಡರೀ ಪರೀಕ್ಷೆಯು ಹಿಂದೂಚರಿತ್ರೆ ಮತ್ತು ಅಪ್ಪರ್‌ಸೆಕೆಂಡರೀಪರೀಕ್ಷೆಯು ಇಂಗ್ಲೀಷು ಚರಿತ್ರೆಯು ೧ನೆ ಭಾಗಕ್ಕೆ ಚನ್ನಪಟ್ಟಣದ ಗೌ। ಹೈಸ್ಕೂಲ್ ಹೆಡ್‌ಮಾಸ್ಟರಾದ ಮೆ। ಯಂ. ಕೃಷ್ಣಯ್ಯಂಗಾರ್ ಬಿ. ಎ. ಯವರು.
ಲೋವರ್‌ಸೆಕೆಂಡರೀಪರೀಕ್ಷೆ ನಕ್ಷೆಬರೆಯುವದು	ಮೈಸೂರು ಇಂಡಸ್ಟ್ರಿಯಲ್‌ಸ್ಕೂಲ್ ಸೂಪ್ರಿಂಡೆಂಟ್‌ರಾದ ಮೆ। ಎಂ. ಬಿ. ಶ್ರೀನಿವಾಸಅಯಂಗಾರ್ ಬಿ. ಎ. ಯವರು.
ಡಿ ಭೂಗೋಳಶಾಸ್ತ್ರ.	ಮೈಸೂರು ದೇಶೀಯಪರೀಕ್ಷೆಯ ಮ್ಯಾನೇಜರ್ ವಿ॥ ಎಸ್. ಗೋಪಾಲರಾಯರು, ಬೆಂಗಳೂರ.
ಪಾಕಶಾಸ್ತ್ರ ಲೋವರ್‌ಸೆಕೆಂಡರೀಪರೀಕ್ಷೆ.	ಮಹಾರಾಣಿಕಾಲೇಜಿನ ಸಹಾಯೋಪಾಧ್ಯಾಯಿನಿಯರಾದ ಕೆ. ವಿ. ಡಿ. ರುಕ್ಮಿಣಿಯಮ್ಮ ಎಫ್. ಎ. ಯವರು.
ಕಸೂತಿಕಲಸ ಲೋವರ್ ಮತ್ತು ಅಪ್ಪರ್‌ಸೆಕೆಂಡರೀಪರೀಕ್ಷೆ.	ಬೆಂಗಳೂರು ವೆಸ್ಲಿಯನ್ ಮಿಷನ್ ಮಿಸ್। ವೈಟ್‌ರವರು. ಮತ್ತು ಬಾಲಿಕಾಪಾಠಶಾಲೆಗಳ ಲೇಡೀಸೂಪರಿಂಟೆಂಡೆಂಟರವರಾದ ಮಿಸ್. ಯಸ್. ಎಫ್. ರಾಜಗೋಪಾಲಯವರು.
ಸಂಗೀತ ಅಪ್ಪರ್‌ಸೆಕೆಂಡರೀ ಪರೀಕ್ಷೆ.	ಮೆ। ರಾ। ಆರ್. ನರಸಿಂಹಾಚಾರ್ಯರು ಎಂ. ಎ. ಶಾಸನದ ಇಲಾಖೆ.

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ಸಂಸ್ಕೃತ ಟಿಕ್ಸ್ಟ್ ಮತ್ತು ವ್ಯಾಕರಣ-(ಅಪ್ಪರ್ ಸೆಕೆಂಡರಿಯ ಪರೀಕ್ಷೆಗೆ) ಲೋವರ್ ಸೆಕೆಂಡರೀ ಪರೀಕ್ಷೆಯ ಸಂಸ್ಕೃತ ಟಿಕ್ಸ್ಟ್ ಮತ್ತು ವ್ಯಾಕರಣ, ಭಾಷಾಂತರ, ಕೈಬರಹ, ಉಕ್ತಲೇಖನ.	ಬೆಂಗಳೂರು ಸೆಂಟ್ರಲ್ ಕಾಲೇಜು ಸಂಸ್ಕೃತಪಂಡಿತರಾದ ವೆ॥ ವಿಶ್ವೇಶ್ವರ ಶಾಸ್ತ್ರಿಯವರು.
ಸಂಸ್ಕೃತ ಭಾಷಾಂತರ-(ಅಪ್ಪರ್ ಸೆಕೆಂಡರೀ ಪರೀಕ್ಷೆಗೆ ವ್ಯಾಕರಣ, ಟಿಕ್ಸ್ಟ್, ಭಾಷಾಂತರ ಉಕ್ತಲೇಖನ, ಕೈಬರಹ (ಲೋವರ್ ಸೆಕೆಂಡರೀ ಪರೀಕ್ಷೆಗೆ.	ವೈಸೂರು ಗೌ॥ ನಾರ್ಮಲ್ ಸ್ಕೂಲ್ ಸಹಾಯೋಪಾಧ್ಯಾಯರಾದ ವೆ॥ ಎಂ. ವೆಂಕಟಸುಬ್ಬಯ್ಯ ಬಿ. ಎ. ಯಲ್ ಟಿ. ಯವರು.
ತೆಲಗುಭಾಷೆ ಮತ್ತು ತೆಲಗು ಇತರ ಗ್ರಂಥಗಳಿಗೆ.	ವೈಸೂರು ಗೌ॥ ಸಂಸ್ಕೃತ ಲೈಬ್ರೆರಿ ಕ್ಯೂರೇಟರ್ ವೆ॥ ಎ. ಮಹದೇವಶಾಸ್ತ್ರಿ ಬಿ. ಎ ಯವರು.
ತಮಿಳುಭಾಷೆ ಮತ್ತು ಇತರ ತಮಿಳುಭಾಗಗಳಿಗೆ.	ವೈಸೂರು ಮಹಾರಾಜಾ ಕಾಲೇಜ್ ಲೆಕ್ಚರರ್ ವೆ॥ ಜಿ. ಕಸ್ತೂರಿರಂಗೈಯ್ಯಂಗಾರ್ ಎಂ. ಎ. ಯವರು.
ಆರೋಗ್ಯಶಾಸ್ತ್ರ-(ಅಪ್ಪರ್ ಮತ್ತು ಲೋವರ್ ಸೆಕೆಂಡರೀ ಪರೀಕ್ಷೆಗೆ)	ಬೆಂಗಳೂರು ಸೆಂಟ್ರಲ್ ಕಾಲೇಜು ಲೆಕ್ಚರರ್ ವೆ॥ ಸಿ. ಯಮ್ ವಿಜಯರಾಘವಾಚಾರ್ ಬಿ. ಎ. ಯವರು.
ವ್ಯವಸಾಯಶಾಸ್ತ್ರ-(ಅಪ್ಪರ್ ಮತ್ತು ಲೋವರ್ ಸೆಕೆಂಡರೀ ಪರೀಕ್ಷೆ)	ಬೆಂಗಳೂರು ಲಾಲ್‌ಬಾಗ್ ತೋಟಗಳ ಕ್ಯೂರೇಟರಾದ ವೆ॥ ವೈ. ರಾಮರಾವ್ ಯವರು.

೬. ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಅಂಗಸಾಧನೆಯ ಉಪಾಧ್ಯಾಯರಿಗೆ ಮಾಹೆಯಾನ ಸಲ್ಲುತ್ತಿರುವ ೧೫ ರೂಪಾಯಿ ತಲಬಿನಿಂದ ೨೦ ರೂಪಾಯಿಗೆ ಹೆಚ್ಚಿಸಿರುತ್ತೆ.

೭. ಮೆ|| ಸಿ. ವೆಂಕೋಬರಾವ್ ಎಂಬುವರನ್ನು ಕೋಲಾರದ ಹೈಸ್ಕೂಲು ೨ನೇ ಡಿ ಕ್ಲಾಸ್ ವಾಸ್ತರಾದ ನಂಜುಂಡಶಾಸ್ತ್ರಿಯವರ ಬದ್ಲಿಗಾಗಿ ಸಹಾಯೋಪಾಧ್ಯಾಯರನ್ನಾಗಿ ಮೊಕರೂರು ಮಾಡಿರುತ್ತೆ

೮. ಕಡೂರು ಡಿಸ್ಟ್ರಿಕ್ಟ್ ಮೆ|| ಅಬ್ದುಲ್‌ರಹಿಮ್‌ಖಾನ್ ಎಂಬೊಬ್ಬ ಕಾಫೀ ಪ್ಲಾಂಟರು ಮೈಸೂರು ಮಹಾರಾಜಾ ಕಾಲೇಜು ಮೆಟ್ರಿಕ್ಯುಲೇಷನ್ ಕ್ಲಾಸಿನ ವಿದ್ಯಾರ್ಥಿ ಮಹಮ್ಮದ್‌ಹೈದರಲ್ಲಿಖಾನ್ ಎಂಬುವರಿಗೆ ಒಂದುವರುಷದ ವರಿಗೂ ಮಾಹೆಯಾನ ೫೦ ರೂಪಾಯಿ ವೇತನವನ್ನು ಕೊಡಲು ಒಪ್ಪಿರುತ್ತಾರೆ.

(ಕವಿಪ್ರತಿ) ಭಂಗಾರದ ಆಮೆ.

ಒಂದು ದೊಡ್ಡ ಕಾಡು. ಆ ಕಾಡಿನಲ್ಲಿ ಒಂದು ಬೆಟ್ಟ. ಆ ಬೆಟ್ಟದ ಮಗ್ಗುಲಲ್ಲಿ ಒಂದು ಸಣ್ಣ ನದಿ. ಆ ನದಿಗೆ ಸ್ವಲ್ಪದೂರದಲ್ಲಿ ಒಂದು ಬಿಸ್ತರಹಳ್ಳಿ. ಆ ಹಳ್ಳಿಯಲ್ಲಿ ಒಂದು ಸಣ್ಣ ಗುಡಿಸಲು. ಅಲ್ಲಿ ಒಬ್ಬ ಮುದಕ ಮುದುಕಿ ವಾಸವಾಗಿದ್ದರು. ಆ ಮುದುಕ ಬೆಳಿಗಿನಿಂದ ಸಾಯಂಕಾಲದವರೆಗೂ ಆ ನದಿಯಲ್ಲಿ ಮೀನುಹಿಡಿದು, ಹತ್ತಿರದಲ್ಲಿಯೇ ಇದ್ದ ಒಂದು ದೊಡ್ಡಪಟ್ಟಣಕ್ಕೆ ತೆಗೆದುಕೊಂಡುಹೋಗಿ, ಅಲ್ಲಿ ಅವುಗಳನ್ನು ಮಾರಿ, ಬಂದ ಹಣದಲ್ಲಿ ಜೀವನವಾಡಿಕೊಂಡು ಸುಖವಾಗಿ ಇದ್ದನು. ಹೀಗಿರುವಾಗ ಒಂದುದಿವಸ ಅವನು ಒಡ್ಡಿದ್ದ ಬಲೆಗೆ ಮೀನುಗಳ ಜೊತೆಯಲ್ಲಿ ಒಂದು ಭಂಗಾರದಂತೆ ಥಳಥಳಿಸುವ ಆಮೆಯೂ ಬಿದ್ದಿತ್ತು. ಇವನು ಎಲ್ಲವನ್ನೂ ತೆಗೆದುಕೊಂಡು ಮೂರುಗಂಟೆಯು ಹೊತ್ತಿಗೆ ಮನೆಗೆ ಬಂದು, ಮೀನನ್ನೆಲ್ಲಾ ತೊಳೆಯಲು ಹೆಂಡತಿಗೆ ಹೇಳಿ ಭಂಗಾರದಂತೆ ಥಳಥಳಿಸುವ ಆಮೆಯನ್ನು ಮಾತ್ರ ಅಡಿಗೆ ಒಲೆಯಮೇಲೆ ಇದ್ದ ಅಟ್ಟದಮೇಲೆ ಇಟ್ಟು—ಎಲ್ಲೋ ಹೊರಕ್ಕೆ ಹೋದನು. ಅವನ ಹೆಂಡತಿಯು ಮೀನನೆನ್ನೆಲ್ಲಾ ತೊಳೆಯುತಿದ್ದಳು. ಆಮೆಯನ್ನು ಒಲೆಯಮೇಲೆ ಅಟ್ಟದಮೇಲೆ ಇಟ್ಟಿದ್ದ

ಸೂಚನೆ ಮತ್ತು ಸಮಾಚಾರಗಳು

೧. ಮೈಸೂರು ಮಹಾರಾಜಾ ಕಾಲೇಜು ಅಸಿಸ್ಟೆಂಟ್ ಮ್ಯಾಸ್ಟರು ಮು॥ ಬಿ. ದಾಸಪ್ಪನವರಿಗೆ ಮೂರುತಿಂಗಳ ಪ್ರಿವಿಲೀಜು ರಜಾ ಕೊಡಲ್ಪಟ್ಟು ಇರುತ್ತೆ. ಮತ್ತು ಈ ಕೆಳಗಿನ ಏರ್ಪಾಡುಗಳು ಮಾಡಲ್ಪಟ್ಟು ಇರುತ್ತೆ.

(೧) ಡಿಪೂ ಕಾಲೇಜು ಅಸಿಸ್ಟೆಂಟ್ ಮ್ಯಾಸ್ಟರು ಮು॥ ಬಿ. ಸುಬ್ಬರಾವ್ ಬಿ. ಎ. ಯವರನ್ನು ಹಾಲಿ ಅವರಿಗೆ ಈಗಿರತಕ್ಕ ತಲಬಿನಮೇಲೆ ಮೆ॥ ಬಿ. ದಾಸಪ್ಪನವರ ಕೆಲಸ ನೋಡುವದು ಮತ್ತು ಮಾಹೆಯಾನ ೬೦ ರೂಪಾಯಿಗಳ ಅಲೋಯ್ಯನ್ಸ್ ತೆಗೆದುಕೊಳ್ಳತಕ್ಕದ್ದು.

(೨) ಮೇಲ್ಕಂಡ ಬಿ. ಸುಬ್ಬರಾವ್ ಬಿ. ಎ. ಯವರ ಬದ್ಲಿ ಕೆಲಸವನ್ನು ನೋಡಲು ಜುಲೈ ೩೦ನೇರುವರಿಗೆ ಮಾಹೆಯಾನ ಏವತ್ತು ರೂಪಾಯಿ ತಲಬಿನಮೇಲೆ ಮೆ॥ ಎ. ಮಹದೇವಪ್ಪ ಎಂಬುವರನ್ನು ಹೊಸರೂರು ಮಾಡಿರುವರು.

೨. ಶಿವಮೊಗ್ಗಾ ವಿದ್ಯಾರ್ಥಿ ನಿಲಯಕ್ಕೆ ಸ್ಟೂಡೆಂಟ್ಸ್ ಹೋಂ ಹಾಲಿ ಸಲ್ಲುತ್ತಿರುವ ೪೦ ರೂಪಾಯಿಗಳ ಜೊತೆಗೆ ಮಾಹೆಯಾನ ೧೯೦೦ ನೇ ಇಸವಿ ಜುಲೈ ಲಾಗಾಯಿತು ಇನ್ನೂ ಹತ್ತು ರೂಪಾಯಿಗಳ ಜಾಸ್ತಿ ಗ್ರಾಂಟ್ ಕೊಡಲು ಮಂಜೂರು ಮಾಡಿರುತ್ತಾರೆ.

೩. ತುಮಕೂರು ವಿದ್ಯಾರ್ಥಿ ನಿಲಯಕ್ಕೆ ಸ್ಟೂಡೆಂಟ್ಸ್ ಹೋಂ ಹಾಲಿ ಸಲ್ಲುತ್ತಿರುವ ೩೫ ರೂಪಾಯಿಗಳ ಗ್ರಾಂಟನ್ನು ೧೯೦೦ ನೇ ಇಸವಿ ಜುಲೈ ಗುರ್ರೇ ಲಾಗಾಯಿತು ಮಾಹೆಯಾನ ೪೯ ರೂಪಾಯಿಗಳಿಗೆ ಜಾಸ್ತಿಮಾಡಿರುತ್ತಾರೆ.

೪. ಗೋರಿಬಿದನೂರು ತಾಲ್ಲೂಕು ಮಂಡೇಸಹಳ್ಳಿ ಗ್ರಾಮದಲ್ಲಿರುವ ಪ್ರೈವೆಟ್ ಇಂಗ್ಲೀಸ್ ಸ್ಕೂಲಿಗೆ ಮಾಹೆಯಾನ ೩೦ ರೂಪಾಯಿಗಳ ಸಹಾಯ ದ್ರವ್ಯವನ್ನು ಗೌರ್ನಮೆಂಟಿನವರು ಜುಲೈ ಗುರ್ರೇ ಲಾಗಾಯಿತು ಮಂಜೂರುಮಾಡಿರುತ್ತಾರೆ.

೫. ಶಿವಮೊಗ್ಗಾ ಗೌರ್ನಮೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಲೋವರ ಸೆಕೆಂಡರಿ ಕ್ಲಾಸಿನಲ್ಲಿ ಓದುವ ೫ ಜನ ವಿದ್ಯಾರ್ಥಿನಿಯರಿಗೆ ಮಾಹೆಯಾನ ಇಸಂಗಕ್ಕೆ ೩ ರೂಪಾಯಿನಂತೆ ೧೫ ರೂಪಾಯಿಗಳ ವೇತನವನ್ನು ಗೌರ್ನಮೆಂಟಿನವರು ಮಂಜೂರು ಮಾಡಿರುತ್ತಾರೆ.

ವಿದ್ಯಾದಾಯಿನಿ.

ಭಾಗ V.] ಆಗಸ್ಟ್ ೧೯೦೦. [ಸಂಚಿಕೆ V.

ಎಡಿಟರವರ ನೋಟ್ಸ್.

ಈಗ ಇಂಗ್ಲಿಷ್ ಭಾಷೆಯನ್ನು ವ್ಯಾಸಂಗ ಮಾಡುವವರಿಗೆ ಅನುಕೂಲವಾಗಿ ಬಿ. ಎ. ಎಂ. ಎ. ಪರೀಕ್ಷೆಗಳನ್ನಿಟ್ಟಿರುವಂತೆ ಮುಂದಕ್ಕೆ ಸಂಸ್ಕೃತಭಾಷೆಯಲ್ಲೂ, ಕರ್ನಾಟಾದಿ ದ್ರವಿಡಭಾಷೆಗಳಲ್ಲೂ ಸಹ ತಕ್ಕ ಪರೀಕ್ಷೆಗಳನ್ನಿಡಬೇಕೆಂದು ಮದರಾಸ್ ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರಾಗಿದ್ದ ಮೆ॥ ಡಕಕ ಸಾಹೇಬರು ಅಭಿಸ್ರಾಯಪಟ್ಟಿರುವರೆಂದು ನಾವು ಈ ಪತ್ರಿಕೆಯಲ್ಲಿ ಹಿಂದೆ ತಿಳಿಸಿದ್ದೆವು. ಈಚಿಗೆ ಇಂಥ ಪರೀಕ್ಷೆಗಳನ್ನು ಏರ್ಪಡಿಸುವುದು ಸಾಧ್ಯವಲ್ಲವೆಂದು ಯೂನಿವರ್ಸಿಟಿಯವರು ನಿರ್ಧರಿಸಿದರೆಂದೂ ಸಹ ಇಲ್ಲಿಯೇ ಬರೆಯಲಾಯಿತು. ಸರ್ಕಾರದವರಾದರೂ ವಿದ್ಯಾಭ್ಯಾಸದ ಇಲಾಖೆಯು ಮೂಲಕ ಇಂಥ ಪರೀಕ್ಷೆಗಳನ್ನು ನಡೆಯಿಸಿ ಆ ಭಾಷೆಗಳ ವ್ಯಾಸಂಗವನ್ನು ಪ್ರೋತ್ಸಾಹಗೊಳಿಸಬೇಕೆಂದು ಅವರು ಅಭಿಸ್ರಾಯಪಟ್ಟು, ಅದನ್ನು ಪ್ರಕಟಿಸಿ, ಕೆಲಸದಿಂದ ನಿವೃತ್ತರಾಗಿ ಸೀಮೆಗೆ ಹೋದರು. ಈಗ ಇದುಸಹ ನಡೆಯಲಾಗುವುದಿಲ್ಲವೆಂದು ತೀರ್ಮಾನವಾಯಿತು. ಇದರಿಂದ ಮುಖ್ಯವಾಗಿ ದ್ರವಿಡಭಾಷಾವೃದ್ಧಿಗೆ ಆಗಬಹುದಾಗಿದ್ದ ವಿಶೇಷ ಸಹಾಯವೊಂದು ಕಡಮೆಯಾಯಿತೆಂದು ಹೇಳಬಹುದು.

***

ಆದರೆ ನಮ್ಮ ಮೈಸೂರು ದೇಶದಲ್ಲಿ ಈ ವಿಧವಾದ ಹೊಸ ಏರ್ಪಾಡು ಈಗ ಕೆಲವು ವರ್ಷಗಳಿಂದಲೂ ಇದೆಯೆಂದು ಹೇಳಬಹುದು. ಮೆ॥ ಭಾಭಾಸಾಹೇಬರವರು ಏರ್ಪಾಡು ಮಾಡಿರುವ ನಾರ್ಮಲ್ ಸ್ಕೂಲುಗಳು, ದೇಶೀಯ ಪರೀಕ್ಷೆಗಳೂ ಇದೇ ಮಾದರಿಯವು. ಪಾಠಕ್ರಮ ಮುಂತಾದ ಉಪಾಧ್ಯಾಯತೆಗೆ ಬೇಕಾದ ಅಂಶಗಳನ್ನು

ನಾದುದರಿಂದ, ಒಲೆಯಲ್ಲಿ ಹೊಗೆಯಾಡುತಿದ್ದುದರಿಂದ, ಈ ಅಮೆಯು " ಎಲಮ್ಮ, ನನ್ನೆನ್ನು ನಿನ್ನ ಗಂಡನು ಇಲ್ಲಿಟ್ಟಿರುವನು. ಹೊಗೆ ನಾನು ತಡೆಯಲಾರೆ. ದಯವಿಟ್ಟು ನನ್ನನ್ನು ಇನ್ನೆಲ್ಲಾದರೂ ಬೇರೆ ಇಡು ಎಂದಿತು. ಈ ಮುದಕಿ ಗಾಬರಿಯಾಗಿ ಸುತ್ತುಮುತ್ತಲೂ ನೋಡಿದಳು. ಯಾರೂ ಇರಲಿಲ್ಲ. ಎಲ್ಲೋ ಹೊರಗೆ ಯಾರೋ ಅಡಿಕೊಂಡ ಮಾತಿರಬಹುದು, ಎಂದುಕೊಂಡು ತನ್ನ ಕೆಲಸವನ್ನು ಮಾಡುತಿದ್ದಳು. ಪುನಃ ಈ ಮಾತುಗಳೇ ಕೇಳಬಂದವು. ಇದೇನಿರಬಹುದು ? " ಹೊಗೆಯನ್ನು ತಡೆಯಲಾರೆ " ಎಂದರೆ ಅಟ್ಟದಮೇಲೆ ಯಾರಾದರೂ ಇರುತ್ತಾರೆಯೆ ನೋಡೋಣವೆಂದು ಅಟ್ಟಕ್ಕೆ ಹತ್ತಿನೋಡಲು ಅಲ್ಲಿ ಏನೋ ಥಳಥಳಿಸಿದಂತೆ ಇತ್ತು. ಜನರಾರೂ ಇರಲಿಲ್ಲ. ಥಳಥಳಿಸುತ್ತಿದ್ದ ಕಡೆಗೆ ಕೈನೀಡಲು ಅಲ್ಲಿ ಅಮೆಯು ಇತ್ತು. ಈ ಅಮೆಯು ಮಾತನಾಡಿರಬಹುದೆ ? ಇದೇನು ಆಶ್ಚರ್ಯ ! ಏನಾದರೂ ಆಗಲಿ, ಈ ಅಮೆಯೇನೋ ಅಪೂರ್ವವಾಗಿದೆ. ಹೊಗೆಯೂದರೋ ಇಲ್ಲಿ ಅಡರಿಕೊಂಡಿರುವುದು ನಿಶ್ಚಯ. ಈ ಚಿನ್ನದ ಅಮೆಯೇ ಮಾತನಾಡಿದ್ದರೂ ಅಡಿರಬಹುದು. ಇದನ್ನು ತೆಗೆದು ಬೇರೆ ಇನ್ನೆಲ್ಲಾದರೂ ಇಡೋಣವೆಂದು ಅದನ್ನು ಒಂದು ತಟ್ಟೆಯಲ್ಲಿ ಹಾಕಿ ಒಂದು ಕಾಲು ಮಣೆಯಮೇಲೆ ಇಟ್ಟು, ತನ್ನ ಕೆಲಸಕ್ಕೆ ಹೋದಳು. ಅಷ್ಟರಲ್ಲಿ ಆ ಬಿಸ್ತರವನು ಬರಲು ಗಂಡಹೆಂಡರಿಬ್ಬರೂ ಊಟಕ್ಕೆ ಕೂತರು. ಊಟಮಾಡುವಾಗ ಹೆಂಡತಿಯು, ಅವನಿಲ್ಲದಮೇಲೆ ನಡೆದ ಸಂಗತಿಯನ್ನೆಲ್ಲಾ ಹೇಳಿದಳು. ಇದನ್ನೆಲ್ಲಾ ಕೇಳಿ ಬಿಸ್ತರವನು ಬಿಪಾಯಿ ಕೂತಿದ್ದಾಗ ಅಮೆಯು ಸಣ್ಣಧ್ವನಿಯಲ್ಲಿ " ನನಗೂ ಸ್ವಲ್ಪ ಊಟಕ್ಕೆ ಇಡಿ, ಬಹಳ ಹಸಿವಾಗಿದೆ " ಎಂದಿತು. ಅವರಿಗೆ ಅತ್ಯಾಶ್ಚರ್ಯವುಂಟಾಯಿತು. ಆಗ ಒಡನೆಯೇ ಒಂದು ತಳಿಗೆಯಲ್ಲಿ ಅದಕ್ಕೂ ಊಟಕ್ಕೆ ಇಕ್ಕಿದರು. ಮೆಲ್ಲಮೆಲ್ಲಗೆ ಅಮೆಯು ಎಲ್ಲವನ್ನೂ ತಿಂದಿತು. ಎಲ್ಲರ ಊಟವೂ ಆದಮೇಲೆ ಅಮೆಯು ಮುಂದೆ ಇಟ್ಟಿದ್ದ ತಟ್ಟೆಯನ್ನು ತೆಗೆಯಲು ಮುದುಕನು ಬಂದನು. ಅವನ ಆಶ್ಚರ್ಯವೇನು ಹೇಳೋಣ ! ಆ ತಟ್ಟೆಯು ತುಂಬ ಭಂಗಾರ. ಆಗ ಬಿಸ್ತ ಗಂಡಹೆಂಡರಿಬ್ಬರೂ ಈ ವಿಷಯವನ್ನು ಯಾರಿಗೂ ತಿಳಿಸದೆ ಅಮೆಯನ್ನು ಅತ್ಯಾದರದಿಂದ ಸಾಕುತ್ತಿದ್ದರು. ಒಂದುದಿನ ಅಮೆಯು " ಅಜ್ಜಿ, ಅಜ್ಜಿ, (ಬಿಸ್ತರವನ ಹೆಂಡತಿಯನ್ನು ಈ ಅಮೆಯು ಅಜ್ಜಿಯೆಂದು ಕರೆಯುತಿತ್ತು.) ಊರಲ್ಲಿ ಏನು ವಿಶೇಷ?

(ಸಶೇಷ :)

ಕೇಳುತ್ತೇವೆಂದು ತಿಳಿಸಬಹುದು, ಇಂಥವರ ಪ್ರಯತ್ನವು ದೇಶಭಾಷಾಭಿವೃದ್ಧಿಗೆ ಉತ್ತೇಜಕನಾಗುವುದೆಂದು ಕೋರುತ್ತೇವೆ.

ಆರ್ನಲ್ಡರವರ ಚರಿತ್ರೆ.

ಆರ್ನಲ್ಡರವರು ೮ ವರುಷ ವಯಸ್ಸಿನಲ್ಲೆ ಪಾಠಶಾಲೆಯಲ್ಲಿ ಓದುವ ಗ್ರಂಥಗಳ ಜತೆಗೆ ಮನೆಯಲ್ಲೂ ಅನೇಕ ಗ್ರಂಥಗಳನ್ನು ಓದುತ್ತಿದ್ದರು. ಪಾಠಶಾಲೆಗಳಲ್ಲಿ ಪಾಠಕರು ಯಾವಸಂಗತಿಯಲ್ಲಿ ಪ್ರಶ್ನೆಮಾಡಿದಾಗಲ್ಯಾ ಆ ವಿಷಯಗಳಲ್ಲಿ ತಮ್ಮ ಪಾಠದ ಪುಸ್ತಕಗಳಲ್ಲದೇ ಇತರ ಪುಸ್ತಕಗಳಲ್ಲಿ ಹೇಳಿರತಕ್ಕ ಅಂಶಗಳನ್ನು ಹೇಳಿ ಪಾಠಕರಿಗೂ ದಿಗ್ಭ್ರಮೆಯನ್ನು ಮಾಡುತ್ತಿದ್ದರು. ಈ ಪೂರ್ವವಯಸ್ಸಿನಲ್ಲೇ ಇವರು ಎರಡಾವರ್ತಿ ಒಂದು ಗ್ರಂಥವನ್ನು ಓದುವುದರೊಳಗಾಗಿ ಅದನ್ನು ಕಂಠಸ್ಥವನ್ನಾಗಿ ಮಾಡಿಕೊಳ್ಳುತ್ತಿದ್ದರು. ಈರೀತಿಯಲ್ಲಿ ಲೋಕದಚರಿತ್ರೆಗಳನ್ನು ಇವರು ವ್ಯಾಸಂಗ ಮಾಡಿ ಅವುಗಳ ಗುಣದೋಷಗಳನ್ನು ತಿಳಿದುಕೊಂಡಿದ್ದರು. ಇವರ ೧೪ ನೆಯ ವಯಸ್ಸಿನಲ್ಲಿ ಕೆಲವು ಜನರ ಚರಿತ್ರೆಗಳನ್ನು ಬರೆದವರ ಪ್ರಾಮಾಣಿಕತೆಯು ಚರ್ಚೆಗೆ ಬಂದಾಗ, ಅನೇಕ ಗ್ರಂಥ ಸ್ವಜನಾಭಿಮಾನದಿಂದಲೂ ಪರದೇಶದವರ ಮೇಲಿನ ದ್ವೇಷದಿಂದಲೂ ತಮ್ಮ ಗ್ರಂಥಗಳಲ್ಲಿ ತೋರಿಸಿರುವದು ದುರಭಿಮಾನಗಳನ್ನು ತೋರಿಸಿ ಚರಿತ್ರೆಗಳನ್ನು ಬರೆಯುವವರು ದುರಭಿಮಾನದಿಂದ ಸ್ವಜನಸ್ತುತಿ ಪರದೇಶೀಯರ ನಿಂದೆಯನ್ನು ಮಾಡಕೂಡದೆಂಬವಾಗಿಯೂ, ಮತ್ತು ಹೆರೊಡಾಟಸ್, ಥೂಸಿಡೈಟಸ್, ಜೊಸೀಫರ್ಸರಂತೆ ಸತ್ಯವನ್ನು ಬಿಡದೆ ಪ್ರಾಮಾಣಿಕರಾಗಿರಬೇಕೆಂಬದಾಗಿಯೂ, ಹೇಳಿ ಜ್ಞಾನವೃದ್ಧರಾದ ಅನೇಕ ಪಂಡಿತರಿಗೆ ತಮ್ಮ ಯುಕ್ತಿಯುಕ್ತನಾದ ಮಾತುಗಳಿಂದ ವಿಸ್ಮಯವನ್ನುಂಟುಮಾಡಿದರು.

ಈ ಚಿಕ್ಕ ವಯಸ್ಸಿನಲ್ಲಿಯೂ ಇವರಿಗೆ ವ್ಯಾಸಂಗದಲ್ಲಿ ಹ್ಯಾಗೋ ಹಾಗೆ

ಈ ಶಾಲೆಗಳಲ್ಲಿ ತಿಳಿಸುವುದಲ್ಲದೆ, ಗಣಿತ, ಭಾಷೆ, ಶಾಸ್ತ್ರ ಮುಂತಾದ ವಿಷಯಗಳನ್ನು ಕನ್ನಡದಲಿಯೇ ಬೋಧಿಸುತ್ತಿದ್ದಾರೆ. ಇದರ ಜತೆಗೆ ಮೈಸೂರಲ್ಲಿರುವ ನಾರ್ಮಲ್ ಸ್ಕೂಲಿನಲ್ಲಿ ಪಂಡಿತರ ತರಗತಿಯೊಂದಿರುವುದು ಎಲ್ಲರಿಗೂ ತಿಳಿದಿರಬಹುದು. ಅದರಿಂದ ಸಂಸ್ಕೃತ ದ್ರವಿಡ ಭಾಷೆಗಳಲ್ಲಿ ಪ್ರೌಢವಿದ್ಯಾಭ್ಯಾಸಕ್ಕೆ ತಕ್ಕ ಅನುಕೂಲ್ಯವಿರುವುದು. ಅಲ್ಲಿ ವ್ಯಾಸಂಗ ಮಾಡುವವರ ಯೋಗ್ಯತಾನಿರ್ಣಯಕ್ಕಾಗಿ ತಕ್ಕ ಪರೀಕ್ಷೆಯೂ ಸಹ ವರ್ಷವರ್ಷ ನಡೆಯುತ್ತಿದೆ.

***

ಈಚೆಗೆ ಪಾರ್ಸಿ ಮುಂತಾದ ಭಾಷೆಗಳ ವ್ಯಾಸಂಗಕ್ಕಾಗಿಯೂ ಇಂಥಾ ಒಂದು ತರಗತಿಯನ್ನಿಡಬೇಕೆಂದು ನಮ್ಮ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರಿಗೆ ಅಭಿಪ್ರಾಯವಿರುವಂತೆ ಕೇಳುತ್ತೇವೆ. ಇವರಿಗಿರುವ ವಿದ್ಯಾಪಕ್ಷಪಾತವನ್ನು ನೋಡಿದರೆ ಈ ಏರ್ಪಾಡು ಕೂಡಲೆ ಕೈಗೂಡುವುದೆಂದು ಸಂಪೂರ್ಣವಾಗಿ ತಿಳಿಯುತ್ತೆ. ಸಂಸ್ಕೃತದಂತೆ ಶ್ಲಾಘ್ಯನಾದ ಪಾರ್ಸಿಭಾಷೆಯು ವ್ಯಾಸಂಗವನ್ನು ಸರ್ಕಾರದವರು ಪ್ರೋತ್ಸಾಹಗೊಳಿಸಬೇಕಾದುದು ಅವಶ್ಯಕವೇಸರಿ.

***

ಸಂಸ್ಕೃತ, ದ್ರವಿಡಭಾಷೆಗಳನ್ನಾಗಲಿ, ಪಾರ್ಸಿ, ಉರ್ದು ಭಾಷೆಗಳನ್ನಾಗಲಿ ಈಗ ವ್ಯಾಸಂಗಮಾಡುವವರಲ್ಲಿ ಪೂರ್ವಕ್ಕಿಂತಲೂ ಗುಣವಿಶೇಷಗಳೇನಾದರೂ ಇರಬೇಕಾದ್ದು ಅವಶ್ಯಕ. ಪೂರ್ವದ ವ್ಯಾಸಂಗಕ್ರಮದಲ್ಲಿ ಪಾಂಡಿತ್ಯವು ಸಂಪೂರ್ಣವಾಗಿರುತ್ತಿದ್ದಿತು. ಓದುವರ ಆಲೋಚನಾಶಕ್ತಿಗೆ ವಿಶೇಷವಾಗಿ ಸಂಸ್ಕಾರವಾಗುತಿರಲಿಲ್ಲ. ಇದಕ್ಕೆ ಮುಖ್ಯವಾಗಿ ನಮ್ಮ ದೇಶದ ಪೂರ್ವದಿಂದಲೂ ಬಂದ ಬೋಧನಕ್ರಮದ ಕ್ರೂರತೆಯೇ ಕಾರಣ. ಈ ಕ್ರೂರತೆಯು ತಪ್ಪಬೇಕಾದರೆ ಈ ಭಾಷೆಗಳವ್ಯಾಸಂಗಕ್ಕಾಗಿರುವ ಪಾಠಶಾಲೆಗಳಲ್ಲಿ ಪಂಡಿತರು, ಮುನಿಷಿಗಳ ಜತೆಗೆ ಪಾಶ್ಚಾತ್ಯಭಾಷಾವ್ಯಾಸಂಗಕ್ರಮವನ್ನೂ ತಿಳಿದಿರುವವರಿರಬೇಕು. ಈ ಸಂದರ್ಭದಲ್ಲಿ ಮೈಸೂರು, ನಾರ್ಮಲ್ ಸ್ಕೂಲಿಗೆ ಎಂ. ಎ. ಪರೀಕ್ಷೆಯನ್ನು ಕನ್ನಡ, ತೆನುಗು ಭಾಷೆಗಳಲ್ಲಿ ಮಾಡಿರುವ ಮಾ|| ರಾ|| ಬಿ. ರಾಮರಾವ್ ಎಂಬುವರನ್ನು ಹೊಸದಾಗಿ ನಿಯಮಿಸಿರುವುದಾಗಿ

ಬಂದು ಇದೆ. ಸಕಲ ವೃತ್ತಿಗಳಿಗಿಂತಲೂ ಇದು ಬಹಳ ಜವಾಬುದಾರಿಯುದದ್ದು. ಜನರು ನನ್ನಲ್ಲಿ ಸಂಪೂರ್ಣವಾದ ನಂಬಿಕೆಯನ್ನಿಟ್ಟು ತಮ್ಮ ಪ್ರಾಣಕ್ಕೆ ಸಮಾನರಾದ ಮಕ್ಕಳನ್ನು ಒಪ್ಪಿಸುತ್ತಾರೆ. ನಾನು ಈ ಪಾಠಶಾಲೆಯ ಹುಡುಗರನ್ನೆಲ್ಲಾ ನನ್ನ ಮಕ್ಕಳಂತೆ ನೋಡಿಕೊಳ್ಳಬೇಕು, ಇವರೆಲ್ಲರೂ ಆರೋಗ್ಯಸಾಧಕರಾಗಿಯೂ, ವಿದ್ಯಾವಂತರಾಗಿಯೂ, ಜ್ಞಾನಶಾಲಿಗಳಾಗಿಯೂ, ಲೋಕವ್ಯವಹಾರಜ್ಞರಾಗಿಯೂ ಬಾಹುಬಲದಿಂದಲೂ ಬುದ್ಧಿಬಲದಿಂದಲೂ ಜೀವಿಸತಕ್ಕವರನ್ನಾಗಿಯೂ ಧರ್ಮವೂ ರ್ಗಪ್ರವರ್ತಕರನ್ನಾಗಿಯೂ, ಅಧರ್ಮವೂ ರ್ಗಪರಾಙ್ಮುಖರನ್ನಾಗಿಯೂ ಮಾಡಬೇಕು. ಹೀಗೆ ಮಾಡುವದರಲ್ಲಿ ಆಲಸನಾದರೆ ವಿದ್ಯಾರ್ಥಿಗಳ ತಂದೆ ತಾಯಿಗಳಿಗೂ ವಿದ್ಯಾರ್ಥಿಗಳಿಗೂ ನನ್ನ ಕೆಲಸಕ್ಕೆ ನಿಯಮಿಸಿದವರಿಗೂ ನನ್ನ ದೇಶಕ್ಕೂ ಮನುಸ್ಸಾ ಕ್ಷಿಗೂ ದೇವರಿಗೂ ದ್ರೋಹಮಾಡಿದಂತಾಗುತ್ತದೆ. ಮಹಾಪಾತಕಕ್ಕೆ ನಾನು ಗುರಿಯಾಗಿ ಇಹಪರ ನಷ್ಟಗಳಿಗೆ ಗುರಿಯಾಗುತ್ತೇನೆ. ಇಂಥಾ ಅನರ್ಥಕ್ಕೆ ನನ್ನನ್ನು ಗುರಿಮಾಡದೆ ಜಗದೀಶ್ವರನು ನನ್ನ ಕೆಲಸವನ್ನು ನನ್ನಿಂದ ಸರ್ವಸಮರ್ಪಕವಾಗಿ ಮಾಡಿಸಿ ನನ್ನನ್ನು ಕೃತಕೃತ್ಯನನ್ನಾಗಿ ಮಾಡಿಸಬೇಕು ಎಂದು ಪ್ರಾರ್ಥಿಸಿದರು. ಅಧ್ಯಾಪಕರವರ ಕರ್ತವ್ಯ ಜ್ಞಾನವು ಯಾರಿಗೆತಾನೇ ವಿಸ್ಮಯವನ್ನುಂಟುಮಾಡುವದಿಲ್ಲ. ಇಂಥಾ ಪಾಠಕರಿದ್ದದ್ದರಿಂದಲೇ ಬ್ರಿಟಿಷ್ ರಾಜ್ಯಕ್ಕೆ ಚಕ್ರವರ್ತಿಪದವಿಯು ಉಂಟಾಗಿದೆ. ನಮ್ಮ ದೇಶದ ಉಪಾಧ್ಯಾಯರು ಇವರ ಮೇಲುಪಜ್ಞೆಯನ್ನು ಅನುಸರಿಸಿದ ಹಾಗೆಲ್ಲಾ ನಮ್ಮ ದೇಶವು ಉನ್ನತಸ್ಥಿತಿಗೆ ಬರುವುದರಲ್ಲಿ ಏನೂ ಸಂಶಯವಿಲ್ಲ.

ಭೂಮಿ ಮತ್ತು ಸೂರ್ಯ.

ಪ್ರಪಂಚದಲ್ಲಿರುವ ಪ್ರಾಣಿವರ್ಗಕ್ಕೆಲ್ಲಾ ಸೂರ್ಯನಿಂದ ಬರುವ ಬೆಳಕೂ ಶಕ್ತಿಯೂ ಪ್ರಾಣಧಾರಕವಾದದ್ದು. ಸೂರ್ಯನ ಬಿಸಿಲಿನಿಂದ ಜಲಾಶಯಗಳಿಂದ ನೀರಿನ ಆವಿಯೂ ಮೇಲಕ್ಕೆ ಏಳುವುದು. ಇದು ಜಲಕಣಗಳಾಗಿ ಮೇಘವಾಗಿ ಪರಿಣಮಿಸುವುದು. ಮೇಘಗಳು ವರ್ಷಿಸಿ ನದಿಗಳಿಗೂ ಕೆರೆಗಳೇ ಮೊದಲಾದವುಗಳಿಗೂ

ವ್ಯಾಯಾಮಕ್ಕೆಲ್ಲಾ ಅನ್ಯಾದೃಶವಾದ ಅಸಕ್ತಿಯೂ ಇತ್ತು. ಪಾಠಶಾಲೆಗಳಲ್ಲಿ ಓದುವಕಾಲದಲ್ಲಿ ಮನಸ್ಸಿಗೆ ಹರ್ಷವನ್ನೂ ದೇಹಕ್ಕೆ ಕ್ಲೇಶವನ್ನೂ ಉಂಟುಮಾಡುವ ವ್ಯಾಯಾಮದಲ್ಲಿ ಬಹಳ ಮೆಹನತ್ತು ಮಾಡುತ್ತಿದ್ದರು. ಪಾಠಶಾಲೆಗಳಲ್ಲಿ ಹ್ಯಾಗೋ ಹಾಗೆ ವ್ಯಾಯಾಮಗಳಲ್ಲೂ ಅದ್ವಿತೀಯರಾಗಿರುತ್ತಿದ್ದರು. ಕಾಲೇಜುಗಳಿಗೆ ರಜಾ ಬಂದಕಾಲದಲ್ಲಿ ತಮ್ಮ ಸ್ಥಳಕ್ಕೆ ಹೋಗಿ ತೋಟದಲ್ಲಿ ವ್ಯವಸಾಯಮಾಡುತ್ತಲೂ ಹೊಸಗ್ರಂಥಗಳನ್ನು ಅವಲೋಕನ ಮಾಡುತ್ತಲೂ ಕಾಲಕ್ಷೇಪ ಮಾಡುತ್ತಿದ್ದರು. ಈಗಿನ ವಿದ್ಯಾರ್ಥಿಗಳಲ್ಲಿ ಅನೇಕರು ಅಲ್ಪ ಸ್ವಲ್ಪ ವಿದ್ಯವನ್ನು ಕಲಿತಮಾತ್ರದಿಂದಲೇ ಕೃಷಿ ವಾಣಿಜ್ಯ ಕೈಗಾರಿಕೆ ಕೆಲಸ ಮೊದಲಾದವುಗಳನ್ನು ಮಾಡುವುದು ತಮಗೆ ಗೌರವಾವಹವಲ್ಲವೆಂದು ತಿಳಿದುಕೊಂಡು ಸ್ವತಂತ್ರವಾದ ಜೀವನಕ್ಕೆ ಸಾಧಕವಾದ ಸರ್ವೋತ್ತಮವಾದ ಈ ವೃತ್ತಿಗಳನ್ನು ಬಿಟ್ಟು ವಿದ್ಯೆಯಲ್ಲಿಯೂ ಪಾರಂಗತರಾಗದೆ ಬಹಳ ಹೀನಸ್ಥಿತಿಗೆ ಬರುತ್ತಲಿರುವುದು. ಆದರೆ ಆರ್ನಲ್ಡ್‌ರವರು ಎಷ್ಟು ವಿದ್ಯಾವಂತರಾದಾಗ್ಯೂ ಯುಕ್ತಾಯುಕ್ತವಿವೇಚನೆಯುಳ್ಳವರಾಗಿದ್ದುದರಿಂದ ಅವರ ವಿದ್ಯಾಭ್ಯಾಸ ಕಾರಣವಾದದ್ದೇ ಹೊರತು ಜೀವನೋಪಾಯಕ್ಕೋಸ್ಕರವಲ್ಲ; ಸರ್ವರು ಇದನ್ನು ಅವಲಂಬಿಸಿದರೆ ಇದರಿಂದ ಜನರಿಗೆ ಜೀವನವಾಗುವದಿಲ್ಲವೆಂದು ಜನರಿಗೆ ವ್ಯಕ್ತಪಡಿಸುತ್ತಲೂ ಲಾಭಕರವಾದ ಅನೇಕ ಕೈಗಾರಿಕೆ ಕೆಲಸಗಳಲ್ಲಿ ಜನರಿಗೆ ಪ್ರವೇಶವನ್ನುಂಟು ಮಾಡುತ್ತಲೂ ಇದ್ದರು. ಇದು ಸಹಜವಾದದ್ದು. ನಮ್ಮ ಜನಗಳು ವಿದ್ಯಾರ್ಜನೆಗಾಗಿ ಮಾಡುವ ಮೆಹನತ್ತಿನ ಜೊತೆಗೆ ಯಾವದಾದರೂ ಒಂದು ಕೈಗಾರಿಕೆ ಕೆಲಸವನ್ನು ಅಭ್ಯಾಸ ಮಾಡುತ್ತಿದ್ದರೆ ವಿದ್ಯಾಬಲದಿಂದ ಜೀವಿಸುವದಸಾಧ್ಯವಾದರೆ ವೃತ್ತ್ಯಂತರದಿಂದಲಾದರೂ ಸ್ವತಂತ್ರವಾಗಿ ಜೀವಿಸಬಹುದು ಆರ್ನಲ್ಡ್‌ರವರು ಈ ವಿಷಯದಲ್ಲಿ ಬಹುಜನರಿಗೆ ಮಾರ್ಗದರ್ಶಿಗಳಾದರು.

ಆರ್ನಲ್ಡ್‌ರವರು ೩೩ನೇ ವಯಸ್ಸಿಗೆ ಅದ್ವಿತೀಯಪಂಡಿತರೆಂದು ಪ್ರಸಿದ್ಧಿಯನ್ನು ಹೊಂದಿದರು. ಇವರು ರಗ್ಬಿ ಪಾಠಶಾಲಾಧ್ಯಕ್ಷತೆಗೆ ನಿಯಮಿಸಲ್ಪಟ್ಟದ್ದೇ ಆಗ. ಹೀಗೆ ನಿಯಮಿಸಲ್ಪಡುವದಕ್ಕೆ ಮೊದಲು ಇವರು ಬರೆದಿರತಕ್ಕ ಒಂದು ಲೇಖನವು ಅವಲೋಕನೀಯವಾಗಿದೆ. ಅದರಲ್ಲಿ ಅವರು ಹೇಳಿರುವುದೇನೆಂದರೆ;—ಇದುವರೆಗೂ ಆಟಪಾಟಗಳೆಲ್ಲೂ, ವಿದ್ಯಾವ್ಯಾಪಂಗದಲ್ಲೂ ಅನೇಕವಿಧವಾದ ಕಾಯಕ್ಲೇಶರೂಪವಾದ ಕೃಷಿಗಳೆಲ್ಲೂ ಕಾಲಹರಣವಾಯಿತು. ಈಗ ಈ ಪಾಠಶಾಲಾಧ್ಯಕ್ಷಪದವಿಯು

ಕಲ್ಲು ಮಣ್ಣು ಲೋಹಗಳು ಇವುಗಳಿಲ್ಲಾ ಕರಗಿ ಜಲಾವಸ್ಥಯಾನ್ನು ಹೊಂದಿ ಪರ್ವತ ಶಿಖರಗಳಿಂದ ದೊಡ್ಡನದಿಗಳಂತೆ ಪ್ರವಹಿಸಿ ಸವಿಾಪದಲ್ಲಿದ್ದ ಪಟ್ಟಣಗಳನ್ನು ಮುಳುಗಿಸಿ ಬಿಟ್ಟಿರುವದುಂಟು. ವೆಸುವಿಯುಸ್ ಬಳಿಯಲ್ಲಿ ಹೀಗಾಗಿ ಪಾಂಪೆ ಮತ್ತು ಹರ್ಕ್ಯುಲೆನಿಯ ಎಂಬ ಪ್ರಸಿದ್ಧವಾದ ಪಟ್ಟಣಗಳು ಈರೀತಿ ಮುಳಿಗಿಹೋಗಿ ದ್ರವರೂಪವಾಗಿದ್ದು ಕರಗಿದ ಕಲ್ಲು ಮಣ್ಣು ಮೊದಲಾದ ಪದಾರ್ಥಗಳು ಶಿಲಾವಸ್ಥೆಯನ್ನು ಹೊಂದಿತ್ತು. ಈ ಪಟ್ಟಣಗಳು ಸ್ಮೃತಿಪಥವನ್ನು ಹೊಂದಿದ್ದು ಈಚಿಗೆ ಆ ಪ್ರದೇಶದಲ್ಲಿ ವ್ಯವಸಾಯ ಮಾಡುತ್ತಿದ್ದು ಹಗೇವು ತೆಗೆಯುತ್ತಿದ್ದಾಗ ಈ ಪಟ್ಟಣಗಳು ಗೊತ್ತಾದವು. ಸಕಲಪ್ರಾಣಿಗಳು ಈ ಪ್ರವಾಹವು ಬರುವಾಗ್ಗೆ ಹ್ಯಾಗೆ ಇದ್ದವೋ ಹಾಗೆಯೇ ಪ್ರಾಣವನ್ನು ಬಿಟ್ಟಿದ್ದರು. ಇದಲ್ಲದೆ ಅನೇಕ ಸ್ಥಳಗಳಲ್ಲಿ ಬಿಸಿನೀರಿನ ಬುಗ್ಗೆಗಳಿರುತ್ತವೆ ಭೂವಿ ಮೊದಲಾದ ಜಲಾಶಯಗಳಲ್ಲಿ ಒಳಭಾಗದನೀರು ಶಾಖವಾಗಿರುತ್ತವೆ ಗಣಿಗಳಲ್ಲಿ ಶಾಖವನ್ನು ತಡೆಯುವದು ಕಷ್ಟ. ೧೬ಗಜ ಆಗೆದರೆ ಒಂದು ಡಿಗ್ರಿ ಶಾಖವು ಹೆಚ್ಚುತ್ತದೆ. ಇವುಗಳಿಂದ ಭೂಮಿಯು ಮೇಲುಭಾಗದಲ್ಲಿ ಶೈತ್ಯವಾಗಿದ್ದಾಗ್ಯೂ ಒಳಗೆ ಸೂರ್ಯನಂತೆ ಬೆಂಕಿಯೇ ಇರುವದು. ಮೇಲುಗಡೆ ಶೈತ್ಯವಾಗಿರುವ್ರದರಿಂದಲೇ ಇದು ಚರಾಚರವಸ್ತುಗಳಿಗೆ ನಿವಾಸನವಾಯಿತು.

ವ್ಯಾಕರಣಶಾಸ್ತ್ರ.

ಪಂಚವಿಾವಿಭಕ್ತಿಪ್ರಕರಣಂ.

ಕನ್ನಡಭಾಷೆಯಲ್ಲಿ ಅತ್ತಣಿಂ, ಎಂಬುವುದನ್ನೇ ಪಂಚವಿಾವಿಭಕ್ತಿಯೆಂದು ಹೇಳುವೆವು. ಇದು ಹಳೆಗನ್ನಡದ ಗ್ರಂಥಗಳಲ್ಲಿ ಪ್ರಚುರವಾಗಿ ಪ್ರಯೋಗಿಸಲ್ಪಟ್ಟಿರುವುದೇ ಹೊರ್ತು ಈಗಿನ ರೂಢಿಯು ಭಾಷೆಯಲ್ಲಿ ಇಲ್ಲ. ಈಗಿನ ರೂಢಿಯುಲ್ಲಿರುವ ಭಾಷೆಯುಲ್ಲಿ ಇದಕ್ಕೆ ಬದುಲಾಗಿ, ಸಂಸ್ಕೃತದಲ್ಲಿ ದಿಗ್ವಾಚಕವಾದ ದಿಶಾಶಬ್ದಕ್ಕೆ ತದ್ಭವವಾದ ದೆಸೆಯೆಂಬ ಶಬ್ದವನ್ನು ಕನ್ನಡ ಷಷ್ಠ್ಯೀವಿಭಕ್ತ್ಯಂತದಮೇಲೆ ಸೇರಿಸಿ,—ರಾಮನ ದೆಸೆಯಿಂದ ಎಂದು ಮೊದಲಾಗಿ ಉಪಯೋಗಿಸುತ್ತಾರೆ. ಇದರಂತೆ ಹಳಗನ್ನಡದಲ್ಲೂ ದಿಗರ್ಥಕವಾದ, ಅತ್ತಣಿಂ, ಎಂಬುದೊಂದವ್ಯಯವನ್ನಂಗೀಕರಿಸಿ ಅದನ್ನು ಷಷ್ಠ್ಯಂತದಮೇಲೆ ಸೇರಿಸಿ ಹೇಳುವದರಿಂದ ಗ್ರಂಥಸ್ಥಪ್ರಯೋಗಗಳೆಲ್ಲ ಸಾಧುಗಳಾಗುವುವು.

ನೀರನ್ನು ಸರಪರಾಜು ಮಾಡುವುದು. ಇದಲ್ಲದೆ ಮಳೆಯು ವಾಯುಮಂಡಲದಲ್ಲಿರುವ ಕಶ್ಮಲಗಳನ್ನು ನೆಲಕ್ಕೆ ಕೆಡವಿ ಬಹಳ ಉತ್ಕೃಷ್ಟವಾದ ಗೊಬ್ಬರವಾಗಿ ಪರಿಣಮಿಸುವಂತೆ ಮಾಡುವುದು. ಸಸ್ಯಾದಿಗಳು ಬೆಳೆಯುವದಕ್ಕೆ ಬೆಳಕು, ನೀರು, ಶಾಖವು ಕಾರಣಗಳು. ಇವುಗಳಿಗೆಲ್ಲಾ ಸೂರ್ಯನೇ ಮುಖ್ಯಕಾರಣ. ಲೋಕದಲ್ಲಿ ನಡೆಯುವ ಸಕಲ ಸೃಷ್ಟಿಸ್ಥಿತಿಗಳಿಗೂ ಸೂರ್ಯನೇ ಕಾರಣವಾಗಿರುವುದು ಪ್ರತ್ಯಕ್ಷವಾಗಿದೆ. ಇದನ್ನು ನೋಡಿಯೇ ನವ್ಯ ಜನರು ಸೂರ್ಯನನ್ನು ಪ್ರತ್ಯಕ್ಷವಾದ ದೇವರೆಂದು ಭಾವಿಸುವರು.

ಭೂಮಿಯು ಸೂರ್ಯನಹಾಗಿರುವ ಒಂದು ಗ್ರಹವಾಗಿರುವುದು. ಭೂಮಿಗೂ ಸೂರ್ಯನಿಗೂ ಒಂದು ದೊಡ್ಡ ವ್ಯತ್ಯಾಸವು ಉಂಟಾಗಿದೆ. ಸೂರ್ಯಮಂಡಲವು ಉರಿಯುತ್ತಲಿದೆ. ಇದರಜ್ವಾಲೆಯು ೨೦೦ ಮೈಲಿಗಳ ವರೆಗೂ ಸರ್ವತೋಮುಖವಾಗಿ ವ್ಯಾಪಿಸಿದೆ. ಭೂಮಿಗೂ ಸೂರ್ಯನಿಗೂ ೯೩೦೦೦೦೦೦೦ ಮೈಲಿಗಳಿದ್ದಾಗ್ಯೂ ಬಿಸಲಿನ ತೈಕ್ಷ್ಣ್ಯವು ಹ್ಯಾಗಿರುವುದೋ ಅವನ್ನು ನೋಡಿದರೆ ಸೂರ್ಯಮಂಡಲದತೈಕ್ಷ್ಣ್ಯವನ್ನು ನಾವು ಸ್ವಲ್ಪಮಟ್ಟಿಗಾದರೂ ಊಹಿಸಬಹುದು. ಒಂದಾನೊಂದುಕಾಲದಲ್ಲಿ ಈ ಭೂಮಿಯು ಸೂರ್ಯಮಂಡಲಕ್ಕೆ ಸೇರಿತ್ತೆಂಬದಾಗಿಯೂ ಅನೇಕ ಯುಗಗಳ ಕೆಳಗೆ ಅವರಿಂದ ಭಿನ್ನವಾಯಿತೆಂಬದಾಗಿಯೂ, ಆದಾಗ್ಯೂ ಅದರ ಆಕರ್ಷಣಾಶಕ್ತಿಯಿಂದ ಅನನ್ನು ಸುತ್ತುತ್ತಲಿವೆ ಎಂಬದಾಗಿಯೂ, ಶಾಸ್ತ್ರಜ್ಞರು ಗೊತ್ತುಮಾಡಿದಾರೆ. ಸೂರ್ಯಮಂಡಲವುರಿಯುತ್ತಲಿದೆ, ಅದು ಸ್ವಯಂ ತೇಜಸ್ಸು ಉಳ್ಳದ್ದು, ನಮ್ಮ ಭೂಮಿಯು ಸ್ವಯಂತೇಜೋಮಯವಾದ ಗ್ರಹವಲ್ಲ. ಭೂಮಿಯ ಮೇಲುಭಾಗದಲ್ಲಿನ ಶಾಕವು ಹೋಗಿದೆ. ಈ ಶಾಕವನ್ನು ಕಳೆದಿರುವ ಭಾಗದಲ್ಲಿ ಬಿಟ್ಟಗುಡ್ಡಗಳು ಮೈದಾನಗಳು ಹಳ್ಳಗಳು ಇವುಗಳೆಲ್ಲಾ ಇರುವವು. ಹಳ್ಳಗಳಲ್ಲಿ ನೀರು ನಿಂತಿರುವದು. ಇವುಗಳಲ್ಲಿ ದೊಡ್ಡ ಜಲಾಶಯಗಳಿಗೆ ಸಾಗರಗಳೆಂಬದಾಗಿಯೂ ಸಣ್ಣವುಗಳಿಗೆ ಸರೋವರಗಳೆಂಬದಾಗಿಯೂ ಹೇಳುವರು. ಎತ್ತರವಾದ ಪ್ರದೇಶಗಳೆ ಜನಭರಿತವಾದ ಖಂಡಗಳಾಗಿ ಪರಿಣಮಿಸಿರುವವು. ಭೂಮಿ ಈ ರೀತಿಯುಲ್ಲಿ ಚರಾಚರವಸ್ತುಗಳಿಂದ ತುಂಬಿದ್ದಾಗ್ಯೂ ಮೇಲುಭಾಗದಿಂದ ಒಂದೆರಡು ಮೈಲಿಗಳ ಕೆಳಗೆ ಸೂರ್ಯನಂತೆ ಅಗ್ನಿಸ್ವರೂಪವಾಗಿರವು. ಇದಕ್ಕೆ ಪ್ರತ್ಯಕ್ಷಪ್ರಮಾಣಗಳನೇಕಗಳಿರುವವು. ಭೂಗರ್ಭದಲ್ಲಿರುವ ಜ್ವಾಲೆಯು ಅನೇಕ ಪರ್ವತಗಳಲ್ಲಿ ದ್ವಾರಗಳನ್ನು ಮಾಡಿಕೊಂಡು ಈಚೆಗೆ ಬರುತ್ತದೆ. ಇದಕ್ಕೆ ಅಗ್ನಿಪರ್ವತಗಳೆನ್ನುವರು, ಈ ಜ್ವಾಲೆಯ ತೈಕ್ಷ್ಣ್ಯದಿಂದ ಬಂಡೆಗಳು

ದಾನವಾಗುವುದೆಂದು ಸಾಮಾನ್ಯವಾಗಿ ಅರ್ಥವನ್ನು ಹೇಳಿ, ವೃಷಾತ್ಪರ್ಣಂಪತತಿ, ಧಾವತೋಶ್ವಾತ್ಪತತಿ, ಎಂದು ಮೊದಲಾಗಿ ಉದಹರಿಸಲ್ಪಟ್ಟಿರುವುದು. ಮತ್ತು, 'ಭೀತಾರ್ಥಾನಾಂ ಭಯಹೇತುಃ, ಪರಾಜೇರಸೋಢಃ, ವಾರಣಾರ್ಥಾನಾಮಿಪ್ಸಿತಃ, ಎಂದು ಮೊದಲಾದ ಕೆಲವು ಸೂತ್ರಗಳನ್ನು, ಪಾಣಿನಿಯು, (ಭಯಾರ್ಥಕ ಧಾತುಗಳಿದ್ದಾಗಲೂ, ರಕ್ಷಣಾರ್ಥಕಧಾತುಗಳಿದ್ದಾಗಲೂ, ಭಯಕ್ಕೆ ಕಾರಣವಾದ ವಸ್ತುವಾಚಕವೂ, ಪರಾ ಎಂಬುಪಸರ್ಗಪೂರ್ವಕವಾದ ಜಿ ಧಾತುವಿದ್ದಾಗ ಅಸಹ್ಯನಾದ ವಸ್ತುವಾಚಕವೂ, ವಾರಣಾರ್ಥಕವಾವಧಾತುಗಳಿದ್ದಾಗ ಕರ್ತನು ಯಾವುದನ್ನು ವಾರಣೆಮಾಡಬೇಕೆಂದಪೇಕ್ಷಿಸುವನೊ, ಆ ವಸ್ತುಬೋಧಕವಾದ ಶಬ್ದವೂ ಅಪಾದಾನಸಂಜ್ಞಕವಾಗುವುದಕ್ಕಾಗಿ ಹೇಳಿರುವನು. ಪತಂಜಲಿಯು ಧ್ರುವಮಪಾಯೇಪಾದಾನಂ ಎಂಬ ಸೂತ್ರಕ್ಕೆ, ಅಪಾಯವೆಂಬುವುದು, ಪ್ರತ್ಯಕ್ಷವಾಗಿರಲಿ, ಅಥವಾ ಬುದ್ಧಿಯಿಂದ ಪರಿಕಲ್ಪಿತವಾಗಿರಲಿ, ಅದಕ್ಕೆ ಅವಧಿಯಾವುದು ಅಪಾದಾನವಾಗುವುದೆಂಬರ್ಥವನ್ನು ಸ್ವೀಕರಿಸಿ, ಮೇಲೆ ಹೇಳಿರುವ ಸೂತ್ರಗಳನ್ನೆಲ್ಲಿ ಸ್ಪಷ್ಟೀಕರಣ ಮಾಡಿದನು. ಇದೆಲ್ಲಾ ಮೇಲೆ ಹೇಳಿರುವ ಪೋಪದೇವನ ಶ್ಲೋಕದಿಂದ ಸಿದ್ಧವಾಗುವುದು.

ಹೀಗೆ ಭಾಷೆಯಲ್ಲೂ ಆಗುವುದು. ಎಂಬರ್ಥವನ್ನು ಸಂಗ್ರಹಿಸಿ, 'ಅವಧಾವಪಾಯೆ' ಎಂಬ ಸೂತ್ರವನ್ನು ಶಾಬ್ದಾನುಶಾಸನಕಾರನು ಬರೆದು, ಅಪಾಯವೆಂದರೆ ವಿಶ್ಲೇಷವು, ಆ ವಿಶ್ಲೇಷವು ವಾಸ್ತವಿಕವಾಗಲಿ, ಪ್ರಾತೀತಿಕವಾಗಲಿ, ಎಂದು ಬರೆದಿರುವನು. ಅದುದರಿಂದಲೆ, ಈ ಯೊಂದು ಸೂತ್ರಕ್ಕೆ ಕಾರಕವಾದ ಪಂಚವಿಭಾವಿಭಕ್ತಿಗಳೆಲ್ಲ ಉದಾಹರಣೆಯಾಗುವುವು. ಹೇತ್ವರ್ಥದಲ್ಲಿ ಬರುವ ಪಂಚಮಿಗೆ ಪೂತ್ರ ಕ್ರಿಯಾಪದವಿದ್ದೆ ಇರಬೇಕೆಂಬ ನಿಯಮವಿಲ್ಲದಿರುವುದರಿಂದ ಅದಕ್ಕೆ ಕಾರಕತ್ವವಿಲ್ಲವೆಂದು ಬೇರೆ ಸೂತ್ರವನ್ನು ಹೇಳಿರುವೆವೆಂದು ತಿಳಿಯಬೇಕು.

ಇದನ್ನೆಲ್ಲಾ ಪರ್ಯಾಲೋಚಿಸಿ ನೋಡಿದರೆ ಸಂಸ್ಕೃತದಲ್ಲಿರುವಂತೆ ಪಂಚಮೀವಿಭಕ್ತಿಯು ಈ ಭಾಷೆಯಲ್ಲಿ ಇಲ್ಲವೆಂದೇ ತೋರುವುದು.—ಏದರೆ ವ್ಯಾಕರಣಕಾರರೆಲ್ಲ ಸಂಸ್ಕೃತ ವ್ಯಾಕರಣವನ್ನು ನೋಡಿ ಆದರಂತೆ ಭಾಷೆಗೂ ವ್ಯಾಕರಣವನ್ನು ಬರೆಯಬೇಕೆಂದು ಪ್ರವರ್ತಿಸಿರುವುರಾದುದರಿಂದ, ಭಾಷೆಯಲ್ಲೂ ವಿಭಕ್ತಿಗಳು ಏಳು ಎಂಬ ಸಂಖ್ಯೆಯನ್ನು ಪೂರ್ಣವಾಹುವುದಕ್ಕೋಸ್ಕರ ಇವನ್ನು ವ್ಯಾಕರಣದಲ್ಲಿ ಬರೆದಿರುವರೇ ಹೊರತು ಇದರಿಂದ ಅನ್ಯ ಪ್ರಯೋಜನವುಂಟೆಂದು ತೋರುವುದಿಲ್ಲ. ಮತ್ತು, ಇಂದ, ಎಂಬ ತೃತೀಯೆಯಿಂದಲೆ ಇಂತಹ ಪ್ರಯೋಗಗಳನ್ನು ಸಾಧಿಸಬಹುದಾದುದರಿಂದಲೂ, ಇದರ ಅನುಶಾಸನವು ನಿಷ್ಪ್ರಯೋಜನವೆಂದು ತೋರುವುದು.

ಈ ಪಂಚಮಾಯೆಂಬುವುದು, ಹೇತುವೆಂಬರ್ಥದಲ್ಲಿರುವ ಲಿಂಗದಮೇಲೂ, ಒಂದಕ್ಕೊಂದಕ್ಕೆ ಸೇರಿದ ವಸ್ತುಗಳ ಪರಸ್ಪರ ಅಗಲುವಿಕೆಯು ತೋರುತ್ತಿರಲು, ಅದಕ್ಕೆ ಅವಧಿಭೂತವಾದ ಪದಾರ್ಥವನ್ನು ಬೋಧಿಸುವ ಲಿಂಗದಮೇಲೂ, ಬರುವದು.

ಮೇಲೆಹೇಳಿದ ಅಗಲುವಿಕೆಯೆಂಬುವುದು ವಾಸ್ತವವಾಗಿದ್ದರೂ ಸರಿ, ಅಥವಾ ಪ್ರತೀತಿಕವಾಗಿದ್ದರೂ ಸರಿ, ಎಂದು ತಿಳಿಯಬೇಕು.

ಇಂತಹ ಸಂದರ್ಭದಲ್ಲಿ ಸಂಸ್ಕೃತವ್ಯಾಕರಣಕಾರರು ಆ ಅಗಲುವಿಕೆಗೆ ಅವಧಿಭೂತವಾದುದಕ್ಕೆ ಅಪಾದಾನವೆಂಬ ಹೆಸರನ್ನಿಟ್ಟು, 'ಅಪಾದಾನೇ-ಪಂಚಮೀ' ಎಂದು ಪಂಚಮೀವಿಭಕ್ತಿಯನ್ನು ಹೇಳಿರುವರು. ಇದೇ ವಿಷಯವನ್ನು ವೋಪದೇವನೆಂಬ ದೊಡ್ಡ ವೈಯ್ಯಾಕರಣನು,—

ಶ್ಲೋಕ ॥ 'ಅಪಾಯೆಯದುದಾಸೀನಂಚಲಂವಾಯದಿವಾಚಲಂ ॥

ಧ್ರುವಮೇವಾತದಾಪೇಕ್ಷ್ಯಾತ್ತದಪಾದಾನಮುಚ್ಯತೆ ॥ '

ಎಂದು ಹೇಳಿರುವುದರಿಂದ, ಸೇರಿದ್ದ ವಸ್ತುಗಳು ಒಂದಕ್ಕೊಂದಕ್ಕೆ ಬಿಟ್ಟುಹೋಗಲು ಆ ಬಿಡುವಿಕೆಗೆ ಅವಧಿಭೂತವಾದುದು, ಎಂದರೆ ಪ್ರಕೃತದಲ್ಲಿ ಉಪಯೋಗಿಸುವ ಧಾತುವಿನ ಅರ್ಥವಾದ ಕ್ರಿಯೆಗೆ ಆಶ್ರಯವಾಗದೆ, ಆ ಕ್ರಿಯೆಯಿಂದುಂಟಾಗುವ ವಿಭಾಗಕ್ಕೆ ಮಾತ್ರ ಆಶ್ರಯವಾದ ವಸ್ತುವು; ಇದು ಚಲಿಸುತ್ತಿರುವುದಾಗಲಿ, ಸ್ಥಿರವಾಗಿರುವುದಾಗಲಿ, ಅಪಾದಾನವೆಂಬ ಹೆಸರುಳ್ಳದ್ದಾಗುವುದೆಂದು ಹೇಳಿರುವನು. ಆದುದರಿಂದಲೆ ಸಂಸ್ಕೃತವ್ಯಾಕರಣದ 'ಧ್ರುವಮಪಾಯೇಪಾದಾನಂ' ಎಂಬ ಸೂತ್ರದಲ್ಲಿ ಧ್ರುವಮೆಂಬ ಪದಕ್ಕೆ, ಸ್ಥಿರವೆಂಬರ್ಥವನ್ನು ಸ್ವೀಕರಿಸದೆ ವಿಶ್ಲೇಷಕ್ಕೆ ಅವಧಿಭೂತನಾದುದು ಅಪಾ

ಇಂಗ್ಲೆಂಡಿನಲ್ಲರುವ 'ರೊಥಾಂಸೆಡ್' ಎಂಬ ತೋಟದಲ್ಲಿ ನಡೆದ ಪರಿಶೋಧನೆಗಳ ಸಹಾಯದಿಂದ ಕೆಳಗೆ ಬರೆದಿರುವ ಅಂಶಗಳು ನಿಮ್ಮರ್ಸಿಸಲ್ಪಟ್ಟವು.

ಪೈರಿಗೆಲ್ಲಾ ಆಹಾರವಸ್ತುಗಳು ಒಂದೇ ಸಮನಾಗಿ ಬೇಕಾಗುವುದಿಲ್ಲ. ಗೋಧಿ ಮೊದಲಾದ ಧಾನ್ಯದ ಪೈರೆಲ್ಲಾ ನೈಟ್ರಜನ್ ಹೆಚ್ಚಾಗಿರುವ ಗೊಬ್ಬರಗಳಿಂದ ಚನ್ನಾಗಿ ಅಭಿವೃದ್ಧಿ ಹೊಂದುತ್ತವೆ. ಗೆಡ್ಡೆ ಪೈರುಗಳಿಗೆ ಸಾಕಾಗುವಷ್ಟು ಪಾಸ್ಫಾರಿಕ್‌ಆಸಿಡ್ ಮಣ್ಣಿನಿಂದ ದೊರೆಯದಿದ್ದರೆ ಸರಿಯಾಗಿ ಬೆಳೆಯುವುದಿಲ್ಲ; ಸ್ವಲ್ಪ ಸೂಪರ್‌ಫಾಸ್ಫೇಟನ್ನು ಹಾಕಿದಪಕ್ಷದಲ್ಲಿ ಫಸಲು ಹೆಚ್ಚಾಗಿ ಬರುತ್ತದೆ. ಈ ಅಂಶಗಳಿಂದ ತಿಳಿದುಬಂದುದು ಏನೆಂದರೆ:—

ಮಣ್ಣುಗಳನ್ನು ವಿಭಜನೆ ಮಾಡತಕ್ಕ ಕ್ರಮವು ತೃಪ್ತಿಕರವಾದುದಲ್ಲ.

ಶಾಸ್ತ್ರರೀತಿಯಾವ ವಿಭಜನೆಯಿಂದಲಾದರೂ ಅನುಭವದಿಂದಲಾದರೂ ಸಾರವಿಲ್ಲ ಎಂಬದಾಗಿ ತಿಳಿದುಬಂದ ಒಂದು ಮಣ್ಣಿನಲ್ಲಿ ಅನೇಕ ಬೆಳೆಗಳಿಗೆ ಸಾಕಾಗುವಷ್ಟು ಸಸ್ಯಾಹಾರ ವಸ್ತುಗಳು ಇವೆ ಎಂದು ಎಲ್ಲರಿಗೂ ತಿಳಿದಿತ್ತು. ಒಳ್ಳೆಯ ಒಂದು ಬೆಳೆಯನ್ನು ತೆಗೆಯಬೇಕಾದರೆ ಆ ಬೆಳೆಗೆ ಸುಮಾರು ೧೦ ಅಥವಾ ೨೦ ಪರ್ಸೆಂಟ್ ಫೊಟಾಷ್, ೫೦ ಪರ್ಸೆಂಟ್ ಫಾಸ್ಫಾರಿಕ್ ಆಸಿಡ್ ಸಿಕ್ಕಿದರೆ ಸಾಕು. ಆದರೆ ಈ ವಸ್ತುಗಳು ಮಣ್ಣುಗಳಲ್ಲಿ ಸೇಕಡ ೧ ಕ್ಕಿಂತಲೂ ಕಡಮೆ ಇರುವುದು ಅಪರೂಪ. ಈ ಪ್ರತಿಯೊಂದು ಆಹಾರವಸ್ತುವಿನ ಅಂಶವೂ ಎಕರೆಯ ಜವಿಾನಿನ ಮೇಲ್ಮಣ್ಣಿನಲ್ಲಿ ಮಾತ್ರ ಸ್ವಲ್ಪ ಹೆಚ್ಚು ಕಡಮೆ ೪೦೦೦ ಆಗುತ್ತದೆ. ಇಷ್ಟು ಸಸ್ಯಾಹಾರವೆಲ್ಲವೂ ಪೈರಿಗೆ ಸಿಕ್ಕಲಾರದು. ಇದು ಬೇರೆಬೇರೆ ಸ್ಥಿತಿಯಲ್ಲಿರುವುದರಿಂದ ಒಂದು ಸ್ಥಿತಿಯಲ್ಲಿರುವ ಆಹಾರವನ್ನು ಸಸಿಗಳು ಸುಲಭವಾಗಿ ಉಪಯೋಗಿಸಿಕೊಳ್ಳುತ್ತವೆಂತಲೂ ಮತ್ತೊಂದು ಸ್ಥಿತಿಯಲ್ಲಿರುವ ಆಹಾರವನ್ನು ಉಪಯೋಗಿಸಿಕೊಳ್ಳುವುದಿಲ್ಲವೆಂತಲೂ ಗೊತ್ತಾಯಿತು. ಸಸಿಗಳ ಉಪಯೋಗಕ್ಕೆ ಸಿದ್ಧವಾದ ಸ್ಥಿತಿಯಲ್ಲಿರುವ ಸಸ್ಯಾಹಾರವಸ್ತುಗಳು ಅನುಪಯೋಗಸ್ಥಿತಿಯಲ್ಲಿರುವ ಆಹಾರವಸ್ತುಗಳಿಗಿಂತಲೂ ಪ್ರತ್ಯೇಕವೆಂಬ ಅಭಿಪ್ರಾಯ ಇದರಿಂದ ಹುಟ್ಟಿತು.

ಸಸ್ಯಾಹಾರವಸ್ತುಗಳಲ್ಲಿರುವ ಈ ವ್ಯತ್ಯಾಸ ಸುಲಭವಾಗಿ ಗೊತ್ತಾದರೂ ಉಪಯೋಗಸ್ಥಿತಿಯಲ್ಲಿರುವ ವಸ್ತುಗಳನ್ನು ಅನುಪಯೋಗ ಸ್ಥಿತಿಯಲ್ಲಿರುವ ವಸ್ತುಗಳಿಂದ ಪ್ರತ್ಯೇಕಿಸುವ ಮಾರ್ಗ ವಿಶದವಾಗಲಿಲ್ಲ.

ವ್ಯವಸಾಯಶಾಸ್ತ್ರದ ಅಭಿವೃದ್ಧಿ.

ಮಣ್ಣುಗಳು.

ವ್ಯವಸಾಯಶಾಸ್ತ್ರಜ್ಞರು ಮಣ್ಣುಗಳ ವಿಷಯದಲ್ಲಿ ಕೊಟ್ಟ ಹೆಚ್ಚಾದ ಗಮನವನ್ನು ಈ ಶಾಸ್ತ್ರದ ಮತ್ತೊಂದು ಭಾಗದಲ್ಲಿಯೂ ಕೊಡಲಿಲ್ಲ. ಇದು ಅತ್ಯಂತ ಮುಖ್ಯವಾದ ವಿಷಯವಾದುದರಿಂದ ಅವರ ಕೆಲಸಗಳಲ್ಲಿ ಯಾವ ತಪ್ಪನ್ನೂ ಎಣಿಸಲಿಕ್ಕಾಗದು. ಕಳೆದ ಕೆಲವು ವರ್ಷಗಳಿಂದ ಈ ಭಾಗದಲ್ಲಿ ವಿಶೇಷ ಸಂಗತಿಗಳನ್ನು ತಿಳಿದುಕೊಂಡರು. ಮುಂದೆ ತಿಳಿಯಬೇಕಾದ ಸಂಗತಿಗಳು ಅನೇಕ ಇವೆ.

ಸಸ್ಯಾಹಾರ ವಸ್ತುಗಳಾದ ಸಿಲಿಕ, ಕಬ್ಬಿಣ, ಅಲ್ಯೂಮಿನ ಮೊದಲಾದವು ಮಣ್ಣುಗಳಲ್ಲಿ ಎಷ್ಟಿವೆ ಎಂಬುದನ್ನು ತಿಳಿಯಬೇಕೆಂಬ ಆತುರ ಹುಟ್ಟಿದ ಮೇಲೆ ಹೆಚ್ಚು ಮುಖ್ಯವಲ್ಲದ ಸಸ್ಯಾಹಾರ ವಸ್ತುಗಳಾದ ಕಬ್ಬಿಣ, ಅಲ್ಯೂಮಿನ ಮೊದಲಾದ ಪೈಗಳ ಪರಿವಾಣವು ಮೊದಲು ಕಂಡು ಹಿಡಿಯಲ್ಪಟ್ಟಿತು; ಅಮೂಲ್ಯಸಸ್ಯಾಹಾರ ವಸ್ತುಗಳಾದ ಪೊಟಾಷ್, ಪಾಸ್ಪಾರಿಕ್‌ಆಸಿಡ್, ನೈಟ್ರಜನ್, ಸುಣ್ಣ ಇವುಗಳ ಪರಿವಾಣವು ನಂತರ ಕಂಡುಹಿಡಿಯಲ್ಪಟ್ಟಿತು. ಈ ವಿಷಯಗಳಲ್ಲಿ ನಡೆದ ಪರಿಶೋಧನೆಗಳ ಸಹಾಯದಿಂದ ಅಮೂಲ್ಯಸಸ್ಯಾಹಾರ ವಸ್ತುಗಳು ಮಣ್ಣುಗಳಲ್ಲಿ ಸಾಮಾನ್ಯವಾಗಿ ಎಷ್ಟಿರುತ್ತವೆ ಎಂಬ ಅಂಶವು ಗೊತ್ತಾಯಿತು.

ಹೀಗೆ ಗೊತ್ತಾದ ಸಂಗತಿ ಬಹಳ ಪ್ರಯೋಜನವಾದುದಾದರೂ, ವಾಡಿಕೆಯಲ್ಲಿ ನಡೆಯುತ್ತಿರುವ ವ್ಯವಸಾಯದ ಕೆಲಸಗಳಿಗೆ ಸಹಾಯವಾಗುವುದಕ್ಕೆ ಸಾಲದೆಂದು ತಿಳಿದುಬಂದಿತು. ಹೇಗೆಂದರೆ:—

ಪೊಟಾಷ್, ಪಾಸ್ಪಾರಿಕ್ ಆಸಿಡ್ ಕಡಮೆಯಾಗಿದೆ ಎಂದು ವಿಭಜನೆಯಿಂದ ತಿಳಿದುಬಂದ ಒಂದು ಮಣ್ಣಿಗೆ ಗೊಬ್ಬರ ಹಾಕಿದರೆ ಹಾಕಿದ ಗೊಬ್ಬರಕ್ಕೆ ತಕ್ಕ ಫಸಲು ಬರಲಿಲ್ಲ. ಸ್ವಲ್ಪ ದನಕರುಗಳ ಗೊಬ್ಬರವನ್ನು ಒಂದು ಜಮೀನಿಗೆ ಹಾಕುವುದರಿಂದ ಕೆಲವು ವೇಳೆ ಹೆಚ್ಚಾದ ಫಸಲು ದೊರೆತರೆ ಆ ಜಮೀನಿನಲ್ಲಿರುವುದಕ್ಕಿಂತಲೂ ಆಹಾರ ವಸ್ತುಗಳು ಬಹಳ ಕಡಮೆಯಾಗಿ ಹಾಕಿದ ಗೊಬ್ಬರದಲ್ಲಿ ಇದೆ ಎಂದು ವಿಭಜನೆಯಿಂದ ಗೊತ್ತಾಯಿತು.

ವ ಚ ನ ಕಾ ವ್ಯ

ತರಗತಿ IV.] [ಕಲ 45 ನಿಮಿಷ.

ವಿಷಯ.	ಬೋಧನ ಕ್ರಮ.
ಅಫ್ಜಲ್‌ಖಾ ಮತ್ತು ಶಿವಾಜಿ.	
ಅಫ್ಜಲ್‌ಖಾನನು ಡೇರೆಯಲ್ಲಿ ಬಂದು ಕುಳಿತಿದ್ದನು. ಶಿವಾಜಿಯೂ ಅವನ ಸಹಚರರೂ ಬರುತ್ತಿರುವುದನ್ನು ಕಂಡು ಅಫ್ಜಲ್‌ಖಾನನು ಅವರೊಳಗೆ ಶಿವಾಜಿ ಯಾರೆಂದು ತನ್ನ ಪಾರ್ಶ್ವದಲ್ಲಿ ನಿಂತಿದ್ದವರನ್ನು ಕೇಳಿದನು. ಅವರು ಕೈಯನ್ನು ತೋರಿಸಿ ಶ್ಯಾಮಕಾಯನಾಗಿಯೂ, ಆಜಾನುಬಾಹುವಾಗಿಯೂ, ಸೊಂಟದಲ್ಲಿ ಕತ್ತಿಯನ್ನು ಕಟ್ಟಿದವನಾಗಿಯೂ, ಕಪ್ಪಾಗಿಯೂ ಇರುವನೇ ಶಿವಾಜಿಯೆಂದು ಹೇಳಿದರು.	ಈಗ ಸುಮಾರು ೩೦೦ ವರ್ಷಗಳ ಹಿಂದೆ ದಕ್ಷಿಣದೇಶದಲ್ಲಿ ಶಿವಾಜಿಯೆಂಬ ಪರಾಕ್ರಮಶಾಲಿಯಾದ ಮರಾಟಿಯನಿದ್ದನು. ಆತನ ಪ್ರಾಬಲ್ಯವನ್ನು ನೋಡಿ, ಮೋಸದಿಂದ ಅವನನ್ನು ಕೊಲ್ಲಬೇಕೆಂದು ನಿಶ್ಚಯಿಸಿ, ಸವಿಾಪದಲ್ಲೇ ಇದ್ದ ಬಿಜಾಪುರದ ಮುಂತ್ರಿಯಾದ ಅಫ್ಜಲ್‌ಖಾನನು ಶಿವಾಜಿಯೊಡನೆ ಸ್ನೇಹಬೆಳಸುವ ನೆಪದಿಂದ ಇಬ್ಬರೂ ಒಂದುಕಡೆ ಸೇರುವ ಏರ್ಪಾಡನ್ನು ಮಾಡಿಸಿದನೆಂದು ಮೊದಲು ಬಾಲಕರಿಗೆ ತಿಳಿಸಿ, ಆ ವಿಷಯವಾಗಿ ಪ್ರಶ್ನೆಮಾಡಿ, ಆ ವಿಷಯದಲ್ಲಿರುವ ವಾಕ್ಯಗಳನ್ನು ಮಾದರಿಯಾಗಿ ಒಂದುಸಾರಿ ಓದಿ ಇಬ್ಬರು ಮೂವ್ವರಿಂದ ಓದಿಸುವುದು. ಬಾಲಕರು ನೋಡಿರುವ ಗವರ್ನರ್ ಮುಂತಾದವರ ನಿದರ್ಶನವನ್ನು ಹೇಳಿ ಇದನ್ನು ಅವರಿಂದಲೇ ಹೇಳಿಸಿ ಹಲಗೆಯಮೇಲೆ ಬರೆಯುವುದು. ಪ್ರಕೃತದಲ್ಲಿ ಇಂಥವರಿಬ್ಬರೆಂದು ತಿಳಿಸುವುದು. ಇದನ್ನು ಬಾಲಕರಿಂದಲೇ ಹೇಳಿಸಿ ಹಲಗೆಯಮೇಲೆ ಬರೆಯಬೇಕು. ಆಜಾನುಬಾಹುವಾಗಿರುವುದು ಶೂರರಿಗೆ ಹೇಗೆ ಪ್ರ

ಸಹಚರರು—ಜೊತೆಯಲ್ಲೇ ಇರುವವರು, ಮುಖಂಡನ ದೇಹರಕ್ಷಣೆಗಾಗಿ ಸರ್ವದಾ ಹತ್ತಿರವಿರುವ ಶೂರರು.

ಶ್ಯಾಮಕಾಯನಾಗಿ = ಕಪ್ಪುಬಣ್ಣದ ದೇಹವುಳ್ಳ, ಕಪ್ಪಾಗಿರುವ

ಯಾವ ಸಸ್ಯಾಹಾರವಸ್ತು ಒಂದು ಮಣ್ಣಿನಲ್ಲಿ ಪೈರಿಗೆ ಸಾಕಾಗುವಷ್ಟು ಇಲ್ಲವೆಂಬುದನ್ನು ತಿಳಿದುಕೊಳ್ಳುವುದಕ್ಕೆ 'ವಿಲ್ಲಿ' ಎಂಬುವರೂ 'ವಿಲ್‌ಗಟ್‌ಸ್' ಎಂಬುವರೂ ತಾವು ಮಾಡಿದ ಪರಿಶೋಧನೆಗಳಿಂದ ತಿಳಿದುಬಂದ ಅಂಶಗಳನ್ನು ಪ್ರಚುರಪಡಿಸಿದರು. ಆದರೆ ಅವಗಳಲ್ಲಿ ಯಾವುದೂ ಅನುಕೂಲವಾದ ಮತ್ತು ಸುಲಭವಾದ ಕ್ರಮವಾಗಿ ಕಂಡುಬರಲಿಲ್ಲ

ಲಂಡನ್ ಪಟ್ಟಣದ ಡಾಕ್ಟರ್ ಡಯರ್ ಎಂಬುವರು ೧೦ ವರ್ಷಗಳ ಹಿಂದೆ ಮಣ್ಣುಗಳಲ್ಲಿರುವ ಸಸ್ಯಾಹಾರವಸ್ತುಗಳ ವಿಷಯದಲ್ಲಿ ಕೆಳಗೆ ತಿಳಿಸಿರುವ ಕ್ರಮದಲ್ಲಿ ಕೆಲಸಮಾಡಿ ಅಮೂಲ್ಯವಾದ ಸಂಗತಿಗಳನ್ನು ನಿರ್ಮಿಸಿದರು. ಸಸ್ಯಾಹಾರದ ಅತ್ಯಧಿಕವಾದ ಭಾಗವು ಮಣ್ಣುಗಳಲ್ಲಿ ಅನುಪಯೋಗಸ್ಥಿತಿಯಲ್ಲಿದೆ. ಸಸ್ಯಗಳ ಬೇರುಗಳಿಂದ ಬರುವ ರಸಗಳು ಸಸ್ಯಜಾವ್ಲುಗಳೊಡನೆ ಕೂಡಿರುವುದರಿಂದ ಅವುಗಳಲ್ಲಿ ಒಂದು ಭಾಗವನ್ನು ಕರಗಿಸಿ ಉಪಯೋಗಿಸಿಕೊಳ್ಳುತ್ತವೆ. ಸಸ್ಯಗಳ ಬೇರುಗಳ ರಸದಲ್ಲಿರುವ ಆವ್ಲ ಭಾಗವನ್ನು ಅರಿತು, ಅಷ್ಟೇ ಆವ್ಲವನ್ನುಂಟಾಗಿರುವ ಒಂದು ದ್ರವವನ್ನು ಮಾಡಿದರು. ಈ ದ್ರವವು ಸ್ವಲ್ಪ ಹೆಚ್ಚು ಕಡಮೆ ಸಸ್ಯದ ಬೇರುಗಳ ರಸದಹಾಗೆ ಇತ್ತು. ರೊಥಾಂಸ್ಟೆಡ್ ತೋಟದ ಮಣ್ಣುಗಳಲ್ಲಿ ಕೆಲವನ್ನು ಈ ದ್ರವದಲ್ಲಿ ಹಾಕಿ ಸ್ವಲ್ಪಕಾಲದವರೆಗೆ ಇಟ್ಟಿದ್ದವೀಲ್ಲಿ ಅದರಲ್ಲಿ ಕರಗಿದ ಪೊಟಾಷ್, ಫಾಸ್ಫಾರಿಕ್ ಆಸಿಡ್ ಗಳ ಅಂಶವನ್ನು ಕಂಡುಹಿಡಿದರು. ಈ ವಸ್ತುಗಳ ಅಂಶವು ಸಸ್ಯಗಳಿಗೆ ಸಾಕಾದಷ್ಟು ಕಡಮೆಯಾಗಿ ಇದೆ ಎಂದು ಈ ರೀತಿಯುಲ್ಲಿ ತಿಳಿದುಬಂದಿತು. ಪೈರು ಬೆಳೆಯುವುದರಿಂದ ಗೊತ್ತಾದ ಸಂಗತಿಗಳಿಗೂ ಮೇಲೆ ತಿಳಿಸಿದ ಕ್ರಮದಲ್ಲಿ ತಿಳಿದುಬಂದ ಅಂಶಗಳಿಗೂ ವ್ಯತ್ಯಾಸವಿಲ್ಲದೆ ಇದ್ದಕಾರಣ ಮಣ್ಣಿನಲ್ಲಿರುವ ಸಸ್ಯಾಹಾರವಸ್ತುಗಳ ಪರಿಮಾಣವನ್ನು ಕಂಡುಹಿಡಿಯುವುದಕ್ಕೆ ಅನುಸರಿಸಲ್ಪಟ್ಟ ಈ ಮಾರ್ಗವು ಸರಿಯಾದುದೆಂತ ಎಲ್ಲರೂ ಒಪ್ಪಬೇಕು.

ಒಂದು ಮಣ್ಣಿನಲ್ಲಿ ಸಸಿಗಳ ಉಪಯೋಗಕ್ಕೆ ಸಿದ್ಧವಾದ ಪೊಟಾಷ್ ಸೇಕಡಾ ೦೦೫ ಮತ್ತು ಉಪಯೋಗಸ್ಥಿತಿಯುಲ್ಲಿರುವ ಫಾಸ್ಫಾರಿಕ್ ಆಸಿಡ್ ಸೇಕಡ ೧೦ ಈ ಅಂಶಗಳಿಗಿಂತಲೂ ಕಡಮೆಯಾಗಿದ್ದಲ್ಲಿ ಈ ವಸ್ತುಗಳನ್ನು ಒದಗಿಸುವ ಗೊಬ್ಬರಗಳನ್ನು ಆ ಮಣ್ಣಿಗೆ ಹಾಕಬೇಕಾಗುವುದು ಎಂದು ಡಾಕ್ಟರ್ ಡಯರ್ ಎಂಬುವರು ತಿಳಿಸಿದರು.

ವನ್ನು ತಿಳಿಸಬೇಕು. ಅಫ್ಜಲ್‌ಖಾನನು ಕತ್ತಿಯಿಂದ ತಿವಿದ ಕ್ರಮವನ್ನು ವಿವರಿಸಿ ಒಟ್ಟು ಅಭಿಪ್ರಾಯದ ವಿಷಯವಾಗಿ ಪ್ರಶ್ನೆಮಾಡಿ, ಅದು ಮುಂದಟ್ಟಾಗಿರುವುದೆಂದು ನಿಶ್ಚಯಿಸಿಕೊಳ್ಳುವುದು. ಪುನರಾವರ್ತನೆ.

ನಿವಿುವಮಾತ್ರದಲ್ಲಿ ಶಿವಾಜಿ ಎಡಗೈಯಲ್ಲಿನ ವಾಗನಖವನ್ನು ಅಫ್ಜಲ್‌ಖಾನನ ಹೊಟ್ಟೆಗೆ ಹಾಕಿ, ಹಿರಿದು, ಬಲಗೈಯಲ್ಲಿದ್ದ ಬಿಜ್ವಾ ಎಂಬ ಆಯುಧದಿಂದ ಅವನ ಎದೆಯನ್ನು ತಿವಿದನು. ಆ ಯಿರಿತಗಳಿಂದ ಅಫ್ಜಲ್‌ಖಾನನು ಸತ್ತನು.

ಪೂರ್ವದಂತೆಯೇ ಓದಿಸುವುದು.

ನಿವಿುವಮಾತ್ರದಲ್ಲಿ = ತಟ್ಟನೆ.
ವಾಗನಖ = ವ್ಯಾಘ್ರನಖ, ಹುಲಿಯುಗುರು.
ಹಿರಿದು = ಹೊರಕ್ಕೆ ತೆಗೆದು.
ಬಿಜ್ವಾ = ಬಾಕು.
ಇರಿತ = ಏಟು.

ಈ ಅರ್ಥಗಳನ್ನು ತಿಳಿಸಿ ಹೆಲಗೆಯವೆಂಬೀಲೆ ಬರೆಯಬೇಕು. ವಾಗನಖ, ಬಿಜ್ವಾ ಇವುಗಳ ಆಕಾರವನ್ನು ಹಲಗೆಯ ಸಹಾಯದಿಂದ ಸ್ಪಷ್ಟಪಡಿಸಬೇಕು.

ವ್ಯಾಕರಣ ವಿಷಯವು—
ಶ್ಯಾಮಕಾಯ, ಭೀಮಕಾಯ— ಬಹುವ್ರೀಹಿಸಮಾಸ

ಆಂಗಿಯತೋಳಿನಲ್ಲಿ ಬಿಜ್ವಾವನ್ನು ಬಚ್ಚಿಟ್ಟುಕೊಂಡಿದ್ದುದನ್ನು ಹೇಳಿ, ಶಿವಾಜಿಯು ಅಫ್ಜಲ್‌ಖಾನನನ್ನು ಕೊಂದವಾರ್ತೆಯನ್ನು ವಿವರಿಸುವುದು.

ವಾಗನಖ—ತದ್ಭವಪದ.

ಈ ವಿಷಯವಾಗಿ ಪ್ರಶ್ನಿಸುವುದು.
ಒಟ್ಟು ಪುನರಾವರ್ತನೆ.

ಅಜಾನುಬಾಹುವಾಗಿ = ಮೊಣಕಾಲಿನವರೆಗೂ ಬರುವಷ್ಟು ಉದ್ದವಾದ ಕೈಯುಳ್ಳ,

ಸೊಂಟದಲ್ಲಿ ಕತ್ತಿಯನ್ನು ಕಟ್ಟ

ಯೋಜನಕರವೆಂಬುದನ್ನು ಸ್ಪಷ್ಟಪಡಿಸಬೇಕು.

ಸೊಂಟದಲ್ಲಿ ಯಾವಕಡೆ ಕತ್ತಿಯನ್ನು ಕಟ್ಟುವರೆಂಬುದನ್ನು ತಿಳಿಸಿ. ಶಿವಾಜಿಗೆ ಕೊಟ್ಟಿರುವ ವಿಶೇಷಣಗಳನ್ನು ಕುರಿತು ಪ್ರಶ್ನೆ ಮಾಡಿ ಹೇಳಿಸಬೇಕು. ಶಿವಾಜಿಯ ಭಾವ ಚಿತ್ರವನ್ನು ತೋರಿಸುವುದು. ಪುನರಾವರ್ತನೆ.

ಶಿವಾಜಿ ಡೇರೆಯೊಳಗೆ ಪ್ರವೇಶವಾಡಿದನು. ಭೀಮಕಾಯನಾದ ಅಫ್‌ಜಲ್‌ಖಾನನು ಅವನನ್ನಾಲಿಂಗನಿಸಿಕೊಳ್ಳುವನಿಮಿತ್ತವಾಗಿ ಹತ್ತಿರಹೋದನು. ಆಲಿಂಗನಕಾಲದಲ್ಲಿ ಅಫ್‌ಜಲ್‌ಖಾನನು ಶಿವಾಜಿಯ ತಲೆಯನ್ನು ತನ್ನ ಕಂಕುಳೊಳಗಿರುಕಿಸಿಕೊಂಡು ಅವನಿಕ ಕತ್ತಿಯನ್ನು ಒರೆಯಿಂದ ಹಿರಿದನು, ಅವನನ್ನು ತಿವಿದನು. ಆದರೆ ಶಿವಾಜಿ ಒಳಗೆ ಲೋಹಕವಚವನ್ನು ತೊಟ್ಟಿದ್ದುದರಿಂದ ಅವನಿಗೆ ಪೆಟ್ಟುತಾಗಲಿಲ್ಲ.

ಈ ವಾಕ್ಯಗಳನ್ನೂ ಪದರಿಯಾಗಿ ಓದಿ ಇಬ್ಬರು ಮೂವ್ವರು ಬಾಲಕರಿಂದ ಆಮೇಲೆ ಓದಿಸುವುದು.

ಭೀಮಕಾಯನಾದ = ದೊಡ್ಡದಾದ ಮತ್ತು ಭಯಂಕರವಾದ ದೇಹವುಳ್ಳ

ನಿಮಿತ್ತವಾಗಿ = ಕಾರಣದಿಂದ

ಇರುಕಿಸಿ = ಸಿಕ್ಕಿಸಿ

ಒರೆ = ಕತ್ತಿಯಚೀಲ

ಲೋಹಕವಚ = ಕಬ್ಬಿಣದಕವಚ

ಒಳಗೆ = ಮೇಲಿನಅಂಗಿಯೊಳಗೆ

ಈ ಅರ್ಥಗಳನ್ನು ಬಾಲಕರಿಂದಲೇ ಹೇಳಿಸಿ ಅರ್ಥವಾಗಿ ತಿಳಿಸಿ ಹಲಗೆಯ ಮೇಲೆ ಬರೆಯುವುದು.

ಕಬ್ಬಿಣದಕವಚವು ಹೇಗಿರುವುದೆಂಬುದನ್ನು ಹಲಗೆಯ ಸಹಾಯದಿಂದ ಸ್ಪಷ್ಟಪಡಿಸುವುದು.

ಇದರ ಉದ್ದೇಶವನ್ನು ತಿಳಿಸಬೇಕು.

ಹಿರಿಯರು ಬಂದಾಗ ನಮಸ್ಕಾರ ಮಾಡುವ ಸಂಪ್ರದಾಯವನ್ನು ಜ್ಞಾಪಿಸಿ, ಆಲಿಂಗನಿಸಿಕೊಂಡುದರ ಅಭಿಪ್ರಾಯ

(2) ದೊರೆ, ಕೀಚಕ, ಈ ಶಬ್ದಗಳ ಅನೇಕಾರ್ಥವನ್ನು ಹೇಳಿ.

(3) ಮಣಿ, ಅಳಿ, ಇವು ಧಾತುವಾದಾಗ ಅರ್ಥವೇನು? ನಾಮವಾದಾಗ ಅರ್ಥವೇನು?

(4) ಸಂಗ್ರಹಿಸ, ಅನುಯಾಯಿ, ದುಷ್ಕೃತ, ವಿನಯ—ಈ ಶಬ್ದಗಳಲ್ಲಿರುವ ಉಪಸರ್ಗಗಳ ಅರ್ಥವೇನು?

೫. (1) ಸತ್ಯವತಿಯ ಚರಿತ್ರೆಯನ್ನು ಬರೆದ ಕವಿಯ ಮುಖ್ಯವಾದ ಉದ್ದೇಶ್ಯವೇನು?

(2) ಆರೋಗ್ಯ ವಿಷಯವನ್ನು ತಿಳಿದು ನಡಸದೆ ಹೋದರೆ ಆಗುವ ಅನರ್ಥಕ್ಕೆ ಈ ಗ್ರಂಥದಲ್ಲಿ ಹೇಳಿರುವ ಸಂಗತಿಗಳೇನು? ಸಂಕ್ಷೇಪವಾಗಿ ಹೇಳಿ.

(3) ರಾಮಸಾಳ್ವನು, ಸೀತೆ, ಇವರ ವಿಷಯದಲ್ಲಿ ನಾರಾಯಣಮೂರ್ತಿಗೆ ವ್ಯಸನವುಂಟಾಗುವುದಕ್ಕೆ ಕಾರಣವೇನು? ಸಂಕ್ಷೇಪವಾಗಿ ಹೇಳಿ.

II ನೆಯ ಭಾಗ.

1. (1) ಸಂಸ್ಕೃತದಲ್ಲಿಲ್ಲದೆ ಕನ್ನಡದಲ್ಲಿಮಾತ್ರ ಇರುವ ಹ್ರಸ್ವ ಸ್ವರಗಳು ಯಾವವು?

(2) ಮೂರ್ಧದಲ್ಲಿ ಹುಟ್ಟುವ ಅಕ್ಷರಗಳನ್ನೆಲ್ಲಾ ಬರೆಯಿರಿ.

(3) ಲೋಪ, ಆಗಮ, ಆದೇಶ, ಅಂದರೇನು? ಒಂದೊಂದು ಉದಾಹರಣೆಯನ್ನು ಕೊಟ್ಟು ವಿವರಿಸಿ.

೨, (2) ಸವರ್ಣದೀರ್ಘ, ಗುಣ ವೃದ್ಧಿ ಸಂಧಿಗಳಿಗೂ ಷ್ಟುತ್ವ ಜಸ್ತ್ವಸಂಧಿಗಳಿಗೂ ಒಂದೊಂದು ಉದಾಹರಣೆಯನ್ನು ಕೊಡಿ.

(2) ದೇವತೆ, ದಂಡು, ನಾನು—ಇವು ಯಾವ ಲಿಂಗಗಳು?

(3) ನಾಮನಾಚಕಗಳಲ್ಲಿ ಎಷ್ಟು ಭೇದಗಳು? ಒಂದೊಂದಕ್ಕೆ ಒಂದೊಂದು ಉದಾಹರಣೆಯನ್ನು ಕೊಟ್ಟು ಹೇಳಿ.

(1) ಅಷ್ಟು, ಕೆಳಗು, ಈ ಶಬ್ದಗಳಿಗೆ ಎಲ್ಲಾ ವಿಭಕ್ತಿ ರೂಪವನ್ನು ಬರೆಯಿರಿ.

3. (1) ಧಾತುಗಳ ಮೇಲೆ ಯಾವಯಾವ ಪ್ರತ್ಯಯಗಳು ಹತ್ತುತ್ತವೆ. ಒಂದೊಂದು ಉದಾಹರಣೆಯನ್ನು ಕೊಟ್ಟು ತೋರಿಸಿ.

ಗೌರ್ನಮೆಂಟ್ ನಾರ್ಮಲ್‌ಸ್ಕೂಲ್ ಮೈಸೂರು.

V ನೇ ತರಗತಿ.

ಕಾಲ 10–1 ರವರಿಗೆ

ಕನ್ನಡ–ಭಾಷೆ.

I ನೇ ಭಾಗ.

1. (1) ನಿಮ್ಮ ಪರೀಕ್ಷಾಗ್ರಂಥವಲ್ಲಿ ಯಾವಯಾವ ಕವಿಗಳ ಗ್ರಂಥಗಳು ಸೇರಿಸಲ್ಪಟ್ಟಿವೆ? ಆ ಗ್ರಂಥಗಳು ಹುಟ್ಟಿದ ಕಾಲವನ್ನು ನೀವು ತಿಳಿದಷ್ಟಿಗೂ ಬರೆಯಿರಿ. ಈ ಗ್ರಂಥಗಳು ಯಾವ ಗ್ರಂಥಗಳ ತರ್ಜುಮೆಯಾಗಿವೆ?

2. ಈ ಪದ್ಯಗಳಿಗೆ ಅನ್ವಯಕ್ರಮತಪ್ಪದೆ ಪ್ರತಿಪದ ಟೀಕನ್ನು ಬರೆಯಿರಿ–

(1) ಪುಸಿವೇಳ್ದ ತಾನದಾವಂಗೆಸಗಿದನುಪಹತಿಯುನಾತನಂಪರಿದುಂಮ । ನ್ನಿಸಲಾದುರಿತಂಪೋಪುದು । ರಸೆಯೊಳಗಿದುಧರ್ಮಸೂಕ್ಷ್ಮವಾಲಿಸು ಸುಮತೀ ॥

(2) ವಿನಯಭಯಭಕ್ತಿಗಳನಾಂ । ತನುಜಂಪೂರ್ವಜನನೊಲ್ವು ಸೇವಿಸುತಿರಲಾ ॥ ತಾನುಮವನಂಮನ್ನಿಸುತಿರ । ಲೆನಸುಂಸತ್ಕೀರ್ತಿಯವರ್ಗೆಸಮನಿಕುಮೆಧಿಪಾ ॥

3. ಈ ವಾಕ್ಯಗಳ ಅರ್ಥವನ್ನು ವಿವರಿಸಿ ತಾತ್ಪರ್ಯವನ್ನು ಹೇಳಿ–

(1) ಪೂಜ್ಯರೆರಕ್ಷವೇಭಕ್ತರ್ಗೆದೊರೆವಸತ್ಫಲಗಳನುಡಿವುದಲ್ತೆ?

(2) ಸುಕೃತಮದೊಂದೇದಿವಿಜಪುರಕಡರ್ವ ರಮಣೀಯವೆನಿಪಸೋಪಾನವಲ್ಲಿಯಪ್ಪುದದಾರ್ಗ್ಯಂ ॥

(3) ಬೆಂಜೆ, ಹಸೆಲೆ, ಅಳವ್ವ, ಊಣೆಯು, ಉಕ್ಕೆವ, ಹದಿಬದೆ–ಇವುಗಳ ಅರ್ಥವೇನು?

(4) ನೊಗ, ಹಗ್ಗ, ನಂಜೆ, ಸಡ, ಮಿಗ, ಹಸು–ಇವು ಯಾವ ಸಂಸ್ಕೃತ ಶಬ್ದಗಳಿಂದ ಹುಟ್ಟಿದವು.

4. (1) ಪಡೆಯುವೇಳ್ಕುಂ, ಜೀವಿಪುವನ್ನೆಗಂ, ವರ್ಷಿಕ್ಕೆ, ನಡೆದೊಡೆ–ಈ ಶಬ್ದಗಳಿಗೆ ಸಮಾನವಾದ ಹೊಸಗನ್ನಡಪ್ರಯೋಗಗಳನ್ನು ಬರೆಯಿರಿ.

ಹೇಳಿ ಕಳುಹಿಸಿರಬಹುದು. ಇವಳನ್ನು ನೋಡಿದರೆ ಹುಚ್ಚಿಯಾಗಿ ತೋರುವುದಿಲ್ಲ. ಇರಲಿ-ಈ ರೀತಿ ಉತ್ತರವನ್ನು ಹೇಳಿ ಕಳುಹಿಸುವೆನು. 'ನಾಳೆ ಸಾಯಂಕಾಲದೊಳಗಾಗಿ ನನ್ನ ಮನೆ ಮುಂದಿರುವ ಈ ವೈದಾನದಲ್ಲಿ ಈ ನನ್ನ ಅರಮನೆಗಿಂತ ಎತ್ತರವಾಗಿ ಏಳು ಉಪ್ಪರಿಗೆಯು ಅರಮನೆಯನ್ನು ಕಟ್ಟಿ, ರಾಜಯೋಗ್ಯವಾಗಿ ಅದನ್ನು ಅಲಂಕರಿಸಿದರೆ, ನಿನ್ನ ಅಮ್ಮಗೆ ನನ್ನ ಮಗಳನ್ನು ಕೊಟ್ಟು ಮದುವೆ ಮಾಡಿಕೊಡುವೆನು' ಎಂದನು. ಮುಶುಕಿಯು ಸಡಗರದಿಂದ ಮನೆಗೆ ಬಂದು, ದೊರೆಯ ಅಪ್ಪಣೆಯನ್ನು ತಿಳಿಸಿದಳು. 'ಅಜ್ಜಿ, ಅಜ್ಜಿ ಅದಕ್ಕೇನು ಯೋಚನೆ—ಈ ಭಂಗಾರದ ಉಂಗುರವನ್ನು ತೆಗೆದುಕೊಂಡುಹೋಗಿ, ದೊರೆಯು ಹೇಳಿದ ವೈದಾನದಲ್ಲಿ ಇದನ್ನು ಮೂರು ಆವೃತ್ತಿ ಬಿಡಿದು ಹೊರಟುಬಾ. ನಾಳೆ ಬೆಳಗಾಗುವುದರೊಳಗಾಗಿ ದಿವ್ಯವಾದ ಅರಮನೆಯು ಸಿದ್ಧವಾಗುವುದು, ಹೋಗಿಬಿಟ್ಟುಬಾ' ಎಂದು ಅಮ್ಮಯು ಉಂಗುರವನ್ನು ಕೊಟ್ಟತಾಂ ಮುದುಕಿ, ಪಾಪ, ಕೈಲಾಗದು ಏನುಮಾಡಾಳು? ಹಣದ ಆಶೆ—ಹಾಗೆಯೇ ಕುಂಟುಕೊಂಡು ಪುನಃ ಹೊರಟು, ಅದು ಹೇಳಿದ ರೀತಿಯಲ್ಲಿ ಮಾಡಿ ಹೊರಟುಬಂದಳು.

ಬೆಳಗಾಯಿತು. ದೊರೆಯು ಹೊರಕ್ಕೆ ಬರಲು, ಅವನು ಕಂಡ ಆಶ್ಚರ್ಯವೇನಿರಬಹುದು, ಯೋಚಿಸಿ. ಅತ್ಯಾಶ್ಚರ್ಯಕರವಾದ ಅರಮನೆ, ಅರಮನೆತಾನೆ. ಅರಮನೆಯನ್ನು ನೋಡಿ ಬೆರಗಾದನು. ಅಷ್ಟರಲ್ಲಿಯೇ, ಬೆಸ್ತರ ಮುದುಕಿಯು ಬಂದು, 'ತಮ್ಮ ಅಪ್ಪಣೆಯ ಮೇರೆಗೆ ಅರಮನೆಯನ್ನು ಕಟ್ಟಿದ್ದಾಯಿತು. ಇನ್ನು ಕನ್ಯಾದಾನ ಮಾಡಿಕೊಡುವುದು' ಎಂದು ತಿಳಿದುಬರುವಂತೆ ಅಮ್ಮಯು ಹೇಳಿ ಕಳುಹಿಸಿರುವುದು. ಎಂದು ಕೈಮುಗಿದು ಹೇಳಿದಳು. ದೊರೆಯು ಆಲೋಚಿಸಿ, 'ಸುಮ್ಮನೆ ಒಂದು ಅರಮನೆ ಕಟ್ಟಿದರೆ ಹೇಗೆ ಆಗುತ್ತೆ. ಅರಮನೆ ಸುತ್ತಲೂ ಮನೋಹರವಾದ ಉದ್ಯಾನವನವಿರಬೇಕು. ಉದ್ಯಾನವನದಲ್ಲಿ ನಾನಾವಿಧ ಫಲ, ಪುಷ್ಪ, ಲತಾಗೃಹಗಳು ಇರಬೇಕು. ಉದ್ಯಾನವನದ ಒಂದು ಭಾಗದಲ್ಲಿ ಚಿಲಿಚಿಲಿ ನೀರು ಹರಿಯುತಿರಬೇಕು, ಇನ್ನೊಂದುಕಡೆ ನೀರು ಹಾರುತಿರಬೇಕ. ಉದ್ಯಾನವನದಲ್ಲಿ ಎಲ್ಲಿಹೋದರೂ ಸುಗಂಧವಿರುವಾಗಿರಬೇಕು. ಅರಮನೆಯಲ್ಲಾದರೋ ಸಕಲ ಪದಾರ್ಥಗಳೂ ತುಂಬಿರಬೇಕು. ಒಂದು ಕೊಠಡಿಯಲ್ಲಿ ಭಂಗಾರದ ಗಟ್ಟಿಗಳು, ಈನ್ನೊಂದರಲ್ಲಿ ಕೆಂಪಿನರಾಸಿ. ಮತ್ತೊಂದರಲ್ಲಿ ವಜ್ರ ರಾಸಿಗಳಿರಬೇಕು. ಇಷ್ಟೆಲ್ಲಾ ಸಿದ್ಧಮಾಡಿದರೆ ಖಂಡಿತವಾಗಿ ಕನ್ಯಾದಾನ ಮಾಡಿಕೊಡುತ್ತೇನೆ. ಹೋಗಿ ಕಮಠಪತಿಗೆ ತಿಳಿಸು ಎಂದನು. ಮುದು

(2) ಆರು ವಿಧವಾದ ಕ್ರಿಯಾರೂಪಗಳು ಯಾವವು ?

(3) ಈ ಕೆಳಗೆ ಹೇಳುವ ಕೃದಂತ ರೂಪಗಳನ್ನು ಬರೆಯಿರಿ.

ನಡೆ, ಬಿಡು, ಇವುಗಳ ಕಾರಕ ಕೃದಂತ. ವರ್ತಮಾನ ರೂಪಗಳು ಹೇಗೆ.

ತೆಗೆ, ಮಾಡು, ಇವುಗಳ ಭಾವ ಕೃದಂತ ರೂಪವು ಹೇಗೆ

(4) ಏಲ್ಲೆರ್ದೆಯನು, ಬೇಳ್ವವಸ್ತು, ನಡೆಗೊಳ್ವ, ನರಪತಿ—ಈ ಸಮಾಸಗಳ ಹೆಸರೇನು ?

(ಕಮಠಪತಿ) ಭಂಗಾರದ ಆಮೆ.

[೧೬೩ ನೇ ಪುಟದ ಶೇಷ.]

ನಾನು ಏನು ವಿಶೇಷವೆಂದು ಹೇಳಲಪ್ಪ. ಈ ದೇಶದ ರಾಯನಿಗೆ ಒಬ್ಬ ಳೇ ಮಗಳು ಇರುವಳು. ಅವಳು ಬಹಳ ಸುಂದರಿ. ಅವಳಿಗೆ ಅನುರೂಪನಾದ ವರನನ್ನು ಎಷ್ಟು ಹುಡುಕಿದರೂ ಎಲ್ಲಿಯೂ ಸಿಕ್ಕಲಿಲ್ಲ. ದೊರೆಯು ಚಿಂತೆಯಲ್ಲಿ ಮು ಳುಗಿರುವನು. ಇದೇ ವಿಶೇಷ, ಇನ್ನೇನು ಹೇಳಲಿ.

ಆಮೆಯು ಆಗ—'ಅಜ್ಜಿ, ಅಜ್ಜಿ, ದೊರೆಯ ಬಳಿಗೆ ಹೋಗಿ, ನನಗೆ ಮಗ ಳನ್ನು ಕೊಟ್ಟು ಮದುವೆ ಮಾಡಿಕೊಡಿ ; ಎಂದು ನನಗೋಸ್ಕರ ಕೇಳು ಎಂದಿತು. ಆಮೆಯು ಹೇಳಿದಂತೆ ಕೇಳದಿದ್ದರೆ ಭಂಗಾರವು ತಪ್ಪಿಹೋಗಬಹುದೆಂದು ಮುದುಕಿ, ಗಡಗಡನೆ ನಡಗುತ್ತಾ, ದೊರೆಯ ಬಳಿಗೆ ಹೋಗಿ ಅಡ್ಡಬಿದ್ದು, 'ಸ್ವಾಮಿ, ಕ್ಷಮಿಸ ಬೇಕು. ನಮ್ಮ ಮನೆಯಲ್ಲಿ ಒಂದು ಆಮೆ ಇರುವುದು, ಅದು ತಮ್ಮ ಮಗಳನ್ನು ಮದುವೆಯಾಗಬೇಕೆಂದು ಅಪೇಕ್ಷಿಸುವುದು. ಇದಕ್ಕಾಗಿ ತಮ್ಮ ಅಭಿಪ್ರಾಯವನ್ನು ತಿಳಿದುಬರುವಂತೆ ನನ್ನನ್ನು ಕಳುಹಿಸಿಕೊಟ್ಟಿದೆ' ಎಂದು ಹೇಳಿದಳು. ದೊರೆಯು ಹಾಗೆಯೇ ಯೋಚಿಸಿ, ಆಮೆಯೆಂದರೆ ಏನು, ಮಾತನಾಡೋಣವೆಂದರೆ ಏನು, ಒಂದು ವೇಳೆ ಇವಳು ಹುಚ್ಚಿಯಾಗಿರಬೇಕು, ಇಲ್ಲವಾದರೆ ಯಾವ ರಾಜಕುಮಾರನೋ ಈರೀತಿ

ಯೊಡನೆ ಎಲ್ಲರೂ ಹೊರಟರು. ಪಟ್ಟಣವನ್ನು ಸೇರಿದರು, ದೊರೆಯು ನೋಡಿದನು. ಆಳೆಯು ನಿಜವಾಗಿಯೂ ಆಮೆಯೆ. ಆಗ ಏನು ಮಾಡುವುದು. ಮಾತು ಕೊಟ್ಟಿದ್ದಾನೆ, ಹಿಂದೆಗೆಯಲಿಕ್ಕಿಲ್ಲ. ಆದುದರಿಂದ ಇತರರಿಗೆ ಯಾರಿಗೂ ಹೇಳಿಕಳುಹಿಸದೆ ಗುಟ್ಟಾಗಿ ಮಗಳನ್ನು ಕರೆದು ಅಮ್ಮಾ ನೀನು ಈ ಆಮೆಯನ್ನು ಮದುವೆ ಮಾಡಿಕೋಬೇಕು. ಈ ಆಮೆಯೇ ನಿನ್ನ ಗಂಡ, ನೀನೇ ಅದರ ಹೆಂಡತಿ. ಎಂದು ಹೇಳಿ, ಆಮೆಯನ್ನು ಅವಳ ವಶಕ್ಕೆ ಕೊಟ್ಟನು. ಅವಳಿಗೆ ಆಶ್ಚರ್ಯವೂ, ದುಃಖವೂ, ತುಂಬಿತು. ಯಾವದೂ ತೋರದೆ ಸಾಯಂಕಾಲದ ವರೆಗೂ ಬೇಸತ್ತು, ಅಯ್ಯಾ ನನ್ನ ಅದೃಷ್ಟವು ಹೀಗಾಯಿತೇ, ದೇವರೇ ಎಂದು ನಿಟ್ಟುಸುರು ಬಿಡುತ್ತಾ ಊಟವೂ ಮಾಡದೆ ಕೊಠಡಿಯು ಬಾಗಿಲನ್ನು ಹಾಕಿಕೊಂಡು, ಯಾರುಯಾರು ಊಟಕ್ಕೆ ಎಬ್ಬಿಸಿದರೂ ಊಟಕ್ಕೆ ಏಳದೆ ಮಲಗಿದ್ದಳು. ಸುಮಾರು ರಾತ್ರಿ ಒಂಬತ್ತು ಗಂಟೆ. ಆಮೆಗೆ ಬೆಳಗಿನಿಂದಲೂ, ಊಟವಿಲ್ಲ ಬಹಳ ಹಸಿವಾಗಿತ್ತು. ಆಗ ಇದಲ್ಲದೆ ತನ್ನ ಪತ್ನಿಯಾದ ಆ ಸುಂದರಿಯೂ ಹಸಿದು ಸಂಕಟಪಡುತ್ತಿದ್ದುದನ್ನು ಕಂಡು, ಸಹಿಸಲಾರದೆ ' ಎಲೆ ಸುಂದರಾಂಗಿ ನನಗೆ ಬೆಳಿಗಿನಿಂದಲೂ ಭೋಜನವಿಲ್ಲ ಬಹಳ ಹಸಿವಾಗಿರುವುದು ; ನಮ್ಮ ಮನೆಯಲ್ಲಿ ನಾನು ಇದ್ದರೆ ನನ್ನನ್ನು ಹೀಗೆ ಯಾರೂ ಅನಾದರಣೆ ಮಾಡುತ್ತಿರಲಿಲ್ಲ. ಹಸಿವು ಬಾಯಾರಿಕೆ, ಬೇಗ ನನಗೇನಾದರೂ ಕೊಡು ! ಎನ್ನಲು, ಆ ರಾಜಪುತ್ರಿಯು ಕೇಳಿ, ಇದೇನು ಆಶ್ಚರ್ಯವು ! ಇದು ಮಾತನಾಡುತ್ತೆ ಹಾ ! ಎಂಥಾ ಅಕಾರ್ಯ ಮಾಡಿದೆ. ನಾನು ಪತಿಯನ್ನಾಗಿ ಸ್ವೀಕರಿಸಿದ ಈ ಪ್ರಾಣಿಗೆ ಆಹಾರವನ್ನು ಕೊಡದೇ ಇದ್ದುದು ಎಂಥಾ ಪಾಪಕೃತ್ಯ ಎಂದುಕೊಂಡು ತಟ್ಟನೆ ಎದ್ದು, ಬೇಕಾದ ಭೋಜನ ಸಾಮಗ್ರಿಗಳನ್ನು ತಂದು ಅಣಿಮಾಡಿ, ಬಾಗಿಲು ಹಾಕಿ ಇಗೋ ಸಿದ್ಧವಾಗಿರುವುದು ಎಂದಳು. ಆಗ ಆಮೆಯು ತಲೆಯನ್ನು ಹೊರಗೆ ಹಾಕಿ, ಸುತ್ತಮುತ್ತಲೂ ನೋಡಿ ಯಾರೂ ಇರದಿರಲು, ಒಂದು ನಿಮಿಷಮಾತ್ರದಲ್ಲಿ ಅತ್ಯಂತ ಸುಂದರನಾದ ಇಪ್ಪತ್ತೆರಡು ವರ್ಷದ ರಾಜಕುಮಾರನಾಗಿ ನಿಂತು, ಅವಳ ಪಾಣಿಗ್ರಹಣ ಮಾಡಿದನು. ಈ ಆಶ್ಚರ್ಯವನ್ನು ನೋಡಿ ಅವಳು ಪರಮ ಸಂತೋಷಯುಕ್ತಳಾಗಿ ಮುಗುಳು ನಗೆಯೊಡನೆ ಕೂಡಿದ ಮುಖವನ್ನು ತಗ್ಗಿಸಿಕೊಂಡು, ' ನಾನು ಮಾಡಿದ ಅಚಾತುರ್ಯವನ್ನು ಕ್ಷಮಿಸಬೇಕು ' ಎಂದಳು. ರಾಜಕುಮಾರನು ಅವಳನ್ನು ಆಲಂಗಿಸಿಕೊಳ್ಳಲು, ಸಂತೋಷಯುಕ್ತರಾಗಿ, ಹಸಿವಿನಿಂದಿದ್ದ ಇಬ್ಬರೂ ಭೋಜನ ಮಾಡಿದರು, ರಾಜಕುಮಾರನು ತಾನು ರಾಜಾಧಿರಾಜನ

ಕಿಯು ಹೋಗಿ ಇದೇ ಮೇರೆಗೆ ತಿಳಿಸಿದಳು. ಆ ರಾತ್ರೆ ಉಂಗುರ ತೆಗೆದುಕೊಂಡು ಹೋಗಿ, ಇಂಥಾದ್ದು ಇಂಥಾದ್ದು ಈ ಈ ಕಡೆ ಆಗಬೇಕೆಂದು ಮುದುಕಿಯು ಎಡಿದದ್ದು ಆಯಿತು. ಬೆಳಗಾಗುವುದರೊಳಗಾಗಿ ಪಲ್ಲವ ಭರಿತವಾದ ಉದ್ಯಾನವನ, ಎಲ್ಲೆಲ್ಲಿ ನೋಡಿದರೂ ಕೋಗಿಲೆ, ನವಿಲು, ಗಿಳಿಗಳ ಮಧುರ ಧ್ವನಿ, ಅಲ್ಲಲ್ಲಿ ಲತಾ ಗೃಹಗಳು, ಚಿಲಿಚಿಲಿ ಹರಿಯುವ ಸಣ್ಣ ಹೊಳೆ, ಎಮ್ಮೆ ಹೇಳುವುದು ದೊರೆಯು ಅಪೇಕ್ಷಿಸಿದುದಕ್ಕೆ ನಾಲ್ಕರಷ್ಟು ಅತಿಶಯವಾಗಿ ನಿರ್ಮಲವಾಗಿತ್ತು. ಯಥಾಪ್ರಕಾರ ಮುದುಕಿಯು ಸಿದ್ಧಳಾಗಿದ್ದಳು. ದೊರೆಯು ಎಲ್ಲವನ್ನೂ ನೋಡಿ ಆಶ್ಚರ್ಯಯುಕ್ತನಾಗಿ ಈ ಕಮಲಪತಿಯು ಯಾರೋ ವೇಷಧಾರಿಯಾದ ವರಪುರುಷನಿರಬಹುದು ; ಎಂದು ಯೋಚಿಸಿ, 'ನನ್ನ ಕುವರಿಯನ್ನು ಕೊಡುವೆನು. ಲಗ್ನಕ್ಕೆ ಸಿದ್ಧರಾಗಿ ಬರಬಹುದು' ಎಂದು ಹೇಳಿ ಆ ಮುದುಕಿಗೆ ಉಡುಗೆರೆ ತಾಂಬೂಲಗಳನ್ನು ಕೊಟ್ಟು ಕಳುಹಿಸಿಕೊಟ್ಟನು. ಮುದುಕಿಯು ಬಂದು ಅವಿಗೆ ಹೇಳಲು, ಅವಿಯು ಸಂತೋಷಪಟ್ಟುಗೊಂಡು, 'ಅಜ್ಜಿ, ಅಜ್ಜಿ, ನಿನ್ನ ಗಂಡನನ್ನು ಇಲ್ಲಿಗೆ ಸ್ವಲ್ಪ ಕಳುಹಿಸು' ಎಂದಿತು. ಅವನು ಬರಲು, 'ನೀನು, ಈ ಭಂಗಾರದ ಗೋಲಿಯನ್ನು ತೆಗೆದುಕೊಂಡು ಹೋಗಿ ಹತ್ತಿರ ಇರುವ ಬೆಟ್ಟದ ಮೇಲುಭಾಗದಲ್ಲಿ ಒಂದು ಗುಹೆ ಇರುವುದು. ಅಲ್ಲಿಗೆ ಹೋಗಿ ಆ ಗುಹೆಯು ಬಾಗಿಲಲ್ಲಿ ಈ ಗೋಲಿಯನ್ನು ಉರುಳಿಸು. ಮಹಾ ಶೂರನಾದ ಒಬ್ಬನು ಬರುವನು. ಆತನನ್ನು ನೋಡಿ ನೀನು ಹೆದರಬೇಡ. ಅವನು ಬಂದೊಡನೆ, ಮಹಾರಾಜರು, ಲಗ್ನಸಾಮಗ್ರಿಗಳನ್ನೂ, ಮಹಾರಾಣಿಗೆ ಕೊಡತಕ್ಕ ವಸ್ತ್ರಾಭರಣಗಳನ್ನೂ ಮಹಾರಾಜರ ಉಡುಗೆತೊಡಿಗೆಗಳನ್ನೂ, ತೆಗೆಸಿಕೊಂಡು ಬರುವಂತೆ ಆಜ್ಞಾಪಿಸಿರುವರು ; ಎಂದು ಹೇಳು. ಒಡನೆಯೇ ಅನೇಕರು ಸಾಮಗ್ರಿಗಳೊಡನೆ ಬರುವರು. ಅವರನ್ನು ಕರೆದುಕೊಂಡುಬಾ' ಎಂದಿತು. ಸಲ್ಪಕಾಲದಲ್ಲಿಯೇ ಎಲ್ಲರೂ ಬಂದರು. ಆ ಗುಡಿಸಲ ಬಾಗಿಲಲ್ಲಿ ಪಲ್ಲಕ್ಕಿಯು ಸಿದ್ಧವಾಯಿತು. ಭೇರಿಗಳ ಶಬ್ದವು ಭೋರ್ಗರೆಸಿತು. ನೂರಾರು ಜನರು ಕತ್ತಿ, ಕಠಾರಿ, ವಸ್ತ್ರಾಭರಣಗಳೊಡನೆ ಸಿದ್ಧವಾಗಿದ್ದರು. ಆ ಹಳ್ಳಿಯ ಸಡಗರವು ಎಷ್ಟಿರಬಹುದು. ಕೆಲವರಿಗೆ ಸ್ವಲ್ಪ ತಿಳಿದಿತ್ತು, ಕೆಲವರಿಗೆ ತಿಳಿದೇ ಇಲ್ಲ. ಅಂದು ಬೆಸ್ತರೆಲ್ಲರೂ ಹೊಳೆಗೆ ಹೋಗುವುದನ್ನು ಬಿಟ್ಟು, ದೊರೆ ಮಗಳನ್ನು ನಮ್ಮ ಮುದುಕಯ್ಯನ ಮನೆಗೆ ಬಂದಿರುವ ಯಾರಿಗೋ ಕೊಡುವರಂತೆ, ನಮಗೆಲ್ಲಾ ದೊರೆಯಂತೆ ನಡೀರಿ, ನಾವೆಲ್ಲರೂ ಹೋಗೋಣವೆಂದು ಹೊರಟರು. ಅವಿ

ತಾಯಿಯು ಮಗಳೊಡನೆ ಮಾತನಾಡಬೇಕೆಂದು ಬಂದು, ಕೋಶಡಿಯಲ್ಲಿ ಮಗಳು ಇಲ್ಲದಿರಲು, ಹಾಗೆಯೇ ನೋಡುತ ಸ್ವಲ್ಪಕಾಲ ಅಲ್ಲಿ ನಿಂತಾಗ ಹಾಸಿಗೆಮೇಲಿದ್ದ ಅಮೆಯಶರೀರವು ಕಣ್ಣಿಗೆ ಬೀಳಲು, ' ಈ ಅಮೆಯನ್ನು ನೆಚ್ಚಿ ನನ್ನ ಮಗಳಿಗೆ ಮುಂಕುಮುಚ್ಚಿರುವುದು, ಇದನ್ನು ಹಾಸಿಗೆಯವೇಲೆ ಇಟ್ಟುಕೊಂಡಿರುವಳು ಇದೇನು ಭ್ರಮೆ ' ಎಂದುಕೊಂಡು ಆ ಅಮೆಯನ್ನು ತೆಗೆಯಲು ಅದು ಸತ್ತುಹೋಗಿದ್ದುದನ್ನು ನೋಡಿ, ಅ ; ಇಂದಿನ ದೇವರು ನನ್ನ ಹರಕೆಯನ್ನು ಕೈಗೂಡಿಸಿದನು, ಇದು ಸತ್ತು ಹೋಯಿತೆಂಬ ವ್ಯಸನದಿಂದ ನನ್ನ ಮಗಳು ಎಲ್ಲೋ ದುಃಖಪಡುತ ಕೂತಿರಬಹುದು. ಇದನ್ನು ಬೆಂಕಿಯಲ್ಲಿ ಹಾಕಿಬಿಟ್ಟು ಇನ್ನು ಮುಂದೆಯಾದರೂ ಗಂಡನನ್ನು ಮದುವೆಮಾ ಡಿಕೊಳ್ಳುವಂತೆ ಬಲಾತ್ಕರಿಸುವೆನು. ಎಂದುಕೊಂಡು, ಅದನ್ನು ಸುಡಿಸಿಬಿಟ್ಟಳು. ಅಷ್ಟರಲ್ಲೇ ಮಗಳು ಬಂದು ನೋಡಿದಳು. ಅಮೆ ಇಲ್ಲ ಅಮ್ಮಣ್ಣಿ ! ನನ್ನ ಅಮೆ ಎಲ್ಲಿ ? ಎಂದಳು. ಇವಳು ಎಲ್ಲವನ್ನೂ ಹೇಳಿದಳು. ಅದನ್ನು ಕೇಳಿ ರಾಜಕುಮಾರಿಯು ಮೂ ರ್ಛಾಕ್ರಾಂತಳಾದಳು. ಸಖೀಜನರ ಉಪಚಾರದಿಂದ ಚೇತರಿಸಿಕೊಂಡು, ಎದ್ದು ಆ ಅಮೆಯು ನಿಜಸ್ಥಿತಿಯನ್ನು ಹೇಳಿಕೊಂಡು ಇನ್ನು ನನ್ನ ಪತಿ ಬರುವುದಿಲ್ಲವೆಂದು, ರೋದಿಸಲಾರಂಭಿಸಿದಳು. ಆಗ ರಾಜನು ಮಂತ್ರಿಗೆ ಹೇಳಿಕಳುಹಿಸಿ, ಈ ಅಮೆಯು ವಿಷಯವನ್ನೆಲ್ಲಾ ತಿಳಿಸಿದನು. ಅದಕ್ಕೆ ಮಂತ್ರಿಯು ಒಳ್ಳೇದು ಅಷ್ಟು ವ್ಯಸನ ತಮು ಗೇತಕ್ಕೆ ಜಾಗ್ರತೆಯಲ್ಲಿಯೇ ತಮಗೆ ಅಳಿಯನನ್ನು ದೊರೆಯಿಸುವೆನು, ಎಂದು ಹೇಳಿ ಊರಲ್ಲೆಲ್ಲಾ ಈ ರೀತಿಯಾಗಿ ಸಾರಿಸಿದನು. ' ರಾಜಪುತ್ರಿಗೆ ಬೇಸರವಾಗಿರುವುದು ಅಪೂರ್ವವಾದ ಮತ್ತು ನಿಜವಾದ ಕಥೆಗಳನ್ನು ಮುಖ್ಯವಾಗಿ ಪಕ್ಷಿಗಳ ಕಥೆಗಳನ್ನೂ ಅದರಲ್ಲೂ ಹೊಸದಾಗಿ ಸಂಭವಿಸಿದ ಕಥೆಗಳನ್ನು ಹೇಳಿ, ರಾಜಪುತ್ರಿಯು ಮನಸ್ಸಿನ ಬೇಜಾರನ್ನು ಪರಿಹಾರ ಮಾಡಿದವರಿಗೆ, ವಿಶೇಷ ಮರ್ಯಾದೆಯನ್ನು ಮಾಡುವೆವು ' ಎಂದು ಊರಲ್ಲೆಲ್ಲಾ ಸಾರಿಸಿದನು.

ಅನೇಕ ಮಂದಿ ಬಂದು ಅನೇಕ ವಿಧವಾದ ಕಥೆಗಳನ್ನು ಹೇಳಿದರೂ ಯಾವ ಕಥೆಯಲ್ಲಿಯೂ ತನ್ನ ಪತಿಯ ಸಂಬಂಧವಾದ ವಿಷಯಗಳು ಯಾವದೂ ಇರುತಿರಲಿಲ್ಲ ವಾದುದರಿಂದ, ಯಾವದೂ ಇವಳ ಮನಸ್ಸಿನ ಬೇಜಾರನ್ನು ಹೋಗಲಾಡಿಸುತಿರಲಿ ಲ್ಲವು.

ಒಂದು ದಿನ ಒಬ್ಬ ಬೇಟೆಗಾರನು ಬಂದು ತಾನು ನೋಡಿದ ಆಶ್ಚರ್ಯವೆನ್ನು

ಮಗನಿಂತಲೂ, ಒಬ್ಬ ಋಷಿಯು ಶಾಪದಿಂದ ಇನ್ನೂ ಕೆಲವುಕಾಲ ಅಮೆಯಂತೆ ಜೀವಿಸ ಬೇಕೆಂತಲೂ, ತಾನು ಸಮಯುಬಿದ್ದಾಗ ಶ್ರೇಷ್ಠವಾದಪಕ್ಷಿಯು ಆಗಲು ವರವಿದೆಯೆಂ ತಲೂ, ಹೇಳಿ ಅವಳ ಮನಸ್ಸಿನ ಕೊರತೆಯನ್ನು ಹೋಗಲಾಡಿಸಿದನು. ಇನ್ನು ಕೆಲವು ಕಾಲ ಈ ವೇಷದಲ್ಲೇ ಇರಬೇಕಾದುದರಿಂದ ತನ್ನ ವೃತ್ತಾಂತವನ್ನು ಯಾರಿಗೂ ತಿಳಿಸ ಬೇಡವೆಂತಲೂ ತಾನು ರಾತ್ರಿಯಲ್ಲಿ ತನ್ನ ನಿಜರೂಪವನ್ನು ಧರಿಸಿರುವೆನೆಂತಲೂ, ಹಗ ಲು ಅಮೆಯಲ್ಲಿ ಐಕ್ಯವಾಗಿರುವೆನೆಂತಲೂ, ಒಂದುವೇಳೆ ಪಕ್ಷಿಯ ವೇಷವನ್ನುಧರಿಸಿ ತಾನೆ ಲ್ಲಾದರೂ ಸಂಚಾರ ಹೊರಟುಹೋದರೆ, ತನ್ನ ಅಮೆಯ ವಾಟೆಯನ್ನು ಕಾಪಾಡಬೇ ಕೆಂತಲೂ ತಾನು ದೇಶ ಸಂಚಾರ ಮಾಡಿದ್ದು ನಾನಾ ದೇಶದ ರಾಜಪುತ್ರಿಯರನ್ನು ನೋಡಿ ಕೊನೆಗೆ ಅವಳನ್ನು ನೋಡಿದ್ದೇ ಮೊದಲಾದ ತನ್ನ ವೃತ್ತಾಂತವನ್ನೆಲ್ಲಾ ಹೇಳುತಾ ರಾತ್ರಿಯನ್ನೆಲ್ಲಾ ಕಳೆದನು. ಬೆಳಗಾದೊಡನೆಯೇ ಅಮೆಯಲ್ಲಿ ಐಕ್ಯನಾ ದನು. ರಾಜಪುತ್ರಿಯು ಅಂಥಾ ರಾಜಕುಮಾರ ದೊರೆತದ್ದಕ್ಕಾಗಿ ಸಂತೋಷಗೊಂಡು ಉಲ್ಲಾಸವಡುತ್ತಿದ್ದಳು. ರಾತ್ರಿಯವೇಳೆಯಲ್ಲೆಲ್ಲಾ ರಾಜಕುಮಾರನಾಗಿಯೂ ಹಗ ಲು ಅಮೆಯಲ್ಲಿ ಐಕ್ಯನಾಗಿಯೂ ಇರುತಿದ್ದನು. ಒಂದುದಿನ ಹೊರಸಂಚಾರ ಮಾಡ ಬೇಕೆಂದು ಮನಸ್ಸುಂಟಾಗಿ, ಬೆಳಗಿನ ಜಾವದಲ್ಲಿ ರಾಜಪುತ್ರಿಯನ್ನು ಎಬ್ಬಿಸಿ, ನಾನು ಪಕ್ಷಿಯ ವೇಷದಿಂದ ಸಂಚಾರ ಮಾಡಿಕೊಂಡು ಬರುತ್ತೇನೆ. ಜೀವವಿಲ್ಲದ ಅಮೆಯ ಶರೀರಮಾತ್ರ ಇಲ್ಲಿ ಇರುವುದು. ನೀನು ಬಹಳ ಜಾಗರೂಕಳಾಗಿ ಅದನ್ನು ಕಾದಿರ ಬೇಕೆಂದು ಹೇಳಿ ತಾನು ಹೊರಟುಹೋದನು. ರಾಜಪುತ್ರಿಯು ಅದೇಮೇರೆಗೆ ಕಾದಿ ದ್ದಳು. ರಾತ್ರಿಯಾದೊಡನೆ ಯಥಾಪ್ರಕಾರ ಬಂದು ಪುರುಷವೇಷವನ್ನು ತಾಳಿ ಸುಖ ವಾಗಿದ್ದನು. ರಾಜಪುತ್ರಿಯು ಏನೋ ಸಂತೋಷಚಿತ್ತಳಾಗಿದ್ದಳು. ರಾಜಪುತ್ರಿ ಯ ತಾಯಿಗೆ ಮಾತ್ರ ತನ್ನ ಅಳಿಯನು ಒಂದು ಅಮೆ ಎಂಬುದು ಬಹಳ ಕೊರತೆಯುಂ ಟಾಗಿ, ಮಗಳಿಗೆ ಬೇರೆ ಮದುವೆ ಮಾಡಬೇಕೆಂದು ದೊರೆಗೂ, ಬೇರೆ ಮದುವೆ ಮಾಡಿಕೊ ಳ್ಳಬೇಕೆಂದು ಮಗಳಿಗೂ, ಹಿಂಸೆಮಾಡುತ್ತಿದ್ದಳು. ಈ ಅಮೆಯು ಎಲ್ಲಾದರೂ ಸಿಕ್ಕಿದರೆ ದೂರ ಸಮುದ್ರಕ್ಕಾದರೂ ಸಾಗಿಸಬೇಕೆಂಬುವವರೆಗೂ ಅವಳ ಮನಸ್ಸು. ಒಂದು ದಿನ ರಾಜಕುಮಾರನು, ತನ್ನ ಅಮೆಯ ದೇಹವನ್ನು ಪತ್ನಿಯ ವಶದಲ್ಲಿ ಬಿಟ್ಟು ಪಕ್ಷಿ ವೇಷವನ್ನು ತಾಳಿ ಸಂಚಾರ ಹೊರಟಿದ್ದಾಗ, ರಾಜಪುತ್ರಿಯು ಅಮೆಯ ಶರೀರವನ್ನು ಇಟ್ಟಿದ್ದ ಕೊಠಡಿಯಿಂದ, ಬಾಗಿಲಹಾಕಕೊಳ್ಳದೆ, ಹೊರಕ್ಕೆ ಹೋಗಿದ್ದ ಕಾಲದಲ್ಲಿ,

ವಿದ್ಯಾದಾಯಿನಿ.

ಭಾಗ ೯.] ಶಪಟಬರ್ ೧೯೦೦. [ಸಂಚಿಕೆ ೯

ಎಡಿಟರವರ ನೋಟ್ಸ್.

ಪ್ಲೇಗ್ ಉಪದ್ರವವು, ಮೈಸೂರು ಪಟ್ಟಣದಲ್ಲಿ ಮತ್ತೆ ತಲೆದೋರಿ, ವಿಶೇಷ ಹಾವಳಿಯನ್ನುಂಟುಮಾಡುತಿರುವುದು. ಈ ಉಪದ್ರವದಿಂದ, ಪೀಡಿತರನ್ನು ನೋಡುತ್ತಿರುವ ಜನರು ಅನುಭವದಿಂದಲೆ ಆರೋಗ್ಯಕ್ಕೆ ಅವಶ್ಯಕವಾಗಿ ಬೇಕಾದವುಗಳನ್ನು ಕಲಿತುಕೊಂಡು, ಮುಂದೆ ಧೃಢಕಾಯರಾಗಿಯೂ, ಆರೋಗ್ಯ ಭಾಗ್ಯವನ್ನುಳ್ಳವರಾಗಿಯೂ ಬಾಳಬಹುದು. ಆದರೆ ಈಗ ಜನತ ಅಭಿವೃದ್ಧಿಗೆ ಎಲ್ಲಾ ಭಾಗದಲ್ಲಿಯೂ ಕುಂದುಕವನ್ನುಂಟುಮಾಡತ್ತಿರುವುದು. ಮುಖ್ಯವಾಗಿ ಮಕ್ಕಳ ವಿದ್ಯಾಭಿವೃದ್ಧಿಗೆ ವಿಚ್ಛಿತ್ತಿಯನ್ನುಂಟುಮಾಡಿರುವುದು. ಮೈಸೂರು ಪಟ್ಟಣದಲ್ಲಿರತಕ್ಕ ಪಾಠಶಾಲೆಗಳನ್ನೆಲ್ಲಾ ಮುಚ್ಚಿರುವರು. ಮಹಾರಾಜಾಕಾಲೇಜವಾತ್ರ ಕೆಲದಿನ ಮುಚ್ಚಿದ್ದು ಆಮೇಲೆ ತೆಗೆದರು.

***

ಮೈಸೂರು ಇಂಡಸ್ಟ್ರಿಯಲ್ ಸ್ಕೂಲ್‌ನಲ್ಲಿ ಮಾಹೇಯಾನ ಸ್ಕಾಲರ್‌ಷಿಪ್ ಗಾಗಿ ೧೪ ರೂ. ಸ್ಯಾಂಕ್ಷನ್ ಮಾಡಿರುತ್ತಾರೆ. ಒಟ್ಟು ೧೦೫ ಮುಂದಿಗೆ ಸ್ಕಾಲರ್‌ಷಿಪ್ ಸಿಕ್ಕುವುದು. ಮಾಹೇಯಾನ ಮೂರು ರೂ. ನಂತೆ ೨೪ ಮುಂದಿಗೂ, ೭೫ ಜನಕ್ಕೆ ಎರಡು ರೂ. ನಂತೆಯೂ, ಒಂದು ರೂ ನಂತೆ ೫೦ ಮುಂದಿಗೂ ದೊರೆಯುವುದು- ಈ ವಿಷಯವನ್ನು ಮುಂದೆ ವಿಸ್ತಾರವಾಗಿ ಬರೆದಿರುವೆವು.

ರಾಜಪುತ್ರಿಗೆ ಹೇಳಲು ಅಪ್ಪಣೆಯನ್ನು ಕೇಳಿದನು. ಒಡನೆಯೇ ಒಳಕ್ಕೆ ಬಿಟ್ಟರು. ರಾಜಪುತ್ರಿಯು ಇದ್ದೆಡೆಗೆ ಬಂದು "ತಾಯೇ, ನಾನೇನು ಹೇಳಲಿ, ನಾನೊಂದು ಮಹದಾಶ್ಚರ್ಯವನ್ನು ನೋಡಿದೆನು. ಅದನ್ನು ತಾವು ಲಾಲಿಸಬೇಕು. ನಾನು ನಿನ್ನೆ ದಿವಸ ಬೇಟೆಗಾಗಿ ಹೋದೆನು. ಸಾಯಂಕಾಲದ ವರೆಗೂ ಕಾದು ಕಾಡೆಲ್ಲಾ ಸುತ್ತಿದೆನು. ನನಗೆ ಬೇಟೆ ಏನೂ ಸಿಕ್ಕದಿರಲು, ನಾನು ಬೇಸತ್ತು ಒಂದು ನದಿಯ ದಡದ ಮೇಲೆ ಇದ್ದೆ, ಒಂದು ಮರದ ನೆರಳಲ್ಲಿ ಶಾಂತನಾಗಿ ಬಿಲ್ಲನ್ನು ತಲೆಗೆ ಇಟ್ಟುಕೊಂಡು ಮಲಗಿದ್ದೆನು. ನಾನು ಮಲಗಿದ್ದೆಡೆಗೆ ಹತ್ತು ಪಕ್ಷಿಗಳು ಬಂದು ನೀರಿನಲ್ಲಿ ಮುಳುಗಿ ಬಾಯಿಯಲ್ಲಿ ಏನೋ ಕಚ್ಚಿಕೊಂಡು ಹೊರಟವು. ನನಗೆ ಒಳ್ಳೇ ಬೇಟೆ ಸಿಕ್ಕಿತೆಂದು ಅದನ್ನೇ ಅಟ್ಟಿಸಿಕೊಂಡು ಹೊರಟೆನು. ಅಲ್ಲಿಗೆ ಸ್ವಲ್ಪದೂರದಲ್ಲಿ ಒಂದು ಬೆಟ್ಟ. ಆ ಬೆಟ್ಟದಲ್ಲಿ ಒಂದು ಗುಹೆ. ಆ ಗುಹೆಯು ಬಾಗಿಲು ತೆರೆದಿತ್ತು. ಇನ್ನೇನು ನಾನು ಹೊಡೆಯಬೇಕು.

ರಾಜಪುತ್ರಿ—ಏನು! ಹಾ, ನೀನು ಹೊಡೆದುಬಿಟ್ಟೆಯಾ? ಅಯ್ಯೋ, ಬೇಡರವನು—ಇಲ್ಲತಾಯೇ, ಇಲ್ಲ. ಲಾಲಿಸಬೇಕು, ನಾನು ಹೊಡೆಯುವುದರಲ್ಲಿ ಆ ಪಕ್ಷಿಗಳು ಎಲ್ಲವೂ ಆ ಗುಹೆಯೊಳಗೆ ನುಗ್ಗಿತು. ನನ್ನ ಕೈಗೆ ಅವು ಸಿಕ್ಕಿಬಿದ್ದವೆಂದು ನಾನೂ ನುಗ್ಗಿದೆನು. ನುಗ್ಗಿ ಸ್ವಲ್ಪ ದೂರ ಹೋಗುವ ವರೆಗೆ ಬಹಳ ಕತ್ತಲೆಯಾಗಿತ್ತು. ಆ ಕತ್ತಲೆಯಲ್ಲೇ ಹೋಗುತ್ತಾ ನಾನು ಕೆಳಕ್ಕೆ ಬಿದ್ದುಬಿಡಬೇಕು, ಅಷ್ಟರಲ್ಲೇ ಕೆಳಗೆ ಇಳಿಯುವುದಕ್ಕೆ ಮೆಟ್ಟಿಲುಗಳೂ, ಸ್ವಲ್ಪ ಬೆಳಕೂ ಕಾಣಬಂದವು. ಇದೇನು ಆಶ್ಚರ್ಯವಿರಬಹುದೆಂದು ಮೆಟ್ಟಿಲನ್ನು ಇಳಿದುಹೋದೆನು. ಅಲ್ಲಿ ಒಂದು ದೊಡ್ಡ ಅನೆಯಬಾಗಿಲು. ಆ ಬಾಗಿಲನ್ನು ದಾಟಿದೆನು. ದಿವ್ಯವಾದ ಅರಮನೆ, ಬಾಗಿಲಲ್ಲಿ ಜನರಿರಲಿಲ್ಲ. ಹಾಗೆಯೇ ಮೆತ್ತಗೆ ಒಳಕ್ಕೆ ನುಗ್ಗಿದೆನು. ಒಂದು ದೊಡ್ಡ ತೊಟ್ಟಿ. ಆ ತೊಟ್ಟಿಯೆಲ್ಲಾ ವಜ್ರದಲ್ಲಿ ಮಾಡಿದಂತಿರುವುದು. ಆ ಕಾಂತಿ, ಆ ಸೊಬಗನ್ನು ನಾನು ಎಂದೆಂದಿಗೂ ನೋಡಿರಲಿಲ್ಲ. ಆ ವಜ್ರದ ತೊಟ್ಟಿಯಲ್ಲಿ ಥಳಥಳಿಸುವ, ಹನ್ನೆರಡು ಪಚ್ಚೆಯ ಮಣೆಗಳು ಹಾಕಿದ್ದವು. ಆ ಹನ್ನೆರಡು ಮಣೆಗಳೂ, ಮೂರು ಭಂಗಾರದ ತಳಿಗೆಗಳೂ ಇದ್ದವು. ಆತಳಿಗೆಗಳಲ್ಲಿ ಪಂಚಭಕ್ಷ್ಯಪರಮಾನ್ನ ಬಡಿಸಿತ್ತು.

[ಸಸೇಷ]

ದ್ವಿತೀಯ ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳಿಗೆ ಬುದ್ಧಿವಾದ.

ವಿವರಣೆ.

ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕೆಂಬಭಿಲಾಷೆಯು ಎಲ್ಲಾ ವಿದ್ಯಾರ್ಥಿಗಳಿಗೂ ಸಾಮಾನ್ಯವಾಗಿರುತ್ತದೆ, ಆದರೆ ( ) ಪರೀಕ್ಷಾ ಕಾಲಕ್ಕೆ ಮುಂಚಿತವಾಗಿ ಮಾಡಬೇಕಾದ ಕಾರ್ಯ (೨) ಉತ್ತರ ಬರೆಯುವ ಕ್ರಮ (೩) ಮನಸ್ವಾಸ್ಥ್ಯ (೪) ಪರೀಕ್ಷಾ ಕಾಲದ ನಡವಳಿಕೆ (೫) ಪ್ರಶ್ನೆಗಳ ಚುನಾವಣೆ (೬) ಉತ್ತರ ಲಕ್ಷಣ (೭) ಉತ್ತರ ಬರೆಯುವ ಕ್ರಮ (೮) ಅಸಂಬದ್ಧ ವಿಷಯ (೯) ಸರ್ಕಾರದವರ ಆಜ್ಞೆ (೧೦) ಪರೀಕ್ಷಾ ಕರ್ತರ ದಯೆಗೆ ಪಾತ್ರರಾಗುವಿಕೆ, ಈ ಕ್ರಮಗಳು ಸರಿಯಾಗಿಲ್ಲದ್ದರಿಂದ ತೇರ್ಗಡೆಯಾಗದೆ ದುಃಖಪಡುತ್ತಾರೆ ಇವುಗಳನ್ನು ಸರಿಪಡಿಸಿಕೊಳ್ಳಬೇಕಾದದ್ದು ಮುಖ್ಯ ಕರ್ತವ್ಯವಾದ್ದರಿಂದ ಈ ಕೆಳಗೆ ವಿವರಿಸುವುದನ್ನು ಜ್ಞಾಪಕದಲ್ಲಿಡಬೇಕು.

I ಪರೀಕ್ಷಾ ಕಾಲಕ್ಕೆ ಮುಂಚೆ ಮಾಡಿಕೊಳ್ಳಬೇಕಾದ ಕಾರ್ಯ.

ಅನೇಕ ವಿದ್ಯಾರ್ಥಿಗಳು ಪರೀಕ್ಷಾ ಕಾಲಕ್ಕೆ ಪೂರ್ವಭಾಗದಲ್ಲಿಯೇ ತಮ್ಮ ಪಾಠಗಳನ್ನು ಜಾಗರೂಕತೆಯಿಂದ ಕ್ರಮವಾಗಿ ಓದಿ ಪರೀಕ್ಷಾಕಾಲ ಸವಿಾಪಿಸಿದಾಗ ನಿದ್ರಾಹಾರಗಳನ್ನು ಕಡಮೆಮಾಡಿ ದಿವಾರಾತ್ರಿ ಪುಸ್ತಕವನ್ನೆಡಬಿಡದೆ ಓದುತ್ತಾರೆ. ಇದರಿಂದ ಪ್ರಯೋಜನವಿಲ್ಲ. ಸಕಲ ವಿಧದಲ್ಲಿಯೂ ಇದು ನಷ್ಟಕರವಾಗಿರುವುದು. ಈ ವಿಷಯದಲ್ಲಿ ಆಮೆ ಮತ್ತು ಮೊಲದ ಕಥೆ ದೃಷ್ಟಾಂತವಾಗಿದೆ. ಮಂದಬುದ್ಧಿಯುಳ್ಳವರಾದಾಗ್ಯೂ ಸಾರಂಭ ಕಾಲದಿಂದ ಕ್ರಮವಾಗಿ ವ್ಯಾಸಂಗ ಮಾಡುವವರು ಆಮೆಯಂತೆ ಜೈಸುವರು. ಆದಕಾರಣ ಪರೀಕ್ಷಾ ಗ್ರಂಥಗಳನ್ನು ಪ್ರಾರಂಭಿಸುವ ದಿನದಿಂದ ಪರೀಕ್ಷಾ ಸಮಯಾವಧಿ ಏಕರೀತಿಯಲ್ಲಿ ವ್ಯಾಸಂಗ ಮಾಡುತ್ತಿರಬೇಕು.

ಹಿಂದಿನ ಪಾಠಗಳನ್ನು ಆಗಾಗ ಓದುತ್ತಿರುವುದು ಹೀಗೆ ಮಾಡದಿದ್ದರೆ ಓದಿದ್ದು ಜ್ಞಾಪ್ತಿಯಲ್ಲಿ ನಿಲ್ಲುವದಿಲ್ಲ, ಪ್ರತಿ ತಿಂಗಳಲ್ಲಿಯೂ ಓದಿದ ಪಾಠಗಳನ್ನು ಆಯಾ ತಿಂಗಳ ಕೊನೆಯಲ್ಲಿ ಎಲ್ಲವೂ ಮನನ ಮಾಡಿಕೊಳ್ಳಬೇಕು. ಓದುವ ಗ್ರಂಥಗಳನ್ನು ಮತ್ತು ಶಾಸ್ತ್ರಗಳ ವಿಷಯವನ್ನೂ ಆಗಾಗ ಜ್ಞಾಪಕಕ್ಕೆ ತಂದುಕೊಳ್ಳುತ್ತಿರಬೇಕು.

ಹೋಬಳಿ ಸ್ಕೂಲ್‌ಗಳಿಗೆ ಜಮಾನರನ್ನು ಕೊಡದೇ ಇರೋಣದರಿಂದಲೂ ತೋಟಿ, ತಳವಾರರು ಸ್ಕೂಲ್‌ಮನೆಯನ್ನು ಗುಡಿಸಿ, ನಿರ್ಮಲವಾಗಿ ಇಡದೇ ಇರೋಣದರಿಂದಲೂ, ಹಳ್ಳಿಗಳಲ್ಲಿರುವ ಸ್ಕೂಲ್‌ಮನೆಗಳು ಬಹಳ ಕಶ್ಮಲವಾಗಿದೆಯೆಂದುದರಿಂದ, ಸರಕಾರದವರು, ಡಿಪ್ಟಿ ಕಮಿಷನರ ಮೂಲಕ ತಾಲೊ್ಲೀಕು ಅಮಲ್‌ದಾರ್ರುಗಳಿಗೆ ಬರೆಯಿಸಿ, ಪಟೇಲರುಗಳು ಸ್ಕೂಲ್ ಮನೆಯನ್ನು ನಿರ್ಮಲಮಾಡಿಸುವಂತೆಯೂ, ಹೋಬಳಿ ಸ್ಕೂಲ್‌ಮಾಸ್ಟರುಗಳ ಟಪಾಲು ಪುಸ್ತಕದ ಪಾರ್ಸೆಲ್, ಸ್ಕೂಲ ಸಾಮಾನುಗಳನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಾಗಿಸೋಣ, ಈ ಕಾರ್ಯಗಳಿಗೆ ಗ್ರಾಮನೌಕರರನ್ನು ಕೊಟ್ಟು ಸಹಾಯಮಾಡಿಸುವಂತೆ ಮಾಡಿಸಬೇಕೆಂತಲೂ, ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ಸಾ. ರವರು ಗೌರ್ನಮೆಂಟಿಗೆ ಬರೆದಿದ್ದುದಕ್ಕೆ, ಗೌರ್ನಮೆಂಟಿನವರು ಈ ಆರ್ಡರನ್ನು ಕೊಟ್ಟಿರವರು :—

ನಂ ಅಂಟಿಷಿ—೨೧. ವಿದ್ಯಾಭ್ಯಾಸದ ಕಛೇರಿ, ಬೆಂಗಳೂರು ತಾ॥ ೧೫ನೇ ಆಗಸ್ಟು ೧೯೦೦ ತಾಲೊ್ಲೀಕ್‌ಸ್ಕೂಲ್‌ಗಳಿರುವಂತೆ ವಿಲೇಜ್ ಸ್ಕೂಲಗಳಿಗೆ ಜಮಾನರನ್ನೇ ಆಗಲಿ, ರುಸುಮಾಲೆಯನ್ನೇ ಆಗಲಿ ಕೊಡಲು ಆಗುವುದಿಲ್ಲವಾದುದರಿಂದ, ವಿಲೇಜ್ ಸ್ಕೂಲಿನವರು, ಹಳ್ಳಿಗಳಲ್ಲಿ ತೋಟಿ ತಳವಾರರಿಂದ ಮೇಲೆ ನಮೂದಿಸಿರುವ ಕೆಲಸಗಳನ್ನು ಜರಗಿಸಬೇಕು. ಈ ವಿಷಯಕ್ಕಾಗಿ ಹಳ್ಳಿಗಳಲ್ಲಿ ತೋಟಿ ತಳವಾರ ಮೊದಲಾದ ಹಳ್ಳಿ ನೌಕರಮಾನೇರುಗಳು ಆಯಾಯ ಹಳ್ಳಿಯಲ್ಲಿರುವ ಸ್ಕೂಲ್‌ಮಾಸ್ಟರ್‌ಗಳಿಗೆ ತಪ್ಪದೆ ಸಹಾಯಮಾಡುವಂತೆ ಅಮಲ್‌ದಾರುಗಳು ಆಜ್ಞೆಮಾಡಲು, ಎಲ್ಲಾ ಡಿಸ್ಟ್ರಿಕ್ಟ್ ಡಿಪ್ಟಿ ಕಮಿಷನರಿಗಳೂ, ಅಮಲ್‌ದಾರ್ರುಗಳಿಗೆ ಇನ್‌ಸ್ಪೆಕ್ಷನ್ ಕೊಡಬೇಕು. ಆದರೆ ಹಳ್ಳಿಯ ಈ ಗ್ರಾಮನೌಕರರುಗಳಿಂದ ಅವಶ್ಯ ನೆರವೇರಬೇಕಾದ ಯಾವ ಕೆಲಸಕ್ಕೂ ಕೆಲಸದಿಂದ ಕುಂದಕಬಾರದಂತೆ ಇರಬೇಕು. ಮುನಿಸಿಪಲ್ ಅಥವ ಲೋಕಲ್ ಫುಡ್ ಜಾಡವಾಲೆಗಳು ಇರುವ ಸ್ಥಳಗಳಲ್ಲಿ ಅವರನ್ನೇ ಸ್ಕೂಲ್ ಮನೆಗಳನ್ನು ಗುಡಿಸುವುದಕ್ಕೂ ಮೇಲೆ ನಮೂದಿಸದ ಇತರ ಕೆಲಸಕ್ಕೂ ಉಪಯೋಗಿಸಬೇಕು.

ದಗಳ ವೇಲ್ಯಭಾಗದಲ್ಲಿ ತಮ್ಮ ಹೆಸರನ್ನು ನಂಬರನ್ನು ಬರೆಯದೆ ವರೆಯುವರು. ಬರೆದ ಕಾಗದದಮೇಲೆ ಮಸಿಯನ್ನು ಚಲ್ಲುವರು. ಅಥವಾ ಒಣಗಿಸದೆ ಅದರಮೇಲೆ ಮತ್ತೊಂದು ಕಾಗದವನ್ನು ಹಾಕಿ ಕೆಡಿಸಿಬಿಡುವರು. ಪರೀಕ್ಷೆಯಲ್ಲಿ ಉತ್ತರವನ್ನು ಬರೆದಿರುವ ಕಾಗದಗಳನ್ನು ಕೆಟ್ಟುಹೋದವುಗಳ ಸಂಗಡ ಹರಿದು ಬಿಸಾಡುವರು. ಈ ಪ್ರಮಾದಗಳೆಲ್ಲಾ ಮನಸ್ಸು ಗಾಬರಿಯಾಗುವದರಿಂದ ಉಂಟಾಗುತ್ತದೆ, ಆದ್ದರಿಂದ ಮನಸ್ಸು ಸ್ವಸ್ಥವಾಗಿರುವ ಅಭ್ಯಾಸವನ್ನು ಮಾಡಿಕೊಳ್ಳಬೇಕು. ಇದಕ್ಕೆ ವೇಲಿನ ಕಲಮೇ ಆಧಾರವಾಗಿದೆ.

(೨) ಪರೀಕ್ಷಾ ಶಾಲೆಯನ್ನು ಪ್ರಥಮತಃ ಪ್ರವೇಶಿಸಿದಾಗ ಮನಸ್ಸು ಚಂಚಲವಾಗುವದು ಸ್ವಾಭಾವಿಕ. ಯಾಕಂದರೆ, ಅದು ಎಂದೂ ಕಾಣದ ಸ್ಥಳವಾದ್ದರಿಂದಲೂ ಅನೇಕರು ಸೇರುವುದರಿಂದಲೂ, ಅಲ್ಲಿರುವ ಪದಾರ್ಥಗಳಮೇಲೂ, ಇರುವ ಅಧಿಕಾರಿ ಜನಗಳಮೇಲೂ, ದೃಷ್ಟಿ ಪಸರಿಸಿ ನಾಲ್ಕುಕಡೆಯೂ ನೋಡಬೇಕೆಂದು ಮನಸ್ಸು ಚಲಿಸುವದು. ಆದರೆ ವಿದ್ಯಾರ್ಥಿಯು ಇಂಥಾ ವಿಷಯಗಳನ್ನು ಮನಸ್ಸಿಗೆ ತಂದುಕೊಳ್ಳದೆ ತನಗೆ ಗೊತ್ತು ಮಾಡಿರುವ ಸ್ಥಳದಲ್ಲಿ ಕುಳಿತುಕೊಂಡು ತನಗೆ ಬೇಕಾದ ಚನ್ನಾಗಿ ಬರೆಯುವ ಲೇಖಣಿ ಕಾಗದಗಳನ್ನು ಸಿದ್ಧಪಡಿಸಿಕೊಂಡು ಕಾಗದದಲ್ಲಿ ತನಗೆ ಬೇಕಾದಷ್ಟು ಸಿಕಸ್ತು ಮಾಡಿಕೊಂಡು ಪ್ರತಿ ಪುಟ ವೇಲೂ ತನ್ನ ಹೆಸರನ್ನೂ ನಂಬರನ್ನೂ ಬರೆಯಬೇಕು,

IV ಪರೀಕ್ಷಾ ಕಾಲದ ನಡವಳಿಕೆ.

(೧) ಪ್ರಶ್ನ ಪತ್ರಿಕೆಗಳನ್ನು ತಮ್ಮ ಕೈಗೆ ಕೊಟ್ಟಕೂಡಲೇ ಆ ಪತ್ರವನ್ನು ಆದ್ಯಂತವಾಗಿ ಓದಬೇಕು. ಹಾಗೆಮಾತ್ರದೆ ಕೆಲವರು ಉತ್ತರಬರೆಯುಲುದ್ಯೋಗಿಸುವರು. ಇದು ಸರಿಯಲ್ಲ, ಪೂರ್ತಿಯಾಗಿ ಓದಿದನಂತರ ವೇಲಿನಿಂದ ನೋಡುತ್ತಾ ತನಗೆ ತಿಳಿದ ವಿಷಯಗಳಿಗೆ ಅಲ್ಲೊಂದಲ್ಲಿ ಗುರ್ತು ಮಾಡುತ್ತಾಬರಬೇಕು. ನಂತರ ಬರಿಯಲುದ್ಯೋಗಿಸಬೇಕು.

ಒಂದು ಪ್ರಶ್ನೆಯು ಉತ್ತರವನ್ನ ಬರೆಯುತ್ತಿರುವಾಗ ಮತ್ತೊಂದು ಪ್ರಶ್ನೆಯನ್ನು ನೋಡಬಾರದು. ಅದೊಂದೇ ಪ್ರಶ್ನೆಯೆಂದು ಭಾವಿಸಬೇಕು. ಬುದ್ಧಿಯು ಎರಡು ಕಾರ್ಯಗಳನ್ನು ಏಕಕಾಲದಲ್ಲಿ ಮಾಡಲಾರದೆಂಬುದನ್ನು ಜ್ಞಾಪಕದಲ್ಲಿಡಬೇಕು.

ಓದಿದ ಗ್ರಂಥಗಳ ವಿಷಯಗಳನ್ನೂ, ಅವುಗಳ ಸಾರಾಂಶಗಳನ್ನೂ ಬೇರೆ ಒಂದು ಪುಸ್ತಕದಲ್ಲಿ ಸ್ವತಃ ಬರೆಯುವ ಅಭ್ಯಾಸ ಮಾಡಿರಬೇಕು. ಇದನ್ನು ತಾನು ಸ್ವತಃ ಯೋಚಿಸಿ ಮಾಡಬೇಕಲ್ಲದೆ ಇತರರ ಸಹಾಯದಿಂದ ಮಾಡಬಾರದು. ಗ್ರಂಥ ಕರ್ತರ ಮುಖ್ಯಾಭಿಪ್ರಾಯವು ವಿಶದವಾಗುವಂತೆ ಬರೆಯಬೇಕ, ಇದು ಅತ್ಯಂತ ಪ್ರಯೋಜನಕಾರಿಯಾದ ಸೂಚನೆ.

ಗಣಿತದಲ್ಲಿನ ಕೋಷ್ಟಕಗಳು, ಸೂತ್ರಗಳು ಯುಕ್ತಿವಾರ್ಗಗಳೂ, ಚರಿತ್ರೆಯಲ್ಲಿನ ಶಕವರುಷಗಳೂ, ಮುಖ್ಯ ವಿಷಯಗಳೂ ಜ್ಞಾಪ್ತಿಗೆ ಬರಲು ಶ್ರಮವಾಗದೆ ಹೃದ್ಗತವಾಗಿರಬೇಕು. ಶಕಾಬ್ದಗಳನ್ನೂ, ಸೂತ್ರಗಳನ್ನೂ ಒಂದು ಕಾಗದದಲ್ಲಿ ಬರೆದು ಪದೇಪದೆ ಅದನ್ನು ಸಮಯಸಿಕ್ಕಿದಾಗ ನೋಡುವಂತೆ ಏರ್ಪಡಿಸಿಕೊಂಡಿರಬೇಕು.

II (೧) ಉತ್ತರಗಳನ್ನು ಬರೆಯುವ ಕ್ರಮ,

ಅಯಾ ವಿಷಯಗಳಲ್ಲಿರುವ ಬೇರೆಬೇರೆ ಪ್ರಶ್ನೆಪತ್ರಿಕೆಗಳನ್ನು ಸಂಪಾದಿಸಿ ಪರೀಕ್ಷಾ ಶಾಲೆಯಲ್ಲಿ ಉತ್ತರಗಳನ್ನು ಬರೆಯುವಾಗ ಇರಬೇಕಾದಷ್ಟು ಜಾಗರೂಕತೆಯಿಂದ ಕ್ಲುಪ್ತಕಾಲದೊಳಗೆ ಬರೆಯುವ ಅಭ್ಯಾಸವನ್ನು ಮಾಡಬೇಕು. ಈ ಅಭ್ಯಾಸದಿಂದ ಲಾಭವಾಗುತ್ತದೆ. ಗತವರ್ಷ ಇದೇ ಪರೀಕ್ಷೆಗೆ ಕೊಟ್ಟಿರುವ ಪ್ರಶ್ನಪತ್ರಗಳನ್ನು ನೋಡಿದರೆ ಇಷ್ಟು ಕಠಿನವಾದ ಪ್ರಶ್ನೆಯನ್ನು ಹಾಕುವ ಸಂಪ್ರದಾಯವಿದೆ ಎಂದು ಗೊತ್ತಾಗುತ್ತದೆ.

(೨) ಬೇರೆಬೇರೆಯವರಿಂದ ಬರುವ ವಿಧವಿಧವಾದ ಪ್ರಶ್ನೆಗಳಿಗೆ ಉತ್ತರವನ್ನು ಬರೆದರೆ ಪ್ರಶ್ನೆಗಳನ್ನು ಕೊಡುವ ಚಮತ್ಕಾರ ಕ್ಲುಪ್ತ ಕಾಲಗಳಲ್ಲಿ ಉತ್ತರಗಳನ್ನು ಬರೆಯುವ ಅಭ್ಯಾಸ ಬರೆಯುವಾಗ ಇರಬೇಕಾದ ಚಿತ್ತಸ್ಥೈರ್ಯ ಉಂಟಾಗುತ್ತದೆ.

III ಮನಸ್ವಾಸ್ಥ್ಯ.

(೧) ಪರೀಕ್ಷಾ ಶಾಲೆಯನ್ನು ಪ್ರವೇಶಿಸಿದಾಗ ಕೆಲವರ ಮನಸ್ಸು ಗಾಬರಿಯಾಗುವುದು. ಅಂಥವರು ಅನೇಕ ತಪ್ಪುಗಳನ್ನು ಮಾಡುವರು. ಪ್ರಶ್ನೆಗಳನ್ನೊಂದಿ ತಪ್ಪಾದ ಅರ್ಥಗಳನ್ನು ತಿಳಿದುಕೊಳ್ಳುವರು. ಪ್ರಶ್ನೆಯು ಉತ್ತರದಲ್ಲಿ ಅರ್ಥವನ್ನು ಬಿಟ್ಟು ಮತ್ತೊಂದು ಪ್ರಶ್ನೆಗೆಉತ್ತರ ಬರೆಯಲುದ್ಯೋಗಿಸುವರು ಉತ್ತರ ಕಾಗ

ಈ ಉತ್ತರವನ್ನು ಬರೆದರೆ ಪರೀಕ್ಷಕರು ತೃಪ್ತಿಪಡುವದಿಲ್ಲ. ಆ ವಿಷಯಗಳಲ್ಲಿ ತಮಗೆ ತಿಳಿದಿರುವ ವಿಷಯಗಳನ್ನು ಬರೆದು ಈ ಅರ್ಥದ ಉತ್ತರಗಳನ್ನು ಕೊಟ್ಟರೆ ತೃಪ್ತಿಪಡುವರು.

ತನುಗೆ ಅನೇಕ ವಿಷಯಗಳು ತಿಳಿದಿವೆ ಎಂಬ ವಿಷಯವನ್ನು ತೋರ್ಪಡಿಸುವುದಕ್ಕೋಸ್ಕರ ಶಬ್ದಾಡಂಬರಗಳನ್ನು ಖಂಡಿತವಾಗಿ ಮಾಡಬಾರದು.

VII ಉತ್ತರಗಳನ್ನು ಬರೆಯುವ ಕ್ರಮ.

ಪ್ರತಿಯೊಂದು ಕಾಗದದಮೇಲೂ ಒಂದುಕಡೆ ಹಾತ್ರ ಬರೆಯಬೇಕು. ಇದರಿಂದ ಕೆಟ್ಟಕಾಗದವಾದಾಗ್ಯೂ ಒಂದುಕಡೆ ಬರದ್ದು ಕಾಣಿಸದಂತೆ ಆಗುವದಿಲ್ಲ. (೧) ಪ್ರಶ್ನೆಗಳಲ್ಲಿ ಇಷ್ಟಬಂದವುಗಳನ್ನು ಬರೆಯುವುದಕ್ಕೆ ಅನುಕೂಲವಾಗಿರುತ್ತದೆ, (೨) ಒಂದು ಬರವಣಿಗೆ ತಪ್ಪಾಗಿದ್ದು ಅದನ್ನು ಹರಿದುಹಾಕಬೇಕಾದರೆ ಮತ್ತೊಂದು ಪ್ರಶ್ನೆ ಹೋಗುವದಿಲ್ಲ.

ಒಂದು ಹಾಳೆಯನ್ನು ಬರೆದ ಕೂಡ್ಲೆ ಅದನ್ನು ಬೇರೆ ಒಂದುಕಡೆ ಭದ್ರವಾಗಿ ಮುಚ್ಚಿಡಬೇಕು. ಆಮೇಲೆ ಬರೆದವುಗಳನ್ನು ಅದರಮೇಲೆ ಮಗಿಚಿಡಬೇಕು. ನಿಮ್ಮ ಬರಹವು ವಿಶದವಾಗಿಯೂ ಚಿತ್ರಗಳಿಲ್ಲದೆಯೂ ಇರಬೇಕು. ಕೆಲವರ ಅಕ್ಷರಗಳು ಪರೀಕ್ಷಕರಿಗೆ ತಿಳಿಯುವದಿಲ್ಲ. ಹೀಗೆ ಬರೆಯುವುದು ಶೀಘ್ರವಾಗಿ ಬರೆದ್ದರ ದೋಷ. ಓದುವುದಕ್ಕೆ ಪರೀಕ್ಷಕರಿಗೆ ಅವಕಾಶವಿರುವುದಿಲ್ಲ. ಅವರ ಮನಸ್ಸನ್ನೂ ಬೇಜಾರುಪಡಿಸುತ್ತದೆ.

ಕೆಲವರು ಬೇರೆಯೊಂದು ಕಾಗದದಲ್ಲಿ ಗಣಿತವನ್ನು ಮಾಡಿ ತಾಜಾ ಕಾಗದಕ್ಕೆ ಪುನಃ ಬರೆಯುವರು. ಇದರಿಂದ ಒಂದಕ್ಕೆ ಎರಡರಷ್ಟು ಕಾಲ ವ್ಯಾಪಸೆಯೂ, ಕಷ್ಟವೂ ಆಗುತ್ತದೆ ಇದು ದುರಭ್ಯಾಸ. ಮೊದಲು ಬರೆಯುವಾಗಲೇ ಸರಿಯಾಗಿಯೂ ಒಳ್ಳೇ ಕಾಗದದಲ್ಲಿಯೂ ಬರೆಯುವುದು ಒಳ್ಳೇದು. ಗಣಿತವನ್ನು ಮಾಡುವಾಗ ಬೇರೆಯೊಂದು ಕಾಗದದಲ್ಲಿ ಗಣಿಸಿ ಬರೆದರೆ ಚಿತ್ರಗಳಾಗದಿರುವುದಕ್ಕೆ ಅವಕಾಶವಾಗುತ್ತೆ. ಹೀಗೆ ಮಾಡಬಹುದು. ಆದರೆ ಸಾಧಾರಣ್ಯವಾಗಿ ಇದನ್ನು ಬಿಡುವುದು ಉತ್ತಮ.

ಒಂದು ಬರೆಯುವಾಗ ಮತ್ತೊಂದನ್ನು ಯೋಚಿಸಿದರೆ ಬರೆಯುತ್ತಿರುವುದು ಕೆಟ್ಟು ಹೋಗುವುದು. ಅಥವಾ ಬರೆಯುತ್ತಿರುವ ಪ್ರಶ್ನೆಯು ಸುಲಭವಾದದ್ದಾದರೆ ಬೇಗ ಮುಗಿಸಿ ಮತ್ತೊಂದನ್ನು ಪ್ರಾರಂಭಿಸಬೇಕೆಂಬ ಆತುರ ಹುಟ್ಟುವುದು.

ಬರೆಯುತ್ತಿರುವುದು ಕಠಿಣವಾಗಿದ್ದರೆ ಮತ್ತೊಂದನ್ನು ಯೋಚಿಸುತ್ತಿರುವ ಮನಸ್ಸು ಇದರಲ್ಲಿ ಪ್ರವೇಶಿಸಲಾರದು ಎರಡು ಸಂದರ್ಭದಲ್ಲಿ ಬರೆಯುವ ಉತ್ತರವೂ ಕೆಟ್ಟುಹೋಗುವುದು. ಆದಕಾರಣ ಮನಸ್ಸನ್ನು ಗಾಬರಿಮಾಡಿಕೊಳ್ಳಬಾರದು.

V ಪ್ರಶ್ನೆಗಳ ಚುನಾವಣೆ.

ಪ್ರಶ್ನ ಪತ್ರಗಳಲ್ಲಿರುವ ಕಠಿನವಾದ ಪ್ರಶ್ನೆಗಳಿಗೆ ಉತ್ತರ ಬರೆಯುವುದರಲ್ಲಿ ಯೋಚನೇ ಮಾಡಬೇಕಾಗಿಬಂದು ಬಹುಕಾಲ ಕಳೆದುಹೋಗುವುದು. ಮೇಲೆ ಹೇಳಿದಂತೆ ಸುಲಭವಾದ ಪ್ರಶ್ನೆಗಳಿಗೆ ಅಷ್ಟು ಯೋಚನೆ ಮಾಡಬೇಕಾಗಿಲ್ಲವಾದಕಾರಣ ಸ್ವಲ್ಪಕಾಲದಲ್ಲಿಯೇ ಬರೆಯಬಹುದಾಗಿದೆ.

ಪ್ರಶ್ನೆಗಳಲ್ಲಿ ಸುಲಭವಾದವುಗಳನ್ನು ೪ ನೇ ಕಲಂನಲ್ಲಿ ಹೇಳಿದಂತೆ ಗುರ್ತು ಮಾಡಿದವುಗಳಿಗೆ ಮೊದಲು ಉತ್ತರಗಳನ್ನು ಬರೆಯುವುದರಿಂದ ತೇರ್ಗಡೆಯಾಗುವುದಕ್ಕೆ ಅಡ್ಡಿಯಿಲ್ಲ. ಅನಂತರ ಕಠಿನವಾದವುಗಳನ್ನು ಯೋಚಿಸಿ ಬರೆದರೆ ೧ ನೇ ಕ್ಲಾಸಿನಲ್ಲಿ ತೇರ್ಗಡೆಯಾಗಬಹುದು. ಅನಂತರ ಇನ್ನು ಕಠಿನವಾದವುಗಳಿಗೆ ಯೋಚನೆಯಿಂದ ಉತ್ತರಗಳನ್ನು ಬರೆದರೆ ಉಚ್ಚಸ್ಥಾನದ ತೇರ್ಗಡೆಯಲ್ಲಿ ಬರಲು ಅರ್ಹನಾಗುತ್ತಾನೆ. ಆದಕಾರಣ ಸುಲಭವಾದ ಪ್ರಶ್ನೆಗಳಿಗೆ ಮೊದಲು ಉತ್ತರಗಳನ್ನು ಬರೆಯುಬೇಕು.

VI ಉತ್ತರಲಕ್ಷಣ.

ಪ್ರತಿ ಒಂದು ಪ್ರಶ್ನೆಯನ್ನು ಚೆನ್ನಾಗಿ ಯೋಚಿಸಿ ಅದರ ಅರ್ಥವನ್ನು ತಿಳಿದುಕೊಂಡು ಬೇಕಾದಷ್ಟೇ ಉತ್ತರಗಳನ್ನು ಬರೆಯಬೇಕು ಉತ್ತರಗಳನ್ನು ಅತಿ ಸಂಕ್ಷೇಪವಾಗಿ ಬರೆಯಬಾರದು. ಶಬ್ದಬಾಹುಳ್ಯವೂ ಅರ್ಥಸಂಕ್ಷೇಪವೂ ಆಗಬಾರದು. ಶಬ್ದಸಂಕ್ಷೇಪವು ಅರ್ಥಬಾಹುಳ್ಯವು ಇರಬೇಕು.

ಪೂರ್ಣತೆ ಮತ್ತು ಸಂಕ್ಷೇಪತೆ ಇವೆರಡೂ ಇರಬೇಕು.

ಕೆಲವು ಪ್ರಶ್ನೆಗಳಿಗೆ ಅಹುದು. ಇಲ್ಲ. ಅಲ್ಲ. ಉಂಟು, ನಿಜ ಎಂಬವು ಸಂಕ್ಷೇಪ ಉತ್ತರಗಳಾಗಿರುತ್ತದೆ. ಆದರೆ ಅದರಲ್ಲಿ ಪೂರ್ಣತೆ ಇಲ್ಲ. ಆದ್ದರಿಂದ

ಕಾಲ ಒದಗಿದಾಗ ಬರೆದಿರುವ ಹಾಳೆಗಳನ್ನು ಕ್ರಮವಾಗಿ ಜಂಟಿಸಿ ಎಡ ಭಾಗದ ಮೂಲೆಯಲ್ಲಿ ಗುಂಡುಸೂಜಿ ಚುಚ್ಚಬೇಕು. ಅನಂತರ ಕ್ರಮವಾಗಿ ಪುಟ ಸಂಖ್ಯೆ ಹಾಕಬೇಕು. ಅನಂತರ ಉದ್ದವಾಗಿ ಮಡಿಸಿ ರಕ್ಷಾಪತ್ರದ ಮೇಲೆ ಹೆಸರ ನ್ನೂ ನಂಬರನ್ನೂ, ಪುಟಸಂಖ್ಯೆಯನ್ನೂ ಖಂಡಿತ ಬರೆಯಬೇಕು.

VIII ಅನುಪಯೋಗವಿಷಯ.

ಕೆಲವರು ಪ್ರಶ್ನೆಯ ಅಭಿಪ್ರಾಯ ತಿಳಿದಿದ್ದರೂ ವ್ಯಾಧಿಯಿಂದ ತಮಗೆ ಅನೇಕ ವಿಷಯಗಳು ತಿಳಿದಿವೆಯೆಂದು ಏನೇನೋ ಬರೆದು ಕಾಗದ ತುಂಬು ತ್ತಾರೆ ಇದರಿಂದೇನೂ ಪ್ರಯೋಜನವಿಲ್ಲ ಇದನ್ನು ಪರೀಕ್ಷಕರು ನೋಡಬೇಕೆಂಬ ಅವ ಶ್ಯಕವೇ ಇಲ್ಲ.

IX ಸರ್ಕಾರದವರ ಆಜ್ಞೆ.

ಪರೀಕ್ಷಾ ಶಾಲೆಯೊಳಕ್ಕೆ ಯಾವ ಪುಸ್ತಕವನ್ನೂ. ಬರಹವನ್ನೂ ತರಕೂ ಡದು. ಪಕ್ಕದಲ್ಲಿರುವವರು ಬರಹವನ್ನು ನೋಡಿಕೊಂಡು ಬರೆಯಕೂಡದು. ಇದನ್ನು ಅನುಸರಿಸಿದವನು ವಿದ್ಯಾರ್ಥಿಯೆಂಬ ಹೆಸರಿಗೆ ಅರ್ಹನಲ್ಲ.

X ಪರೀಕ್ಷಾಕರ್ತರ ದಯೆಗೆ ಪಾತ್ರರಾಗುವಿಕೆ.

ಕೆಲವರು ಪತ್ರಿಕೆ ಕೊಸೆಯಲ್ಲಿ, —"ನಾನು ಬಡವ ನನ್ನ ಮೇಲೆ ಕರುಣವಿಡ ಬೇಕು ಮುಂದೆ ಪರೀಕ್ಷೆಗೆ ಬರಲು ನನಗೆ ಅನುಕೂಲವಿಲ್ಲ" ಎಂತಲೂ, "ಅವಸರ ದಿಂದ ನನ್ನ ಬರವಣಿಗೆ ಕೆಟ್ಟದೆ ಕ್ಷಮಿಸಬೇಕು" ಎಂತಲೂ ಇನ್ನೂ ಅನೇಕ ಬರವಣಿ ಗೆಗಳನ್ನು ಬರೆಯುತ್ತಾರೆ ಈ ಬರವಣಿಗೆಯಿಂದ ಅವರಿಗೆ ಮತ್ತಷ್ಟು ಕೋಪ ಬರುವದು. ಅವರ ಮೆಚ್ಚಿಕೆಗೆ ಸರಿಯಾದದ್ದು ಉತ್ತಮವಾದ ಬರವಣಿಗೆಯೇ ಆಗಿ ರುತ್ತದೆ. ಆದ್ದರಿಂದ ಮೇಲೆ ಹೇಳಿರುವ ವಿಷಯಗಳನ್ನು ಬರೆಯದೆ ಸರಿಯಾದ ಮಾರ್ಗವನ್ನು ಅನುಸರಿಸಿ ನಡೆದರೆ ಪರೀಕ್ಷಕರ ದಯೆಗೆ ಪಾತ್ರರಾಗುತ್ತಾರೆ.

ಸಾಧ್ಯವಾದರೆ ಗಣಿತದ ಒಂದೊಂದು ಪ್ರಶ್ನೆಗೂ ಒಂದೊಂದು ಪುಟವನ್ನು ಉಪಯೋಗಿಸಬಹುದು. ಒಂದೇ ಪುಟದಲ್ಲಿ ಎರಡು ಲೆಖ್ಖ ಮಾಡಿದರೆ ಒಂದು ಲೆಖ್ಖಕ್ಕೂ ಇನ್ನೊಂದು ಲೆಖ್ಖಕ್ಕೂ ಮಧ್ಯೆ ಎರಡು ಬೆಟ್ಟಗಲ ಕಾಗದವನ್ನು ಬಿಡಬೇಕು. ಇದು ಈ ಲೆಖ್ಖದ ಉತ್ತರವೆಂದು ತಿಳಿಯುವಂತೆ ಇರಬೇಕು.

ರೇಖಾಗಣಿತವನ್ನು ಮಾಡುವಾಗ ರೇಖೆಗಳಿಂದ ಆಕೃತಿಗಳನ್ನು ದೊಡ್ಡದಾಗಿ ಬರೆದು (ಅವಶ್ಯವಿದ್ದರೆ) ಅವುಗಳ ರೇಖಾಗ್ರದಲ್ಲಿಯೂ ಕೋಣಗಳಲ್ಲಿಯೂ ಅಕ್ಷರಗಳು ಸ್ಪಷ್ಟವಾಗಿ ತಿಳಿಯುವಂತೆ ಬರೆಯಬೇಕು

ಎಡಗಡೆ ಇರುವ ದೊಡ್ಡ ಕಲಂಮ್ಮನ್ನು ಒಳಕಲಂಗಳನ್ನೂ ತಿಳಿಯುವಂತೆ ಬರೆಯಬೇಕು.

ಒಂದು ದೊಡ್ಡ ಕಲಂ ನಲ್ಲಿ ೩-೪ ಒಳ ಕಲಂ ಗಳು ಇದ್ದು ಒಂದಕ್ಕೆ ಮೊದಲು ಉತ್ತರ ಬರೆದು ನಂತರ ಬೇರೆ ಪ್ರಶ್ನೆಗೆ ಉತ್ತರ ಬರೆದು ಆಮೇಲೆ ಈ ಪ್ರಶ್ನೆಯನ್ನು ಬರೆಯಬೇಕಾಗಿಬಂದರೆ ದೊಡ್ಡ ಕಲಂ ಸಂಖ್ಯೆಯನ್ನು ಅದರ ಒಳ ಕಲಂ ಸಂಖ್ಯೆಯನ್ನು ಸಹ ಎಡಗಡೆ ನಮೂದ್ ಮಾಡಬೇಕು.

ಶಾಸ್ತ್ರ ಮೊದಲಾದ ಉಪನ್ಯಾಸಗಳನ್ನು ಬರೆಯುವಾಗ ಒಂದು ಪುಟದಲ್ಲಿ ಕೆಲವನ್ನು ಬರೆದು ಉಳಿದದ್ದು ಇನ್ನೊಂದು ಪುಟದಲ್ಲಿ ಬರೆಯಬೇಕಾದರೆ ಇಷ್ಟನೇ ಪ್ರಶ್ನೆಯ ಇಷ್ಟನೇ ಕಲಂ ನ ಶೇಷವೆಂದು ಎಡಗಡೆ ಬರೆಯಬೇಕು.

ಪರೀಕ್ಷಕರು ಕೆಲವು ಪ್ರಶ್ನೆಗಳಿಗೆ ಹೀಗೆ ಬರೆಯಬೇಕೆಂದು ವಿಧಿಯನ್ನು ಕೊಡುವದುಂಟು. ಇದನ್ನು ಜ್ಞಾಪಕದಲ್ಲಿಟ್ಟಿರಬೇಕು,

ಕೆಲವರು ವ್ಯವಸಾಯ, ಆರೋಗ್ಯ ಶಾಸ್ತ್ರಗಳಲ್ಲಿ ಕೇಳಿರುವ ಪ್ರಶ್ನೆಗಳಿಗೆ ಸೂಕ್ಷ್ಮವಾಗಿ ಉತ್ತರ ಬರೆದು ಕಾಲವಿದ್ದಾಗಲೇ ಹೊರಗೆ ಬಂದು ಈ ಪ್ರಶ್ನೆಗೆ ನಾನು ಮೂರೇ ಪಜ್ಜೆಯಲ್ಲಿ ಉತ್ತರ ಬರೆದೆ ಎಂದು ತಮ್ಮ ಪೌರುಷ ಪ್ರಕಾಶ ಮಾಡುವರು. ಇದು ಸರಿಯಲ್ಲ.

ಕ್ಲುಪ್ತಾವಧಿ ಬರುವ ವರಿಗೂ ತಮ್ಮ ಕಾಗದಗಳನ್ನು ಕೊಡದೆ ಪುನರವಲೋಕನವನ್ನು ಮಾಡಿ ತಪ್ಪುಗಳನ್ನು ತಿದ್ದಬೇಕು.

ಅಳತೆ ಗ್ಲಾಸಿನಲ್ಲಿ ಹಾಕಿ ಮಳೆ ಪ್ರಮಾಣವನ್ನು ಗೊತ್ತುಮಾಡುವದು ವಾಡಿಕೆಯಾಗಿದೆ. ಈ ಅಳತೆ ಗ್ಲಾಸ್ ಎಂಬುವದು $1\frac{1}{4}$ ಅಂಗುಲ ವ್ಯಾಸವುಳ್ಳ ಗಾಜಿನ ಸೈರಂಧ್ರ (Eylimder) ಆಗಿರಬಹುದು. $1\frac{1}{4}$ ಅಂಗುಲವು 5 ಅಂಗುಲದ $\frac{1}{4}$ ಭಾಗವಾದ್ದರಿಂದಲೂ ರೇಖಾಗಣಿತದ ಪ್ರಕಾರ ಉತ್ತರಗಳ ಕ್ಷೇತ್ರಫಲಗಳು ಅವುಗಳ ವ್ಯಾಸಗಳ ವರ್ಗಗಳಂತೆ ಬದಲಾವಣೆಯನ್ನು ಹೊಂದುವದರಿಂದಲೂ, ಸೈರಂಧ್ರದ ತಳದ ಕ್ಷೇತ್ರಫಲವು ಬುದ್ಧಿವಂತನ ಬಾಯಿಯ ಕ್ಷೇತ್ರಫಲದಲ್ಲಿ $\frac{1}{16}$ ಪಾಲಾಯಿತು. ಆದ್ದರಿಂದ ೪ ಅಂಗುಲ ವ್ಯಾಸವುಳ್ಳ ಗುಂಡುತಟ್ಟೆಯಲ್ಲಿ 1 ಅಂಗುಲ ಎತ್ತರಕ್ಕೆ ನಿಲ್ಲುವಷ್ಟು ನೀರು ಸೈರಂಧ್ರದಲ್ಲಿ 16 ಅಂಗುಲ ಎತ್ತರ ನಿಲ್ಲುತ್ತೆ. ಈ 6 ಅಂಗುಲ ಉದ್ದವನ್ನು ಸುಲಭವಾಗಿ 100 ಸಮಪಾಲು ಮಾಡಬಹುದು. ಒಂದೊಂದು ಪಾಲಿಗೂ $\frac{1}{6}$ ಅಂಗುಲಕ್ಕಿಂತ ಸ್ವಲ್ಪ ಕಡಮೆ ದೂರವಾಗುವದರಿಂದ ಒಂದೊಂದು ಪಾಲೂ ಕಣ್ಣಿಗೆ ಚೆನ್ನಾಗಿ ಕಾಣುತ್ತೆ. ಒಂದಂಗುಲ ಮಳೆ ಬಂದರೆ 100 ನೇ ನೀರಿನವರಿಗೂ ನೀರು ತುಂಬುತ್ತೆ. $\frac{1}{2}$ ಅಂಗುಲವಾದರೆ 5 ನೇ ನೀರಿನವರಿಗೂ ನೀರು ತುಂಬುತ್ತೆ. ಇಂಥಾ ಸೈರಂಧ್ರದಿಂದ $\frac{1}{100}$ ಅಂಗುಲ ಮಳೆಯ ಪ್ರಮಾಣವನ್ನೂ ಸಹ ಅಳತೆ ಮಾಡಬಹುದು. 1 ಅಂಗುಲದ ಶತಾಂಶಕ್ಕೆ 1 ಸೆಂಟು ಎಂದು ಹೆಸರು.

ಮೈಸೂರು ಸೀಮೆಗೆ ವರುಷಕ್ಕೆ 30 ಅಂಗುಲದವರೆಗೆ ಮಳೆಯಾಗುತ್ತದೆಂದು ಹೇಳಬಹುದು. ಆದರೆ ಕೆಲವು ಕಡೆ ಇದಕ್ಕಿಂತ ಬಹಳ ಹೆಚ್ಚಾಗಿಯೂ, ಇತರ ಸ್ಥಳಗಳಲ್ಲಿ ಕಮ್ಮಿಯಾಗಿಯೂ ಇರುತ್ತೆ. 1899 ನೇ ಇಸವಿಯಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟ್ ಆಗುಂಬಿಯಲ್ಲಿ 240 ಅಂಗುಲವೂ, ಚಿತ್ರದುರ್ಗದ ಡಿಸ್ಟ್ರಿಕ್ಟ್ ಹೊಸದುರ್ಗದಲ್ಲಿ 11 ಅಂಗುಲವೂ ಬಿತ್ತು. ಸಾಮಾನ್ಯವಾಗಿ ಮಲ್ನಾಡು ಪ್ರದೇಶಗಳಲ್ಲಿ ಅಂದರೆ ಪಶ್ಚಿಮಘಟ್ಟದ ಸರಹದ್ದಿನಲ್ಲಿ ಮಳೆ ತುಂಬಾ ಬೀಳುತ್ತೆ. 50 ಅಂಗುಲಕ್ಕೆ ಕಡಮೆ ಇಲ್ಲವೆಂತ ಹೇಳಬಹುದು.

ವ್ಯವಸಾಯಕ್ಕೆ ಹೆಚ್ಚಾಗಿ ಮಳೆ ಬಂದ ಮಾತ್ರದಿಂದಲೆ ಪ್ರಯೋಜನವಿಲ್ಲ. ತಕ್ಕ ಕಾಲದಲ್ಲಿ ಬೇಕಾದಷ್ಟು ಮಳೆಯಾದರೆ ಅನುಕೂಲ. ಮದರಾಸಿನಲ್ಲಿ 50 ಅಂಗುಲದ ಮಟ್ಟಿಗೂ ಮಳೆಯು ಬೀಳುತ್ತೆ. ಮೈಸೂರು ಡಿಸ್ಟ್ರಿಕ್ಟ್‌ನಲ್ಲಿ 30 ಅಂಗುಲ ಮಾತ್ರ ಬರುತ್ತೆ. ಆದಾಗ್ಯೂ ಆರಂಬಗಾರನಿಗೆ ಮೈಸೂರಿನಲ್ಲಿ ಅನುಕೂಲ. ಯಾಕಂದರೆ ಇಲ್ಲಿ ಮಳೆಗಾಲವು ಸ್ವಲ್ಪ ಹೆಚ್ಚು ಕಡಮೆ 7 ತಿಂಗಳು ಮದರಾಸಿನಲ್ಲಿ 4 ತಿಂಗಳು.

ಮಳೆಯ ಅಳತೆ.

ಒಂದು ಸ್ಥಳದ ಹವಾವನ್ನು ಗೊತ್ತುಮಾಡುವುದೂ, ವ್ಯವಸಾಯಕಾರ್ಯ್ಯಗಳನ್ನು ನಡೆಸುವುದೂ, ಕೆರೆ ಸೇತುವೆ ಮುಂತಾದವುಗಳನ್ನು ಕಟ್ಟುವುದೂ, ಇಂಥಾ ಕೆಲಸಗಳಿಗೆ ಒಂದು ಸ್ಥಳದಲ್ಲಿ ಬೀಳುವ ಮಳೆಯ ಪ್ರಮಾಣವನ್ನು ಗೊತ್ತುಮಾಡುವುದು ಅವಶ್ಯಕ. ಇದನ್ನು ಹ್ಯಾಗೆ ಮಾಡಬಹುದೆಂಬುವದನ್ನು ವಿವರಿಸುತ್ತೇವೆ. ಭೂಮಟ್ಟದಿಂದ ಒಂದು ಅಡಿ ಎತ್ತರದಲ್ಲಿ ಐದು ಅಂಗುಲ ಅಳತೆ ವ್ಯಾಸವುಳ್ಳ ವೃತ್ತದ ಬಾಯಾಗಿರುವ ಒಂದು ಬುದ್ಧಿವಂತನನ್ನು (Funneh) ನೀರುಮಟ್ಟಕ್ಕೆ ಸರಿಯಾಗಿ ಸ್ಥಾಪಿಸಬೇಕು, ಇದರ ಕೀಳುಭಾಗದ ಕೊಳವೆಯು ಒಂದು ಸೀಸೆಯೊಳಕ್ಕೆ ಪ್ರವೇಶವಾಡಬೇಕು. ಮರಗಳು, ಗೋಡೆ, ಕಟ್ಟಡ ಮುಂತಾದ್ದು ಏನೂ ಇಲ್ಲದ ವಿಸ್ತಾರವಾದ ಪ್ರದೇಶದಲ್ಲಿ ಇದನ್ನು ಸ್ಥಾಪಿಸಬೇಕು. ಮಳೆ ಬಿದ್ದರೆ 5 ಅಂಗುಲ ವ್ಯಾಸದ ವೃತ್ತ ಪ್ರದೇಶದಲ್ಲಿ ಬೀಳುವಷ್ಟು ಮಳೆಯು ಸೀಸೆಯಲ್ಲಿ ಜಮಾಯಿಸುತ್ತೆ. ಈ ಸೀಸೆಯ ನೀರನ್ನು 5 ಅಂಗುಲ ವ್ಯಾಸವುಳ್ಳ, ಒಂದು ಗುಂಡು ತಟ್ಟೆಯನ್ನು ಮಟ್ಟವಾದ ಸ್ಥಳದಲ್ಲಿಟ್ಟು ಅದಕ್ಕೆ ಹೊಯಿದು ಅದರಲ್ಲಿ ಎಷ್ಟು ಆಳಕ್ಕೆ ನಿಲ್ಲುತ್ತದೆ ಎಂದು ಅಳತೆಮಾಡಿ ಮಳೆಯ ಪ್ರಮಾಣವನ್ನು ನಿರ್ಣಯಿಸಬಹುದು. ಈ ತಟ್ಟೆಯಲ್ಲಿ ನೀರಿನ ಆಳವು 1 ಅಂಗುಲವಾದರೆ 1 ಅಂಗುಲ ಮಳೆಯೆಂತಲೂ, .೭ ಅಂಗುಲವಾದರೆ ಎರಡು ಅಂಗುಲ ಮಳೆಯೆಂತಲೂ, $\frac{1}{2}$ ಅಂಗುಲವಾದರೆ, $\frac{1}{2}$ ಅಂಗುಲ ಮಳೆಯೆಂತಲೂ ಪ್ರಮಾಣವನ್ನು ಗೊತ್ತುಮಾಡಬಹುದು. ಅದರಿಂದ ನಮ್ಮ ಊರಿನಲ್ಲಿ ಈ ದಿನ 1 ಅಂಗುಲ ಮಳೆ ಬಂತು ಎಂದರೆ ಬಿದ್ದ ಮಳೆ ನೀರೆಲ್ಲಾ ಹರಿದುಹೋಗುವದೆ ಅಥವಾ ಇಂಗಿ ಹೋಗದೆ ಬಿದ್ದ ಸ್ಥಳದಲ್ಲಿಯೆ ನಿಂತಿದ್ದ ಪಕ್ಷದಲ್ಲಿ ನೀರಿನ ಅಳತೆ 1 ಅಂಗುಲವಾಗುತ್ತಿತ್ತೆಂದು ಅರ್ಥ. ಕೆರೆ ಕಟ್ಟೆ ಇವುಗಳಿಗೆ ಹೊರಗಿನ ನೀರು ಹರಿದು ಬರೆದಿದ್ದಾಗ್ಯೂ ಇವುಗಳ ಆಳ ಒಂದಂಗುಲ ಪ್ರಮಾಣ ಅಧಿಕವಾಗುತ್ತೆಂದು ಅರ್ಥವಾಯಿತು.

ದೊಡ್ಡ ಮಳೆಗಳನ್ನು ಈ ರೀತಿಯಲ್ಲ ಅಳತೆ ಮಾಡಬಹುದಾದಾಗ್ಯೂ ಚಿಕ್ಕ ಮಳೆಗಳು ಅಂದರೆ $\frac{1}{2}$ ನೆ ಅಂಗುಲದ ಮಳೆಯನ್ನು ಈ ರೀತಿಯಲ್ಲಿ ಅಳತೆಮಾಡುವದ ಕ್ಕಾಗುವದಿಲ್ಲ. ಆದ್ದರಿಂದ ಸೀಸೆಯಲ್ಲಿ ಬೀಳುವ ಮಳೆ ನೀರನ್ನು ಬೇರೆಯೊಂದು

ವ್ಯಾಕರಣ ಶಾಸ್ತ್ರ

(೧೬೨ ನೆಯ ಪುಟದ ಶೇಷ)

ಮೇಲೆಹೇಳಿದರೀತಿಯಲ್ಲಿ ಪಂಚಮೀವಿಭಕ್ತಿಯು, ಅಪಾದಾನಾರ್ಥಕ, ಹೇತ್ವರ್ಥಕಗಳೆಂದು ಎರಡು ತೆರವಾಗಿರುವುದು. ಇದರಲ್ಲಿ ಅಪಾದಾನಾರ್ಥಕವಾದುದೆ ಕಾರಕವಿಭಕ್ತಿಯು, ಹೇತ್ವರ್ಥಕವಾದುದು ಕಾರಕವಿಭಕ್ತಿಯಲ್ಲ. ಏತಕೆಂದರೆ ಈ ಕ್ರಿಯೆಯಲ್ಲಿ ಅನ್ವಯವಿದ್ದೇ ಇರಬೇಕೆಂಬ ನಿಯಮವಿಲ್ಲ. ಈ ಭೇದಗಳನ್ನು ಮುಂದೆ ಹೇಳುವ ಉದಾಹರಣೆಗಳಿಂದ ತಿಳಿದುಕೊಳ್ಳಬೇಕು. ಹ್ಯಾಗೆಂದರೆ,—ಮರದತ್ತಣಿಂದಣ್ ಬೀಳ್ದುದು, ಇಲ್ಲಿ ಪಂಚಮೀವಿಭಕ್ತಿಯು ಅರ್ಥಕ್ಕೆ ಬಿಳ್ದುದು ಎಂಬ ಕ್ರಿಯೆಯಲ್ಲಿ ಅನ್ವಯು ಬರುವುದರಿಂದ ಇದು ಕಾರಕವಿಭಕ್ತಿಯು, ದಾನದತ್ತಣಿಂಭೋಗಂ ಎಂದು ಮೊದಲಾದ ವಾಕ್ಯಗಳಲ್ಲಿ ಕ್ರಿಯಾನ್ವಯವಿಲ್ಲದಿರುವುದರಿಂದ ಅಲ್ಲಿರುವ ಪಂಚಮಿಯು ಕಾರಕವಲ್ಲ. ಹೀಗೆ ಪಂಚಮೀವಿಭಕ್ತಿಪ್ರಯೋಗವಿರುವ ಹಳೆಗನ್ನಡದ ವಾಕ್ಯಗಳೆಲ್ಲೆಲ್ಲ ತಿಳಿದುಕೊಳ್ಳಬೇಕು. ಹೊಸಗನ್ನಡದಲ್ಲಾದರೂ ಬಹಳವಾಗಿ ದೆಸೆಯೆಂಬ ಸಂಸ್ಕೃತ ದಿಗ್ವಾಚಕ ದಿಶಾ ಶಬ್ದದ ತದ್ಭವ ಶಬ್ದದಮೇಲೆ ಕಂದ ಎಂಬ ಕೃತೀಯೆಯನ್ನು ಸೇರಿಸಿಯೆ ಪ್ರಯೋಗಿಸುತ್ತಾರಾದ್ದರಿಂದ ಪಂಚಮೀವಿಭಕ್ತಿಯೇ ಇಲ್ಲವೆಂದು ತೋರುವುದು.

ಷಷ್ಠೀವಿಭಕ್ತಿ ಪ್ರಕರಣಂ.

ಈ ಷಷ್ಠೀವಿಭಕ್ತಿಯು ಸಂಬಂಧ ಸಾಮಾನ್ಯದಲ್ಲಿ ಬರುವುದು. ಸಂಬಂಧಸಾಮಾನ್ಯವೆಂದರೆ ಪದಾರ್ಥಗಳಲ್ಲಿರುವ ಸೇರುವಿಕೆ ಎಂಬ ಒಂದು ಧರ್ಮವು. ಇದು ಪ್ರತಿ ಪದಾರ್ಥದಲ್ಲೂ ಬೇರೆಬೇರೆಯಾಗಿ ತೋರುತ್ತಿದ್ದರೂ ಸಂಬಂಧವೆಂಬುದೊಂದೇ ಎಲ್ಲಾ ಕಡೆಯಲ್ಲೂ ತೋರುವುದರಿಂದ ಈ ಸಂಬಂಧವನ್ನೆ ಸಂಬಂಧಸಾಮಾನ್ಯವೆಂದು ಹೇಳುತ್ತಾರೆ. ಇದೇ ಸಂಬಂಧವನ್ನು ಬಿಡಿಸಿ ಹೇಳಬೇಕಾದರೆ, ಕರ್ತೃಸಂಬಂಧ, ಕರ್ಮ ಸಂಬಂಧ, ಎಂದು ಮೊದಲಾಗಿ ಹೇಳುವರು. ಇವನ್ನೆ ಷಟ್ಕಾರಕಗಳೆಂದು ತಿಳಿಯಬೇಕು. ಇದಲ್ಲದೆ ಇನ್ನೂ ಅನೇಕ ಸಂಬಂಧಗಳುಂಟು, ಅವುಗಳನ್ನು ಪ್ರಯೋಗಗಳಿಂದ ತಿಳಿದುಕೊಳ್ಳಬೇಕಲ್ಲದೆ ಇಲ್ಲಿ ವಿವರಿಸಲು ಅಸಾಧ್ಯವಾಗಿರುವುದು. ಆದರೂ ದೃಷ್ಟಾಂತಕ್ಕಾಗಿ ಇಲ್ಲಿ ಕೆಲವು ಮಾತ್ರ ಉದಾಹರಣೆಗಳಿಂದ ತೋರಿಸಲ್ಪಡುವುವು.

ಕೆರೆಗಳನ್ನು ಕಟ್ಟುವದಕ್ಕೆ ಮಳೆ ಅಳತೆ ಗೊತ್ತಿರಬೇಕು. ಹ್ಯಾಗಂದರೆ $\frac{1}{8}$ ಮೈಲಿ ಉದ್ದ, $\frac{3}{4}$ ಮೈಲಿ ಅಗಲ ಉಳ್ಳ ಒಂದು ಹಳ್ಳ ಸರಹದ್ದಿಗೆ ಸುತ್ತಲೂ ಇರುವ I ಚದರಮೈಲಿ ಪ್ರದೇಶದ ಮಳೆ ನೀರು ಬಂದು ಬೀಳುತ್ತೆ. ಎಷ್ಟು ಎತ್ತರಕ್ಕೆ ಕಟ್ಟೆ ಹಾಕಿ ಕೆರೆ ಕಟ್ಟಬಹುದೋ, ವರ್ಷಕ್ಕೆ ಆ ಪ್ರದೇಶದಲ್ಲಿ 30 ಅಂಗುಲ ಮಳೆ ಬರುತ್ತೆ ಎಂದು ಊಹಿಸೋಣ. ಕೆರೆಯು ಕ್ಷೇತ್ರಫಲ $\frac{1}{8}$ ಚದರಮೈಲಿ ಸುತ್ತುಭೂಮಿಯ ಕ್ಷೇತ್ರಫಲ 1 ಚದರಮೈಲಿ. ಆದ್ದರಿಂದ ಈ $1\frac{1}{8}$ ಚದರಮೈಲಿಯಲ್ಲಿ ಬಿದ್ದ ಮಳೆ ನೀರೆಲ್ಲಾ ಕೆರೆಯಲ್ಲಿ ಜಮಾಯಿಸಿದಾಗ್ಯೂ ಇದರ ಎತ್ತರವೂ 30 ಅಂಗುಲ $9 = 22\frac{1}{2}$ ಅಡಿಯನ್ನು ವಿಾರದು. ಆದ್ದರಿಂದ $22\frac{1}{2}$ ಅಡಿ ಎತ್ತರಕ್ಕಿಂತಲೂ ಹೆಚ್ಚಾಗಿ ಏರಿಯನ್ನು ಕಟ್ಟುವದು ಪ್ರಯೋಜನವಿಲ್ಲ.

ಒಂದೇ ಪ್ರದೇಶದಲ್ಲಿ ಸವಿಾಪ ಸ್ಥಳಗಳಲ್ಲಿ ಬೀಳುವ ಮಳೆಯನ್ನು ಅಳತೆ ಮಾಡಿ ನೋಡಿದರೆ ಮಳೆಯು ಒಂದೇ ಸಮನಾಗಿ ಬೀಳುವದಿಲ್ಲವೆಂದು ಗೊತ್ತಾಗುತ್ತೆ. ಮೈಸೂರು ಪಟ್ಟಣದಲ್ಲಿ 6 ಜಾಗಗಳಲ್ಲಿ 1899 ನೇ ಇಸವಿಯ ಮಳೆಯನ್ನು ಅಳತೆ ಮಾಡಿ ನೋಡಿದ್ದರಲ್ಲಿ ವರ್ಷ ಒಟ್ಟು ಮಳೆಯ ಪ್ರಮಾಣ ಅಬ್ಸರ್ವೆಟರಿಯಲ್ಲಿ 20 ಅಂಗುಲ 8 ಸೆಂಟು ; ತಿಲೊಕ್ಕೋಕಕಛೇರಿಯಲ್ಲಿ 17 ಅಂಗುಲ 12 ಸೆಂಟ ; ಆಸ್ಪತ್ರೆಯಲ್ಲಿ 17 ಅಂಗುಲ 79 ಸೆಂಟು : ಅರಮನೆಯಲ್ಲಿ 20 ಅಂಗುಲ 76 ಸೆಂಟು ; ಜಗನ್ಮೋಹನ ಬಂಗಲೆದುಲ್ಲಿ 20 ಅಂಗುಲ 78 ಸೆಂಟು : ಟೌನ್‌ಹಾಲಿನಲ್ಲಿ 17 ಅಂಗುಲ 67 ಸೆಂಟು. ಈ ರೀತಿ ಒಂದು ಊರಿನಲ್ಲಿ ಒಂದು ಜಾಗಕ್ಕಿಂತ ಇನ್ನೊಂದು ಜಾಗದಲ್ಲಿ ಒಂದು ಸಂವತ್ಸರದಲ್ಲಿ 3 ಅಂಗುಲ 11 ಸೆಂಟು ಮಳೆ ಕಡಮೆಯಾಗಿರುತ್ತೆ. ಬಂದೇ ದಿವಸದ ಲೆಕ್ಕಗಳನ್ನು ನೋಡಿದರೆ $1\frac{1}{2}$ ಅಂಗುಲದಷ್ಟು ವ್ಯತ್ಯಾಸಗಳೂ ಕೂಡ ಬರುವದುಂಟು.

ಸಾಸಿವೆ.

—:o:—

ಬೆಳೆಯುವ ಸ್ಥಳ :— ಸಾಸಿವೆಯು, ಉಷ್ಣವಲಯ, ಶೀತೋಷ್ಣವಲಯಗಳ ಎಲ್ಲಾ ಪ್ರದೇಶಗಳಲ್ಲೂ, ಮುಖ್ಯವಾಗಿ ಹಿಂದೂಸ್ಥಾನ, ಬ್ರಿಟಿಷ್ ದ್ವೀಪಗಳ ಎಲ್ಲಾ ಭಾಗಗಳಲ್ಲೂ ಸ್ವೀಡ್ಜೆಯಾಗಿ ಬೆಳೆಯುವುದು. ಆದರೆ ರೈತರು ಕೆಲಕೆಲ ಭಾಗಗಳಲ್ಲಿ ಸಾಸಿವೆಯ ಪೈರನ್ನು ಮುತುವರ್ಜಿಯಿಂದ ವ್ಯವಸಾಯ ಮಾಡುವರು.

ಸಾಸಿವೆಯ ತರಹ :— ಸಾಸಿವೆಯಲ್ಲಿ ಬಿಳೀ ಸಾಸಿವೆ ಕರೀ ಸಾಸಿವೆಯೆಂದು ಎರಡು ಬಗೆಯ ಸಾಸಿವೆಗಳು ಇರುವುವು. ಬಿಳೀ ಸಾಸಿವೆಯ ಗಿಡವು ಎರಡು ಅಡಿಗಳ ಎತ್ತರ ಬೆಳೆಯುವುದು, ಈ ಗಿಡದ ಕಾಂಡವೂ ಎಲೆಗಳೂ ಸುವೊರಾಗಿ ನುಣುಪಾಗಿರುವುವು. ಸಾಸಿವೆಯ ಕಾಳು ಬಿಳೀ ಛಾಯೆಯುಳ್ಳದ್ದಾಗಿರುವುದು.

ಕರೀ ಸಾಸಿವೆಯ ಗಿಡವು ಸುವೊರು ಮೂರಡಿಯ ಎತ್ತರವಿರುವುದು. ಅದರ ಕಾಂಡವೂ. ಬುಡಕ್ಕೆ ಸವಿೂಪವಾಗಿರುವ ಎಲೆಗಳು ಒರಟಾಗಿಯೂ, ಅಂದರೆ ತರತರಕಲಾಗಿಯೂ, ಕಾಳು, ಕಪ್ಪು ನೀಲಿ ವಿಶ್ರವಾದ ಬಣ್ಣವುಳ್ಳದ್ದಾಗಿಯೂ ಇರುವುದು.

ಸಾಸಿವೆಯ ವ್ಯವಸಾಯ :— ಇಂಗ್ಲೆಂಡ ದೇಶದಲ್ಲಿನ ಸಾಸಿವೆಯ ವ್ಯವಸಾಯ ಕ್ರಮ ಇತರ ಧಾನ್ಯವನ್ನು ಬೆಳೆಯುವುದಕ್ಕೆ ಭೂಮಿಯನ್ನು ಕೃಷಿಮಾಡುವಂತೆಯೇ ಸಾಸಿವೆಯನ್ನು ಬೆಳೆಯುವುದಕ್ಕೂ ಭೂಮಿಯನ್ನು ಉತ್ತು ಅಣಿಮಾಡುವರು. ತರುವಾಯ ಮಳೆಗಾಲಕ್ಕೆ ಮುಂದೆ ಕಾಳನ್ನು ಚಲ್ಲುವರು. ಬೀಜವು ಮೊಳತು ಆರೇಳು ಅಂಗುಲದಷ್ಟು ಸಸಿಗಳಾದೊಡನೆ ಗುಂಟೆ ಹೊಡೆಯುವರು. ಸಾಸಿವೆ ಗಿಡಗಳು ಚೆನ್ನಾಗಿ ಬೆಳೆದು, ಹೂತು, ಮನೋಹರವಾಗಿ ಕಂಡು, ತರುವಾಯ ಫಲಿಸುವುದು.

ಇದರ ಉಪಯೋಗ :— ಸಾಸಿವೆಯನ್ನು, ಆಹಾರಪದಾರ್ಥಗಳಿಗೆ ಉಪಯೋಗಿಸುವರು, ಎಣ್ಣೆಯಲ್ಲಾಗಲಿ ತುಪ್ಪದಲ್ಲಾಗಲಿ ಸಾಸಿವೆಯಷ್ಟನ್ನು ಬೇಯಿಸಿ, ಒಗ್ಗರಣೆಯನ್ನು ಮಾಡುವರು. ಸಾಸಿವೆಯನ್ನು ವೈದ್ಯರು ಔಷಧಕ್ಕೆ ಉಪಯೋಗಿಸುವರು. ಸಾಸಿವೆಯಿಂದ ಎಣ್ಣೆಯನ್ನು ತೆಗೆಯುವರು. ಸಾಸಿವೆಯ ಉಷ್ಣ ಹೊಡೆಯುವಂತೆ ಇನ್ನು ಕೆಲವು ಪದಾರ್ಥಗಳನ್ನು ಸೇರಿಸಿ ತಯಾರುಮಾಡಿದ ಹಿಂಡಿಯನ್ನು ದನಕರುಗಳಿಗೆ ಕೊಡುವರು.

ಕರ್ತೃಕರ್ಮ ಮೊದಲಾದ ಸಂಬಂಧ ತೋರುವಾಗ ಪ್ರಥಮೆ ಮೊದಲಾದ ಏಳು ವಿಭಕ್ತಿಗಳು ಬರುವುವೆಂದು ಹಿಂದೆ ಹೇಳಲ್ಪಟ್ಟಿದೆ. ಈಗ ಸಂಬಂಧಸಾವಾನ್ಯದಲ್ಲಿ ಹೇಳಲ್ಪಡುವುದು. ಅದು ಯಾವುವೆಂದರೆ,—ರಾಮನ ಕಯ್, ಕೃಷ್ಣನ ಪುಸ್ತಕ, ಊರಬಿಡೆಯು, ಮೊದಲಾದ ಕ್ರಿಯಾವಾಚಕ ಪದಗಳಿಲ್ಲದ ವಾಕ್ಯಗಳಲ್ಲಿರುವ ಷಷ್ಠೀ ವಿಭಕ್ತಿಗಳ ಸಂಬಂಧಗಳು, ಬೇರೆಬೇರೆಯಾಗಿದ್ದರೂ, ಸಂಬಂಧವೆಂಬುವುದು ಒಂದೆ ಆಗಿರುವದರಿಂದಲೂ, ಆ ಷಷ್ಠ್ಯರ್ಥಕ್ಕೆ ಕ್ರಿಯಾನ್ವಯವಿಲ್ಲದೆ ಇರುವುದರಿಂದಲೂ ಮೇಲೆ ಕೊಟ್ಟಿರುವ ವಾಕ್ಯಗಳು ಸಂಬಂಧಸಾವಾನ್ಯಕ್ಕೆ ಉದಾಹರಣೆಗಳಾದುವು.

ಹೀಗೆ ಮೇಲೆ ಹೇಳಿದ ಷಷ್ಠಿಯು ಭಾವಕೃದಂತಗಳಿದ್ದರೆ ಅದರ ಕ್ರಿಯೆಯಲ್ಲಿ ಅನ್ವಯು ಬರುವುದರಿಂದ ಕರ್ತೃಕಾರಕದಲ್ಲೂ, ಕರ್ಮಕಾರಕದಲ್ಲೂ ಬರುವುದೆಂದು ತಿಳಿಯಬೇಕು. ಇವಕ್ಕೆ ಮಾತ್ರ ಕಾರಕಷಷ್ಠೀಯೆಂಬ ಹೆಸರು ಬರುವುದು.

ಈ ಕಾರಕಷಷ್ಠಿಯು ಸಂಸ್ಕೃತದಲ್ಲಿ ಕರ್ತೃರ್ಥಕ ಕೃದಂತಯೋಗವಿದ್ದಾಗ ಕರ್ಮಾರ್ಥದಲ್ಲೂ, ಕರ್ಮಾರ್ಥಕ ಕೃದಂತಯೋಗವಿದ್ದಾಗ ಕರ್ತೃರ್ಥದಲ್ಲೂ, ಭಾವಾರ್ಥಕ ಕೃದಂತವಿದ್ದಾಗ ಕರ್ತೃ, ಕರ್ಮ, ಈ ಎರಡರ್ಥದಲ್ಲೂ, ಷಷ್ಠೀವಿಭಕ್ತಿಯನ್ನು ಮಾತಬಹುದೆಂದು ಹೇಳಿರುವುದು. ಭಾಷೆಯಲ್ಲಿ ಮಾತ್ರ ಸಂಸ್ಕೃತದಂತೆ ಕರ್ತೃಕರ್ಮಾರ್ಥಕ ಕೃದಂತಗಳಿದ್ದಾಗ ಷಷ್ಠೀ ಪ್ರಯೋಗವಿಲ್ಲವೆಂದು ತಿಳಿಯಬೇಕು. ಆದುದರಿಂದಲೆ ಶಬ್ದಾನುಶಾಸನಕಾರನು 'ಕರ್ತೃಕರ್ಮಣೋಃಕೃತಿಭಾವೆ' ಎಂಬ ಸೂತ್ರದಲ್ಲಿ ಭಾವೆ ಎಂಬ ಶಬ್ದವನ್ನು ಹೇಳಿರುವನು. ಇದಕ್ಕೆ ಉದಾಹರಣೆಗಳು ಪಾಡಿಕೆಯಾದ ಮಾತುಗಳಲ್ಲಿ ದೊರೆಯುವುದು ದುರ್ಲಭವು. ಆದುದರಿಂದ ಇದು ಭಾಷೆಗೆ ಅತ್ಯಂತ ಪ್ರಯೋಜನಕರವಲ್ಲ.

∴ ಬಾಗಿಲಿನ ಕ್ಷೇತ್ರಫಲ $= 420 + 120\frac{5}{16} = 540\frac{5}{16}$ ಚ. ಅಡಿ.

$= 540$ ಚ. ಅಡಿ, 45 ಚ. ಅಂಗುಲ.

3 ತಿಂಡಿಯುಸಾವಮಾನು ಪೌಂಡು 1ಕ್ಕೆ 4 ಪೆನಿ ಸುಂಕ; ಸುಂಕವನ್ನು ಹೆಚ್ಚಿಸಿದುದರಿಂದ ಸಾವಮಾನಿನ ಖರ್ಚು $\frac{1}{3}$ ರಷ್ಟು ಕಡಮೆಯಾಗುತ್ತೆ. ತರುವಾಯ (A) ಸುಂಕದ ಉತ್ಪತ್ತಿ $\frac{1}{4}$ ಕಡಮೆಯಾದರೆ (B) $\frac{1}{4}$ ಹೆಚ್ಚಿದರೆ ಪೌಂಡು ಒಂದಕ್ಕೆ ಸುಂಕವೆಷ್ಟು?

ಸುಂಕದ ದರ ಪೌಂಡಿಗೆ 4 ಪೆನಿ ಇರುವಾಗ್ಗೆ ಸಾವಮಾನಿನ ಖರ್ಚು 3 ಪೌಂಡು ಆದ ಪಕ್ಷದಲ್ಲಿ ಸರಾಸರಿ ನಗದು ಉತ್ಪತ್ತಿ 12 ಪೆನಿ.

(A) ಈ ಉತ್ಪತ್ತಿ $\frac{1}{4}$ ಪಾಲು ಕಡಮೆಯಾದರೆ 9 ಪೆನಿ ಆಯಿತು. ಸಾವಮಾನಿನ ಖರ್ಚು $\frac{1}{3}$ ಪಾಲು ಕಡಮೆಯಾಯಿತುದರಿಂದ ಮೂರು ಪೌಂಡು ಖರ್ಚಾಗುತಿದ್ದುದು 2 ಪೌಂಡೇ ಆಯಿತು. ಆದುದರಿಂದ 2 ಪೌಂಡು ಸಾವಮಾನಿಗೆ 9 ಪೆನಿ ಸುಂಕವಾಯಿತು.

ಉತ್ತರ ಪೌಂಡು 1 ಕ್ಕೆ ———— $4\frac{1}{2}$ ಪೆನಿ ಆಯಿತು.

(B) ಉತ್ಪತ್ತಿ $\frac{1}{4}$ ಪಾಲು ಹೆಚ್ಚಾದರೆ 12 ಪೆನಿ ಇದ್ದದ್ದು 15 ಪೆನಿ ಆಯಿತು. ಆದುದರಿಂದ 2 ಪೌಂಡಿಗೆ ಸುಂಕ 15 ಪೆನಿ ಆಯಿತು.

ಉತ್ತರ. 1 ಪೌಂಡಿಗೆ ———— $7\frac{1}{2}$ ಪೆನಿ ಆಯಿತು.

4 ಒಬ್ಬ ಪುಸ್ತಕ ವ್ಯಾಪಾರಿಯು ನಗದು ಹಣಕ್ಕೆ 21 ಪುಸ್ತಕಗಳನ್ನು ಆರುತಿಂಗಳ ಕಡಕ್ಕೆ 20 ಪುಸ್ತಕಗಳನ್ನು ಕೊಡುತ್ತಾನೆ. ಬಡ್ಡಿ ದರ ಏನುಬಿತ್ತು?

-ಉತ್ತರ-

21 ಪುಸ್ತಕಗಳ ಕ್ರಯ ಒಂದು ರೂಪಾಯಿ ಯೆಂದು ಇಟ್ಟುಕೊಳ್ಳೋಣ, ಪುಸ್ತಕ ಒಂದಕ್ಕೆ ನಗದು ಖರೀದಿ $\frac{1}{21}$ ರೂಪಾಯಿ ಆಯಿತು. ಆರು ತಿಂಗಳನಂತರ $\frac{1}{20}$ ರೂಪಾಯಿ ಆಯಿತು. ಅಂದರೆ $\frac{1}{20} - \frac{1}{21} =$ $\frac{1}{420}$ ರೂ. ಜಾಸ್ತಿಯಾದಹಾಗೆ ಆಯಿತು. ಇದೇಯೆ $\frac{1}{21}$ ರೂಪಾಯಿಗೆ ಆರುತಿಂಗಳಿಗೆ ಬಡ್ಡಿಯಾದಂತಾಯಿತು.

ಗಣಿತ.

1 ತ್ರಿಕೋಣಾಕಾರದಲ್ಲಿರುವ 20 ಅಡಿ, 15, ಅಡಿ, 10 ಅಡಿ, ಅಳತೆಯುಳ್ಳ ಕೊಠಡಿಯ ಗೋಡೆಗಳ ಕ್ಷೇತ್ರಫಲವೆಷ್ಟು? ಕೊಠಡಿಯು ಎತ್ತರ 8 ಅಡಿ.

20 ಅಡಿ ಉದ್ದವುಳ್ಳ ಗೋಡೆಯು ಕ್ಷೇತ್ರಫಲ = $20 \times 8 = 160$ ಚ. ಅಡಿ.

15 ಅಡಿ ಅಗಲ ಉಳ್ಳ ಗೋಡೆಯು ಕ್ಷೇತ್ರಫಲ = $15 \times 8 = 120$ ಚದರ ಅಡಿ.

10 ಅಡಿ $= 10 \times 8 = 80$ ಚ. ಡಿ.

ಆದುದರಿಂದ 3 ಗೋಡೆಗಳ ಕ್ಷೇತ್ರಫಲ = 360 ಚ. ಅಡಿ.

2 ಆಯಾಕೃತಿಯುಳ್ಳದ್ದು ಅರ್ಧವೃತ್ತದ ತುದಿಯುಳ್ಳ ಒಂದು ಬಾಗಿಲಿನ ಕ್ಷೇತ್ರಫಲವನ್ನು ಕಂಡುಹಿಡಿಯಬೇಕು. ಬಾಗಿಲಿನ ಅಗಲ $17\frac{1}{2}$ ಅಡಿ.

ಅರ್ಧವೃತ್ತದ ತುದಿಯಿಂದ ಬಾಗಿಲಿನ ಬುಡದವರೆಗೂ ಅಳತೆ $32\frac{3}{4}$ ಅಡಿ. ಈ ಬಾಗಿಲನಲ್ಲಿ ಒಂದು ಅರ್ಧವೃತ್ತ, ಒಂದು ಆಯ, ಎರಡೂ ಸೇರಿ ಇವೆ. ಅರ್ಧವೃತ್ತದ ವ್ಯಾಸ $17\frac{1}{2}$ ಅಡಿ. ಆದಕಾರಣ ಅದರ ಅರ್ಧವ್ಯಾಸ = $8\frac{3}{4}$ ಅಡಿ

ಬಾಗಿಲಿನ ತುದಿಯಿಂದ ಬುಡದವರೆಗೆ $32\frac{3}{4}$ ಅಡಿ. ಪೈಕಿ ತುದಿಯ ಅರ್ಧವೃತ್ತದ ಅರ್ಧವ್ಯಾಸ = $8\frac{3}{4}$ ಅಡಿ.

∴ ಆಯಾಕಾರದಲ್ಲಿರುವ ಬಾಗಿಲಿನ ಭಾಗದ ಉದ್ದ = $32\frac{3}{4} - 8\frac{3}{4} = 24$ ಅಡಿ.

∴ ಈ ಆಯದ ಕ್ಷೇತ್ರಫಲ = $24 \times 17\frac{1}{2} = 420$ ಚ ಅಡಿ. ಮತ್ತು $8\frac{3}{4}$ ಅಡಿ ಅರ್ಧವ್ಯಾಸವುಳ್ಳ ಅರ್ಧವೃತ್ತದ ಕ್ಷೇತ್ರಫಲ =

$$\left(\frac{35}{4}\right)^2 \times \frac{22}{7} \times \frac{1}{2} = \frac{35}{4} \times \frac{35}{4} \times \frac{11}{7} = \frac{1925}{16} = 120\frac{5}{16}$$

9	"	5	ಈರೀತಿಯಾಗಿ ಐದು.
8	"	6	
7	"	7	
6	"	8	
5	"	9	

ಒಟ್ಟು II ಸಂಖ್ಯೆಗಳು ಆಗಬಹುದ.

ಭೂಗೋಳ.

ಬಾಲಕರಿಗೆ ನೇತ್ರೇಂದ್ರಿಯದಿಂದಲೇ ಸುಲಭವಾಗಿ ಜ್ಞಾನೋತ್ಪತ್ತಿಯಾಗುವುದೆಂದು ಹೇಳಬೇಕಾದುದಿಲ್ಲವಷ್ಟೆ ! ಈ ಅಭಿಪ್ರಾಯವು ಭೂಗೋಳಶಾಸ್ತ್ರವಿಷಯದಲ್ಲಿ ವಿಶೇಷ ಪ್ರಾಮುಖ್ಯವಾಗಿದೆ. ಬೋಧಕನು ಭೂಪಠಗಳನ್ನು ಕೂಡಿದಷ್ಟು ನಿರಂತರವಾಗಿಯೂ ಶ್ರದ್ಧಾಪೂರ್ವಕವಾಗಿಯೂ ಉಪಯೋಗಿಸಬೇಕಲ್ಲದೆ ಬೋಧನೆಯನ್ನು ಪುಷ್ಟೀಕರಿಸಲು ಆಶೆಯುಳ್ಳವನಾದರೆ ರಮಣೀಯವಾದ ನೋಟಗಳು, ಪಟ್ಟಣವಿಶೇಷಗಳು- ಪ್ರಸಿದ್ಧಕಾರ್ಯಭೂಮಿಗಳು- ನಾನಾವಿಧವಾದ ಮನುಷ್ಯಜಾತಿಗಳು- ಪಶ್ವಗಳು- ಪ್ರಾಣಿಗಳು ಇವುಗಳೇ ಮೊದಲಾದ ಅನೇಕ ಚಿತ್ರಪಠಗಳನ್ನು ಸಂಗ್ರಹಿಸಿ ಉಪಯೋಗಿಸಬೇಕು. ಖರ್ಜೂರದಮರ, ಸಿಂಹ, ಅರಬೀಯವನು, ಮೊದಲಾದುವನ್ನು ಬಾಲಕರಿಗೆ ತಿಳಿಯಪಡಿಸಬೇಕಾದರೆ ಚಿತ್ರಗಳನ್ನು ಬಾಲಕರ ಕಣ್ಣೆದುರಿಗೆ ಇಟ್ಟು ತಿಳಿಯಿಸುವುದು ಸುಲಭವಲ್ಲದೆ ಬರೀಬಾಯಿ ಮಾತುಗಳಿಂದ ಆಗಲಾರದು. ಮನೋಹರವಾದ ವಿಹಾರಸ್ಥಾನಗಳು, ಪಟ್ಟಣಗಳು, ಕಟ್ಟಡಗಳು ಇವುಗಳ ಛಾಯಾಪಠಗಳು ಈಕಾಲದಲ್ಲಿ ಸುಲಭಸಾಧ್ಯಗಳಾಗಿವೆಯಲ್ಲವೆ ? ಬಾಲಕರಿಗೆ ಪ್ರತ್ಯಕ್ಷ ಇಲ್ಲವೆ ನಿರ್ಮಾಣಕ ಪದಾರ್ಥಗಳಿಂದ ಬೋಧೆಯಾಗುವುದೇ ವಿನ ಬೋಧಕನ ಕಂಠಶೋಷಣೆಯು ಸಾರ್ಥಕವಾಗದು. ಬಾಲಕರ ಕಣ್ಣೆದುರಿಗೆ ಸಹಜಪದಾರ್ಥವನ್ನಾಗಲೀ ನಿರ್ಮಾಣಕಪದಾರ್ಥವನ್ನಾಗಲೀ ಇಟ್ಟು ಬೋಧಿಸಲು ಯತ್ನಿಸಿದರೆ ಸಮರ್ಪಕವಾಗಿರುವುದು. ಏತೇನ ಬಾಲರ ಮನಸ್ಸಿಗೆ ಉತ್ಸಾಹವನ್ನುಂಟುಮಾಡುತ್ತ ಪದಾರ್ಥಜ್ಞಾನವಾಗುವಂತೆ ಎಷ್ಟು ಶ್ರಮ ತೆಗೆದುಕೊಂಡರೂ ಸಾಲದು.

∴ $\frac{1}{21}$ ರೂಪಾಯಿಗೆ $\frac{1}{3}$ ವರ್ಷಕ್ಕೆ $\frac{1}{420}$ ರೂ ಬಡ್ಡಿ.

∴ 100 ರೂಪಾಯಿಗೆ 1 ವರ್ಷಕ್ಕೆ $\frac{1}{420} \times \frac{21}{1} \times \frac{200}{\quad} =$ 10 ರೂ.

೫ ಆದಿಯಲ್ಲೂ ಅಂತ್ಯದಲ್ಲೂ 1 ಇದ್ದು, ಮಧ್ಯದಲ್ಲಿ 2 ಇದ್ದು, 9 ರಿಂದ ಪೂರ್ಣವಾಗಿ ಭಾಗವಾಗುವ ಐದು ಅಂಕಿಯ ಸಂಖ್ಯೆಗಳನ್ನೆಲ್ಲಾ ಬರೀರಿ

ಉತ್ತರ :—ಒಂದು ಸಂಖ್ಯೆಯನ್ನು 9 ರಿಂದ ಭಾಗಿಸಿದರೆ ಬರುವ ಶೇಷವು ಆ ಸಂಖ್ಯೆಯ ಅಂಕಿಗಳ ಒಟ್ಟನ್ನು 9 ರಿಂದ ಭಾಗಿಸಿದರೆ ಬರುವ ಶೇಷಕ್ಕೆ ಸಮ ಆದುದರಿಂದ ಒಂದು ಸಂಖ್ಯೆಯು 9 ರಿಂದ ಸರಿಯಾಗಿ ಭಾಗಿಸಿಕೊಳ್ಳಬೇಕಾದರೆ ಅದರ ಅಂಕಿಗಳ ಒಟ್ಟು 9 ರಿಂದ ಭಾಜ್ಯವಾಗಬೇಕು.

ಈ ಸಂಖ್ಯೆಯ ಅಂಕಿಗಳು ಒಟ್ಟನ್ನು 9 ರಿಂದ ಭಾಗಿಸಿದರೆ

ಫಲವು 1, 2, 3, 4, 5, .. ಆಗಬಹುದು.

1, ಆಗಬೇಕಾದರೆ ಅಂಕಸಂಕಲಿತವು 9 ಆಗಬೇಕು.

2 .. .. 18 ಆಗಬೇಕು.

3 .. .... 27 ,,

ಈಗ ನಾವು ಕಂಡುಹಿಡಿಯಬೇಕಾದ ಐದು ಅಂಕಿಗಳ ಸಂಖ್ಯೆಯಲ್ಲಿ ಮೊದಲನೇ, ಮೂರನೇ, ಐದನೇ, ಅಂಕಿಗಳ ಒಟ್ಟು -- 1 + 2 + 1 = 4. ಆದುದರಿಂದ ಎರಡನೇ, ನಾಲ್ಕನೇ, ಅಂಕಿಗಳ ಒಟ್ಟು - 9-4 = 5, ಅಥವಾ 18-4, ಅಥವಾ 27-4, ಈರೀತಿ ಆಗಬೇಕು. ಆದರೆ ಎರಡು ಅಂಕಿಗಳ ಒಟ್ಟು, 18 ಕ್ಕಿಂತಲೂ ಜಾಸ್ತಿಯಾಗಲಾರೆದಾದುದರಿಂದ, 5 ಅಥವಾ 14 ಆಗಬಹುದು. ಹೀಗೆ ಆಗುವಂತೆ ಅಂಕಿಗಳನ್ನು ಜೋಡಿಸೋಣವರಿಂದ ಸಂಖ್ಯೆಗಳೆಲ್ಲಾ ಗೊತ್ತುಮಾಡಲ್ಪಡಬಹುದು.

ಆದುದರಿಂದ ಎರಡನೇ ಮತ್ತು ನಾಲ್ಕನೇ ಸ್ಥಾನಗಳಲ್ಲಿ,

0	ಮತ್ತು	5	ಈ ರೀತಿಯಾಗಿ ಆರು.
1	,,	4	
2	,,	3	
3	,,	2	
4	,,	1	
5	,,	0	

ಳಲ್ಲಿ ಬಣ್ಣಗಳ ವೈಪರೀತ್ಯಗಳನ್ನು ಒಪ್ಪಿಕೊಳ್ಳಕೂಡದು. ಅಂದರೆ ರೂಢಿಯಲ್ಲಿ ಬಣ್ಣಗಳು ಚಿತ್ರಪಠವಲ್ಲಿರಬೇಕೆಹೊರತು ಹೊಸಕರದ ಬಣ್ಣಗಳಿರಬಾರದು. ಬಾಲಪಾಠಗಳಿಗೆ ಉಪಯುಕ್ತವಾದ ಪಠಗಳಲ್ಲಿರುವ ಲಕ್ಷಣಗಳೇ ಪ್ರೌಢಪಠಗಳಲ್ಲಿಯೂ ಇರುವುದು ಉತ್ತಮವು. ಹೀಗಿರುವುದರಿಂದ ವಿದ್ಯಾರ್ಥಿಗಳು ಬಾಲ್ಯದಲ್ಲಿ ಸಂಪಾದಿಸಿದ ತಿಳಿವಳಿಕೆಗಳನ್ನು ಮರೆತು ಹೊಸತಿಳಿವಳಿಕೆಗಳನ್ನು ಸಂಪಾದಿಸಬೇಕಾದ ಅಗತ್ಯವಿರುವುದಿಲ್ಲ.ಬಾಲಪಾಠಗಳ ಭೂಪಠಗಳಲ್ಲಿ ಅಸಂಖ್ಯಾತವಾಗಿ ಹೆಸರುಗಳಿರಬಾರದು. ಇದ್ದುದಾದರೆ ದೇಶದ ಮುಖ್ಯವಾದ ಸ್ವಭಾವವಿಶೇಷಗಳು ಬಾಲರ ಮನಸ್ಸಿನಲ್ಲಿ ಚಿತ್ರಿತವಾಗುವುದಿಲ್ಲವು.

ಬಾಲಪಾಠಗಳಲ್ಲಿ, ವಿದ್ಯಾಶಾಲೆಯಿರುವ ಜಿಲ್ಲೆಯ ಭೂಪಠ ವಸ್ತು ಉಪಯೋಗಿಸುವುದು ಉತ್ತಮವು. ಇಂತಹ ಪಠದ ಬೇರೆಬೇರೇ ಪ್ರಮಾಣವುಳ್ಳ ಎರಡು ಪಠಗಳನ್ನು ಬಾಲಕರು ಕುಳಿತುಕೊಳ್ಳುವ ಕೊಠಡಿಯ ಗೋಡೆಗಳಿಗೆ ತಗಲಹಾಕಿರಬೇಕು. ಇದರಿಂದ ಬಾಲಕರು ಚಿಕ್ಕಂದಿನಿಂದಲೂ ಪಠ ವಸ್ತು ನೋಡಿನೋಡಿ ಅಭ್ಯಾಸವಾಗುವುದಲ್ಲದೆ ಒಂದೇ ಆಕಾರವೂ ಬೇರೆಬೇರೆ ಅಳತೆಯೂ ಇರುವ ಪದಾರ್ಥ ಪರಿಮಾಣ ಜ್ಞಾನವು ಬಾಲಕರ ಮನಸ್ಸಿನಲ್ಲಿ ಸಾರುವುದು.

ದೊಡ್ಡ ಪಠಗಳು ಬಾಲಕರ ಸಮುದಾಯಕ್ಕೆ ಉಪಯುಕ್ತವಾಗುವುದಷ್ಟೆ! ಪಠದ ಜ್ಞಾನವು ಬಾಲರಿಗೆ ಉಂಟಾದ ಕೂಡಲೆ ಒಬ್ಬೊಬ್ಬ ಬಾಲಕನೂ ಮನೆಯಲ್ಲಿ ಅಭ್ಯಾಸ ಸಾಧನೆ ಮಾಡುವುದಕ್ಕೆ ಚಿಕ್ಕ ಪಠವನ್ನು ಸಂಪಾದಿಸಿಕೊಳ್ಳುವಂತೆ ಹೇಳಬೇಕು. ಇಂತಹ ಚಿಕ್ಕ ಪಠಗಳು ಈಗ ಸುಲಭವಾಗಿ ದೊರೆಯುವುವು. ಸಾಮಾನ್ಯವಾಗಿ ಇವುಗಳಲ್ಲಿ ಹೆಸರುಗಳು ಹೆಚ್ಚಾಗಿರುವುದು. ಬಣ್ಣ ಕಡಿಮೆಯಾಗಿರುವುದು. ಈ ದೋಷಗಳಿರುವವು ಕೇವಲ ಬಾಲಪಾಠಗಳಿಗಾದರೂ ಸ್ಪಷ್ಟವಾಗಿ ಚಿತ್ರಿತವಾದುವಾಗಿಯೂ ಅಕ್ಷರಗಳು ಅತಿಯೂಗಿಲ್ಲದುವಾಗಿಯೂ ಇರುವ ಪಠಗಳನ್ನು ಪರಿಗ್ರಹಿಸಬೇಕು. ಭೂಗೋಳಶಾಸ್ತ್ರ ಸಂಪಾದನೆಯಲ್ಲಿ ಪಠಗಳನ್ನು ಉಪಯೋಗಿಸುವುದು. ಅತ್ಯವಶ್ಯವೆಂದು ಮೊದಲೇ ಸೂಚಿಸಿರುವುದಷ್ಟೆ. ಪಠದಿಂದ ಸಂಪಾದನೆಯೂದ ಈ ತಿಳಿವಳಿಕೆಯನ್ನು ಅತ್ಯುಭಾರವಾಗಿಟ್ಟುಕೊಂಡು ಒಂದೊಂದು ದೇಶದ ಭೂಲಕ್ಷಣಾದಿಗಳನ್ನು ನಿಶ್ಚೈಸಬೇಕು. ಆಪ್ರದಾದರೊಂದು ದೇಶದ ವಾಯುಗುಣ, ಭೂಗುಣ, ಬೆಳೆ, ಜೀವಿಗಳು ಸಸ್ಯಾದಿಗಳು ಮುಂತಾಗಿವುಗಳನ್ನು ಆ ದೇಶದ ಪಠವನ್ನು

ಭೂಪಠ.

ಭೂಗೋಳಶಾಸ್ತ್ರ ಬೋಧನೆಯಲ್ಲಿ ಭೂಪಠವು ಕೇವಲ ಆವಶ್ಯಕವಾದ ಸಲಕರಣವಾಗಿರುವುದು. ಪಠದಿಂದ ತಿಳಿಯುಬಹುದಾದ ಅಂಶಗಳೆಲ್ಲವನ್ನೂ ಬಾಲಕರ ಅವಗಾಹನೆಗೆ ತಂದರೆ ಈ ಶಾಸ್ತ್ರವಿಷಯಕವಾದ ಮುಂದಿನ ಜ್ಞಾನಕ್ಕೆ ಇವು ಸ್ಥಿರತರವಾದ ಅಸ್ತಿಭಾರವಾಗುವುವು. ಆದುದರಿಂದ ಭೂಗೋಳಶಾಸ್ತ್ರ ಬೋಧನೆಯಲ್ಲಿ ಉಪಯುಕ್ತವಾದ ಪಠವು ಕೂಡಿದಮಟ್ಟಿಗೆ ದೋಷರಹಿತವಾಗಿರುವುದು ಅತ್ಯವಶ್ಯಕವಾಗಿದೆ. ಈಗ ಸಾಮಾನ್ಯವಾಗಿ ದೊರೆಯುವ ಪಠಗಳು ನೋಡುವುದಕ್ಕೆ ಗಿಜಿಗಿಜಿಯಾಗಿಯೂ ಬಣ್ಣ ಕಡಮೆಯಾಗುದರಿಂದ ಬಾಲಕರ ಅವಗಾಹನೆಗೆ ಕಠಿಣತರವಾಗಿಯೂ ಇರುವುದರಿಂದ ದೂಷ್ಯಗಳಾಗಿವೆ. ಕೆಲವು ಪಠಗಳಲ್ಲಿ ಹೆಸರುಗಳು ಅಸಂಖ್ಯಾತವಾಗಿವೆ. ಮತ್ತೆ ಕೆಲವುಗಳಲ್ಲಿ ಬಣ್ಣವು ಕೇವಲ ಸಂಕುಚಿತವಾಗಿದೆ. ಈ ದೋಷಗಳಿಂದ ದೇಶದೇಶದ ಯಲ್ಲಿಗಳು ಕಾಣಬರುವುದಿಲ್ಲ. ಅಲ್ಲದೆ ಭೂಲಕ್ಷಣಗಳು ಅಶುದ್ಧವಾಗಿಯಾಗಲೀ ಅಸಮರ್ಪಕವಾಗಿಯಾಗಲೀ ತೋರ್ಪಟ್ಟಿರುವುವು. ಹೇಗೆಂದರೆ ಪರ್ವತಶ್ರೇಣಿಯಿಲ್ಲದಿರುವೆಡೆಗಳಲ್ಲಿ ಕಂಬಳೀಹುಳದಂತಿರುವ ಜಾಡುಗಳು ಕಾಣಬರುವುವು. ಪ್ರಸಿದ್ಧವಾಗಿಯೂ ವ್ಯಕ್ತವಾಗಿಯೂ ಕಾಣಬರುವ ಔನ್ನತ್ಯವೈಲಕ್ಷಣ್ಯಗಳೇ ಮೊದಲಾದವುಗಳು ಪಠದಲ್ಲಿ ಸೂಚಿತಗಳಾಗಿಯೇ ಇಲ್ಲವು. ಆದುದರಿಂದ ಬೋಧಕನು ಪಠಗಳನ್ನು ಬಹಳ ಎಚ್ಚರಿಕೆಯಿಂದ ಸಂಗ್ರಹಿಸದೇಕಲ್ಲದೆ ಅವುಗಳಲ್ಲಿರುವ ನ್ಯೂನತೆಗಳಿಂದ ಬಾಲಕರಿಗೆ ಉಂಟಾಗಬಹುದಾದ ತಪ್ಪು ತಿಳುವಳಿಕೆಗಳನ್ನು ಹೋಗಲಾಡಿಸುವುದರಲ್ಲಿ ನಿರತನಾಗಿರಬೇಕು. ಬೋಧನೆಗೆ ಯೋಗ್ಯವಾದ ಪಠಗಳಲ್ಲಿರಬೇಕಾದ ಅತ್ಯವಶ್ಯಕ ಗುಣಗಳಾವುವೆಂದರೆ, ಯಥೌಚಿತ್ಯ ಮತ್ತು ಅವಗಾಹನ ಸೌಲಭ್ಯ-ಯಥೌಚಿತ್ಯವೆಂದರೆ ದೇಶಗಳ ಯಾವ ಯಾವ ಭಾಗಗಳಲ್ಲಿ ಯಾವುಯಾವ ಲಕ್ಷಣಗಳಿರುವುವೋ, ಯಾವುಯಾವ ವಿಸ್ತೀರ್ಣವಿರುವುದೋ ಇವೇ ಮೊದಲಾದುವನ್ನು ಹೆಚ್ಚಿಸದಂತೆಯೂ ಕಡಮೆಮಾಡದಂತೆಯೂ ಪಠದಲ್ಲಿ ಸೂಚಿಸುವುದು. ಅವಗಾಹನ ಸೌಲಭ್ಯವೆಂದರೆ ಬಣ್ಣವನ್ನು ಹೆಚ್ಚು ಕಡಮೆ ಮಾಡುತ್ತಲೂ ಯಾವುಯಾವ ಭೂಲಕ್ಷಣಗಳು ನಿಶ್ಚಿತವಾಗಬೇಕೆಂದು ಸಂಕೇತವಿರುವುದೋ ಆ ಸಂಕೇತಗಳಿಗೆ ಅನುಸಾರವಾಗಿ ಪಠವು ಚಿತ್ರಿತವಾಗಿರುವುದರಿಂದ ಆಯಾಯು ಭೂಲಕ್ಷಣಗಳು ಪಠಗಳನ್ನು ನೋಡಿದೊಡನೆಯೇ ಬಾಲಕರ ಮನಸ್ಸಿಗೆ ಗೋಚರವಾಗುವುದು. ಪಠಗ

ಸೂಚನೆ ಮತ್ತು ಸವಾಲಾಚಾರಗಳು

1. ತೀರ್ಥಹಳ್ಳಿ ತಾಲೂಕ್ಲೋಕ್ ಮಂಡಗದ್ದೆ ಸ್ಕೂಲ್ ಮಾಸ್ಟರಾಗಿ, ಹಾಲಿ ಎಡೆ ಹಳ್ಳಿಯಲ್ಲಿ ವಾಸವಾಡುವ ಡಿಸ್‌ಮಿಸ್ ಆಗಿದ್ದ ಎಸ್ ಸುಬ್ಬಣ್ಣ ನ ನಂ. ೬೨೦೦ ತಾರೀಖು 17/5/900, ಅರ್ಜಿಯಮೇಲೆ ಗೌರ್ನಮೆಂಟಿನವರು ಕೊಟ್ಟ ಇಂಡಾರ್ಸ್:—

ಇನ್‌ಸ್ಪೆಕ್ಟರ್ ಜನರಲ್ ಸಾ. ರವರು ಮಾಡಿರುವ ಹುಕ್ಕುವಿನ್ಮನೆ ಮೇಲೆ ಪುನರ್ವಿಚಾರಣೆ ಮಾಡುವ ಅವಶ್ಯಕವು ಗೌರ್ನಮೆಂಟಿನವರಿಗೆ ಕಾಣಬರುವುದಿಲ್ಲವಾದುದರಿಂದ, ಅರ್ಜಿದಾರನ ಅಪೀಲನ್ನು ತಿರಸ್ಕರಿಸಿರುತ್ತೆ.

2. ಹಾಸನ ತಾಲೂಕ್ಲೋಕ್ ಬಸವನಹಳ್ಳಿ ಹೋಬಳಿ ಸ್ಕೂಲ್‌ಮಾಸ್ಟರ್ ಗರುಡಾಚಾರ್ಯರು, ರಜಾ ಪಡೆಯದೆ ಗೈರಹಾಜರಿ ಸಬಬೂ ಸ್ಕೂಲ ಕೆಲಸವನ್ನು ಮುತವರ್ಜಿಯಿಂದ ಮಾಡದೆ ಬಿಟ್ಟು ಸಬಬೂ, ಡಿಸ್‌ಮಿಸ್ ಮಾಡಿರುತ್ತೆ.

3. ಕೋಲಾರದ ಹೈಸ್ಕೂಲಿನಲ್ಲಿ ಕೆಲವು ದಿನಗಳ ಕೆಳಗೆ ಆದ ಪ್ರಿಲಿಮಿನರಿ ಪರೀಕ್ಷೆಯಲ್ಲಿ ನಡೆದ ಮೋಸಕೃತ್ಯಕ್ಕೆ ಸಂಬಂಧಪಟ್ಟವರಿಗೆ ಈ ಕೆಳಗೆ ಸೂಚಿಸುವ ಶಿಕ್ಷೆಯನ್ನು ವಿಧಿಸಿರುತ್ತೆ.

(a) ಎಚ್. ರಂಗಸ್ವಾಮ್ಯಿಂಗಾರ್ ಎಂಬ ವಿದ್ಯಾರ್ಥಿಯನ್ನು ಸ್ಕೂಲಿನಿಂದ ಡಿಸ್‌ಮಿಸ್ ಮಾಡಿರುತ್ತೆ. ಅಲ್ಲದೆ, ಇನ್ಯಾವ ಸ್ಕೂಲಿಗೆ ಆಗಲಿ, ಕಾಲೀಜಿಗೆ ಆಗಲಿ 1901 ನೇ ಜನವರಿ ಗುರ್ತಿವರೆಗೂ ಅವನನ್ನ ಸೇರಿಸಿಕೊಳ್ಳಕೂಡದೆಂದು ಸೂಚಿಸಿರುತ್ತೆ.

(b) ಈ ಕೃತ್ಯಕ್ಕೆ ಸಂಬಂಧಪಟ್ಟ ಎಚ್. ರಂಗಸಾಮ್ಯಿಂಗಾರ್ ಮತ್ತು ನಾರಾಯಣರಾವ್ ಅವರ ಪರೀಕ್ಷೆ ಪತ್ರಗಳನ್ನು ರದ್ದು ಮಾಡಿರುತ್ತೆ. ಅಲ್ಲದೆ ಅವರು ಬರುವ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಹೋಗಕೂಡದೆಂದು ಮಾಡಿರುತ್ತೆ.

(c) ಹೆಡ್‌ಮ್ಯಾಸ್ಟರ್‌ರವರ ಆಫೀಸ್ ರೂಂನಿಂದ, ಪರೀಕ್ಷಾಪತ್ರಗಳನ್ನು ಮೋಸದಿಂದ ಸಾಗಿಸಿ, ರಂಗಸಾಮ್ಯಿಂಗಾರ್ರಿಗೆ ಕೊಟ್ಟದ್ದಕ್ಕಾಗಿ, ಜನ್ಯಾನಿಸ್ಟಿಕ್ ಟೀಚರ್ ಎಮ್. ಚಿನ್ನಪ್ಪನನ್ನು ಡಿಸ್‌ಮಿಸ್ ಮಾಡಿರುತ್ತೆ.

(d) ಅದೇ ಸ್ಕೂಲ್ ರೈಟರ್, ಎನ್ ಸಂಪತ್ತೈಂಗಾರ್ರವರು, ಹೆಡ್‌ಮ್ಯಾಸ್ಟರ ಅಪ್ಪಣೆಯಿಲ್ಲದೆ, ಚಿನ್ನಪ್ಪನನ್ನ ಪರೀಕ್ಷಾಪತ್ರಗಳನ್ನು ಪ್ರಿಂಟ್ ಮಾಡುವಾಗ ಸಹಾಯಕ್ಕೆ ತೆಗೆದುಕೊಂಡದ್ದಕ್ಕಾಗಿ ಅವರಿಗೆ ಐದು ರೂಪಾಯಿ ಜುಲ್ಮಾನೆ ವಿಧಿಸಿರುತ್ತೆ.

ನೋಡಿ ನಿರ್ಧರಿಸಬೇಕೇ ವಿನ ಪುಸ್ತಕಗಳನ್ನೋದಿ ಈ ಅಂಶಗಳನ್ನು ನಿಶ್ಚೈಸಲಾಗದು. ಹೀಗೆ ಪಠವನ್ನು ನೋಡಿದಮಾತ್ರದಿಂದಲೇ ದೇಶದೇಶದ ಈ ಲಕ್ಷಣಗಳನ್ನು ನಿರ್ಧರಿಸುವುದಕ್ಕೆ ಸಾಕಾಗದಷ್ಟು ಅವಕಾಶವನ್ನು ಬಾಲಕರಿಗೆ ಕಲ್ಪಿಸಿಕೊಡಬೇಕು. ಅವುದಾದರೊಂದು ದೇಶದ ಪಠವನ್ನು ಬಾಲಕರಿಗೆ ಕೊಟ್ಟು ಎರೀಪಠದ ಪರೀಕ್ಷೆಯಿಂದಲೇ ದೇಶದ ಸ್ವಾಭಾವಿಕವಾದ ಲಕ್ಷಣಗಳನ್ನು ಕಂಡು ಹಿಡಿಯಿರೆಂದು ನಿರೂಪಿಸಬೇಕು. ಈ ಲಕ್ಷಣಗಳನ್ನು ಪುಸ್ತಕಗಳನ್ನು ಓದಿ ಸಂಗ್ರಹಿಸುವುದು ಕೇವಲ ಹೀನವಾದ ಕಾರ್ಯವೆಂದು ಎಚ್ಚರಿಸಬೇಕು. (ಸಶೇಷ.)

ಸೂಚನೆಗಳು ಮತ್ತು ಸಮಾಚಾರಗಳು.

1. ಬೆಂಗಳೂರು ಡಿಸ್ಟ್ರಿಕ್ಟ್ ಕನ್ನಡಾ ಹೋಬಳಿ ಸ್ಕೂಲ್‌ಗಳ, ಅ. ಡಿ. ಇ. ಮಾ॥ ರಾ॥ ಬಿ. ಲಕ್ಷ್ಮೀನಾರಾಯಣ ಶಾಸ್ತ್ರಿಗಳನ್ನು ಅಕ್ಟೋಬರ್ ೯ನೇ ತಾರೀಖಿನಿಂದ, ರಿಟೈರ್ ಮಾಡಿರುತ್ತಾರೆ. ಅವರ ಕೆಲಸಕ್ಕೆ -- ತುಮಕೂರು ಡಿ. ಅ. ಡಿ. ಇ. ಮಾ॥ರಾ॥ಎ. ಶ್ಯಾಮರಾವ್ ಬಿ. ಎ. ಯವರನ್ನೂ, ಶಿವಮೊಗ್ಗಾ, ಆಂಗ್ಲೋವರ್ನಾಕ್ಯುಲರ್ ಸ್ಕೂಲ್ ಹೆ. ಮ್ಯಾ. ಮಾ॥ ವೆಂಕಟರಾಮಯ್ಯಂಗಾರ್ರವರನ್ನು ತುಮಕೂರು ಡಿ. ಅ. ಡಿ. ಇ. ರವರ ಕೆಲಸಕ್ಕೂ, ನಿಯಮಿಸಿರುವರು.

2. ಮುಸಾರಾಣಿ ಗರ್ಲ್ಸ್‌ಸ್ಕೂಲ್ ಅ. ಮಿಸ್ಟ್ರೆಸ್, ಜೆಲ್ಲಮ್ಮನವರನ್ನು ಅವರಿಗಿರುವ ೪೦ ರೂ. ತಲಬಿನಮೇಲೆ ಚಿಕ್ಕಮಗಳೂರು ಗೌರ್ನಮೆಂಟ್ ಗರ್ಲ್ಸ್‌ಸ್ಕೂಲ್ ಹೆಡ್ ಮಿಸ್ಟ್ರೆಸ್ ಆಗಿ ನಿಯಮಿಸಿರುತ್ತಾರೆ.

3. ಮಿ॥ ರಾಬರ್ಟ್ ಷ್ಯಾಲ್ಡವೆಲ್ ರವರಿಗೆ, ಮಾಹೇಯಾನಾ ನೂರು ರೂಪಾಯಿ ಸ್ಕಾಲರ್‌ಷಿಪ್ ಕೊಟ್ಟು ಇಂಜನಿಯರ್ ಕಾಲೀಜಿನಲ್ಲಿ ಓದುವುದಕ್ಕಾಗಿ ಕಳುಹಿಸಿರುತ್ತಾರೆ.

ಈ ಕೆಳಗೆ ಸೂಚಿಸಿರುವ ವಿಷಯವನ್ನು ನಮ್ಮ ವಾಚಕರು ಚೆನ್ನಾಗಿ ಮನಸ್ಸಿನೆಲ್ಲಿಟ್ಟು ಇಂತಹ ತಪ್ಪಿತಕ್ಕೆ ಎಂದಿಗೂ ಅವಕಾಶ ಕೊಡಬಾರದೆಂದು ಕೋರುತ್ತೇವೆ.

ವಿದ್ಯಾದಾಯಿನಿ.

ಭಾಗ ೯.] ಅಕ್ಟೋಬರ್ ೧೯೦೦. [ಸಂಚಿಕೆ ೧೦.

ಎಡಿಟರವರ ನೋಟ್ಸ್.

ತಿರುವಾಂಕೂರು ಸಂಸ್ಥಾನದ ಆಕ್ಟಿಂಗ್ ರೆಸಿಡೆಂಟರಾದ ಆ॥ ವೆಕೆಂಜಿ ರವರು, ತಿರುವಾಂಡ್ರಂ ಬಾಲಿಕಾ ಪಾಠಶಾಲೆಯಲ್ಲಿ ಉಪನ್ಯಾಸ ಮಾಡಿದಾಗ ವಿದ್ಯಾರ್ಥಿಗಳು ಪಾಠಶಾಲೆ ಕಲಾಶಾಲೆಗಳನ್ನು ಸೇರಿ ಪಾಠಗಳನ್ನು ಕಲಿಯುವುದಲ್ಲದೆ ಮುಂದಿನ ಏಳಿಗೆಗೆ ಸಹಾಯಕವಾದ ಅನೇಕ ನಡೆನುಡಿಗಳನ್ನೂ ಕಲಿಯುವರೆಂತಲೂ, ಅವುಗಳಲ್ಲಿ ಮುಖ್ಯವಾಗಿ ಕಲಿತ ಮೂರು ವಿಷಯಗಳು ಬಹಳ ಪ್ರಯೋಜನಕಾರಿಯಾಗಿರುವೆವೆಂತಲೂ, ಅಭಿಪ್ರಾಯ ಪಟ್ಟರು. ಆ ವಿಷಯಗಳು ಯಾವವೆಂದರೆ :—

*
* *

ಮೊದಲಲ್ಲಿ ಕಾಲನಿಯಮವನ್ನು ಆಚರಿಸುವುದು; ಎಂದರೆ ಕ್ಲೃಪ್ತಕಾಲದಲ್ಲಿ ನಿಯಮಿತವಾದ ಕೆಲಸವನ್ನು ಮಾಡುವ ಅಭ್ಯಾಸವನ್ನು ಪಡೆಯುವುದು. ಕಾಲದ ಬೆಲೆಯನ್ನು ತಿಳಿಯುವವರಿಗೆ ಕಾಲನಿಯಮವನ್ನು ಆಚರಿಸುವ ಆವಶ್ಯಕವು ತೋರುವುದಿಲ್ಲ. ವ್ಯರ್ಥವಾಗಿ ಕಳೆದ ಪ್ರತಿಯೊಂದು ನಿಮಿಷವೂ ತನ್ನ ಜೀವಿತಕಾಲದಲ್ಲಿ ಗತಿಸಿಹೋದ ನಿಮಿಷಕಾಲವು. ಗತಿಸಿಹೋದ ಕಾಲವು ಮತ್ತೆಂದಿಗೂ ಬಾರದೆಂದು ಲೋಕವಲ್ಲವಿದಿತವಾಗಿರುವುದು. ಆದುದರಿಂದ ಕಾಲವನ್ನು ವ್ಯರ್ಥವಾಗಿ ಕಳೆಯುದೆ ಆಯಾಯ ಕಾಲದಲ್ಲಿ ಮಾಡತಕ್ಕ ಕೆಲಸವನ್ನು ತಪ್ಪದೆ ಮಾಡಬೇಕೆಂಬ ಕಾಲನಿಯಮವನ್ನು ಕಾಪಾಡುವ ಪದ್ಧತಿಯನ್ನು ಪಾಠಶಾಲೆಯಲ್ಲಿ ಬಾಲಕರು ಅಭ್ಯಾಸಿಸುವರು.

* * *

(ಕಮಠಪತಿ) ಭಂಗಾರದ ಆಮೆ.

(೧೯೨ ನೆಯ ಪುಟದ ಶೇಷ.)

ನಾನುಹಾಗೆಯೇ ಬಾಗಿಲ ಹಿಂದೆ ನಿಂತು, ಇಣಿಕಿ ನೋಡುತಿದ್ದೆನು. ನಾನು ಅಟ್ಟಿಸಿ ಕೊಂಡುಬಂದ ಹನ್ನೆರಡು ಪಕ್ಷಿಗಳು ಹನ್ನೆರಡು ಕೆಂಪಿನಪಂಜರವನ್ನುಸೇರಿ, ಒಡನೆಯೇ ಹನ್ನೆರಡು ಮಂದಿ ಥಳಥಳಿಸುವ ರಾಜಕುವಾರರಾಗಿ ಹೊರಗೆಬಂದು, ಆ ಮಣೆಗಳಮೇಲೆ ಭೋಜನಕ್ಕೆ ಕೂತರು. ಅವರು ಭೋಜನ ಮಾಡುತಿದ್ದುದನ್ನು ನೋಡುತ ಇದ್ದೆನು. ಆ ಹನ್ನೆರಡುಮಂದಿಯಲ್ಲಿ ಒಬ್ಬನು ಮಾತ್ರ ಖಿನ್ನಮನಸ್ಕನಾಗಿ, ಏನೂ ಭೋಜನ ಮಾಡದೇ ಇದ್ದನು. ಆಗ ಉಳಿದವರು ಅವನನ್ನು ನೋಡಿ ನಗುತ, ನಿನ್ನಪತ್ನಿಯೂ ಹೀಗೆಯೆ ನಿನ್ನನ್ನೆ ಚಿಂತಿಸುತಿರುವಳಂತಿದೆ. ನಿನ್ನ ಶರೀರವನ್ನು ನಿನ್ನ ಪತ್ನಿಯು ವಶಕ್ಕೆ ಕೊಟ್ಟು ಬರಬಹುದೇ ? ಎಂದು ಕೇಳಿದರು. ಇಷ್ಟರಲ್ಲೇ ಗಡಗಡನೆ ಶಬ್ದವಾಗಲು, ನಾನು ತಪ್ಪಿಸಿಕೊಂಡು ಓಡಿಬಂದೆನೆಂದನು. ಆಗ ರಾಜಕುವಾರಿಯು, ತನ್ನ ಪತಿಯ ವೃತ್ತಾಂತವು ಇದೇ ಎಂದು ತಿಳಿದು, ತನ್ನ ತಂದೆಗೆ ತಿಳಿಸಿ ಪರೀಕ್ಷಿಸಲು, ಕೆಲವರೊಡನೆ ಅವನನ್ನೂ ಕರೆದುಕೊಂಡು ಅಲ್ಲಿಗೆ ಹೋಗಿ, ಔತಿಟ್ಟುಕೊಂಡಿರಲು, ಎಂದಿನಂತೆ ಹನ್ನೆರಡು ಪಕ್ಷಿಗಳೂ, ಹನ್ನೆರಡು ಮಂದಿ ರಾಜಕುವಾರರು ಆದರು. ಆಗ ಅವರಲ್ಲಿ ತನ್ನ ಪತಿಯನ್ನು ನೋಡಿ ಸಂತೋಷಗೊಂಡು, ಮುಂದೆ ಇವರು ಏನು ಮಾಡುವರೋ ನೋಡೋಣವೆಂದಿರಲು, ಆ ರಾಜಕುವಾರರೆಲ್ಲರೂ ದೇವರನ್ನು ಸ್ತೋತ್ರ ಮಾಡುತಿದ್ದಾಗ ತನ್ನ ಪತಿಯುಮಾತ್ರ ತನ್ನ ಪತ್ನಿಗೆ ದೀರ್ಘಾಯುಸ್ಸನ್ನು ಕೊಡೆಂದು ದೇವರನ್ನು ಪ್ರಾರ್ಥಿಸಲು, ರಾಜಕುವಾರಿಯು ಎದಿರಿಗೆ ಬಂದು ನಿಂತಳು. ಆಗ ತನ್ನ ಸ್ನೇಹಿತರೆದುರಿಗೆ ಅವಳ ಪಾಣಿಗ್ರಹಣಮಾಡಿ ಅವಳ ವೃತ್ತಾಂತವನ್ನೆಲ್ಲಾ ಸ್ನೇಹಿತರಿಗೆ ತಿಳಿಸಿದನು. ಅವಳು ಸ್ವಾಮಿ ನನ್ನ ಅಪರಾಧ ಕ್ಷಮಿಸಬೇಕೆಂದು ಬೇಡುವುದಕ್ಕಾಗಿ ನಮಸ್ಕರಿಸುತ್ತಿರಲು ಅವಳನ್ನು ಎತ್ತಿ, ಆಲಿಂಗಿಸಿಕೊಂಡು ತಾನು ಇನ್ನೂ ಮೂರುತಿಂಗಳು ಹೀಗೆ ಇರಬೇಕೆಂದು ಶಾಪವಿರುವವರಿಂದ ನೀನು ಇಲ್ಲಿ ಇರುವುದಾದರೆ ಇರು ; ತಂದೆಯ ಮನೆಯಲ್ಲಿ ಇರುವುದಾದರೆ ಇರು ; ನಾನು ಆಮೇಲೆ ಬಂದು ನನ್ನ ರಾಜ್ಯಕ್ಕೆ ಕರೆದುಕೊಂಡು ಹೋಗುವೆನು. ಎನ್ನಲು ಅವಳು ಅಲ್ಲಿಯೆ ಇರಲಿಕ್ಕೆ ಸಮ್ಮತಿಸಿ, ತನ್ನ ಜನರಿಗೆ ಹಿಂದಿರಿಗಿ ಹೋಗಿ ರಾಜನಿಗೆ ಈ ಸಂತೋಷದ ವೃತ್ತಾಂತವನ್ನು ತಿಳಿಸೆಂದು ಹೇಳಿ, ತನ್ನ ಗಂಧರ್ವಪತಿಯೊಡನೆ ಸುಖನಾಗಿ ನದೀ ತೀರದಲ್ಲಿ ವಿಹರಿಸುತ್ತಿದ್ದಳು.

ಮೂರು ತಿಂಗಳಾದ ನಂತರ ತನ್ನ ಮನೆಗೆ ಪತಿಯೊಡನೆ ಬರಲು, ಆಗ ಧೊರೆಯು ಬಹು ಸಂತೋಷಗೊಂಡು, ಆ ರಾಜಪುತ್ರನ ತಂದೆಗೆ ಹೇಳಿಕಳುಹಿಸಿ, ಆರಾಜ್ಯ ಈರಾಜ್ಯ ಎಕರಾಜ್ಯವೂಡಿ, ಅಳಿಯನಿಗೂ ಮಗಳಿಗೂ ಪುನಃ ವಿಜೃಂಭಣೆಯಿಂದ ಉತ್ಸವಗಳನ್ನು ಮಾಡಿ, ಅಳಿಯನಿಗೂ ಮಗಳಿಗೂ ಪಟ್ಟಕಟ್ಟಿ ಸುಖವಾಗಿರುತ್ತಿದ್ದರು.

ಪ್ರಾಚೀನಾರ್ಯ ವಿದ್ಯಾಭ್ಯಾಸ ಕ್ರಮ.

ಲೋಕದಲ್ಲಿ ಸಮಸ್ತ ಮನುಷ್ಯರೂ ವಿಧವಿಧವಾದ ಗುಣಜ್ಞರು. ಇತರ ಎಲ್ಲಾ ಗುಣಗಳಂತೆ ಬುದ್ಧಿಯೂ ಬಗೆಬಗೆಯಾಗಿರುತ್ತದೆ. ಪ್ರಪಂಚದಲ್ಲಿನ ಒಂದೊಂದು ಜನಾಂಗಕ್ಕೆ ಎಲ್ಲಾ ಬಗೆಯ ಕೆಲಸಗಳು ಅಗತ್ಯವಾಗಿರುತ್ತವೆ. ಬೇರೆಬೇರೆ ಕೆಲಸಗಳಿಗೆ ಪ್ರತ್ಯೇಕ ಪ್ರತ್ಯೇಕ ಬುದ್ಧಿ ಶಕ್ತಿಯು ಬೇಕಾಗುವುದು. ಇದರಿಂದಲೇ ಸೃಷ್ಟಿಕರ್ತನು ಪ್ರತಿ ಮನುಷ್ಯನಲ್ಲಿಯೂ ಬೇರೆಬೇರೆಯಾದ ಬುದ್ಧಿಶಕ್ತಿಯನ್ನು ಕೊಟ್ಟಿರುತ್ತಾನೆ.

ಮನುಷ್ಯನ ಎಲ್ಲಾ ಅಂಗಗಳೂ ವ್ಯಾಯಾಮದಿಂದ ಬೆಳೆಯುವಹಾಗೆ ಬುದ್ಧಿಯೂ ಸಾಧಕದಿಂದ ಹೆಚ್ಚುತ್ತದೆ (ಉ. ಸಾಧಿಕಾ ವಿದ್ಯಾ-ಬಾಧಕಂ ದ್ರವ್ಯಂ) ಪ್ರತಿಯೊಬ್ಬ ಮನುಷ್ಯನಲ್ಲಿಯೂ ಇರತಕ್ಕ ಬೇರೆಬೇರೆ ವಿಧವಾದ ಬುದ್ಧಿಯನ್ನು ಒಂದೇ ವಿಧವಾದ ಮಾರ್ಗದಿಂದ ಹೆಚ್ಚಿಸುವುದಕ್ಕಾಗುವುದಿಲ್ಲ. (ಹ್ಯಾಗಂದರೆ ವರ್ತುಲಾಕಾರವಾದ ಪದಾರ್ಥವನ್ನು ಚೌಕನಾಗಿರುವ ಪದಾರ್ಥದೊಳಕ್ಕೆ ಹೊಗಿಸುವುದಕ್ಕೆ ಹ್ಯಾಗೆ ಆಗುವುದಿಲ್ಲವೋ ಹಾಗೆಯೇ) ಒಬ್ಬೊಬ್ಬರಿಗೆ ಒಂದೊಂದು ವಿಧವಾದ ಶಿಕ್ಷಾಕ್ರಮವು ಬೇಕಾಗುವುದು ಹಾಗಿಲ್ಲದಿದ್ದರೆ ಎಲ್ಲಾ ವ್ಯಾಧಿಗಳಿಗೂ ಜಾಪಾಳದ ಮಾತ್ರೆಯನ್ನೇ ಕೊಡುತಲಿದ್ದ ಅಳಲೇಕಾಯಿ ಪಂಡಿತರ ಪಾಂಡಿತ್ಯದಿಂದ ರೋಗಗಳಿಗೆ ಬದಲಾಗಿ ರೋಗಿಗಳೇ ನಿವೃತ್ತರಾದಹಾಗೆ ಏಕ ಮಾರ್ಗ ಪ್ರಯೋಗದಿಂದ ಇದ್ದ ಬುದ್ಧಿಯೂ ನಷ್ಟವಾಗುವುದು.

ಈಯಂಶಿಪ್ರಾಯವನ್ನು ತಿಳಿದು ನಮ್ಮ ಹಿರಿಯರು ಅವರ ಬಾಲಕರಿಗೆ ಬಹಳ ವಿಲಕ್ಷಣವಾದ ಶಿಕ್ಷಾಕ್ರಮವನ್ನೇರ್ಪಡಿಸಿದ್ದರು. ಇದು ಅವರು ಮಾಡಿಕೊಂಡಿದ್ದ ಜಾತಿಭೇದ ರೀತಿಯಿಂದ ವಿಶೇಷವಾಗಿ ಕಳೆಗಟ್ಟಿತ್ತು. ಅದೇನಂದರೆ :—

ಶುದ್ಧಸತ್ವ ಸ್ವಭಾವರಾಗಿಯೂ, ಶಾಂತರಾಗಿಯೂ, ನಿಸ್ಪೃಹರಾಗಿಯೂ, ಸದಾ ಆತ್ಮಧ್ಯಾನಪರರಾಗಿಯೂ, ಬುದ್ಧಿ ಶಕ್ತಿಯನ್ನೇ ಬಹಳ ಹೆಚ್ಚಿಸುವರಾಗಿಯೂ, ಇದ್ದ ಜನರಿಗೆ ಬ್ರಾಹ್ಮಣರೆಂದು ಹೆಸರು. ಇವರು ಸಮಾಜದಲ್ಲಿದ್ದುಕೊಂಡು ಇತರರಿಂದ ತಮ್ಮ ಜೀವನ ಸಾಮಗ್ರಿಯನ್ನೂ ಇನ್ನೂ ಇತರ ವಿಧವಾದ ದೇಹಶಕ್ತಿಯಿಂದ ಸಾಧ್ಯವಾಗಬೇಕಾದ ಫಲಗಳನ್ನೂ ಹೊಂದುತಿದ್ದುದರಿಂದ ಅದಕ್ಕೆ ಬದಲಾಗಿ ಇವರು ಬಾಲಕರಿಗೆಲ್ಲಾ ಅವರವರ ಯೋಗ್ಯತಾನುಸಾರ ವಿದ್ಯಾಭ್ಯಾಸವನ್ನು ಮಾಡಿಸಿಬಿಪರಿಗೆ

ದೊಡ್ಡವರ 'ಆಜ್ಞೆಯಂತೆ ನಡೆದುಕೊಳ್ಳುವುದು' ಎಂದರೆ ಹೇಳಿದ ಹಾಗೆ ಕೇಳುವುದು. ಇದು ಬಾಲಕರು ಅಭ್ಯಾಸಿಸುವ ಎರಡನೆಯ ಪದ್ಧತಿಯು. ಆಜ್ಞೆಯನ್ನು ಶಿರಸಾವಹಿಸಲು ಅಭ್ಯಾಸ ಮಾಡಿದವನೇ ಆಜ್ಞೆಯನ್ನು ಮಾಡುವುದಕ್ಕೆ ಅರ್ಹನು. ಪಾಠಶಾಲೆಗಳಲ್ಲಿ ಉಪಾಧ್ಯಾಯರ ಆಜ್ಞೆಯಂತೆ ನಡೆದುಕೊಳ್ಳುವುದನ್ನು ಬಾಲಕರು ಸಹಜವಾಗಿ ಕಲಿಯುವರು. ಇದು ಬಾಲಕರ ಏಳಿಗೆಗೂ ದೇಶದ ಮೇಲ್ಮೆಗೂ ಸಹಾಯಕಾರಿಯು.

* * *

ಇವೆರಡಕ್ಕಿಂತಲೂ ವಿಶೇಷ ಪ್ರಯೋಜನಕಾರಿಯಾದುದು, ಸಹಪಾಠಿಗಳೊಡನೆ ಬೆರತು ನಡೆದುಕೊಳ್ಳುವಿಕೆ. ಕಾಲನಿಯಮವನ್ನು ಉಲ್ಲಂಘಿಸುವನು ಸ್ವಲ್ಪ ತೊಂದರೆಗೆ ಗುರಿಯಾಗಬಹುದು. ಆಜ್ಞೆಯನ್ನು ವಿಾರಿ ನಡೆಯುವನು ಸಂಭವಿಸಿದ ಕಷ್ಟದಿಂದ ಹೇಗಾದರೂ ವಿಮುಕ್ತನಾದಾನು. ನೆರೆಹೊರೆಯರೊಡನೆ ಬೆರತು ಸ್ನೇಹವಾಗಿರಲು ಅಭ್ಯಾಸವಿಲ್ಲದವನು ಬಹು ದುಃಖಕ್ಕೆ ಈಡಾಗುವನು. ಪಾಠಶಾಲೆಯಲ್ಲಿ ಅನೇಕ ಬಾಲಕರೊಡನೆ ಇರುವುದೂ, ಅಟಪಾಟಗಳಲ್ಲಿ ಸೇರುವುದೂ, ಅವರ ಕಷ್ಟ ಸುಖ ದುಃಖಗಳಲ್ಲಿ ಭಾಗಿಯಾಗುವುದೂ, ವಿದ್ಯಾರ್ಥಿಗಳಿಗೆ ಸ್ವಭಾವವಾಗಿರುವುದು. ಮುಂದೆ ಸಮಾಜದಲ್ಲಿ ಬೆರತು, ಜನರ ಇಂಗಿತವನ್ನು ಕುರಿತು, ಸಹವಾಸಿಗಳಿಗೆ ಹೃದಯಂಗಮವಾಗಿ ನಡೆದುಕೊಳ್ಳುವುದು, ಬಾಲಕರು ಪಾಠಶಾಲೆಯಲ್ಲಿ ಕಲಿತ ಅಮೂಲ್ಯವಾದ ಪಾಠವು.

* * * *

ಇತರ ಬಾಲಕರೊಂದಿಗೆ ಸೇರದೆ, ತನ್ನ ಮನೆಯಲ್ಲಿ ಇದ್ದು ತಾನೇ ದೊಡ್ಡವನೆಂತಲೂ, ತನ್ನ ಸಮಾನವಿಲ್ಲವೆಂತಲೂ, ತನ್ನ ಮತವೇ ಮತವೆಂತಲೂ, ತನ್ನಂತೆ ಸಕಲರೂ ನಡೆಯಬೇಕೆಂತಲೂ, ತನ್ನ ಮಾತಿಗೆ ತನ್ನ ಕೋಪಕ್ಕೆ ಯಾರೂ ಇದಿರಾಗಕೂಡದೆಂತಲೂ ತಿಳಿದಿರುವ ಜನರ ಅವಿದ್ಯತೆಗೆ, ಬಾಲ್ಯದಲ್ಲಿ ಪಾಠಶಾಲೆಯಲ್ಲಿ ಶಿಕ್ಷಿತರಾಗದಿರುವುದೇ ಕಾರಣವೆಂದು ತೋರುವುದು. ಆದುದರಿಂದ ಬಾಲಕರು ಪಾಠಶಾಲೆಗೆ ಹೋಗಿ ವಿದ್ಯೆಯನ್ನು ಕಲಿಯುವುದರಿಂದ ವಿಶೇಷ ಪ್ರಯೋಜನವನ್ನೂ ಲೋಕವ್ಯವಹಾರ ಜ್ಞಾನವನ್ನೂ ಪಡೆಯುವರು.

ಒಬ್ಬೊಬ್ಬನು ಆದಕ್ಕಾಗಿಯೇ ನಿಯತರಾಗಿದ್ದನು. ಆ ಜನಗಳು ಸತ್ಯಸಂಧತೆ ಕರ್ತವ್ಯದಲ್ಲಿ ಶ್ರದ್ಧೆ, ದೇಶಪ್ರೀತಿ ಮುಂತಾದ ಆವಶ್ಯಕಗಳಾದ ಗುಣಗಳುಳ್ಳವರಾಗಿರುತ್ತಿದ್ದರು. ಅಥವಾ ಅಂತಹ ಗುಣಗಳುಳ್ಳವರನ್ನೇ ಆರಿಸಿ ಅವರಲ್ಲಿ ಆ ಹುಡುಗರನ್ನೊಪ್ಪಿಸುತ್ತಿದ್ದರು. ಆದುದರಿಂದ ಹುಡುಗರ ತೇಜಸ್ಸೂ, ವೀರ್ಯವೂ, ಬುದ್ಧಿಯೂ, ನೀತಿಯೂ, ಧರ್ಮವೂ ಒಂದೇಸಮನಾಗಿ ಅಭಿವೃದ್ಧಿ ಹೊಂದುತ್ತಲಿದ್ದವು.

ಈ ಹುಡುಗರಿಗೆ ಮತ್ತೆ ಯಾವ ವಿಧವಾದ ಸಂಸಾರ ಸಂಗವಾದರೂ ಇದ್ದರೆ ನಿರಾಲೋಚನೆಯಿಂದ ಉದ್ದೇಶವು ನೆರವೇರುವುದಿಲ್ಲವೆಂದೆಣಿಸಿ ಅವರಿಗೆ ಮಾತಾಪಿತೃಗಳ ಮರಣ ಉಂಟಾದರೇ ಹೊರ್ತು ಮತ್ಯಾರಾದರೂ ಬಂಧುಮಿತ್ರರು ಗತಿಸಿದರೂ ಆಶೌಚವಿಲ್ಲವೆಂದು ನಿಯಮವನ್ನು ಮಾಡಿದ್ದರು. ಇವರಿಗೆ ಗುರುಶುಶ್ರೂಷೆ ವಿದ್ಯಾಭ್ಯಾಸ ಹೊರತು, ಮತ್ತೇನೂ ಕೆಲಸವೇ ಇರಲಿಲ್ಲ. ಮನೆಮನೆಯಿಂದ ಸಿದ್ಧಾನ್ನವನ್ನು ತಂದು ತಿನ್ನುವದೂ, ಗುರುಗಳ ಆಜ್ಞೆಯಂತೆ ನಡೆಯುವುದೂ ಇತ್ತು. ಹೀಗಿದ್ದುದರಿಂದ ಮನಸ್ಸಿಗೆ ಯಾವ ವಿಘ್ನವಾದ ಕೊರತೆಯೂ ಇಲ್ಲದೆ ದೇಹ, ಬುದ್ಧಿ, ನೀತಿಗಳ ಅಭಿವೃದ್ಧಿಗೆ ಬಹಳ ಅನುಕೂಲ್ಯವಿರುತಲಿತ್ತು. ಮೊದಲು ಮೊದಲು ಅವನಿಗೆ ವೇದ ಮೊದಲಾದವುಗಳನ್ನು ಸಂತೆಹೇಳುತ್ತಿದ್ದುದರಿಂದಲೂ ತನ್ನ ಮನಸ್ಸಿಗೆ ತಿಳಿಯಲೀ ತಿಳಿಯದೇ ಇರಲಿ ಒಂದು ನಿಯಮಿತವಾದ ಹೊತ್ತಿನಲ್ಲಿ ಇಷ್ಟು ಭಾಗವು ಮುಗಿಯಲೇಬೇಕೆಂಬ ಗಾಬರಿ ಇಲ್ಲದ್ದರಿಂದಲೂ ಬಾಲಕರಿಗೆ ಯಾವ ವಿಧವಾದ ಹೊರೆಯೂ ಇರುತ್ತಿರಲಿಲ್ಲ. ಅದೂ ಅಲ್ಲದೆ ಗುರುಗಳು ಅರ್ಥವಿಚಾರದಲ್ಲಿ ಅವರವರ ಬುದ್ಧಿಶಕ್ತಿಗೆ ಕ್ರಮವನ್ನು ಅನುಸರಿಸುತ್ತಿದ್ದರು. ಮುಖ್ಯ ಆ ಹುಡುಗನಿಗೆ ಜ್ಞಾನೋದಯವಾಗಬೇಕೆಂಬದೊಂದು ಹೊರತು ಗುರುಗಳಿಗೆ ಮತ್ತೆ ಯಾವ ವಿಧವಾದ ಆಶೆಯೂ ಇರುತ್ತಿರಲಿಲ್ಲ. ಯಾವಾಗಲೂ ಹುಡುಗನು ತನ್ನನ್ನು ಮುದ್ದು ಮಾಡುವ ಜನಗಳಿಗೆ ದೂರವಾಗಿ ಶಿಕ್ಷೆ ಮಾಡುವರ ಸನ್ನಿಧಿಯಲ್ಲೇ ಇರುತ್ತಿದ್ದುದರಿಂದ ಅವನ ನಡತೆ ಮೊದಲಾದವುಗಳನ್ನು ತಿದ್ದುವುದಕ್ಕೆ ಅನುಕೂಲ ವಂಟಾಗಿತ್ತು.

ಈ ರೀತಿಯಾಗಿ ಎಂಟು ವರುಷಗಳಿಗೆ ಕಮ್ಮಿ ಇಲ್ಲದೇಲೂ ಇಪ್ಪತ್ತು ವರುಷಗಳಿಗೆ ವಿವಾದೇಲೂ ಗುರುಗಳ ಬಳಿಯಲ್ಲಿ ವಿದ್ಯಾಭ್ಯಾಸವನ್ನು ಮಾಡಿ ದೇಶಾಂತರಗಳಲ್ಲಿರುವ ಪಂಡಿತರ ಸಂಪರ್ಕದಿಂದಲೂ ಪ್ರಪಂಚಾನುಭವದಿಂದಲೂ ಜ್ಞಾನೋದಯವುಂಟು ಸೇರ್ಚಿಸಿಕೊಳ್ಳಲು ದೇಶಾಂತರ ಸಂಚಾರ ಮಾಡುವ ಪದ್ಧತಿ ಇತ್ತು. ಆ

ಬೇಕಾದ ಸಮಯದಲ್ಲಿ ಸರಿಯಾದ ಉಪಾಯಗಳನ್ನು ಸೂಚಿಸುತ್ತಿದ್ದರು. ಇದನ್ನು ಮುಂದೆ ವಿವರಿಸಲಾಗುವುದು.

ನಮ್ಮಲ್ಲಿ ಈಗ ಪ್ರಸಿದ್ಧವಾಗಿ ಉಪನಯನವೆಂಬ ಸಂಸ್ಕಾರವನ್ನು ಎಲ್ಲರೂ ಮಾಡುತ್ತಿರುವರಷ್ಟೆ. ಇದು ಹುಡುಗನಿಗೆ ಮದುವೆಯಾಗುವುದಕ್ಕಿಂತ ಮುಂಚೆ ಯಾವಾಗಲಾದರೂ ಒಂದಾವರ್ತಿ ಒಂದು ಜನಿವಾರವನ್ನು ಹಾಕಿ ಸಾಲಾಮಾಡಿ ನೆಂಟರಿಷ್ಟರಿಗೆ ಸಮಾರಾಧನೆಯನ್ನು ಮಾಡಿಸಿ ಆ ಹುಡುಗನನ್ನು ಬ್ರಹ್ಮಚಾರಿಯನ್ನಾಗಲಿ ಅಥವಾ ಅಲ್ಪಸ್ವಲ್ಪ ವಿದ್ಯಾಸಂಪತ್ತನಾದಕೂಡಲೇ ಜೀವನಕ್ಕೆ ಮಾರ್ಗವಿಲ್ಲದಿದ್ದರೂ ಒಂದು ಹೆಣ್ಣು ಹೊಂದಿಸಿಕೊಡುವೆನೆಂಬ ಜೊತೆಗಟ್ಟಿ ಉದ್ದೇಶವಿಲ್ಲದೆ ಹನ್ನೊಂದನ್ನು ಕಳೆಯುವಂತೆ ಮಾಡುವುದಾಗಲಿ ಇಲ್ಲ. ಉಪನಯನವೆಂದರೆ ತಂದೆಗಳು ತಮ್ಮ ತಮ್ಮ ಉದ್ಯೋಗದಲ್ಲಿ ಅನುಕೂಲರಾಗಿರುವಾಗ ತಮ್ಮ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸವನ್ನು ಮಾಡಿಸುವುದಕ್ಕಾಗುವುದಿಲ್ಲವೆಂದೆಣಿಸಿ ಹುಡುಗರು ಹೇಳಿದ ಮಾತುಗಳನ್ನು ಚೆನ್ನಾಗಿ ಮನಸ್ಸಿನಲ್ಲಿಟ್ಟು ಕೇಳುವುದಕ್ಕೂ ಅದರಂತೆ ನಡೆಯುವುದಕ್ಕೂ ಸಮರ್ಥರಾದೊಡನೆ ಅವರನ್ನು ಗುರುಗಳ ಮನೆಗೆ ಕರೆದುಕೊಂಡುಹೋಗಿ ವಿದ್ಯಾಭ್ಯಾಸ ಮಾಡುವುದಕ್ಕೆಂದು ತಿಳಿಯಬೇಕು. "ಉಪ" ಎಂದರೆ ಸನಿಹಕ್ಕೆ "ನಯನ" ಎಂದರೆ ಕರೆದುಕೊಂಡುಹೋಗಿ ಬಿಡೋ ಇದಮಿತ್ಥಂ ಎಂಬ ಅರ್ಥದಿಂದ ಈ ಶಬ್ದವು ಬಾಲಕನನ್ನು ಗುರುಗಳ ಸಮೀಪಕ್ಕೆ ವಿದ್ಯಾಭ್ಯಾಸಕ್ಕಾಗಿ ಕರೆದುಕೊಂಡುಹೋಗಿ ಬಿಡುತ್ತೆನ್ನುವ ನಮ್ಮ ಆರ್ಯರ ಪದ್ಧತಿಯನ್ನು ಸೂಚಿಸುತ್ತದೆ.

ಹೀಗೆ ಅವರನ್ನರಿಗೆ ಬೇಕಾದ ಗುರುಗಳಲ್ಲಿ ಬಿಡಲ್ಪಟ್ಟ ಈ ಶಿಷ್ಯನನ್ನು ಆ ಗುರುಗಳು ತಮ್ಮ ಪುತ್ರರಂತೆ ಭಾವಿಸಿ ಅವರ ಬುದ್ಧಿ ಶಕ್ತಿಗೆ ತಕ್ಕಹಾಗೆ ಸ್ವೇದಾಧ್ಯಾಯನಾದಿ ವಿದ್ಯಾಭ್ಯಾಸವನ್ನು ಮಾಡಿಸುತ್ತಿದ್ದರು. ಮನೆಯಿಲ್ಲದ ಬಡವರಿಂದ ಹಿಡಿದು ಅನೇಕ ಸಾವಿರಾರು ಹೆಚ್ಚಿನ ಹುಡುಗರಿಗೆ ವಿದ್ಯಾಭ್ಯಾಸವು ಸುಲಭವಾಗುವುದು. ಇದಕ್ಕೆ ಇಲ್ಲವೆ ಹುಡುಗರೂ ವಿದ್ಯಾಭ್ಯಾಸವಾದಕೂಡಲೆ ಸಂಸಾರದಲ್ಲಿನ ಮನಸ್ಸು ಸುಖದಮೇಲೆ ಆಸೆಹೆಚ್ಚಾಗಿ ವಿದ್ಯಾಭ್ಯಾಸದ ಗುರಿಯು ಶಿಥಿಲವಾಗುತ್ತ ಬರುವುದಲ್ಲದೆ ನಿಯತವಾದ ಶಿಕ್ಷೆಯು ಇಲ್ಲವೆ ಇರುವುದರಿಂದ ಸರಿಯಾದ ಬ್ರಹ್ಮಚರ್ಯವ್ರತವೂ ಆಗುವುದಿಲ್ಲ. ಈ ಮನಸ್ಸು ಈಗಿನ ವಿದ್ಯಾಭ್ಯಾಸದ ಗುರಿಯನ್ನು ತಿಳಿದವರಿಗೆ ಹೊಸದಲ್ಲ. ಯಾವ ಕೆಲಸವನ್ನಾದರೂ ಚೆನ್ನಾಗಿ ಮಾಡಬೇಕಾದರೆ

ಒಬ್ಬೊಬ್ಬನು ಅದಕ್ಕಾಗಿಯೇ ನಿಯತರಾಗಿದ್ದನು. ಆ ಜನಗಳು ಸತ್ಯಸಂಧತೆ, ಕರ್ತವ್ಯದಲ್ಲಿ ಶ್ರದ್ಧೆ, ದೇಶಪ್ರೀತಿ ಮುಂತಾದ ಆವಶ್ಯಕಗಳಾದ ಗುಣಗಳುಳ್ಳವರಾಗಿರುತ್ತಿದ್ದರು. ಅಥವಾ ಅಂತಹ ಗುಣಗಳುಳ್ಳವರನ್ನೇ ಆರಿಸಿ ಅವರಲ್ಲಿ ಆ ಹುಡುಗರನ್ನಿಪ್ಪಿಸುತ್ತಿದ್ದರು. ಆದುದರಿಂದ ಹುಡುಗರ ತೇಜಸ್ಸು, ವೀರ್ಯವೂ, ಬುದ್ಧಿಯೂ ನೀತಿಯೂ, ಧರ್ಮವೂ ಒಂದೇಸಮನಾಗಿ ಅಭಿವೃದ್ಧಿ ಹೊಂದುತ್ತಲಿದ್ದವು.

ಈ ಹುಡುಗರಿಗೆ ಮತ್ತೆ ಯಾವ ವಿಧವಾದ ಸಂಸಾರ ಸಂಗವಾದರೂ ಇದ್ದರೆ ನಿರಾಲೋಚನೆಯಿಂದ ಉದ್ದೇಶವು ನೆರವೇರುವುದಿಲ್ಲವೆಂದೆಣಿಸಿ ಅವರಿಗೆ ಮಾತಾಪಿತೃಗಳ ಮರಣ ಉಂಟಾದರೇ ಹೊರ್ತು ಮತ್ಯಾರಾದರೂ ಬಂಧುಮಿತ್ರರು ಗತಿಸಿದರೂ ಆಶೌಚವಿಲ್ಲವೆಂದು ನಿಯಮವನ್ನು ಮಾಡಿದ್ದರು. ಇವರಿಗೆ ಗುರುಶುಶ್ರೂಷೆ ವಿದ್ಯಾಭ್ಯಾಸ ಹೊರತು, ಮತ್ತೇನೂ ಕೆಲಸವೇ ಇರಲಿಲ್ಲ. ಮನೆಪನಿಯಿಂದ ಸಿದ್ಧಾನ್ನವನ್ನು ತಂದು ತಿನ್ನುವದೂ, ಗರುಗಳ ಅಜ್ಞೆಯಂತೆ ನಡೆಯುವುದೂ ಇತ್ತು. ಹೀಗಿದ್ದುದರಿಂದ ಮನಸ್ಸಿಗೆ ಯಾವ ವಿಧವಾದ ಕೊರತೆಯೂ ಇಲ್ಲದೆ ದೇಹ, ಬುದ್ಧಿ, ನೀತಿಗಳ ಅಭಿವೃದ್ಧಿಗೆ ಬಹಳ ಅನುಕೂಲ್ಯವಿರುತಲಿತ್ತು. ಮೊದಲು ಮೊದಲು ಅವನಿಗೆ ವೇದ ಮೊದಲಾದವುಗಳನ್ನು ಸಂತೆಹೇಳುತ್ತಿದ್ದುದರಿಂದಲೂ ತನ್ನ ಮನಸ್ಸಿಗೆ ತಿಳಿಯಲೀ ತಿಳಿಯದೇ ಇರಲಿ ಒಂದು ನಿಯಮಿತವಾದ ಹೊತ್ತಿನಲ್ಲಿ ಇಷ್ಟುಭಾಗವು ಮುಗಿಯಲೇಬೇಕೆಂಬ ಗಾಬರಿ ಇಲ್ಲದ್ದರಿಂದಲೂ ಬಾಲಕರಿಗೆ ಯಾವ ವಿಧವಾದ ಹೊರೆಯೂ ಇರುತ್ತಿರಲಿಲ್ಲ. ಅದೂ ಅಲ್ಲದೆ ಗುರುಗಳು ಅರ್ಥವಿಚಾರದಲ್ಲಿ ಅವರವರ ಬುದ್ಧಿಶಕ್ತಿಗೆ ಕ್ರಮವನ್ನು ಅನುಸರಿಸುತ್ತಿದ್ದರು. ಮುಖ್ಯ ಆ ಹುಡುಗನಿಗೆ ಜ್ಞಾನೋದಯವಾಗಬೇಕೆಂಬದೊಂದು ಹೊರತು ಗುರುಗಳಿಗೆ ಮತ್ತೆ ಯಾವ ವಿಧವಾದ ಆಶೆಯೂ ಇರುತ್ತಿರಲಿಲ್ಲ. ಯಾವಾಗಲೂ ಹುಡುಗನು ತನ್ನನ್ನು ಮುದ್ದು ಮಾಡುವ ಜನಗಳಿಗೆ ದೂರವಾಗಿ ಶಿಕ್ಷೆ ಮಾಡುವರ ಸನ್ನಿಧಿಯಲ್ಲೇ ಇರುತ್ತಿದ್ದುದರಿಂದ ಅವನ ನಡತೆ ಮೊದಲಾದವುಗಳನ್ನು ತಿದ್ದುವುದಕ್ಕೆ ಅನುಕೂಲ ವಾಗಿತ್ತು.

ಈ ರೀತಿಯಾಗಿ ೧೨ ವರುಷಗಳಿಗೆ ಕಮ್ಮಿ ಇಲ್ಲದೇಲೂ ಇಪ್ಪತ್ತು ವರುಷಗಳಿಗೆ ವಿವಾದೇಲಾ ಗುರುಗಳ ಬಳಿಯಲ್ಲಿ ವಿದ್ಯಾಭ್ಯಾಸವನ್ನು ಮಾಡಿ ದೇಶಾಂತರಗಳಲ್ಲಿರುವ ಪಂಡಿತರ ಸಂಪರ್ಕದಿಂದಲೂ ಪ್ರಪಂಚಾನುಭವದಿಂದಲೂ ಜ್ಞಾನೋದಯವನ್ನು ಸಂಪಾದಿಸಿಕೊಳ್ಳಲು ದೇಶಾಂತರ ಸಂಚಾರ ಮಾಡುವ ಪದ್ಧತಿ ಇತ್ತು. ಆ

ಬೇಕಾದ ಸಮಯದಲ್ಲಿ ಸರಿಯಾದ ಉಪಾಯಗಳನ್ನು ಸೂಚಿಸುತ್ತಿದ್ದರು. ಇದನ್ನು ಮುಂದೆ ವಿವರಿಸಲಾಗುವುದು.

ನಮ್ಮಲ್ಲಿ ಈಗ ಪ್ರಸಿದ್ಧವಾಗಿ ಉಪನಯನವೆಂಬ ಸಂಸ್ಕಾರವನ್ನು ಎಲ್ಲರೂ ಮಾಡುತ್ತಿರುವರಷ್ಟೆ. ಇದು ಹುಡುಗನಿಗೆ ಮದುವೆಯಾಗುವುದಕ್ಕಿಂತ ಮುಂಚೆ ಯಾವಾಗಲಾದರೂ ಒಂದಾವರ್ತಿ ಒಂದು ಜನಿವಾರವನ್ನು ಹಾಕಿ ಸಾಲಾಮಾಡಿ ನೆಂಟರಿಷ್ಟರಿಗೆ ಸಮಾರಾಧನೆಯನ್ನು ಮಾಡಿಸಿ ಆ ಹುಡುಗನನ್ನು ವಜ್ರಶುಂಠನನ್ನಾಗಲಿ ಅಥವಾ ಅಲ್ಪಸ್ವಲ್ಪ ವಿದ್ಯಾವಂತನಾದಕೂಡಲೇ ಜೀವನಕ್ಕೆ ಮಾರ್ಗವಿಲ್ಲದಿದ್ದರೂ ಒಂದು ಹೆಣ್ಣು ಬೊಂಬೆಯೊಡನೆ ಜೊತೆಗಟ್ಟಿ ಉದ್ದೇಶವಿಲ್ಲದೆ ಧನ್ಯವನ್ನು ಕಳೆಯುವಂತೆ ಮಾಡುವುದಾಗಲಿ ಅಲ್ಲ. ಉಪನಯನವೆಂದರೆ ತಂದೆಗಳು ತಮ್ಮ ತಮ್ಮ ಉದ್ಯೋಗದಲ್ಲಿ ಅಸಕ್ತರಾಗಿರುವಾಗ ತಮ್ಮ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸವನ್ನು ಮಾಡಿಸುವುದಕ್ಕಾಗುವುದಿಲ್ಲವೆಂದೆಣಿಸಿ ಹುಡುಗರು ಹೇಳಿದ ಮಾತುಗಳನ್ನು ಚನ್ನಾಗಿ ಮನಸ್ಸಿನಲ್ಲಿಟ್ಟು ಕೇಳುವುದಕ್ಕೂ ಅದರಂತೆ ನಡೆಯುವುದಕ್ಕೂ ಸಮರ್ಥರಾದೊಡನೆ ಅವರನ್ನು ಗುರುಗಳ ಮನೆಗೆ ಕರೆದುಕೊಂಡುಹೋಗಿ ವಿದ್ಯಾಭ್ಯಾಸ ಮಾಡುವುದಕ್ಕೆಂದು ತಿಳಿಯಬೇಕು. ''ಉಪ'' ಎಂದರೆ ಸವಿಾಪಕ್ಕೆ ''ನಯನಂ'' ಎಂದರೆ ಕರೆದುಕೊಂಡುಹೋಗಿ ಬಿಡೋಣ ಎಂಬೀ ಅರ್ಥವಾರ್ಥದಿಂದ ಈ ಶಬ್ದವು ಬಾಲಕನನ್ನು ಗುರುಗಳ ಸವಿಾಪಕ್ಕೆ ವಿದ್ಯಾಭ್ಯಾಸಕ್ಕಾಗಿ ಕರೆದುಕೊಂಡುಹೋಗಿ ಬಿಡುತ್ತಿದ್ದ ನಮ್ಮ ಆರ್ಯರ ಪದ್ಧತಿಯನ್ನು ಸೂಚಿಸುತ್ತದೆ.

ಹೀಗೆ ಅವರವರಿಗೆ ಬೇಕಾದ ಗುರುಗಳಲ್ಲಿ ಬಿಡಲ್ಪಟ್ಟ ಈ ಶಿಷ್ಯರನ್ನು ಆ ಗುರುಗಳು ತಮ್ಮ ಪುತ್ರರಂತೆ ಭಾವಿಸಿ ಅವರ ಬುದ್ಧಿ ಶಕ್ತಿಗೆ ತಕ್ಕಹಾಗೆ ವೇದಾಧ್ಯಾಯನಾದಿ ವಿದ್ಯಾಭ್ಯಾಸವನ್ನು ಮಾಡಿಸುತ್ತಿದ್ದರು. ಮನೆಯಲ್ಲಿದ್ದು ಓದುವುದರಿಂದ ಹೆಂಗಸರ ಲಾಲನೆ ಮುಂತಾದವುಗಳು ಹೆಚ್ಚಿ ಹುಡುಗರಿಗೆ ವಿದ್ಯಾಭಿಲಾಷೆಯು ಕಡಿಮೆಯಾಗುವುದು. ಇದೂ ಅಲ್ಲದೆ ಹುಡುಗರೂ ಸಾಮ್ರಾಯಸಮರ್ಥರಾದಹಾಗೆಲ್ಲಾ ಸಂಸಾರದಲ್ಲಿನ ವಿಷಯ ಸುಖದಮೇಲೆ ಅಪೇಕ್ಷೆಯುಂಟಾಗಿ ವಿದ್ಯಾಭ್ಯಾಸದ ರುಚಿಯು ಶಿಥಿಲವಾಗುತ ಬರುವುದಲ್ಲದೆ ನಿಯತನಾದ ಶಿಕ್ಷೆಯು ಇಲ್ಲದೆ ಇರುವುದರಿಂದ ಸರಿಯಾದ ಬ್ರಹ್ಮಚರ್ಯರಕ್ಷಣೆಯೂ ಆಗುವುದಿಲ್ಲ. ಈ ವಿಷಯವು ಈಗಿನ ಬಾಲಕರ ಸ್ಥಿತಿಯನ್ನು ತಿಳಿದವರಿಗೆ ಹೊಸದಲ್ಲ. ಯಾವ ಕೆಲಸವನ್ನಾದರೂ ಚನ್ನಾಗಿ ಮಾಡಬೇಕಾದರೆ

ದ್ದರು. ೧೪ನೇ ವಯಸ್ಸಿನಲ್ಲಿ ಆಕ್ಸ್‌ಫರ್ಡ್ ಸಕಲಕಲಾಶಾಲೆಯ ಕಾಪ್ಸ್ ಕೈಸ್ಟ್ ಎಂಬ ಕಾಲೇಜಿಗೆ ಸೇರಿದರು. ಈ ಕಾಲೇಜಿಗೆ ಡಾಕ್ಟರ್ ಕುಕ್ ರವರು ಅಧ್ಯಕ್ಷರಾಗಿದ್ದರು. ಡಾಕ್ಟರ್ ವಿಲಿಯಮ್ಸ್ ರವರು ೨ನೇ ಅಧ್ಯಕ್ಷರಾಗಿದ್ದರು. ಈ ಕಾಲೇಜಿನ ವಿದ್ಯಾರ್ಥಿಗಳಲ್ಲೆಲ್ಲಾ ಇವರೇ ಬಹಳ ಚಿಕ್ಕವಯಸ್ಸಿನವರು. ಎಲ್ಲಾ ವಿದ್ಯಾರ್ಥಿಗಳೂ ಇವರಿಗಿಂತ ಅನೇಕ ವರ್ಷ ಹೆಚ್ಚು ವಯಸ್ಸುಳ್ಳವರಾಗಿದ್ದರು. ಇದಲ್ಲದೆ ಇವರಿಗಿಂತಲೂ ಬಹುಕಾಲದಿಂದ ವ್ಯಾಸಂಗ ಮಾಡತಕ್ಕವರಾಗಿಯೂ ಇದ್ದರು. ಆದಾಗ್ಯೂ ಸ್ವಲ್ಪ ದಿವಸಗಳಲ್ಲಿಯೇ ಇವರ ಬುದ್ಧಿಜಾಡ್ಯವು ಅಸಾಧಾರಣವಾದದ್ದೆಂಬದಾಗಿಯೂ ಇವರ ಪಾಂಡಿತ್ಯಕ್ಕನುಸಾರವಾಗಿದ್ದ ವಿನಯಾದಿ ಸದ್ಗುಣಗಳು ಅಸಾಧಾರಣವಾದವುಗಳೆಂಬದಾಗಿಯೂ, ಪಾಠಕರಿಗೂ ವಿದ್ಯಾರ್ಥಿಗಳಿಗೂ ಕೂಡ ಗೊತ್ತಾಗುತ್ತಾ ಬಂತು. ಆ ಕಾಲದಲ್ಲಿ ಜಸ್ಟಿಸ್ ಕೋಲ್‌ರಿಜ್ಜರನರು ಈ ಪಾಠಶಾಲೆಯಲ್ಲಿ ವಿದ್ಯಾರ್ಥಿಗಳಾಗಿದ್ದರು. ಅವರು ವಯಸ್ಸಿನಲ್ಲಿ ಆರ್ನಲ್ಡ್‌ರವರಿಗಿಂತಲೂ ಬಹಳ ದೊಡ್ಡವರಾಗಿದ್ದರು. ಆದಾಗ್ಯೂ ಆರ್ನಲ್ಡ್‌ರವರ ವೈದುಷ್ಯವನ್ನು ನೋಡಿ ವಿಸ್ಮಿತರಾಗಿ ಅವರೊಡನೆ ಸ್ನೇಹವನ್ನು ಬೆಳಿಸಿದರು. ಅದು ಮೊದಲುಗೊಂಡು ಇವರ ಸ್ನೇಹವು ದಿನೇದಿನೇ ವೃದ್ಧಿಗೆ ಬಂತು. ಆರ್ನಲ್ಡ್‌ರವರು ಅನೇಕ ವಿಷಯಗಳಲ್ಲಿ ಕೋಲ್‌ರಿಜ್ಜರವರಿಗೆ ಲೇಖನಗಳನ್ನು ಬರೆದು ಇದಾರೆ. ಆ ಲೇಖನಗಳನ್ನೆಲ್ಲಾ ಇವರ ಚರಿತ್ರೆಯಲ್ಲಿ ಸೇರಿಸುವುದಕ್ಕೋಸ್ಕರ ಕೋಲ್‌ರಿಜ್ಜರವರು ಕೊಟ್ಟಿರುತ್ತಾರೆ. ಈ ಲೇಖನಗಳ ಅವಲೋಕನಗಳಿಂದ ಕೋಲ್‌ರಿಜ್ಜರವರ ಗುಣಾತಿಶಯಗಳು ಸರ್ವರಿಗೂ ತಿಳಿಯುವುದಕ್ಕೆ ಅವಕಾಶವಾಯಿತು. ಜನರ ಸ್ವಭಾವಗಳು, ಗುಣಾತಿಶಯಗಳು, ಪಾಂಡಿತ್ಯವು, ಅವರ ಕಾರ್ಯಗಳಿಂದಲೂ ಮಾತುಗಳಿಂದಲೂ ಗೊತ್ತಾಗುವುವು. ಆರ್ನಲ್ಡ್‌ರವರ ವೈದುಷ್ಯವೂ ಗುಣಾತಿಶಯಗಳೂ ಕೂಡ ಇವರ ಗ್ರಂಥಗಳಿಂದಲೂ, ಇವರ ಕೆಲಸಗಳಿಂದಲೂ ದಿಗಂತವಿಶ್ರಾಂತವಾಗಿವೆ. ಮನುಷ್ಯನು ಅನುಕರಿಸತಕ್ಕ ಪ್ರಾಣಿಯಾಗಿರುತ್ತಾನೆ. ಮಕ್ಕಳು ತಂದೆತಾಯಿಗಳೇ ಮೊದಲಾದವರನ್ನು ನೋಡಿ ಅವರಂತೆ ನಡೆದುಕೊಳ್ಳಬೇಕೆಂದು ಪ್ರವರ್ತಿಸುವರು. ವಿದ್ಯಾರ್ಥಿಗಳು ಪಾಠಕರನ್ನೂ ಸಹಪಾಠಿಗಳನ್ನೂ ನೋಡಿ ಅವರಂತೆ ತಾವೂ ಆಗಬೇಕೆಂದು ಪ್ರಯತ್ನ ಮಾಡುವರು. ಲೋಕದಲ್ಲಿ ಸಮಸ್ತರೂ ಕೂಡ ತಾವು ಯಾರಸಹವಾಸದಲ್ಲಿರುತ್ತಾರೋ ಅವರಂತೆ ಪರಿಣಮಿಸುತ್ತಾರೆ. ಇದನ್ನು ನೋಡಿಯೇ ಸತ್ಯಸಂಗಕ್ಕಿಂತಲೂ ಉತ್ತಮವಾದ ಸಂಪತ್ತು ಯಾವದೂ ಇಲ್ಲವೆಂದು ನಮ್ಮ ಹಿರಿಯರೂ

ಕಾಲದಲ್ಲಿ ಕಾಶೀಪಟ್ಟಣವು ವಿದ್ಯಾಭಿವೃದ್ಧಿಯಲ್ಲಿ ಅದ್ವಿತೀಯ ಸ್ಥಿತಿಯಲ್ಲಿತ್ತು. ಮತ್ತು ಇಲ್ಲಿ ಪ್ರಖ್ಯಾತಗೊಂಡಿದ್ದ " ಪರಿಷತ್ " ಎಂಬ ಮಹಾಪಂಡಿತ ಸಭೆಯಲ್ಲಿ ಹೋಗಿ ಪ್ರತಿಯೊಬ್ಬರೂ ತೇರ್ಗಡೆಯಾಗಿದ್ದರೆ ಅಂಥವರ ವಿದ್ಯಾಭ್ಯಾಸವು ಪೂರ್ತಿಯಾಯಿತೆಂದು ಭಾವಿಸುತ್ತಿರಲಿಲ್ಲ. ಆದ್ದರಿಂದ ಅಶೇಷರೂ ಕಾಶಿಗೆ ಹೋಗಿಬರುತ್ತಿದ್ದರು ಆಮೇಲೆ ಅನೇಕರು ಆ ಜನ್ಮಬ್ರಹ್ಮಚಾರಿಗಳಾಗಿಯೇ ಇರುತ್ತಿದ್ದರು. ಗೃಹಸ್ಥಾಶ್ರಮವನ್ನು ಅಪೇಕ್ಷಿಸುತ್ತಿದ್ದವರು ಆಮೇಲೆ ಗುರುಗಳಿಗೆ ಯಥೋಚಿತ ದಕ್ಷಿಣೆಯನ್ನು ಕೊಟ್ಟು ಅವರ ಅಪ್ಪಣೆ ಪಡೆದು ತಂದೆತಾಯಿಗಳು ತನಗನುರೂಪಳಾಗಿಯೂ ಗೃಹಸ್ಥಾಶ್ರಮದ ಭಾರವನ್ನು ವಹಿಸಲು ಶಿಕ್ಷಿತಳಾದ ವಿದ್ಯಾವಿನಯದಿಂದೊಪ್ಪುವಳಾಗಿಯೂ ಇದ್ದ ಯುವತಿಯೊಡನೆ ವೈವಾಹಕ್ರಮವನ್ನು ಮಾಡಿಕೊಂಡು ಧರ್ಮ್ಯಕತತ್ಪರರಾಗಿ ಜೀವಿಸುತ್ತಿದ್ದರು. ಇದನ್ನೇ ಈಗ ಮದುವೆಯ ಮುಹೂರ್ತ ನೆರವೇರುವುದಕ್ಕೆ ತತ್ಪೂರ್ವ ಕಾಶೀಯಾತ್ರೆಯಾಗಬೇಕೆಂದು ನಮ್ಮವರು ಹುಡುಗಾಟವನ್ನು ಆಡುತ್ತಿದ್ದಾರೆ.

(ಸಶೇಷ.)

ಜ. ವೆಂಕಟೇಶಯ್ಯ,
ಟಾಡಿ ಮುತ್ಸದ್ದಿ ಹಿಂದೂಪುರ,
ಅನಂತಪುರದ ಜಿಲ್ಲಾ.

ಆರ್ನಲ್ಡ್‌ರವರ ಚರಿತ್ರೆ.

ಆರ್ನಲ್ಡ್‌ರವರ ಬುದ್ಧಿಯು ಬಹಳ ತೀಕ್ಷ್ಣವಾಗಿತ್ತು. ಸಾಮಾನ್ಯವಾಗಿ ಯೂರೋಪಿಯರ್ಯರಲ್ಲಿ ೧೪-೧೦ ವರ್ಷಗಳ ವರೆಗೂ ಆಟಪಾಟಗಳೇ ಮೊದಲಾದ ವ್ಯಾಯಾಮಗಳಲ್ಲಿ ಪ್ರವರ್ತಿಯು ಹೆಚ್ಚಾಗಿಯೂ, ವಿದ್ಯಾಭ್ಯಾಸದಲ್ಲಿ ಪ್ರವೇಶವು ಕಡಮೆಯಾಗಿಯೂ ಇರುವುದು. ೧೪ ವಯಸ್ಸಾದಮೇಲೆ ಅವರು ವ್ಯಾಸಂಗವನ್ನು ಬಲಪಡಿಸಿಕೊಂಡು ಅನಂತರ ೬-೩ ವರ್ಷಗಳೊಳಗಾಗಿ ಅದ್ಭುತವಾದ ಪಾಂಡಿತ್ಯವನ್ನು ಸಂಪಾದಿಸುವರು. ಆರ್ನಲ್ಡ್‌ರವರ ಪ್ರವರ್ತಿಯು ವಿಲಕ್ಷಣವಾಗಿತ್ತು. ಸಾಮಾನ್ಯವಾಗಿ ಜನಗಳು ಆಟಪಾಟಗಳೇ ಮೊದಲಾದ ವಿಹಾರಗಳಲ್ಲಿ ಕಳೆಯುವ ಕಾಲವನ್ನು ಇವರು ಅನೇಕ ಉದ್ಗ್ರಂಥಗಳನ್ನು ವ್ಯಾಸಂಗ ಮಾಡುವುದರಲ್ಲಿ ವಿನಿಯೋಗಿಸುತ್ತಿ

ನಮ್ಮ ಇಂಗ್ಲೀಷ್ ಪಾಠಶಾಲೆಗಳಲ್ಲಿಯೂ ಕಾಣಬರುತ್ತಲಿದೆ. ಪೂರ್ವಿಕರು ಗುರುವನ್ನು ಸಾಕ್ಷಾತ್ ಪರಬ್ರಹ್ಮ ಸ್ವರೂಪವೆಂದು ಕಾಣುತ್ತಿದ್ದರು. ಹೀಗೆ ಕಾಣುವದಕ್ಕೆ ಕಾರಣವುಂಟು. ಗುರುಗಳಾದವರು ಶಾಸ್ತ್ರಮುಖದಿಂದ ಸಕಲ ಧರ್ಮ ತತ್ವಗಳನ್ನೂ ತಿಳಿಸಿಕೊಟ್ಟು ಅಂಧಕಾರವನ್ನು ಹೋಗಲಾಡಿಸುವದಕ್ಕೆ ಸೂರ್ಯನು ಸಾಧಕವಾಗಿರುವಂತೆ ಅಜ್ಞಾನಾಂಧಕಾರವನ್ನು ಹೋಗಲಾಡಿಸುವದಕ್ಕೆ ಸಾಧನಭೂತರಾಗುತ್ತಾರೆ. ಅಜ್ಞಾನಾಂಧಕಾರವನ್ನು ಹೋಗಲಾಡಿಸತಕ್ಕವನೇ ಪರಬ್ರಹ್ಮನು. ಅಂಥಾ ಕೆಲಸವನ್ನು ಗುರುಗಳು ಮಾಡುವದರಿಂದ ಇವರನ್ನು ಸಾಕ್ಷಾತ್ ಪರಬ್ರಹ್ಮಸ್ವರೂಪವೆಂಬದಾಗಿ ನಮ್ಮ ಹಿರಿಯರು ಎಣಿಸುತ್ತಿದ್ದರು. ಹೀಗೆ ಎಣಿಸುವದರಲ್ಲಿ ಲೌಕಿಕ ಫಲ ಒಂದು ಉಂಟು. ನಿಸರ್ಗವಾದ ಭಕ್ತಿಯುಳ್ಳ ಶಿಷ್ಯರಲ್ಲಿ ಅನ್ಯಾದೃಶವಾದ ಪ್ರೀತಿಯು ಗುರುಗಳಿಗೆ ಹುಟ್ಟುವದು ಮನುಷ್ಯ ಧರ್ಮವಾಗಿರುವದು. ವಿದ್ಯಾರ್ಥಿಗಳು ತಮ್ಮ ಪ್ರಯೋಜನದ ಮೇಲಾದರೂ ದೃಷ್ಟಿಯನ್ನಿಟ್ಟು ಗುರುಭಕ್ತಿಯನ್ನಿಟ್ಟುಕೊಂಡಿದ್ದರೆ ಅದು ಕಾರ್ಯಕಾರಿಯಾಗಿರುವದು. ಆರ್ನಲ್ಡ್‌ರವರು ಪಾಠಕರಲ್ಲಿ ವಿಶೇಷ ಭಕ್ತಿಯುಳ್ಳವರಾಗಿದ್ದರು. ಇವರ ಅಸಾಧಾರಣವಾದ ಪಾಂಡಿತ್ಯಕ್ಕೆ ಇದೇ ಕಾರಣವಾಯಿತು. ಯಾಕಂದರೆ ಇವರ ಗುರುಗಳೆಲ್ಲರೂ ಇವರಲ್ಲಿ ಪ್ರಶ್ನನಿರ್ವಿಶೇಷವಾದ ಪ್ರೀತಿಯನ್ನಿಟ್ಟು ಸರ್ವ ವಿಧದಲ್ಲಿಯೂ ಇವರು ವಿಶೇಷ ಪಾಂಡಿತ್ಯವನ್ನು ಹೊಂದುವದಕ್ಕೆ ಅನೇಕ ವಿಧಗಳಲ್ಲಿ ಸಹಾಯಮಾಡಿದರು. ಈ ವಿಷಯವನ್ನೂ ನಮ್ಮ ಪೂರ್ವಿಕರಿಗೆ ಇದ್ದ ಗುರುಭಕ್ತಿಯನ್ನೂ ಪರ್ಯಾಲೋಚಿಸಿ ನಮ್ಮ ದೇಶದ ವಿದ್ಯಾರ್ಥಿಗಳು ಅವರ ಮೇಲಾ ಪದ್ಧತಿಯನ್ನು ಅನುಸರಿಸಿದರೆ ವೃದ್ಧಿಗೆ ಬರುವರು.

ವ್ಯಾಕರಣಶಾಸ್ತ್ರ.

ಸಪ್ತಮೀವಿಭಕ್ತಿ ಪ್ರಕರಣಂ

ಸಪ್ತಮೀ ವಿಭಕ್ತಿಯು;—ಒಳ್, ಅಲ್ಲ, ಎಂಬ ಪ್ರತ್ಯಯಗಳೇ, ಇವುಗಳಲ್ಲಿ ಒಳ್, ಎಂಬುವುದಕ್ಕೆ ಹಳೆಗನ್ನಡ ಗ್ರಂಥಗಳಲ್ಲಿ ಮಾತ್ರ ಪ್ರಚುರಪ್ರಯೋಗವಿರುವುದು.

ಕೂಡ ಹೇಳಿರುತ್ತಾರೆ. ಒಳ್ಳೇ ಗುರುಗಳೂ, ಗುಣಾಢ್ಯರಾದ ಸಹಪಾಠಿಗಳೂ, ನಿರ್ದುಷ್ಟವಾದ ಸಹವಾಸವೂ ಪುಣ್ಯಪರಿಪಾಕದಿಂದ ದೊರಿಯಬೇಕೇ ಹೊರ್ತು ಬೇರೆ ಅಲ್ಲ. ಸತ್ಸಂಗದ ಜೊತೆಗೆ ಸದ್ಗ್ರಂಥಾವಲೋಕನವೂ ಕೂಡ ಸರಿಯಾದ ಕಾಲದಲ್ಲಿ ಪುಣ್ಯಪರಿಪಾಕದಿಂದಲೇ ದೊರಿಯುವುದು. ಆರ್ನಲ್ಡ್‌ರವರಿಗೆ ಬಹಳ ವಿದ್ವಾಂಸರಾದ ಪಾಠಕರು ಸಿಕ್ಕಿದರು. ರಾಜರು ಹ್ಯಾಗೋ ಪ್ರಜೆಗಳು ಹಾಗೆ, ಗುರುಗಳು ಹ್ಯಾಗೋ ಶಿಷ್ಯರೂ ಹಾಗೆ ಎಂಬ ಲೋಕೋಕ್ತಿಯು ಇವರಲ್ಲಿ ಸತ್ಯವಾಗಿತ್ತು. ಇವರ ಗುರುಗಳಾದ ಡಾಕ್ಟರ್ ಕುಕ್ ರವರ ಪಾಠಪ್ರವಚನಗಳು ಕೇವಲಮಾತ್ರದಿಂದಲೇ ಜ್ಞಾಪಕವನ್ನುಂಟುಮಾಡತಕ್ಕವುಗಳಾಗಿದ್ದವು. ಅವರ ಸಹನವು ಅವರ ಇಂದ್ರಿಯ ನಿಗ್ರಹವು ಅವರ ದಯಾರ್ದ್ರವಾದ ಹೃದಯವು, ಅವರ ಭೂತದಯೆಯು ಇವುಗಳೆಲ್ಲಾ ಕಾಲೇಜಿನಲ್ಲಿ ಮಾತ್ರವೇ ಅಲ್ಲದೆ ಆ ಪಟ್ಟಣದಲ್ಲಿ ಸರ್ವರಿಂದಲೂ ಶ್ಲಾಘಿಸಲ್ಪಡುತ್ತಿದ್ದವು. ಇವರ ಜೊತೆಗೆ ರೆವರೆಂಡ್ ಟಿ. ಬ್ರಿಜ್ಜಸ್ ಎಂಬುವರೂ ಕೂಡ ಈ ಪಾಠಶಾಲೆಯಲ್ಲಿ ಉಪನ್ಯಾಸಕರಾಗಿದ್ದರು. ಇವರು ಬಹಳ ಸರಸಿಗಳಾಗಿಯೂ, ವಿದ್ಯಾರ್ಥಿಗಳ ವಿಷಯದಲ್ಲಿ ಅನನ್ಯಾದೃಶನಾದ ಪ್ರೀತಿಯುಳ್ಳವರಾಗಿಯೂ, ಅಪಾರ್ಥಿತವಾಗಿ ಎಲ್ಲಾ ವಿದ್ಯಾರ್ಥಿಗಳ ಬಳಿಗೂ ಹೋಗಿ ಕಾಲೇಜಿನಲ್ಲಿ ಹೇಳಿಕೊಡುವವರ ಜೊತೆಗೆ ಕಾಲೇಜು ಆದಮೇಲೂ ಸರಿಯಾಗಿ ವ್ಯಾಸಂಗ ಮಾಡುವ ರೀತಿಯನ್ನು ಉಪದೇಶ ಮಾಡುವುದರಲ್ಲಿ ಆಸಕ್ತರಾಗಿಯೂ ಇದ್ದರು. ಇವರಿಗೆ ಅಕಾಲಮರಣವು ಉಂಟಾದ್ದರಿಂದ ಆರ್ನಲ್ಡ್‌ರವರ ಸಹಪಾಠಿಗಳೆಲ್ಲರೂ ಅತ್ಯಂತವಾಗಿ ವ್ಯಸನಪಟ್ಟರು. ಆದರೆ ಆರ್ನಲ್ಡ್‌ರವರು ಯಾವಜ್ಜೀವವೂ ಅವರ ವೈದುಷ್ಯವನ್ನೂ, ಪ್ರೀತಿಯನ್ನೂ ಸ್ಮರಿಸಿಕೊಂಡು ಸಂತಾಪಪಡುತ್ತಿದ್ದರು. ಗುರುಭಕ್ತಿಯು ನಮ್ಮಲ್ಲಿರುವಂತೆ ಪಾಶ್ಚಾತ್ಯರಲ್ಲಿಲ್ಲವೆಂದು ಅನುಭವಶಾಲಿಗಳಾದ ಅನೇಕರು ಹೇಳುತ್ತಾರೆ. ಆದರೆ ಆರ್ನಲ್ಡ್‌ರವರ ಗುರುಭಕ್ತಿಯು ನಮ್ಮ ದೇಶಿಯರ ಗುರುಭಕ್ತಿಗಿಂತಲೂ ಕಡಮೆಯಾಗಿತ್ತೆಂದು ಹೇಳುವುದಕ್ಕಾಗುವದಿಲ್ಲ. ಆದಾಗ್ಯೂ ಪಾಶ್ಚಾತ್ಯರಲ್ಲಿ ಇಂಥಾ ಗುಣಾತಿಶಯು ವುಳ್ಳವರು ಬಹಳ ವಿರಳನಾಗಿರುವುದರಿಂದಲೇ ಆರ್ನಲ್ಡ್‌ರವರ ಮಹಿಮೆಯು ಲೋಕೋತ್ತರವಾಗಿ ಪರಿಣಮಿಸಿತು. ನವೀನರಾದ ಪಾಶ್ಚಾತ್ಯರಲ್ಲಿಯೂ, ನಮ್ಮ ದೇಶೀಯರಲ್ಲಿಯೂ ವಸಿಷ್ಠರೇ ಮೊದಲಾದವರಂತಿರುವ ಗುರುಗಳೂ ಅಪೂರ್ವ, ಅವರ ಶಿಷ್ಯರಂತೆ ಗುರುಭಕ್ತಿಯುಳ್ಳವರೂ ಅಪೂರ್ವ. ಪಾಶ್ಚಾತ್ಯರಲ್ಲಿಯೂ ಕೂಡ ಗುರುಭಕ್ತಿಯು ಕಡಮೆಯಾಗುತ್ತಲಿದೆ. ಈ ನ್ಯೂನತೆಯೂ

ಗದ್ದೆಯೂ, ಪ್ರವಾಹದಲ್ಲಿರುವುದು ಅಸಂಭವವಾದುದರಿಂದ ಗಂಗಾ ಸವಿಾಪದಲ್ಲೂ, ಹೊಳೆಯ ಸವಿಾಪದಲ್ಲೂ ಇರುವುದು ಎಂದು ಅರ್ಥ ತೋರುವುದು, ಆದುದರಿಂದ ಇದನ್ನು ಸಾವಿಾಪಕಾಧಿಕರಣವೆಂದು ತಿಳಿಯಬೇಕು.

ನಿರ್ಧಾರಣವೆಂದರೆ, ಜಾತಿಯಿಂದಾಗಲಿ, ಗುಣಗಳಿಂದಾಗಲಿ, ಕ್ರಿಯೆಯಿಂದಾಗಲಿ, ಒಂದು ಗುಂಪಿನ ದೆಸೆಯಿಂದ ಒಂದಾ ಭಾಗವನ್ನು ಬೇರೆ ತೆಗೆದುಕೊಳ್ಳುವುದಕ್ಕೆ ಹೆಸರು. ಅಂತಹ ನಿರ್ಧಾರಣಾರ್ಥದಲ್ಲಿ ಯಾವ ಗುಂಪಿನಿಂದ ಬೇರೆ ತೆಗೆದುಕೊಳ್ಳಲ್ಪಡುವುದೊ, ಆ ಸಮುದಾಯಬೋಧಕವಾದ ಶಬ್ದಗಳ ಮೇಲೆ ಸಪ್ತವಿಾ ಬರುವುದು. ಇದಕ್ಕೆ ಕ್ರಮವಾಗಿ ಉದಾಹರಣೆಯು ಈ ಕೆಳಗೆ ಬರೆಯಲ್ಪಡುವುದು.

ಜಾತಿಯಿಂದ ಬೇರ್ಪಡಿಸುವುದಕ್ಕೆ,-ಮಾನವರಲ್ಲಿ ಬ್ರಾಹ್ಮಣರು ಉತ್ತಮರು, ಪುರುಷರಲ್ಲಿ ಕ್ಷತ್ರಿಯರು ಶೂರರು. ಇಲ್ಲಿ, ಮಾನವ ಜಾತಿಯಲ್ಲಿ ಬ್ರಾಹ್ಮಣ ಜಾತಿಯು ಉತ್ತಮವೆಂದೂ, ಪುರುಷ ಜಾತಿಯಲ್ಲಿ ಕ್ಷತ್ರಿಯ ಜಾತಿಯವರು ಶೂರರೆಂದು ತೋರುವುದರಿಂದ ಜಾತಿಯು ನಿಮಿತ್ತವಾಗಿ ಮಾನವ ಪುರುಷ ಸಮುದಾಯದಿಂದ ಬ್ರಾಹ್ಮಣ ಕ್ಷತ್ರಿಯರನ್ನು ಬೇರ್ಪಡಿಸಿದ್ದರಿಂದ ಸಮುದಾಯ ಬೋಧಕವಾದ ಮಾನವಪುರುಷ ಶಬ್ದಗಳಮೇಲೆ ಸಪ್ತವಿಾ ಬಂದಿರುವುದು. ಇದೇ ನಿರ್ಧಾರಣವಿಭಕ್ತಿಯೆನ್ನುವುದು. ಹೀಗೆಯೇ ಮುಂದಿನ ಉದಾಹರಣೆಗಳಲ್ಲೂ ಊಹಿಸಿಕೊಳ್ಳುವುದು.

ಗುಣದಿಂದ ಬೇರ್ಪಡಿಸಿದ್ದಕ್ಕೆ,—ಅವರಲ್ಲಿ ಓಡುವನು ಕಾಲ್ವೇಗ, ಹಣ್ಣುಗಳಲ್ಲಿ ಬೀಳುವುದು ಕಳಿತಿರುವುದು. ಇತ್ಯಾದಿಗಳನ್ನು ಪ್ರಯೋಗಗಳಿಂದ ಪ್ರಕರಣಾನುಸಾರ ಊಹಿಸಿಕೊಳ್ಳುವುದು.

ಸಾಧುನಿಪುಣಾರ್ಥಕ ಶಬ್ದಗಳಿದ್ದಾಗ ಪೂಜ್ಯವಾಚಕಕ್ಕೆ,-ತಾಯಲ್ಲಿ ಸಾಧು, ಗುರುಗಳಲ್ಲಿ ಒಳ್ಳೆಯವನು. ಪೂಜೆಯಲ್ಲಿ ಜಾಣನು. ವಿದ್ಯೆಯಲ್ಲಿ ನಿಪುಣನು, ಚಿತ್ರದಲ್ಲಿ ಕುಶಲನು. ಇವೇ ಮೊದಲಾದವುಗಳನ್ನು ಉಪಪದವಿಭಕ್ತಿಯೆಂದು ತಿಳಿಯಬೇಕು. ಮೇಲೆ ಹೇಳಿರುವುದೆಲ್ಲ ಕ್ರಿಯಾನಿಮಿತ್ತಕವಾದುದರಿಂದ ಕಾರಕವಿಭಕ್ತಿಯೆಂದು ತಿಳಿದುಕೊಳ್ಳಬೇಕು.

ಹೀಗೆ ಸಂಸ್ಕೃತಭಾಷಾರೀತಿಯಲ್ಲಿ ಸಪ್ತವಿಭಕ್ತಿಗಳನ್ನು ಹೇಳಿ ಸಂಬೋಧನ ವಿಭಕ್ತಿಯನ್ನೂ ಎಲ್ಲಾ ವ್ಯಾಕರಣಕಾರರೂ ಹೇಳಿರುವುದರಿಂದ ಆ ಮಾರ್ಗವನ್ನೇ ಅನುಸರಿಸಿ ಈ ಉಪನ್ಯಾಸದಲ್ಲಿ ಬಾಲಕರ ತಿಳುವಳಿಕೆಗಾಗಿ ಅವುಗಳ ಸ್ವರೂಪವನ್ನೂ

ಈಗಿನ ಹೊಸಕನ್ನಡ ಗ್ರಂಥಗಳಲ್ಲಿ ಬರೆಯುವ ವಾಡಿಕೆಯಿಲ್ಲ. 'ಅಲ್ಲಿ' ಎಂಬುವು ದನ್ನು ಮಾತ್ರ ಉಪಯೋಗಿಸುತ್ತಾರೆ. ಪ್ರಾಚೀನ ಭಾಷಾ ವ್ಯಾಕರಣಕಾರರೆಲ್ಲರೂ ಇದನ್ನು ಪ್ರತ್ಯಯವೆಂದು ಹೇಳಿರುವರು. ಇದಕ್ಕೆ ಶಬ್ದಾನುಶಾಸನದಲ್ಲಿ,—ಒಳಶ್ಶಲ್ಲಿಸಿ, ಎಂಬ ಸೂತ್ರದಿಂದ ಒಳ್ ಪ್ರತ್ಯಯಕ್ಕೆ ಶಲ್ಲಿ, ಎಂಬುವುದು ಆದೇಶವಾಗುವುದೆಂದು ವಿಧಿಸಿರುವುದು. ಆದರೆ ಅಲ್ಲ ಇಲ್ಲ, ಎಂಬ ಅವ್ಯಯಗಳು ಸಪ್ತಮ್ಯರ್ಥದಲ್ಲೆ ರೂಢಿಯಾಗಿರುವುದರಿಂದ ಅವುಗಳನ್ನು ಷಷ್ಠ್ಯಾದಿವಿಭಕ್ತ್ಯಂತ ಶಬ್ದಗಳ ಮೇಲೆ ಸೇರಿಸಿ ಪ್ರಯೋಗಮಾಡಲು, ಮನೆಯಲ್ಲಿ ತೋಟದಲ್ಲಿ, ಮೊದಲಾದ ಪ್ರಯೋಗಗಳೆಲ್ಲವೂ ಸಿದ್ಧಿಸುವುದು. ಆದುದರಿಂದ ಅಲ್ಲಿ, ಎಂಬುವುದನ್ನು ಸಪ್ತಮೀ ವಿಭಕ್ತಿ ಪ್ರತ್ಯಯವನ್ನಾಗಿ ಎಣಿಸುವುದು ಅಷ್ಟು ಪ್ರಯೋಜನಕರವಲ್ಲವೆಂದು ತೋರುವುದು.

ಈ ಸಪ್ತಮಿಯು ಅಧಿಕರಣಾರ್ಥದಲ್ಲೂ, ನಿರ್ಧಾರಣಾರ್ಥದಲ್ಲೂ, ಸಾಧು ನಿಶ್ಚಣಾರ್ಥಕ ಶಬ್ದಗಳ ಯೋಗವಿದ್ದಾಗ ಪೂಜ್ಯಾರ್ಥದಲ್ಲೂ, ಪ್ರಯೋಗಿಸುವ ಲಿಂಗಗಳ ಮೇಲೆ ಬರುವುದು.

ಅಧಿಕರಣವೆಂದರೆ ಕರ್ತೃವಿಗಾಗಲಿ ಕರ್ಮಕ್ಕಾಗಲಿ ಆಧಾರಭೂತವಾದುದೆಂದರ್ಥವಾಗುವುದು. ಇಂತಹ ಅಧಿಕರಣವು ನಾಲ್ಕು ತೆರವಾಗಿರುವದೆಂದು ಹಿಂದಿನ ಸಂಜ್ಞಿಕೆಯಲ್ಲಿ ಹೇಳಲ್ಪಟ್ಟಿದೆ. ಈ ನಾಲ್ಕಕ್ಕೂ ಕ್ರಮವಾಗಿ ಇಲ್ಲಿ ಉದಾಹರಣೆಗಳು ಹೇಳಲ್ಪಡುವವು.

ಔಪಶ್ಲೇಷಿಕಾಧಿಕರಣಕ್ಕೆ, ಹಾಸಿಗೆಯಲ್ಲಿ ಮಲಗಿದನು. ಮನೆಯಲ್ಲಿ ಇದ್ದನು. ಇಲ್ಲಿ ಹಾಸಿಗೆ ಮನೆಗಳ ಒಂದು ಭಾಗ ಮಾತ್ರವೇ ಕರ್ತೃವಿಗೆ ಆಧಾರವಾಗಿರುವುದರಿಂದ ಇದನ್ನು ಔಪಶ್ಲೇಷಿಕಾಧಿಕರಣವೆಂದು ತಿಳಿಯಬೇಕು.

ವೈಷಯಿಕಕ್ಕೆ, ಆಕಾಶದಲ್ಲಿ ಹಕ್ಕಿ, ಮೋಕ್ಷದಲ್ಲಿ ಇಚ್ಛೆ, ಇಲ್ಲಿ ಆಕಾಶ ಮೋಕ್ಷಗಳು ಹಕ್ಕಿಗೂ ಇಚ್ಛೆಗೂ ವಿಷಯಗಳಾಗಿ ತೋರುವುದರಿಂದ ವೈಷಯಿಕಾಧಿಕರಣವೆಂದು ತಿಳಿಯತಕ್ಕದ್ದು.

ವ್ಯಾಪಕಕ್ಕೆ, ಎಳ್ಳೊಳೆಣ್ಣೆ, ಹಾಲಿನಲ್ಲಿ ಮಧುರಂ, ಇಲ್ಲಿ ಎಳ್ಳೆಲ್ಲಿ ಎಣ್ಣೆಯೂ ಹಾಲಿನೆಲ್ಲಿ ಮಾಧುರ್ಯವೂ, ಎಲ್ಲಾ ಭಾಗದಲ್ಲೂ ವ್ಯಾಪಿಸಿಕೊಂಡಿರುವದರಿಂದ ವ್ಯಾಪಕಾಧಿಕರಣವೆಂದು ತಿಳಿಯಬೇಕು.

ಸಾಮೀಪಕಕ್ಕೆ, ಗಂಗೆಯಲ್ಲಿ ಹಳ್ಳಿ, ಹೊಳೆಯಲ್ಲಿ ಗದ್ದೆ, ಇಲ್ಲಿ ಹಳ್ಳಿಯೂ,

ತ್ತದೆ. ಹದವಾಗಿ ಕೊಳೆಯದೆ ಗೊಬ್ಬರ ಸುಟ್ಟುಹೋಗುವುದು. ಮತ್ತು ಗೊಬ್ಬರದ ಲ್ಲಿರುವ ಸ್ವಲ್ಪ ಆಹಾರವಸ್ತುವೂ ಮಳೆ ನೀರಿನಲ್ಲಿ ಕರಗಿ ಹಾಳಾಗುವುದು.

ಗೊಬ್ಬರದ ಕುಪ್ಪೆಯಲ್ಲಿ ಹೆಚ್ಚು ವಾಯು ಪ್ರವೇಶಿಸಿದರೆ ಅದು ಸುಟ್ಟು ಹೋಗುವುದರಿಂದ ಬೂದಿ ಬಣ್ಣದ ಗೊಬ್ಬರವಾಗುತ್ತದೆ; ವಾಯು ಮಿತವಾಗಿ ಪ್ರವೇಶಿಸಿದರೆ ಹದವಾಗಿ ಕೊಳೆಯುವುದರಿಂದ ಕಪ್ಪುಬಣ್ಣದ ಗೊಬ್ಬರವಾಗುತ್ತದೆ. ಬೂದಿಬಣ್ಣದ ಗೊಬ್ಬರದಲ್ಲಿ ನೈಟ್ರೊಜನ್ ಬಹಳ ಕಡಮೆ. ಮತ್ತು ಅದರಿಂದಾಗುವ ಪ್ರಯೋಜನವೂ ಕಡಮೆ. ಕಪ್ಪುಬಣ್ಣದ ಗೊಬ್ಬರದಲ್ಲಿ 'ಹ್ಯೂಮಸ್' ಹೆಚ್ಚಾಗಿರುವುದರಿಂದ ಎಲ್ಲಾ ವಿಷಯದಲ್ಲಿಯೂ ಉತ್ತಮವಾಗಿದೆ.

ಗೊಬ್ಬರದ ರಾಸಿ ಕೊಳೆಯುವಾಗ ಅಮೋನಿಯಂ ಉಂಟಾಗುತ್ತದೆ. ರಾಸಿಯಲ್ಲಿ ಹೆಚ್ಚು ವಾಯು ಪ್ರವೇಶಿಸಿದರೆ ಇಂಗಾಲಾಮ್ಲ (CO_2) ಹೆಚ್ಚಾಗಿ ಉಂಟಾಗುತ್ತದೆ. ಇವೆರಡೂ ಸೇರುವುದರಿಂದ ಅಮೋನಿಯಂ ಕಾರ್ಬೋನೇಟ್ ($(NH_4)_2CO_3$) ಉಂಟಾಗುತ್ತದೆ. ಅಮೋನಿಯಂ ಕಾರ್ಬೋನೇಟ್ ವಾಯುವಿನಲ್ಲಿ ಅವಿಯಾಗಿ ಸೇರಿಹೋಗುವ ಗುಣವನ್ನು ಪಡೆದಿರುವುದರಿಂದ ಅಮೂಲ್ಯ ಸಸ್ಯಾಹಾರ ವಸ್ತುವಾದ ಅಮೋನಿಯಂ (NH_3) ಈ ಮಾರ್ಗದಲ್ಲಿ ಹಾಳಾಗುತ್ತದೆ. ಗೊಬ್ಬರದ ರಾಸಿಯಲ್ಲಿ ವಾಯು ಹೆಚ್ಚಾಗಿ ಪ್ರವೇಶ ಮಾಡಿದ್ದರೆ ಈ ರೀತಿಯಲ್ಲಿ ಅಮೋನಿಯಂ ಹಾಳಾಗುವುದಕ್ಕೆ ಮಾರ್ಗವಿರುವುದಿಲ್ಲ.

ರಾಸಿಯಲ್ಲಿ ವಾಯು ಮಿತವಾಗಿ ಪ್ರವೇಶ ಮಾಡುವಹಾಗೆ ಅದನ್ನು ಆಗಾಗ್ಗೆ ಅದಮುತ್ತಿದ್ದರೆ ಸರಿಯಾಗಿ ಕೊಳೆಯುವುದರಿಂದ 'ಹ್ಯೂಮಿಕ್ಯಾಸಿಡ್' 'ಅಲ್ಮಿಕಾಕ್ಯಾಸಿಡ್' ಎಂಬ ಆಮ್ಲಗಳು ಉಂಟಾಗುತ್ತವೆ. ಇಂಗಾಲಾಮ್ಲ ಹೆಚ್ಚಾಗಿ ಉಂಟಾಗುವುದಿಲ್ಲ. ಉಂಟಾಗುವ ಅಮೋನಿಯವಿನೊಡನೆ ಇವು ಸೇರಿ 'ಅಮೋನಿಯಂಹ್ಯೂಮೇಟ್' 'ಅಮೋನಿಯಂ ಅಲ್ಮೇಟ್' ಎಂಬ ಲವಣಗಳಾಗುತ್ತವೆ. ಈ ಗೊಬ್ಬರದ ಲವಣಗಳು ಅವಿಯಾಗಿ ವಾಯುವಿನಲ್ಲಿ ಸೇರಿಹೋಗುವ ಗುಣವನ್ನು ಪಡೆದಿಲ್ಲ; ಆದರೆ ನೀರಿನಲ್ಲಿ ಸುಲಭವಾಗಿ ಕರಗುತ್ತವಾದುದರಿಂದ ಚನ್ನಾಗಿ ಕೊಳೆತ ಗೊಬ್ಬರವನ್ನು ಮಳೆಗೆ ಒಡ್ಡಿದರೆ ಉಪಯೋಗವಾದ ಗೊಬ್ಬರದ ಲವಣಗಳು ಹಾಳಾಗುತ್ತವೆ.

ದನಕರುಗಳ ಗೊಬ್ಬರವನ್ನು ಸರಿಯಾಗಿ ಮಾಡಬೇಕಾದರೆ ವಾಯು ಅದರಲ್ಲಿ ಮಿತವಾಗಿ ಪ್ರವೇಶ ಮಾಡುವಹಾಗೆ ರಾಸಿಯನ್ನು ಆಗಾಗ್ಗೆ ಅದಮುತ್ತಿರಬೇಕೆಂತಲೂ

ಉದಾಹರಣೆಗಳನ್ನೂ ಸಂಗ್ರಹಿಸಿ ಹೇಳಲ್ಪಟ್ಟಿರುವುದು. ಭಾಷೆಯ ಸ್ವಭಾವವನ್ನು ಬಲ್ಲವರು ಇದಕ್ಕೂ ಅತಿಶಯವಾಗಿ ಪ್ರಯೋಗಮಾರ್ಗಗಳನ್ನು ಕಂಡುಹಿಡಿಯಬಹುದೆಂದು ನಂಬುತ್ತೇವೆ.

ದನಕರಗಳ ಗೊಬ್ಬರ.

ದನಕರಗಳ ಸಗಣಿ, ಗಂಜಲ, ಅವುಗಳು ತಿಂದು ಮಿಕ್ಕ ಹುಲ್ಲು, ಇವುಗಳೆಲ್ಲಾ ಕೊಳೆಯುವುದರಿಂದಾಗುವ ಗೊಬ್ಬರವನ್ನು ದನಕರುಗಳ ಗೊಬ್ಬರವೆನ್ನಬಹುದು. ವ್ಯವಸಾಯಗಾರರಿಗೆ ಈ ಗೊಬ್ಬರ ಬಹಳ ಸುಲಭದಲ್ಲಿ ದೊರೆಯುತ್ತದೆ. ಉತ್ತಮವಾದ ಗೊಬ್ಬರಗಳಲ್ಲಿ ಇದು ಒಂದಾಗಿದೆ. ಒಳ್ಳೆಯಕ್ರಮದಲ್ಲಿ ಜಾಗರೂಕತೆಯಿಂದ ಮಾಡಿದರೆ ಇದರಿಂದಾಗುವ ಪೂರ್ಣಪ್ರಯೋಜನವನ್ನು ನಾವು ಪಡೆಯಬಹುದು.

ನಮ್ಮ ರೈತರು ಈ ಗೊಬ್ಬರದ ಪ್ರಯೋಜನವನ್ನು ಚೆನ್ನಾಗಿ ಅರಿತು ಇದ್ದರೂ ಇದನ್ನು ಮಾಡುವ ಕ್ರಮದ ವಿಷಯದಲ್ಲಿ ತಕ್ಕ ಗಮನವನ್ನು ಸಾಮಾನ್ಯವಾಗಿ ಕೊಡುವುದಿಲ್ಲ. ಇವರು ಅನುಸರಿಸಿರುವ ಕ್ರಮದಲ್ಲಿ ದೋಷಗಳಿವೆ. ಈ ದೋಷಗಳನ್ನು ಹೋಗಲಾಡಿಸಿದರೆ ದನಕರಗಳ ಗೊಬ್ಬರದಿಂದ ಅಧಿಕವಾದ ಲಾಭವನ್ನು ಹೊಂದಬಹುದು.

ದನಗಳ ಗಂಜಲವನ್ನು ಹಾಳುಮಾಡುವರು. ಗಂಜಲದಲ್ಲಿ ಸಸ್ಯಗಳ ಅಮೂಲ್ಯ ಆಹಾರವಸ್ತುಗಳಾದ ನೈಟ್ರೊಜ್ ಪೊಟಾಷ್ ಇವೆರಡೂ ಸಗಣಿಯಲ್ಲಿರುವುದಕ್ಕಿಂತ ಮೂರು ನಾಲ್ಕುಭಾಗ ಹೆಚ್ಚಾಗಿರುವುದರಿಂದ ಇದನ್ನು ಯಾವರೀತಿಯಲ್ಲಾದರೂ ಕೂಡಿಟ್ಟು ಸಗಣಿ ಕಸಗಳೊಡನೆ ಬೆರಸಿ ಕೊಳೆಯಿಸುವುದು ಮುಖ್ಯಕೆಲಸವಾಗಿದೆ. ಗಂಜಲ ಸೇರದೆ ಬರೇ ಸಗಣಿ ಕಸಗಳಿಂದಾಗುವ ಗೊಬ್ಬರ ಅಷ್ಟು ಉತ್ತಮವಾದುದಲ್ಲ.

ನಮ್ಮ ರೈತರಲ್ಲಿ ಅನೇಕರು ಗೊಬ್ಬರದ ಕುಪ್ಪೆಯನ್ನು ಗಾಳಿ ಮಳೆಗಳ ಹೊಡೆತಕ್ಕೆ ಒಡ್ಡುವರು. ಹೀಗೆ ಮಾಡುವುದರಿಂದ ಎಷ್ಟೊ ವಿಷನಾದ ಸಾರ್ವತ್ರಿಕವಾಗಿ

ಬಹುದು. ದನಗಳ ಗಂಜಲವನ್ನು ಸರಿಯಾಗಿ ಕೂಡಿಟ್ಟು ಗೊಬ್ಬರದ ಗುಂಡಿಯಲ್ಲಿ ಚೆಲ್ಲಿ ಬೆರಸುತ್ತಿರಬೇಕು.

ದನಕರಗಳ ಗೊಬ್ಬರ ಬಹಳ ಉತ್ತಮವಾದ ಸಾಮಾನ್ಯ ಗೊಬ್ಬರವೆಂದು ತಿಳಿಯಬೇಕು. ಇದು ಎಲ್ಲಾ ಪೈರುಗಳಿಗೂ ಎಲ್ಲಾ ಮಣ್ಣುಗಳಿಗೂ ಎಲ್ಲಾ ಹವಾಗಳಿಗೂ ಅನುಕೂಲವಾಗಿದೆ. ಸಸ್ಯಗಳ ಆಮೂಲ್ಯ ಆಹಾರ ವಸ್ತುಗಳಾದ ನೈಟ್ರೊಜನ್, ಪಾಸ್ಪರಸ್, ಪೋಟಾಷ್ ಈ ಮೂರೂ ಇದರಲ್ಲಿ ಇರುತ್ತವೆ. ಒಳ್ಳೆಯ ಕ್ರಮದಲ್ಲಿ ಮಾಡಲ್ಪಟ್ಟ ಗೊಬ್ಬರದಲ್ಲಿ ಈ ವಸ್ತುಗಳು ಹೆಚ್ಚಾಗಿರುತ್ತವೆ.

ದನಕರಗಳ ಗೊಬ್ಬರವನ್ನು ಮಣ್ಣಿಗೆ ಹಾಕುವುದರಿಂದ ಅನೇಕ ಪ್ರಯೋಜನಗಳಿವೆ. ಅವುಗಳು ಯಾವವೆಂದರೆ— (೧) ಮಣ್ಣು ಒಳ್ಳೆಯ ಸ್ಥಿತಿಗೆ ಬರುತ್ತದೆ. ಜೇಡಿಯಾದರೆ ಅದರ ಜಿಗಟು ಕಡಮೆಯಾಗುತ್ತದೆ. ಮರಳಾದರೆ ಅದರಲ್ಲಿ ಅಂಟು ಗುಣ ಉಂಟಾಗುತ್ತದೆ. (೨) ನೀರನ್ನು ಹೆಚ್ಚಾಗಿ ಹೀರಿ ಬಹಳ ದಿನಗಳವರೆಗೂ ಇಟ್ಟುಕೊಳ್ಳುವ ಗುಣ ಮಣ್ಣಿನಲ್ಲಿ ಹೆಚ್ಚುತ್ತದೆ. ನಮ್ಮ ದೇಶದಲ್ಲಿ ನೀರಿನ ಅವಶ್ಯಕತೆ ಹೆಚ್ಚಾದುದರಿಂದ ಈ ಗೊಬ್ಬರದ ವಿಷಯದಲ್ಲಿ ಹೆಚ್ಚಾಗಮನ ಕೊಡುವುದು ಅವಶ್ಯಕವಾಗಿದೆ. (೩) ಸಸ್ಯಾಹಾರ ವಸ್ತುಗಳಾದ ನೈಟ್ರಜನ್, ಪಾಸ್ಪರಸ್, ಪೊಟಾಷ್ ಇವುಗಳನ್ನು ಮಣ್ಣಿಗೆ ಒದಗಿಸುತ್ತದೆ. (೪) ಮಣ್ಣಿನಲ್ಲಿರುವ ಅನುಪಯೋಗ ಸ್ಥಿತಿಯಲ್ಲಿನ ಆಹಾರ ವಸ್ತುಗಳ ಒಂದು ಭಾಗವನ್ನು ಉಪಯೋಗಸ್ಥಿತಿಗೆ ತರುವುದಕ್ಕೆ ಇದು ಸಹಾಯ ಮಾಡುತ್ತದೆ.

ದನಕರಗಳ ಗೊಬ್ಬರದಲ್ಲಿರುವ ಸಸ್ಯಾಹಾರ ವಸ್ತುಗಳಲ್ಲಿ ಅರ್ಧಭಾಗ ಉಪಯೋಗಸ್ಥಿತಿಯಲ್ಲಿದೆ ಎಂದು ತಿಳಿದಿರುವರು. ಆದುದರಿಂದ ಇದನ್ನು ಮಣ್ಣಿಗೆ ಹಾಕಿದ ವರ್ಷವೇ ಫಸಲು ಹೆಚ್ಚಾಗಿ ಬರುತ್ತದೆ. ಉಳಿದ ಅರ್ಧಭಾಗವು ಕ್ರಮೇಣ ಉಪಯೋಗಕ್ಕೆ ಬರುತ್ತದೆ. ಎಕರೆ ಒಂದಕ್ಕೆ ೬ ಬಂಡಿಗಳಷ್ಟು ಗೊಬ್ಬರವನ್ನು ಹಾಕುವರು.

ಜಿಗಟಾದ ನೆಲಕ್ಕೆ ದನಕರಗಳ ಗೊಬ್ಬರವನ್ನು ಚೆನ್ನಾಗಿ ಮುಗ್ಗುವುದಕ್ಕೆ ಮುಂಚೆ ಹಾಕಬೇಕು. ಬಿಡಿಯಾದ ಮರಳು ನೆಲಕ್ಕೆ ಚೆನ್ನಾಗಿ ಮುಗ್ಗಿದಮೇಲೆ ಹಾಕಬೇಕು.

ಕೆ. ನರಸಿಂಹ್ಮಯ್ಯಂಗಾರ್.

ಹೀಗೆ ಅದಮುತ್ತಿರುವುದರಿಂದ ಹದವಾಗಿ ಕೊಳೆತು ಅಮೂಲ್ಯ ಸಸ್ಯಾಹಾರ ವಸ್ತು ವಾದ ಅಮೋನಿಯವಿನ ಹೆಚ್ಚಾದ ಭಾಗವು ಲವಣಗಳ ರೂಪದಲ್ಲಿ ಗೊಬ್ಬರದಲ್ಲಿ ನಿಂತು ಸಸ್ಯಗಳ ಉಪಯೋಗಕ್ಕೆ ಬರುತ್ತದೆಂತಲೂ ತಿಳಿಯಬೇಕು. ಗೊಬ್ಬರದ ರಾಸಿಗೆ ಗಂ ಜಲವನ್ನು ಸೇರಿಸುತ್ತಿದ್ದರೆ ಅದರಲ್ಲಿ ಅಮೋನಿಯ, ಪೋಟಾಷ್ ಇವೆರಡೂ ಹೆಚ್ಚಾಗಿ ರುತ್ತವೆ. ರಾಸಿಯನ್ನು ಮಳೆಗೆ ಒಡ್ಡಬಾರದು.

ಗೊಬ್ಬರವನ್ನು ಹದವಾಗಿ ಕೊಳೆಯಿಸುವುದು ಬಹಳ ಸುಲಭವೆಂದು ತಿಳಿಯ ಬಾರದು. ಇದು ಸರಿಯಾಗಿ ಕೊಳೆಯಬೇಕಾದರೆ ಸಾಕಾದಷ್ಟು ವಾಯು ಮತ್ತು ತೇವ ಅವಶ್ಯಕ. ಹೆಚ್ಚಾದ ವಾಯುವಾಗಲಿ ನೀರಾಗಲಿ ಇದ್ದರೆ ಗೊಬ್ಬರ ಕೆಡು ವುದು. ಹೆಚ್ಚು ವಾಯು ಪ್ರವೇಶ ಮಾಡದಿರುವುದಕ್ಕೆ ನಿತ್ಯವೂ ಸಗಣಿ, ಕಸ, ಗಂಜಲ ಗಳನ್ನು ಹಾಕಿದಮೇಲೆ ಹರಡಿ ಕಾಲಿನಿಂದ ಅದಮಬೇಕು. ರಾಸಿಯಲ್ಲಿ ಸಾಕಾಗು ವಷ್ಟು ತೇವವಿಲ್ಲದಿದ್ದರೆ ನೀರು ಚೆಲ್ಲಬೇಕು

ಸೈದಾಪೇಟೆಯು ಗವರ್ನಮೆಂಟ್ ಫಾರಮಿನಲ್ಲಿ ದನಗಳ ಕೊಟ್ಟಿಗೆಗಳಲ್ಲಿಯೇ ಗೊಬ್ಬರ ಮಾಡುವ ಕ್ರಮ ಆಚರಣೆಯಲ್ಲಿದೆ. ಕೊಟ್ಟಿಗೆಯ ನೆಲವನ್ನು ಸುಮಾರು ಮೂರು ಅಡಿ ಆಳಕ್ಕೆ ಮಟ್ಟವಾಗಿ ಅಗೆದು ಅದರಲ್ಲಿ ದನಗಳನ್ನು ಕಟ್ಟದೆ ಬಿಡುವರು. ಕೊಟ್ಟಿಗೆಯಲ್ಲೆಲ್ಲಾ ದನಗಳು ತಮ್ಮ ಮನಸ್ಸುಬಂದಹಾಗೆ ತಿರುಗುವುದರಿಂದ ಸಗಣಿ ಗಂಜಲಗಳು ನಾನಾಕಡೆ ಬೀಳುತ್ತವೆ. ನಿತ್ಯವೂ ಬೀಳುವ ಸಗಣಿಯನ್ನು ಸಮನಾ ಗಿ ಹರಡಿ ಕೊಟ್ಟಿಗೆಯಲ್ಲಿ ತೆಳುವಾದ ಒಂದು ವರಸೆ ಹುಲ್ಲನ್ನು ಹರಡುತ್ತಾರೆ. ಹಾಕಿದ ಹುಲ್ಲು ಗಂಜಲವನ್ನು ಹೀರುತ್ತದಾದುದರಿಂದ ಅದು ಹಾಳಾಗುವದಿಲ್ಲ. ದನಗಳು ತಿರುಗುವುದರಿಂದ ಸಗಣಿ ಹುಲ್ಲುಗಳೆಲ್ಲಾ ಅದಮಲ್ಪಡುವುದರಿಂದ ಹೆಚ್ಚು ವಾಯುವಿ ನಪ್ರವೇಶಕ್ಕೆ ಅವಕಾಶವಿಲ್ಲದೆ ಹದವಾಗಿ ಕೊಳೆತು ಒಳ್ಳೆಯ ಗೊಬ್ಬರ ಉಂಟಾಗುತ್ತದೆ. ಸುಮಾರು ಮೂರು ತಿಂಗಳಾದಮೇಲೆ ಹಳ್ಳವು ತುಂಬುತ್ತದೆ. ಈ ಗೊಬ್ಬರವನ್ನು ಒ ಡನೆ ಉಪಯೋಗಿಸಬಹುದು.

ಮೇಲೆ ತಿಳಿಸಿದ ಕ್ರಮದಲ್ಲಿ ಮಾಡುವುದಕ್ಕೆ ತಕ್ಕ ಅನುಕೂಲಗಳು ಎಲ್ಲರಿಗೂ ಇರುವುದಿಲ್ಲ. ವ್ಯವಸಾಯಗಾರರ ಮನೆಯಲ್ಲಿ ಬೀಳುವ ಸಗಣಿ ಕಸಗಳನ್ನು ಮಳೆಯ ಪ್ರವೇಶಕ್ಕೆ ಆಸ್ಪದವಿಲ್ಲದ ಸ್ಥಳದಲ್ಲಿ ಅನುಕೂಲವಾದ ಗುಂಡಿಯನ್ನು ತೆಗೆದು ನಿತ್ಯವೂ ಅದರಲ್ಲಿ ಹಾಕಿ ಹದವಾಗಿ ಕೊಳೆಯಿಸಿ ಉಂಟಾಗುವ ಗೊಬ್ಬರವನ್ನು ಉಪಯೋಗಿಸ

ಬಿ, 7 ರೂ. 5 ತಿಂಗಳವರಿಗೂ, 6 ರೂ. 3 ತಿಂಗಳವರಿಗೂ ಮತ್ತು 21 ರೂ. 4 ತಿಂಗಳವರೆಗೂ—ಅಂದರೆ, 35+18+84 = 137 ರೂ. ಒಂದು ತಿಂಗಳವರಿಗೂ ಬಂಡವಾಳ ಹಾಕಿರುತ್ತಾನೆ.

1465 ರೂ. ನಫೆಯನ್ನು ಅವರಿಬ್ಬರಿಗೂ 156 : 137 ರೂ ಪ್ರಕಾರವಾಗಿ ಭಾಗಿಸಬೇಕು.

$$\text{ಎ ಭಾಗ} = \frac{156}{293} \times 1465 = 780 \text{ ರೂ.}$$

$$\text{ಬಿ ಭಾಗ} = \frac{137}{293} \times 1465 = 685 \text{ ರೂ.}$$

ಭೂ ಗೋ ಳ.

(ಎಂಟನೆಯ ಪುಟದ ಶೇಷ)

ಪಾಠಶಾಲೆಗಳಲ್ಲಿ ಈಗ ರೂಢಿಯಲ್ಲಿರುವ ಪಠಗಳಲ್ಲಿ ದೇಶವಿಶೇಷಗಳ ಯಾಲ್ಲೆಗಳನ್ನು ತಿಳಿಯಪಡಿಸುವುದೇ ಪ್ರಾಮುಖ್ಯವಾಗಿಟ್ಟುಕೊಂಡಿರುವರು. ಭೂಲಕ್ಷಣಗಳು ಕೂಡಿದ ಮಟ್ಟಿಗೂ ಪಠಗಳಲ್ಲಿ ಸೂಚಿತವಾಗಿ ಯಾಲ್ಲೆಗಳ ಪ್ರಾಮುಖ್ಯತೆಯಿಂದ ಮುಚ್ಚಿ ಹೋಗದಂತಿದ್ದರೆ ಇಂತಹ ಪಠಗಳೇ ಕೂಡಿದ ಮಟ್ಟಿಗೆ ಉಪಯುಕ್ತಗಳಾಗಿರುವುವು. ಆದರೂ ಸಾಧ್ಯವಾದಾಗಲೆಲ್ಲ ಇವುಗಳ ಜತೆಗೆ ಇತರ ಪಠಗಳನ್ನು ಸಂಗ್ರಹಿಸಿ ಬೋಧನಾಕ್ರಮವನ್ನು ಪುಷ್ಟೀಕರಿಸುವುದು ಉತ್ತಮವಾಗಿದೆ ಇವುಗಳಲ್ಲಿ ಮುಖ್ಯವಾದವುಗಳನ್ನು ಈ ಕೆಳಗೆ ಸೂಚಿಸಿದೆ. ಭೂಲಕ್ಷಣಗಳನ್ನು ತಿಳಿಯಪಡಿಸುವ ಪಠಗಳು ನೆಲದ ಲಕ್ಷಣಗಳನ್ನು ಪಠಗಳಲ್ಲಿ ವ್ಯಕ್ತಪಡಿಸುವುದು ಇನ್ನೂ ಕೇವಲ ಅಸಮರ್ಪಕ ಕಾರ್ಯವಾಗಿಯೇ ಇದೆ. ಸಾಮಾನ್ಯವಾಗಿ ಪರ್ವತಗಳನ್ನು ಗುರ್ತಿಸುವುದಂತೂ ಸಮರ್ಪಕವಾಗಿಲ್ಲವು. ಏತಕೆಂದರೆ ಪರ್ವತಶ್ರೇಣಿಗಳನ್ನೂ ಬಿಡಿ ಗುಡ್ಡಗಳನ್ನೂ ಪಠಗಳಲ್ಲಿ ವ್ಯಕ್ತಪಡಿಸುವುದು ಸುಲಭಸಾಧ್ಯವಾಗಿದ್ದರೂ, ಪ್ರಸಿದ್ಧ ಭೂಮಿ

(1) ಎ, 100 ರೂಪಾಯಿ ಬಂಡವಾಳ ಹಾಕಿ ವ್ಯಾಪಾರ ಮಾಡುವುದಕ್ಕೆ ಪ್ರಾರಂಭಿಸಿದನು. 6 ತಿಂಗಳಾದ ನಂತರ ಬಿ, 150 ರುಪಾಯಿ ಬಂಡವಾಳ ಸಹಿತ ಅವನ ಜೊತೆಗೆ ಸೇರಿದನು. ಒಂದು ವರ್ಷವಾದಮೇಲೆ ಅವರಿಗೆ 70 ರುಪಾಯಿ ಲಾಭ ಬಂತು. ಎಷ್ಟು ಆದಾಯ ಒಬ್ಬೊಬ್ಬರಿಗೆ ಬಂತು?

ಎ, 100 ರುಪಾಯಿ ಬಂಡವಾಳದೊಡನೆ 12 ತಿಂಗಳವರಿಗೆ ಮಾಡುವ ವ್ಯಾಪಾರವು $100 \times 12 = 1200$ ರುಪಾಯಿ ಸಹಿತ ಒಂದು ತಿಂಗಳವರಿಗೆ ಮಾಡುವ ವ್ಯಾಪಾರಕ್ಕೆ ಸಮವಾಗಿರುತ್ತೆ.

ಬಿ, 150.....6....., $150 \times 6 = 900$.....

ಆದಾಯವು 1200 : 900 ಅಥವಾ 4 : 3 ರೀತಿಯಾಗಿ ಭಾಗಿಸಲ್ಪಡಬೇಕು.

∴ ಎ ಭಾಗವು $= \frac{4}{7}$ ರ 70 ರೂ $= 40$ ರೂ ಮತ್ತು ಬಿಭಾಗವು $\frac{3}{7}$ ರ $70 = 30$ ರೂ.

---

(2) ಎ, ಬಿ, ತಮ್ಮ ಬಂಡವಾಳಗಳನ್ನು 15 : 7 ಪ್ರಕಾರವಾಗಿ ಹಾಕಿ ವ್ಯಾಪಾರ ಮಾಡುತ್ತಾರೆ. ನಾಲ್ಕು ತಿಂಗಳ ಕೊನೆಯಲ್ಲಿ ಎ, ತನ್ನ ಬಂಡವಾಳದ $\frac{1}{5}$ ಭಾಗವನ್ನು ವಾಪಸು ತೆಗೆದುಕೊಳ್ಳುತ್ತಾನೆ; ಬಿ, 5 ತಿಂಗಳಮೇಲೆ ತನ್ನ $\frac{1}{7}$ ಬಂಡವಾಳವನ್ನು ವಾಪಸು ತೆಗೆದುಕೊಂಡು, 8 ತಿಂಗಳಾದಮೇಲೆ ಎ, ವಾಪಸು ತೆಗೆದುಕೊಂಡ ಬಂಡವಾಳದ 5 ರಷ್ಟನ್ನು, ಸೇರಿಸುತ್ತಾನೆ. ಒಂದು ವರ್ಷವಾದಮೇಲೆ ಬಂದ 1465 ರೂ. ನಫೆಯನ್ನು ಹ್ಯಾಗೆ ಎ, ಬಿ, ಗೆ ವಿಭಾಗಿಸಬೇಕು?

ಎ, ಬಂಡವಾಳವು 15 ರೂ. ಎಂದರೆ, ಬಿ ದು 7 ರೂ. ಆಗುತ್ತದೆ.

4 ತಿಂಗಳ ಕೊನೆಯಲ್ಲಿ ಎ, $\frac{1}{5}$ of $15 = 3$ ರೂ, ವಾಪಸು ತೆಗೆದುಕೊಳ್ಳುತ್ತಾನೆ.

5.....ಬಿ, $\frac{1}{7}$ of $7 = 1$ ರೂ .....

ಆದರೆ 8 ತಿಂಗಳ ನಂತರ $5 \times 3 = 15$ ರೂ. ಸೇರಿಸುತ್ತಾನೆ.

ಹೀಗೆ ಎ, 15 ರೂ. 4 ತಿಂಗಳ ವರಿಗೂ ಮತ್ತು 12 ರೂ. 8 ತಿಂಗಳ ವರಿಗೂ—ಅಂದರೆ, $60 + 96 = 156$ ರೂ. ಒಂದು ತಿಂಗಳ ವರಿಗೆ ಬಂಡವಾಳ ಹಾಕಿರುತ್ತಾನೆ.

ಪಠಗಳಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತವೆ. ಪ್ರೌಢ ವಿದ್ಯಾರ್ಥಿಗಳಿಗಾದರೂ ಆಯಾ ದೇಶ ಯಾ ಜಿಲ್ಲೆಯ ಭೂಗರ್ಭ ಪಠವನ್ನು ತೋರಿಸುವುದು ಅಪೇಕ್ಷಣೀಯವಾಗಿದೆ. ಮೇಲೆ ಹೇಳಿದ ಪಠ ಭೇದಗಳಲ್ಲದೆ ಆಯಾಯಾ ಕಾರ್ಯಕ್ಕೆ ಉಚಿತವಾದ ಪಠಗಳನ್ನೂ ಸಂಗ್ರಹಿಸಿರಬೇಕು. ಇವುಗಳು ಸಾಮಾನ್ಯವಾಗಿ ಮೌಲ್ಯಕ್ಕೆ ದೊರೆಯದಿದ್ದರೂ ಬೋಧಕನು ತಾತ್ಕಾಲಿಕವಾಗಿ ಅಂತಹ ಪಠವನ್ನು ನಿರ್ಮಾಣಿಸಬೇಕು. ಅವುಗಳಲ್ಲಿ ಕೆಲವು ಯಾವುವೆಂದರೆ, ಜ್ವಾಲಾಮುಖಿಗಳ ಸ್ಥಾಲ್ಯಾವಳಿ, ಚಂಡಮಾರುತ, ಸಸ್ಯಭೇದಗಳು, ಪ್ರಾಣಿವಿಶೇಷಗಳು ಇತ್ಯಾದಿಗಳು ಸೂಚಿತವಾಗುವಪಠಗಳು.

ಭೂಮಿ.

ಭೂಮಿಯು ಕೆಲವು ಪ್ರದೇಶಗಳಲ್ಲಿ ತಗ್ಗಾಗಿಯೂ, ಕೆಲವು ಪ್ರದೇಶಗಳಲ್ಲಿ ಎತ್ತರವಾಗಿಯೂ, ಒಟ್ಟುಗೊಳಾಕಾರವಾಗಿಯೂ ಇರುವದಷ್ಟೆ, ಹೀಗೆ ಇರತಕ್ಕದ್ದು ಈ ಪ್ರಪಂಚವ ಎಲ್ಲಾ ಭಾಗಗಳಲ್ಲಿಯೂ ಮಾಡಲ್ಪಟ್ಟಿರುವ ಸರ್ವೆಯಿಂದ ಗೊತ್ತಾಗುತ್ತದೆ. ತಗ್ಗಾಗಿರತಕ್ಕ ಪ್ರದೇಶಗಳಲ್ಲಿ ನೀರು ತುಂಬಿರುವದು. ವಿಸ್ತಾರವಾದ ಇರತಕ್ಕ ಜಲಾಶಯಗಳಿಗೆ ಸಾಗರಗಳೆಂದು ಹೇಳುವರು. ಇತರ ಜಲಭಾಗಗಳಿಗೆ ಸಮುದ್ರವೆಂದೂ, ಸರಸ್ಸೆಂದೂ ಹೇಳುವುದುಂಟು. ಈ ಭೂಮಂಡಲದ ಮೇಲುಭಾಗದಲ್ಲಿ ಸುಮಾರು ಮುಕ್ಕಾಲುಭಾಗದಲ್ಲಿ ನೀರು ತುಂಬಿರುವದು. ಕಾಲುಭಾಗವು ಎತ್ತರವಾಗಿರುವದರಿಂದ ಭೂಮಿ ಎನ್ನಿಸಿಕೊಂಡಿರುವದು. ಈ ಭಾಗವನ್ನೇ ಖಂಡಗಳೆಂಬದಾಗಿಯೂ, ದ್ವೀಪಗಳೆಂಬದಾಗಿಯೂ ಹೇಳುವರು. ಈ ಭೂಮಿಯನ್ನು ವಾಯು ಮಂಡಲವು ಆವರಿಸಿಕೊಂಡಿರುವದು. ಔಷ್ಣ್ಯದಿಂದ ಗಾಳಿಯು ಉಂಟಾಗುವದು. ವಾಯುಮಂಡಲದಲ್ಲಿ ಮೇಘಗಳು, ಮಳೆ, ಹಿಮ ಮೊದಲಾದವುಗಳೆಲ್ಲಾ ಶೀತೋಷ್ಣಗಳಿಂದ ಉಂಟಾಗುವವು. ಇವುಗಳನ್ನೆಲ್ಲಾ ಸ್ಪಷ್ಟಪಡಿಸುವದಕ್ಕೋಸ್ಕರ ಗೋಳಗಳನ್ನು ಮತ್ತು ಭೂಪಠಗಳನ್ನೂ ರಚಿಸುವರು. ಈ ಗೋಳಗಳಲ್ಲಿಯೂ, ಭೂಪಠಗಳಲ್ಲಿಯೂ ಜಲಭಾಗವನ್ನೂ ಭೂಭಾಗವನ್ನೂ ತೋರಿಸಿರುವರು. ವಿಷುವದ್ರೇಖೆಯ ಉತ್ತರ ಭಾಗದಲ್ಲಿ ಭೂಮಿಯು ವಿಶೇಷವಾಗಿಯೂ, ಅದರ ದಕ್ಷಿಣ ಭಾಗದಲ್ಲಿ ಜಲಭಾ

ವೈದಾನ ಇವುಗಳನ್ನು ಪ್ರತ್ಯೇಕವಾಗಿ ಚಿತ್ರಿಸುವುದಕ್ಕಾಗದಿರುವುದು. ಒಂದು ಪ್ರದೇಶಕ್ಕೂ ಮತ್ತೊಂದಕ್ಕೂ ಇರುವ ಇಳಿಜಾರು ಸ್ವಭಾವವನ್ನು ಚಿತ್ರದಲ್ಲಿ ವ್ಯಕ್ತಪಡಿಸುವ ವಕ್ರಾದರೂ ಒಂದಕ್ಕೊಂದಕ್ಕಿರುವ ವಿನತ್ಯವನ್ನು ತೋರ್ಪಡಿಸ ವುದು ಸಾಧ್ಯವಾಗಿಲ್ಲವು. ಇಂತಹ ಚಿತ್ರ ಸಂಜ್ಞೆಯಲ್ಲಿನ ನ್ಯೂನತೆಗಳೂ ಉತ್ಕೃಷ್ಟ ಗುಣಗಳೂ ಈಗಿನ ಪರ ಗಳಲ್ಲಿ ವ್ಯಕ್ತವಾಗುತಿವೆ. ಹೇಗೆಂದರೆ ಬಹಳಮಟ್ಟಿಗೆ ಪರ್ವತಗಳಿಂದ ಕೂಡಿದ ಪ್ರ ದೇಶವು ಚಿತ್ರದಲ್ಲಿ ಪ್ರತಿ ಬಿಂಬಿತವಾಗಬಹುದು. ಸುತ್ತಲೂ ಇರುವ ತಪ್ಪಲುಗಳ ವೈಲಕ್ಷಣ್ಯದಿಂದ ಗುಡ್ಡಗಳು ಹೊರಪಡಿಬರುವಂತೆ ವ್ಯಕ್ತಪಡಬಹುದು. ಹೀಗಿರಲು ಇಂತಹ ಪಠಗಳನ್ನು ಕೇವಲ ಸೂಕ್ಷ್ಮವಾಗಿ ಪರೀಕ್ಷಿಸಲು ದೇಶದ ಭೂಲಕ್ಷಣಗಳು ಮನಸ್ಸಿನಲ್ಲಿ ಸ್ಫುಟವಾಗಿ ಮೂರ್ತಿಗೊಳುವುವು. ನೆಲವು ಅಲ್ಪ ಸ್ವಲ್ಪಮಟ್ಟಿಗೆ ಉ ಬ್ಬುತಗ್ಗಾಗಿದ್ದರೋ ಇದನ್ನ ಚಿತ್ರದಲ್ಲಿ ಕಾಣಗೊಳಿಸುವುದು, ಅಷ್ಟೂ ಅಲ್ಪಫಲಕರ ಕಾರ್ಯವಾಗಿದೆ. ತಗ್ಗುಪ್ರದೇಶಗಳಲ್ಲಿನ ನೆಲಮಟ್ಟ ವೈಲಕ್ಷಣ್ಯಗಳನ್ನು ಬಣ್ಣಗಳ ಹೆ ಚ್ಚುಕಡಿಮೆಯಿಂದ ತೋರ್ಪಡಿಸಬಹುದು. ಅದರೂ ಇದೇ ವೈಲಕ್ಷಣ್ಯಗಳು ಉನ್ನತ ಪ್ರದೇಶಗಳಲ್ಲಿಯೂ ಹೀಗೆ ತೋರ್ಪಡುವುದರಿಂದ ತಗ್ಗು, ಉನ್ನತ ಪ್ರದೇಶಗಳಿಗೆ ಭೇ ದವು ಗೊತ್ತಾಗುವದಿಲ್ಲವು. ಭೂಮಿಯು ಎತ್ತರವಾಗುತಾಗುತ ಬಣ್ಣವನ್ನು ಹೆಚ್ಚಿ ಸುತ್ತಾ ಬಂದು ಕೇವಲ ಉನ್ನತವಾಗಿಯೂ ಕಡಿದಾಗಿಯೂ ಇರುವ ಪ್ರದೇಶದಲ್ಲಿ ಬ ಣ್ಣವು ವಿಶೇಷವಾಗುವುದಾದ್ದರಿಂದ ಭೂಲಕ್ಷಣಗಳನ್ನು ಸೂಚಿಸುವ ಅಕ್ಷರಗಳೇ ಕಾ ಣಬರದಂತೆ ಮುಚ್ಚಿಹೋಗುವುವು. ಮತ್ತು ತಗ್ಗಾದ ಪ್ರದೇಶಗಳಲ್ಲಿ ಸುಲಭವಾಗಿ ಕಾಣಬರಬಹುದಾದ ಬಣ್ಣದಛಾಯೆಗಳು ಪರ್ವತ ಪ್ರದೇಶವನ್ನು ಸೂಚಿಸುವ ಬಣ್ಣದ ಹೆಚ್ಚಿನಿಂದ ಮಬ್ಬಾಗಿಹೋಗುವುವು.

ಭೂಗರ್ಭ ಲಕ್ಷಣಗಳನ್ನು ತಿಳಿಸಿಸುವ ಪಠಗಳು ಸಾಧ್ಯವಾದಲ್ಲಿ ಆಯಾ ಜಿ ಲ್ಲೆಯ ಭೂಗರ್ಭಲಕ್ಷಣಗಳನ್ನು ತಿಳಿಯಿಸುವ ಪಠಗಳನ್ನು ಸಂಗ್ರಹಿಸಿರಬೇಕು. ಬೋ ಧಕನು ಬಾಲಕರೊಡನೆ ಸಂಚಾರಾರ್ಥವಾಗಿ ಹೊರಟಕಾಲದಲ್ಲಿ ಭೂಮಿಯ ಮೇಲು ಭಾಗಕ್ಕೂ ಒಳಭಾಗಕ್ಕೂ ಇರುವ ತಾರತಮ್ಯಗಳನ್ನು ಬೋಧಿಸುವುದಕ್ಕೆ ಉಪಯೋ ಗವಾಗುತ್ತಿವೆ. ಭೂಗರ್ಭದಲ್ಲಿನ ಶಿಲೆಗಳಸ್ವಭಾವವು ಬದಲಾಯಿಸಿದಹಾಗೆಲ್ಲ ಆ ದೇ ಶದ ಭೂಗುಣವು ದೇಶದ ಸ್ವಭಾವವೂ ವ್ಯತ್ಯಸ್ತವಾಗುವುವು. ಈ ವಿಷಯಗಳನ್ನು ಬೋಧಕನು ಎಷ್ಟುಮಾತ್ರವೂ ತೃಣೀಕರಿಸಲಾಗದು ಈ ಅಂಶಗಳು ಭೂಗರ್ಭ

ತ್ತು ಆಸ್ಟ್ರೇಲಿಯಾ ಖಂಡಗಳ ಮಧ್ಯವಲ್ಲಿಯೂ ಇರತಕ್ಕ ಸಾಗರವು ಇಂಡಿಯಾದೇಶದ ಸವಿೂಪವಲ್ಲಿರುವದರಿಂದ ಹಿಂದೂ ಸಾಗರವೆಂದೂ ಕರಿಯಲ್ಪಟ್ಟು ಇದೆ. ಉತ್ತರ ಧ್ರುವದ ಸವಿೂಪದಲ್ಲಿರತಕ್ಕ ಸಾಗರವು ಉನ್ನತ ಧ್ರುವಸಾಗರವೆಂಬದಾಗಿಯೂ, ದಕ್ಷಿಣ ಧ್ರುವದ ಸವಿೂಪದಲ್ಲಿರತಕ್ಕದ್ದು ದಕ್ಷಿಣ ಧ್ರುವಸಾಗರವೆಂಬದಾಗಿಯೂ ಕರಿಯಲ್ಪಟ್ಟವೆ. ಈ ಐದು ಸಾಗರಗಳಲ್ಲಿ ಪೆಸಿಫಿಕ್ ಸಾಗರವು ಎಲ್ಲಾದಕ್ಕಿಂತಲೂ ದೊಡ್ಡದಾದ್ದುಂ ಇದರ ವಿಸ್ತೀರ್ಣವು ೬೮,೦೦೦,೦೦೦ ಚದರ ಮೈಲಿಗುಳ್ಳದ್ದಾಗಿರುವದು. ಅಟ್ಲಾಂಟಿಕ್ ಸಾಗರವು. ೩೫,೦೦೦,೦೦೦ ಚದರ ಮೈಲಿ ಉಳ್ಳದ್ದಾಗಿರುವದು. ಹಿಂದೂಸಾಗರವು. ೨೫,೦೦೦,೦೦೦ ಚದರ ಮೈಲಿ ಉಳ್ಳದ್ದಾಗಿರುವದು. ದಕ್ಷಿಣ ಧ್ರುವಸಾಗರವು. ೧೦,೦೦೦,೦೦೦ ಚದರ ಮೈಲಿ ಉಳ್ಳದ್ದಾಗಿರುವದು. ಉತ್ತರ ಧ್ರುವ ಸಾಗರವು. ೫,೦೦೦,೦೦೦ ಚದರ ಮೈಲಿ ಉಳ್ಳದ್ದಾಗಿರುವದು. ಈ ಸಾಗರಗಳು ಭೂಮಿಯನ್ನು ಕೊರದುಕೊಂಡು ಒಳಕ್ಕೆ ಪ್ರವೇಶಿಸಿರುತ್ತವೆ. ಈ ಭಾಗಗಳಿಗೆ ಲ್ಲಾ ಸಮುದ್ರಗಳು, ಕೊಲ್ಲಿಗಳು, ಖಾರಿಗಳು, ಜಲಸಂಧಿಗಳು, ಎಂಬದಾಗಿ ಅಕಾರಗಳಿಗನುಸಾರವಾಗಿ ಅನೇಕ ಹೆಸರುಗಳನ್ನು ಇಟ್ಟು ಇದಾರೆ.

ಕಿಂಡರ್‌ಗಾರ್ಟ್ನ್

ಪುಷ್ಪಮಂಜರಿ ಕಥೆ.

ಒಂದಾನೊಂದು ಪಟ್ಟಣ ಅಪಟ್ಟಣ ಒಬ್ಬ ಧೊರೆಯು ಆಳುತ್ತಿದ್ದನು ಅವನಿಗೆ ಒಬ್ಬನೆ ಮಗ. ಆ ರಾಜಕುಮಾರ ನೋಡಲಿಕ್ಕೆ ಬಹಳ ಚಲುವನಾಗಿಯು ಒಳ್ಳೆ ಶಕ್ತಿ, ಯುಕ್ತಿಯುಳ್ಳವನಾಗಿಯು ಇದ್ದನು. ಒಂದುದಿವಸ ಆ ರಾಜಕುಮಾರ ಬೇಟೆಗಾಗಿ ಹೊರಟು, ಬಂದು ಹುಲ್ಲೆಯನ್ನು ಅಟ್ಟಿಸಿಕೊಂಡು ಕಾಡಿನೊಳಕ್ಕೆ ನುಗ್ಗಿ ಬಹುದೂರ ಹೊರಟು, ಹೋದನು. ಜತೆಯಲ್ಲಿದ್ದ ಜನರೆಲ್ಲರೂ ಹಿಂದೆನಿಂತರು. ಹುಲ್ಲೆಯು ಸಿಕ್ಕಲಿಲ್ಲ; ಮಟಮಟ ಮಧ್ಯಾಹ್ನ, ಬಾಯಾರಿಕೆ ಆಯಾಸ ಹೆಚ್ಚುತ್ತಾ ಬಂತು. ಆಗ ದಿಕ್ಕುಕಾಣದೆ ನಿಂತಿರಲು, ನಿಶ್ಶಬ್ದವಾದ ಆ ಕಾಡಿನಲ್ಲಿ ಎಲ್ಲೋ ಅತ್ತ ಶಬ್ದವುಕೇಳಿ ಬಂದಹಾಗೆ ಆಯಿತು. ಆಧ್ವನಿ ಬಂದೆಡೆಗೆ ಕಿವಿಗೊಟ್ಟು ಕೇಳೆ ಇದೇನು? ಅರಣ್ಯಮಧ್ಯದಲ್ಲಿ ಯಾರೋ ಹೆಂಗಸು ಅತ್ತಂತೆ ಕೇಳುತ್ತಿದೆ, ನೋಡೋಣ' ಎಂದು ತನ್ನ ಆಯಾಸವನ್ನು ಮರೆತು ಒಡನೆಯೇ ಹೊರಟನು. ವೆದೆ ಮೇಳೆಗಳನ್ನೆ ನುಗ್ಗಿ ಮುಳ್ಳು ಕಲ್ಲುಗ

ಗಳು ವಿಶೇಷವಾಗಿಯೂ ಇರುವವು. ಜಲಭಾಗವನ್ನೂ ಭೂಭಾಗವನ್ನೂ ಪ್ರತ್ಯೇಕವಾಗಿ ತೋರಿಸತಕ್ಕ ಭೂಪಠಗಳನ್ನು ರಚಿಸುವರು. ಇದಲ್ಲದೆ ಭೂಗೋಳವನ್ನು ತೋರಿಸುವ ಭೂಪಠವು ಎರಡು ಅರ್ಧ ಗೋಳಗಳಾಗಿ ವಿಭಾಗಿಸಲ್ಪಟ್ಟಿರವದು. ಪೂರ್ವಾರ್ಧಕ್ಕೆ ಪೂರ್ವಾರ್ಧಗೋಳವೆಂಬದಾಗಿಯೂ, ಪಶ್ಚಿಮಾರ್ಧಕ್ಕೆ ಪಶ್ಚಿಮಾರ್ಧಗೋಳವೆಂಬದಾಗಿಯೂ ಹೆಸರುಗಳು ವಿರ್ಪಟ್ಟಿರುವವು. ಪೂರ್ವಾರ್ಧಗೋಳದಲ್ಲಿ ಯೂರೋಪ್, ಏಷ್ಯಾ, ಆಫ್ರಿಕಾ, ಆಸ್ಟ್ರೇಲಿಯಾ ಖಂಡಗಳೂ ಮತ್ತು ಅನೇಕ ದ್ವೀಪಗಳೂ ಇರುವವು. ಈ ಭಾಗಗಕ್ಕೆ ಹಳೇ ಪ್ರಪಂಚವೆಂಬದಾಗಿ ಹೇಳುವರು. ಪಶ್ಚಿಮಾರ್ಧಗೋಳದಲ್ಲಿ ಅಮೆರಿಕಾ ಖಂಡವು ಅನೇಕ ದ್ವೀಪಗಳು ಇರುವವು. ಇದಕ್ಕೆ ಹೊಸ ಪ್ರಪಂಚವೆಂಬದಾಗಿ ಹೇಳುವರು. ಪೂರ್ವಾರ್ಧಗೋಳದಲ್ಲಿ ಸಮುದ್ರದ ನೀರು ಏಷ್ಯಾ, ಯೂರೋಪ್ ಖಂಡಗಳ ತೀರಗಳನ್ನು ಕೊರೆದು ಅನೇಕ ಕೊಲ್ಲಿಗಳನ್ನು ನಿರ್ಮಿಸಿರುತ್ತದೆ. ಆಫ್ರಿಕಾ ಖಂಡದ ತೀರವು ಬಂಡೆಗಳಿಂದ ಮಾಡಲ್ಪಟ್ಟಿರುವದ್ದರಿಂದ ವಿಶೇಷವಾಗಿ ಕೊರೆಯಲ್ಪಟ್ಟಿಲ್ಲ. ಇದಲ್ಲದೆ ಈ ಖಂಡದಿಂದ ಅನೇಕ ಭಾಗಗಳು ನೀರಿನ ಅಲೆಗಳಿಂದ ಪ್ರತ್ಯೇಕಿಸಲ್ಪಟ್ಟು ಅನೇಕ ದ್ವೀಪಗಳಾಗಿ ಪರಿಣಮಿಸಿವೆ. ಇದರಿಂದಲೇ ಭೂಮಿಯು ಛಿದ್ರವಾಗಿ ಕಾಣುವದು. ಸಮುದ್ರವಾದರೋ ಹಳ್ಳಕೊಳ್ಳಗಳೆಲ್ಲವನ್ನೂ ಛಿದ್ರಗಳೆಲ್ಲವನ್ನೂ ಆವರಿಸಿ ತುಂಬಿಕೊಂಡಿರುತ್ತದೆ. ಆದುದರಿಂದ ಹಳ್ಳ ತಿಟ್ಟುವೊದಲಾದವುಗಳಾವುದೂ ಕಾಣದೆ ಸಮುದ್ರವು ಏಕಾಕಾರವಾಗಿ ಕಾಣುವದು. ಆದಾಗ್ಯೂ ಭೂಮಿಯ ಮೇಲೆ ಹಳ್ಳ, ತಿಟ್ಟು, ಕಣಿವೆಗಳೂ, ಪರ್ವತಗಳು ಇವುಗಳೆಲ್ಲಾ ಹಾಗೆ ಇರುವವೋ ಸಾಗರಗಳ ಕೆಳಗೂ ಅವುಗಳು ಹಾಗೆಯೇ ಇರುವವು. ಈ ಜಲಾಶಯಗಳಿಗೆ ಬೇರೆ ಬೇರೆ ಹೆಸರುಗಳುಂಟು.

ಅಮೆರಿಕಾ ದೇಶದ ಪಶ್ಚಿಮಕ್ಕೂ ಏಷ್ಯಾ ಮತ್ತು ಆಸ್ಟ್ರೇಲಿಯಾ ಖಂಡಗಳ ಪೂರ್ವಕ್ಕೂ ಇರತಕ್ಕ ಸಾಗರಕ್ಕೆ ಪೆಸಿಫಿಕ್ (ಶಾಂತ) ಸಾಗರವೆಂದು ಹೇಳುವರು. ವಿಷುವದ್ರೇಖೆಯು ಉತ್ತರದಲ್ಲಿರತಕ್ಕ ಈ ಸಾಗರದ ಭಾಗಕ್ಕೆ ಉತ್ತರ ಪೆಸಿಫಿಕ್ ಸಾಗರವೆಂಬದಾಗಿಯೂ, ದಕ್ಷಿಣಭಾಗಕ್ಕೆ ದಕ್ಷಿಣ ಪೆಸಿಫಿಕ್ ಸಾಗರವೆಂಬದಾಗಿಯೂ, ಹೆಸರುಗಳುಂಟಾಗಿರುವವು. ಅಮೇರಿಕಾ ಖಂಡದ ಪೂರ್ವಕ್ಕೂ, ಯೂರೋಪ್ ಮತ್ತು ಆಫ್ರಿಕಾ ಖಂಡಗಳ ಪಶ್ಚಿಮಕ್ಕೂ ಇರುವ ಅಟ್ಲಾಂಟಿಕ್, ದಕ್ಷಿಣದ ಅಟ್ಲಾಂಟಿಕ್ ಸಾಗರಗಳೆಂದು ಕರಿಯಲ್ಪಟ್ಟಿದೆ. ಏಷ್ಯಾ ಖಂಡದ ದಕ್ಷಿಣದಲ್ಲಿಯೂ, ಆಫ್ರಿಕಾ ವೆ

ಅಪ್ಪಣೆ ಕೊಡಬೇಕೆಂದು ಕೇಳಿಕೊಂಡನು. ವೃದ್ಧನಾದ ಧೊರೆಗೆ ಬಹಳ ಯೋಚನೆಗೆ ಕಾರಣವಾದರೂ ಮಗನಿಗೆ ಅಪ್ಪಣೆಯನ್ನು ಕೊಡಬೇಕಾಗಿ ಕೊಟ್ಟನು.

ರಾಜಕುಮಾರನು, ಅಲ್ಲಿಂದ ಹೊರಟು, ಊರು ಊರು ದೇಶವನ್ನೆಲ್ಲಾ ಅಲೆದು, ಎಲ್ಲೂ ಪುಷ್ಪಮಂಜರಿಯ ವೃತ್ತಾಂತವನ್ನು ತಿಳಿಯದೆ ಕಾಡುಮಾರ್ಗವನ್ನು ಹಿಡಿದು ಬಿಟ್ಟಗುಡ್ಡಗಳಲ್ಲಿ ಯಲ್ಲಿಯಾದರೂ ಪುಷ್ಪಮಂಜರಿಯು ಸಿಕ್ಕಲಿಲ್ಲವೆಂದು ಹೊರಟನು. ಕಾಡೆಲ್ಲಾ ಅಲೆದು ಬೆಟ್ಟಗಳಲ್ಲೆಲ್ಲಾ ಹುಡಕಾಡಿದರೂ ಪುಷ್ಪಮಂಜರಿಯು ಸಿಕ್ಕಲಿಲ್ಲವಾದ್ದರಿಂದ ಬೇಸತ್ತು, ಒಂದು ಮರದಕೆಳಗೆ ಬಳಲಿ ಮಲಗಿದ್ದನು. ಆದಿನ ಅಲ್ಲಗೆ ಒಬ್ಬ ವೃದ್ಧನು ಬರಲು, ರಾಜಕುಮಾರನು ಎಚ್ಚೆತ್ತು, ಈ ಬಿಟ್ಟಗುಡ್ಡಗಳಲ್ಲಿರುವ ಈ ಮುದುಕನಿಗೇನಾದರೂ ಪುಷ್ಪಮಂಜರಿಯ ವೃತ್ತಾಂತವು ತಿಳಿದಿದೆಯೆ ಕೇಳೋಣವೆಂದು, ಅವನ ಹತ್ತಿರಕ್ಕೆ ಹೋಗಿ ನಮಸ್ಕಾರಮಾಡಿ, ಅವನನ್ನು ಕೇಳಲು ಆಮುದುಕನು, ನಾನುಬಲ್ಲೆ ಆ ಪುಷ್ಪಮಂಜರಿಯನ್ನು ತರಲು ನಿನಗೆ ಸಾಧ್ಯವೆ? ಎಷ್ಟೋಮಂದಿ ರಾಜಕುಮಾರರು ಹತರಾಗಿ ಪ್ರಾಣವನ್ನು ಬಿಟ್ಟರು. ನಿನಗೆ ಬೇಕಾದರೆ ಹೇಳುತ್ತೇನೆ ಕೇಳು—ನಿನ್ನ ಅದೃಷ್ಟವು ಎಂಥಾದ್ದೋ ನಾನುಕಾಣೆ. ಮೂರನೆ ಬೆಟ್ಟದ ತುದಿಯಲ್ಲಿ ಆ ಪುಷ್ಪಮಂಜರಿಯ ಕೋಟೆಯು ಇರುವುದು. ಅವಳು ಒಬ್ಬ ರಾಕ್ಷಸನ ಕೈಗೆ ಸಿಕ್ಕಿರುವಳು. ಆ ರಾಕ್ಷಸನು ಅವಳನ್ನು ಬಹಳ ಜಾಗರೂಕತೆಯಿಂದ ಕಾಯಿದುಕೊಂಡಿರುವನು. ಸಾವಿರಾರು ಮಂದಿ ರಾಕ್ಷಸರು ಕೋಟೆಯ ಸುತ್ತಲೂ ಕಾದುಕೊಂಡಿರುವರು. ಆದರೆ ಆ ರಾಕ್ಷಸಾಧಿಪತಿಯೂ, ಈ ಹದಿನೈದುದಿನವೂ ಮಲಗಿಕೊಳ್ಳುವಷ್ಟರ್ಧತಿ ನಿನಗೆ ಸಮಯವೇನೋ ಚನ್ನಾಗಿರುವುದು. ರಾಕ್ಷಸನು ಈಗ ಮಲಗಿರುವನು. ಪುಷ್ಪಮಂಜರಿಯು ರಾಕ್ಷಸನ ತಾಯಿಯ ವಶದಲ್ಲಿರುವಳು. ಎಂದು ಹೇಳಿ—ವೃದ್ಧಕನು ಹೊರಟುಹೋದನು. ಆಗ ರಾಜಕುಮಾರನಿಗೆ ಪುಷ್ಪಮಂಜರಿಯನ್ನು ನೋಡಬೇಕೆಂಬ ಆತುರವು ಹೆಚ್ಚಿ ಒಡನೆಯೆ ಹೊರಟನು. ಮೂರು ದಿವಸಗಳು ಹಗಲು ರಾತ್ರಿ ಒಂದೇಸಮನಾಗಿ ನಡೆದು ನಾಲ್ಕನೆಯರಾತ್ರಿ ಆ ಪುಷ್ಪಮಂಜರಿಯ ಕೋಟೆಯನ್ನು ಸೇರಿದನು. ಕೋಟೆಯ ಸುತ್ತಲೂ ರಾಕ್ಷಸರು ಕಾಣಬಂದರು. ಕೋಟೆಯ ಬಾಗಿಲಲ್ಲಿ ಮಾತ್ರ, ನಾಲ್ಕುಮಂದಿ ರಾಕ್ಷಸರು ಥಳಥಳಿಸುವ ಕತ್ತಿಗಳನ್ನು ಹಿಡಿದುಕೊಂಡು ಕಾಯುತ್ತಿದ್ದರು. ಅವರೊಡನೆ ಯುದ್ಧಮಾಡಿ, ಅವರನ್ನು ಕೊಂದು ಒಳಗೆ ಹೋಗುವುದರಲ್ಲಿ ಗಲಭೆಯು ಹೆಚ್ಚಿ ತೊಂದರೆಗೆ ಗುರಿಯಾಗುವುನೆಂದು ಯೋ

ಳನ್ನು ಹಾಟ ಹೋಗುವಾಗ್ಗೆ ಬಹಳ ಹೊತ್ತಾಯಿತು. ಸೂರ್ಯಾಸ್ತಮಯಕಾಲ. ರೋಗನ ಧ್ವನಿಯು ಜೋರಾಗಿ ಕೇಳಬರುತಿತ್ತು. ಸ್ಥಳವಾತ್ರ ಇನ್ನೂ ಸಿಕ್ಕಿರಲಿಲ್ಲ. ಹಾಗೆಯೇ ಸ್ವಲ್ಪನಿದಾನಿಸಿಕೊಂಡು, ಕತ್ತಲು ಆಗುವುದರೊಳಗಾಗಿ ಹೇಗಾದರೂ ಆ ಸ್ಥಳವನ್ನು ಕಂಡು ಹಿಡಿಯಬೇಕೆಂದು, ಹತ್ತಿರವಿದ್ದ ಒಂದು ದೊಡ್ಡ ಮರವನ್ನು ಏರಿ ನೋಡುವಲ್ಲಿ ಸವಿಾಪದಲ್ಲಿಯೇ ಯಾರೋ ಇದ್ದಂತೆ ಕಂಡುಬಂತು. ಒಡನೆಯೆ ಇಳಿದು ಆ ವರ್ಗವಾಗಿ ಹೊರಟು ಸ್ವಲ್ಪದೂರಹೋಗುವುದರಲ್ಲಿ ಒಬ್ಬಮುದುಕಿಯು ಹಕ್ಷದಲ್ಲಿ ಬಿದ್ದು ರೋದಿಸುತಿದ್ದದ್ದನ್ನು ಕಂಡು ಅವಳನ್ನು ಎತ್ತಿದನು. ಅವಳು ಸ್ವಲ್ಪ ಚೇತರಿಸಿಕೊಂಡು, ಇವನಿಗೆ ಆಶೀರ್ವದಿಸಿ, ಅಪ್ಪಾ ನನ್ನನ್ನು ನೀನು ಬದುಕಿಸಿದೆ ನನ್ನೊಡನೆಬಾ, ನನ್ನಗಡಿಸಲು ಇಲ್ಲಿಯೆ ಇರುವುದು. ನೀನು ಹಸಿದಿರುತ್ತೀಯೆ. ಸ್ವಲ್ಪ ಅಾಮಾಡಿ ಚೇತರಿಸಿಕೊ, ಬೆಳಿಗ್ಗೆ ನಾನು ಊರುದಾರಿಯನ್ನು ತೋರಿಸುವೆನು ಎಂದಳು. ರಾಜಕುಮಾರನು ಬಹಳ ಸಂತೋಷಗೊಂಡು, ಈ ಸಹಾಯವನ್ನು ದೊರೆಸಿಸಿದ್ದಕ್ಕಾಗಿ ದೇವರನ್ನು ಸ್ತುತಿಸಿ, ಅವಳೊಡನೆ ಹೊರಟನು. ದಾರಿಯಲ್ಲಿ ಅವಳು ಇವನ ವೃತ್ತಾಂತವನ್ನೆಲ್ಲಾ ತಿಳಿದು, ಇವನನ್ನು ನೋಡಿ, ನನಗೆ ಅನುರೂಪಳಾದ ಕನ್ಯಾರತ್ನವು ಒಂದಿರುವುದು. ಆ ಕನ್ಯಾರತ್ನವನ್ನು ಪುಷ್ಪಮಂಜರಿ ಯೆನ್ನುವರು. ಅವಳು ಒಬ್ಬ ರಾಕ್ಷಸಾಧಿಪತಿಯ ಅಧೀನದಲ್ಲಿರುವಳು, ನೂರಾರುಮಂದಿ ರಾಕ್ಷಸರು ಕಾಯುತ್ತಿರುವರು. ಅವಳನ್ನು ಬಿಡಿಸಿಕೊಂಡು ಬಂದು ನೀನು ವರಿಸಬೇಕು. ನನಗೆ ಪ್ರಾಣದಾನ ಮಾಡಿದ್ದಕ್ಕೆ ಪ್ರತಿಯಾಗಿ ನಿನಗೆ ಕನ್ಯಾರತ್ನವನ್ನು ಸಾಧಿಸಲು ಮಂತ್ರಸಿದ್ಧವಾದ ಒಂದು ಕೈ ಗೋಲನ್ನು ಕೊಡುವೆನು. ಅದರ ಸಹಾಯದಿಂದಲೂ, ನಿನ್ನ ಬುದ್ಧಿ ಶಕ್ತಿಯಿಂದಲೂ ಅವಳನ್ನು ಸಾಧಿಸುವ ಭಾರವು ನಿನ್ನದಾಗಿರುವುದು. ! ಎಂದಳು ಇಷ್ಟರಲ್ಲಿ ಅವಳ ಗುಡಿಸಲು ಸಿಕ್ಕಲು, ಆ ರಾಜಕುಮಾರನನ್ನು ಆ ರಾತ್ರಿ ಆದರಿಸಿ ಮಾರನೆಯು ಬೆಳಿಗ್ಗೆ ಮಂತ್ರಸಿದ್ಧವಾದ ಕೋಲನ್ನು ಕೊಟ್ಟು, ಅನುರೂಪಳಾದ ಕನ್ಯಾರತ್ನವನ್ನು ನೀನು ಪಡೆಯೆಂದು ಆಶೀರ್ವದಿಸಿ, ಊರುಮಾರ್ಗವನ್ನು ತೋರಿಸಿ ಕಳುಹಿಸಿದಳು. ಯಾವೆತರದಲ್ಲಾದರೂ, ಎಷ್ಟು ಕಷ್ಟವಾದರೂಪಟ್ಟು, ಆ ಕನ್ನಿಕೆಯನ್ನು ಸಾಧಿಸಬೇಕೆಂದು ರಾಜಕುಮಾರ ಅತ್ಯಾತುರದಿಂದ ಊರನ್ನು ಸೇರಿ, ಚಿಂತೆಯಲ್ಲಿ ಮುಳುಗಿದ್ದ ತಾಯಿತಂದೆಗಳಿಗೂ, ಪುರಜನರಿಗೂ ಸಂತೋಷಪಡಿಸಿ, ಆ ಸಾಯಂಕಾಲ ಧೊರೆಯಲ್ಲಿಗೆ ಬಂದು ಕಾಡಿನಲ್ಲಿ ನಡೆದ ವೃತ್ತಾಂತವನ್ನೆಲ್ಲಾ ತಿಳಿಸಿ, ತನಗೆ

ವಿದ್ಯಾದಾಯಿನಿ.

ಭಾಗ ೪.] ನವೆಂಬರ್ ೧೯೦೦. [ಸಂಚಿಕೆ ೧೧.

ಎಡಿಟರವರ ನೋಟ್ಸ್.

೧೮೯೮-೯೯ನೆಯು ಸಂವತ್ಸರದ ವಿದ್ಯಾಭ್ಯಾಸದ ಇಲಾಖೆಯ ರಿಪೋರ್ಟು ಅಚ್ಚಾಗಿ ಕೆಲವು ದಿವಸಗಳಾಗಿವೆ. ಮೆ॥ ಭಾಭಾ ಸಾಹೇಬರಿಂದ ಈ ಇಲಾಖೆಯು ಅಧಿಷ್ಠಿತವಾದ ವೊದಲೊಂಡು ಇದುವರೆಗೂ ಏಕರೀತಿಯಾಗಿ ವೃದ್ಧಿ ಹೊಂದಿದ ಮೈಸೂರು ದೇಶದ ವಿದ್ಯಾಭ್ಯಾಸ ಕ್ರಮಕ್ಕೆ ೧೮೯೮—೯೯ರಲ್ಲಿ ಸ್ವಲ್ಪ ಮೆಟ್ಟಿನ ನ್ಯೂನತೆಯುಂಟಾಯಿತು. ಇದಕ್ಕೆ ಆ ವರ್ಷದಲ್ಲಿ ಹೊಸದಾಗಿ ಸಂಭವಿಸಿದ ಪ್ಲೇಗ್ ಉಪದ್ರವವು ಕಾರಣ. ಹಿಂದಿನ ವರ್ಷದಲ್ಲಿ ಒಟ್ಟು ೩೯೯೫ ಸ್ಕೂಲುಗಳಿದ್ದುದು ಈ ವರ್ಷದಲ್ಲಿ ೩೯೮೧ ಆಯಿತು. ಇವುಗಳಲ್ಲಿ ವ್ಯಾಸಂಗಮಾಡುವ ವಿದ್ಯಾರ್ಥಿಗಳ ಸಂಖ್ಯೆಯು ಸುಮ ೧೧೦,೯೩೦ ಇಂದ ೧೦೩,೧೯೧ ಕ್ಕೆ ಬಂತು. ಆದರೂ ಅದುವರೆಗೆ ನಡೆದಿದ್ದ ಅಭಿವೃದ್ಧಿಯ ಬಲದಿಂದ, ಈ ಉಪದ್ರವದ ಹಾವಳಿಯಿಂದ ಎಷ್ಟುಮಟ್ಟಿನ ಅಡಚಣೆಯೂಗಬಹುದಾಗಿತ್ತೋ ಅಷ್ಟು ಆಗಲಿಲ್ಲವೆಂದೇ ಹೇಳಬೇಕು.

***

ಇಷ್ಟುಮಾತ್ರವೇ ಅಲ್ಲದೆ ಬೇರೆ ವಿಧನಾಗಿ ಎಂದಿನಂತೆಯೇ ಕೆಲವು ಅಂಶಗಳಲ್ಲಿ ಅಭಿವೃದ್ಧಿಯು ಈ ವರ್ಷದಲ್ಲೂ ನಡೆದೇ ಇದೆ. ಇದಕ್ಕೆ ಕಾಲೇಜು ಮುಂತಾದ ಪ್ರೌಢ ವಿದ್ಯಾಶಾಲೆಗಳಲ್ಲಿ ಪರಸ್ಥಳದಿಂದ ಬಂದು ವ್ಯಾಸಂಗಮಾಡುವವರಿಗೆ ಸರ್ಕಾರದವರು ಮಾಡಿಕೊಟ್ಟ ಅನುಕೂಲಗಳು ದೊಡ್ಡ ನಿದರ್ಶನವಾಗಿದೆ. ಮೈಸೂರು ಮತ್ತು ಶಿವಮೊಗ್ಗ ಇವೆರಡು ಕಡೆಗಳಲ್ಲೂ ಇಂಥವರ ಅನುಕೂಲ್ಯಕ್ಕಾಗಿ ಕಟ್ಟಡಗಳನ್ನು ಕಟ್ಟಿಸಿ ಅವರುಗಳು ವಾಸವಾಗಿರುವುದಕ್ಕೂ, ಭೋಜನ ಮೊದಲಾದದಕ್ಕೂ ತಕ್ಕ ಏರ್ಪಾಡನ್ನು ಮಾಡಿದರು. ಬೆಂಗಳೂರಲ್ಲೂ ಇದೇ ಉದ್ದೇಶದಿಂದ ಒಂದು

ಚಿಸಿ, ಆ ಮಾರ್ಗವನ್ನು ಬಿಟ್ಟು ಇನ್ಯಾವುದಾದರೂ ದಿಕ್ಕಿಬಾಗಿಲ್ಲಿದ್ದರೆ ಅಲ್ಲಿಂದ ಒಳಕ್ಕೆ ಹೋಗುವ ಪ್ರಯತ್ನ ಮಾಡಬೇಕೆಂದು ಕೋಟೆಯ ಸುತ್ತಲೂ ಬರಲು, ಒಂದುಕಡೆ ಪೂರ್ವ ಒಂದು ಸಣ್ಣ ಬಾಗಿಲು ಇದ್ದುದ್ದನ್ನೂ, ಅಲ್ಲಿ ಒಬ್ಬ ರಾಕ್ಷಸನು ಮಲಗಿದ್ದುದ್ದನ್ನು ಕಂಡನು. ಆಗ ಸದ್ದಿಲ್ಲದೆ ಅವನ ಸವಿೀಪಕ್ಕೆ ಬಂದು ನೋಡಲು, ಅವನು ಗಾಢನಿದ್ರೆಯಲ್ಲಿದ್ದನು. ಆಗ ಮೆತ್ತಗೆ ಆ ಮಾರ್ಗವಾಗಿ ಕೋಟೆಯೊಳಗೆ ಪ್ರವೇಶಿಸಲು, ಕೋಟೆಯು ನಿರ್ಜನವಾಗಿತ್ತು. ಮಧ್ಯದಲ್ಲಿ ಕಂಡುಬಂದು ಎಳುಪ್ಪರಿಗೆಯು ಮನೆಯು ಮಾರ್ಗವಾಗಿ ಹೊಗಲು, ಕಾವಲಿಲ್ಲದ ಅರಮನೆಯೊಳಗೆ ಪ್ರವೇಶ ಮಾಡಿದನು. ಅದು ಎಂಥಾ ಅರಮನೆ—ಎಲ್ಲೆಲ್ಲಿ ನೋಡಿದರೂ ಪಚ್ಚೆಯ ಕಂಬ, ಬೆಳ್ಳಿಯ ಗೋಡೆಗಳು, ಭೋಗಾರದ ಬಾಗಿಲು, ನೀಲದ ತೋರಣ, ಮುತ್ತಿನ ಜಾಲರಿ, ಕೆಂಪಿನ ಕಾರಳಿ, ಈ ಐಶ್ವರ್ಯವನ್ನೂ ಈ ಕಾಂತಿಯನ್ನೂ ಈ ಆಶ್ಚರ್ಯವನ್ನೂ ನೋಡಿ ಒಂದು ಘಳಿಗೆ ಸುಮ್ಮನೆ ನಿಂತನು. ಮುಂದೆ ಇನ್ನೇನು ಆಶ್ಚರ್ಯ ವಿರುವುದೋ ನೋಡೋಣವೆಂದು ಒಳಗಿನ ತೊಟ್ಟಿಯನ್ನು ಪ್ರವೇಶಿಸಿದನು. ತೊಟ್ಟಿಯ ಬಾಗಿಲನ್ನು ತೆರೆದೊಡನೆ—ಒಳಗಿನ ಹೊಳಪು, ಒಂದು ಕ್ಷಣವೊತ್ತು ಇವನ ಕಣ್ಣು ಕಾಣದಂತೆ ಮಾಡಿತು. ಆ ತೊಟ್ಟಿಯಲ್ಲಿ ನವರತ್ನ ಖಚಿತವಾದ ಆ ಸಿಂಹಾಸನದ ಮೇಲೆ ಸೂರ್ಯಮೂರ್ತಿಯಂತೆ ಕಾಣುತ್ತಿರುವ ಕನ್ಯಾರತ್ನ ಆ ಕನ್ಯೆಯೂ, ಆ ಸಿಂಹಾಸನವೂ, ಆ ದೀಪರಾಜಿಗಳೂ ನಾಲ್ಕು ದಿಕ್ಕಿನಲ್ಲಿಯೂ ಪ್ರತಿಬಿಂಬಿಸಿ, ನೂರಾರು ಸಿಂಹಾಸನಗಳು, ನೂರಾರು ಮೂರ್ತಿಗಳು ಇರುವವೋ ಎಂಬಂತೆ ಕಾಣಬಂತು. ಈ ಹೊಳಪಿನಲ್ಲಿ ಕಾಲಮೇಘದಂತೆ ಆ ರಾಕ್ಷಸನ ತಾಯಿಯು ಕೂತಿರದಿದ್ದರೆ ಇವನು ಎಷ್ಟೊಹೊತ್ತು ನಿಂತಿದ್ದರೂ ಯಾವದೂ ಇವನ ಕಣ್ಣಿಗೆ ಕಾಣಿಸುತ್ತಿರಲಿಲ್ಲ. ಅಲ್ಲಿ ಒಂದು ಕ್ಷಣಕಾಲ ನಿಂತು ಸುತ್ತಲೂ ನೋಡಲು, ಆ ಪುಷ್ಪಮಂಜರಿಯ ವೈಭವವು ಕಾಣಬಂತು. ಒಂದುಕಡೆ ಸ್ತ್ರೀಯರು ನಾಟ್ಯವಾಡುತ್ತಿದ್ದರು. ಒಂದುಕಡೆ ಗಾನವಾಡುತ್ತಿದ್ದರು. ಒಂದೆಡೆಯಲ್ಲಿ ಪುಷ್ಪಮಾಲೆಯನ್ನು ಕಟ್ಟುತ್ತಿದ್ದರು. ಇನ್ನೊಂದೆಡೆಯಲ್ಲಿ ವಸ್ತ್ರಾಭರಣಗಳನ್ನು ಸಿದ್ಧಪಡಿಸುತ್ತಿದ್ದರು. ಈ ರಾಜಕುಮಾರನು ಬೆರಗಾಗಿ ನಿಂತಿರಲು, ಆ ರಾಕ್ಷಸಸ್ತ್ರೀಯ ಘರ್ಜನೆಯು ಕೇಳಬಂತು. ಅಲ್ಲಿದ್ದ ಸ್ತ್ರೀಯರೆಲ್ಲ ಒಂದು ನಿಮಿಷಮಾತ್ರದಲ್ಲಿ ಮಾಯವಾದರು. ಈ ರಾಜಕುಮಾರನಿಗೆ ಆ ಸ್ತ್ರೀಯರ ಕಾಲುಗೆಜ್ಜೆಯ ಶಬ್ದಸಂತತಿ

(ಸಶೇಷ)

ಆರ್ನಲ್ಡ್‌ರವರ ಚರಿತ್ರೆ.

ಆಕ್ಸ್‌ಫರ್ಡ್ ಯೂನಿವರ್ಸಿಟಿಯಲ್ಲಿ ವ್ಯಾಸಂಗವಮಾಡುತ್ತಿದ್ದಾಗ ಇವರಿಗೆ ಬಹಳ ವಿದ್ವಾಂಸರಾದ ಅನೇಕರ ಸಹವಾಸವು ದೊರೆಯಿತು. ಈ ಪೈಕಿ ಡಾಕ್ಟರ್ ಹಾಕಿನ್ಸ್‌ರವರೂ, ಡಾ॥ ವೈಟ್‌ಲೀಯವರೂ ಬಹಳ ಪ್ರಸಿದ್ಧರು. ಉತ್ತರೋತ್ತರ ಇವರು ಬರೆದ ಅನೇಕ ಗ್ರಂಥಗಳನ್ನು ಡಾ॥ ಹಾಕಿನ್ಸ್‌ರವರಿಗೆ ಅಂಕಿತಮಾಡಿರುತ್ತಾರೆ. ಇವರು ಆಕ್ಸ್‌ಫರ್ಡ್‌ನಲ್ಲಿ ೪ ವರ್ಷಗಳಿದ್ದರು. ಆಕ್ಸ್‌ಫರ್ಡ್ ಪುಸ್ತಕ ಭಂಡಾರವೆಂದರೆ ಜಗತ್ತಿನಲ್ಲೇ ಅದ್ವಿತೀಯವಾದದ್ದು. ಇಲ್ಲಿ ಅನೇಕ ಲಕ್ಷಗ್ರಂಥಗಳಿರುತ್ತವೆ. ಪ್ರತಿ ವರ್ಷದಲ್ಲಿಯೂ ಭಂಡಾರದ ಕಟ್ಟಡವನ್ನು ಬಡಾಯಿಸುತ್ತಲಿರುತ್ತಾರೆ. ಇಲ್ಲಿರತಕ್ಕ ಪುಸ್ತಕಗಳನ್ನು ಡಾ॥ ಆರ್ನಲ್ಡ್‌ರವರು ಪ್ರತಿನಿತ್ಯವೂ ಓದುತ್ತಲೂ ಓದಿದ ಸಂಗತಿಗಳನ್ನು ಬರೆಯುತ್ತಲೂ ತಾವು ಓದಿದ ಪುಸ್ತಕಗಳಲ್ಲಿ ನ್ಯೂನಾತಿರಿಕ್ತಗಳಿದ್ದರೆ ಅವುಗಳನ್ನು ತಿದ್ದುತ್ತಲೂ ಹೊಸ ಗ್ರಂಥಗಳನ್ನು ಬರೆಯುತ್ತಲೂ ೪ ವರ್ಷಗಳು ಅವಿಚ್ಛಿನ್ನವಾಗಿ ವ್ಯಾಸಂಗವನ್ನು ಮಾಡಿದರು. ಇವರ ವ್ಯಾಸಂಗವನ್ನು ಇವರ ಸ್ವಶಕ್ತಿಯಿಂದ ಬರೆಯುತ್ತಿದ್ದ ಗ್ರಂಥಗಳನ್ನೂ ನೋಡಿ ಡಾ॥ ವೈಟ್‌ಲೀಯವರು ತಮ್ಮ ಮಿತ್ರರೊಡನೆ ಇದು ಅಸಾಧಾರಣವಾದ ವ್ಯಕ್ತಿ ಎಂಬದಾಗಿಯೂ ಕೆಲವು ವರ್ಷದೊಳಗಾಗಿ ಈ ಯೂನಿವರ್ಸಿಟಿಗೆ ಸೇರಿದ ಪಂಡಿತಶ್ರೇಷ್ಠಪದಕ್ಕೆ ಸಮಾನವಾದ ವಿದ್ವತ್ತನ್ನು ಹೊಂದುವದರಲ್ಲೇನೂ ಸಂಶಯವಿಲ್ಲವೆಂದು ಹೇಳುತ್ತಿದ್ದರು.

೧೮೧೮ನೇ ಇಸ್ವಿಯಲ್ಲಿ ಇವರು ಅನೇಕ ಕಾವ್ಯಗಳನ್ನು ಬರೆದು ತಮ್ಮ ಮಿತ್ರನುಂಡಲಿಯಲ್ಲಿ ಓದುತ್ತಿದ್ದರು. ಇದರ ಸರಣಿಯನ್ನು ನೋಡಿ ಇದು ಮಹಾ ಕಾವ್ಯಗಳ ಸರಣಿಗೆ ಕಡಮೆಯಾಗಿಲ್ಲವೆಂದು ವಿದ್ಯಾವಂತರನೇಕರು ಹೇಳುತ್ತಿದ್ದರು. ಕ್ರಮಕ್ರಮವಾಗಿ ಕಾವ್ಯ, ನಾಟಕ, ಅಲಂಕಾರ ಮೊದಲಾದವುಗಳಲ್ಲಿ ಇವರಿಗೆ ಅಭಿರುಚಿಯು ವಿಶೇಷವಾಗಿದ್ದಾಗ್ಯೂ ಶಾಸ್ತ್ರ ರಾಜತಂತ್ರ, ವೇದಾಂತ ಮೊದಲಾದವುಗಳಲ್ಲಿ ಅಭಿರುಚಿಯೂ ವಿಶೇಷವಾಯಿತು. ಇವುಗಳನ್ನು ವ್ಯಾಸಂಗಮಾಡಿದ ಹಾಗೆಲ್ಲಾ ಬುದ್ಧಿಸ್ವೀಕಾರವೂ ಪ್ರಜ್ಞೆಯೂ ಹೆಚ್ಚಿತು. ಹುಡುಗ ತನವು ವಯಸ್ಸು ಹೆಚ್ಚಾಗದೆಇದ್ದಾಗ್ಯೂ ಕ್ರಮಕ್ರಮವಾಗಿ ಕಡಮೆಯಾಯಿತು. ಜನಗಳ ಅಜ್ಞಾನವನ್ನು

ರಮಣೀಯವಾದ ಕಟ್ಟಡವನ್ನು ಕಟ್ಟಿಸಿದರು. ಸಾಂಕ್ರಾಮಿಕವ್ಯಾಧಿಗಳು ಹೆಚ್ಚಿರುವ ಈ ಕಾಲದಲ್ಲಿ ಮುಖ್ಯವಾಗಿ ಇಂಥ ಏರ್ಪಾಡುಗಳಿಂದ ವಿದ್ಯಾರ್ಥಿಗಳಿಗೆ ಎಂಥ ಸಹಾಯವಾಗುವುದೆಂಬುದು ಎಲ್ಲರಿಗೂ ಸ್ಪಷ್ಟವಾಗಿರುವುದು.

***

ವಿದ್ಯಾವ್ಯಾಸಂಗವೆಂದರೆ ಜ್ಞಾನಾರ್ಜನೆ ಮಾತ್ರವೇ ಅಲ್ಲ, ಬಾಲಕರ ನಡೆನುಡಿಗಳು ದೇಹದಾರ್ಢ್ಯವೂ ವೃದ್ಧಿಯಾಗಬೇಕಾದ್ದು ಅವಶ್ಯಕವೆಂಬುದು ಈಚೀಚೆಗೆ ಗೊತ್ತಾಗುತ್ತ ಬಂದಿದೆ. ಬಾಲಕರು ತಮ್ಮ ನಡೆನುಡಿಗಳನ್ನು ತಿದ್ದಿಕೊಳ್ಳುವುದರಲ್ಲಿ ಮೇಲೆ ಹೇಳಿದಂಥ ಏರ್ಪಾಡಿನಿಂದ ಬಹಳ ಸಹಾಯವಾಗುವುದು. ಪಾಠಶಾಲೆಯಲ್ಲೇನೋ ಉಪಾಧ್ಯಾಯರು ಈ ವಿಷಯಕ್ಕೆ ಲಕ್ಷ್ಯಕೊಡಬಹುದು. ಆದರೆ ಪಾಠಶಾಲೆಯ ಕಾಲವು ಕ್ಲುಪ್ತವಾಗಿರುವುದರಿಂದ ಆ ಕಾಲದಲ್ಲಿ ಅವರ ನಡೆನುಡಿಗಳ ತಿದ್ದುಪಾಟು ಸಂಪೂರ್ಣವಾಗಿ ನಡೆಯಲಸಾಧ್ಯ. ಮತ್ತು ಬಾಲಕರು ಶಾಲೆಗಳಲ್ಲಿರುವಾಗ್ಗೆ ವಿಷಯಗಳಿಗೆ ವಿಶೇಷವಾಗಿ ಒಳಗಾಗಿರುವುದರಿಂದ ಅವರವರ ಸಹಜವಾದ ಗುಣದೋಷಗಳು ವ್ಯಕ್ತವಾಗಿ ಉಪಾಧ್ಯಾಯರಿಗೆ ತಿಳಿಯಬರುವುದಿಲ್ಲ. ಸ್ಟೂಡೆಂಟ್ಸ್‌ಹೋಂಗಳಲ್ಲಿ ಇವರು ಒಟ್ಟಾಗಿ ಸದಾ ಇರುವುದಾದರೆ ಇಂಥ ಕುಂದಕೊರತೆಗಳಿಗೆ ಅವಕಾಶವೇ ಇಲ್ಲ. ಒಬ್ಬೊಬ್ಬರ ನಡತೆಯೂ ಚೆನ್ನಾಗಿ ತಿಳಿದುಬರುವುದು. ಒಳ್ಳೆಯವರನ್ನು ನೋಡಿ ಇತರರು ತಿದ್ದಿಕೊಳ್ಳುವುದಕ್ಕೆ ಅವಕಾಶವೂ ಇರುವುದು.

***

ಇದಕ್ಕೆ ಬದಲಾಗಿ ಹರಸ್ಥಳದ ವಿದ್ಯಾರ್ಥಿಗಳು ಈಗಿನಂತೆ ಹೋಟಲುಗಳಲ್ಲಿರುವುದಾದರೆ ಸರಿಯಾದ ಸಹವಾಸ ದೊರೆಯದಿರುವುದರಿಂದ ಅವರು ಸನ್ಮಾರ್ಗವನ್ನು ಬಿಟ್ಟುಬಿಡುವ ಸಂಭವವೂ ಉಂಟಾಗುವುದು. ಸಂಸರ್ಗದಿಂದ ಗುಣದೋಷಗಳು ತಾವಾಗಿ ಚಿಕ್ಕವರಿಗೆ ಬರುವುವೆಂಬುದು ಎಲ್ಲರಿಗೂ ತಿಳಿದೇ ಇದೆ. ಇಂಥ ಸ್ಟೂಡೆಂಟ್ಸ್‌ಹೋಂಗಳಿಗೆ ಬಾಲಕರಿಗೆ ಮಾದರಿಯಾಗಿರುವಂಥವರನ್ನು ವಿಚಾರಕರ್ತರನ್ನಾಗಿ ಮಾಡಿದರೆ ಅಲ್ಲಿರುವವರ ನಡತೆಯು ಒಳ್ಳೆಯದಾಗುವುದಕ್ಕೆ ಇದಕ್ಕೆ ಮೇಲೆ ಮಾಡಬೇಕಾದ್ದು ಬಹಳ ಸ್ವಲ್ಪವೇ ಇರುವುದು.

ರಾತ್ರಿಗಳಲ್ಲಿಯೂ ತದೇಕಧ್ಯಾನದಿಂದ ಕೆಲಸಮಾಡುತ್ತಾರೋ ಅವರು ಅದರಲ್ಲಿ ಇಷ್ಟಾರ್ಥಪ್ರಾಪ್ತಿಯನ್ನು ಹೊಂದೇ ಹೊಂದುವರು. ಕ್ರಿಸ್ಟೋಫರ್ ಕೊಲಂಬಸನು ಅಮೆರಿಕಾ ಖಂಡ ವಿದೆಯೆಂಬದಾಗಿಯೂ ಅದನ್ನು ತಾನು ಕಂಡು ಹಿಡಿಯುವೆನೆಂಬದಾಗಿಯೂ ಪ್ರವರ್ತಿಸಲು ರಾಜಾಧಿರಾಜರುಗಳನ್ನು ಸಹಾಯ ಕೇಳುವುದಕ್ಕುಪಕ್ರಮಿಸಿದನು. ಎಲ್ಲರೂ ಇವನನ್ನು ಹುಚ್ಚನೆಂದು ತಿಳಿದುಕೊಂಡರು. ಈ ಪ್ರಯತ್ನದಲ್ಲಿ ಅನೇಕ ದಕಗಳಿಗೂ ಗತಿಯಿಲ್ಲದ ಅವಸ್ಥೆಯೂ ಉಂಟಾಯಿತು. ಆದಾಗ್ಯೂ ತನ್ನ ಸಂಕಲ್ಪವನ್ನು ಬಿಡಲಿಲ್ಲ. ಕೊನೆಗೆ ಸ್ಪೇನ್ ದೇಶದ ಮಹಾರಾಣಿಯವರು ಇವರು ಸತ್ಯಸಂಕಲ್ಪರೆಂದು ತಿಳಿದುಕೊಂಡು ಇವರಿಗೆ ಬೇಕಾದ ಸಹಾಯವನ್ನು ಮಾಡಿ ಅಮೇರಿಕಾ ದೇಶವು ಕಂಡು ಹಿಡಿಯಲ್ಪಡುವುದಕ್ಕೆ ಬೇಕಾದ ಏರ್ಪಾಡನ್ನು ಮಾಡಿದರು. ಕೊಲಂಬಸ್ ಹೆಸರು ಮಾತ್ರವೇ ಅಲ್ಲದೆ ಸ್ಪೇನ್ ದೇಶದ ಮಹಾರಾಣಿಯರವರಾದ ಇಸಬಲಾರವರ ಕೀರ್ತಿಯೂ ಕೂಡ ಆ ಚಂದ್ರಾರ್ಕವಾಗಿ ನಿಲ್ಲುವಂತಾಯಿತು. ಕೊಲಂಬಸರವರು ಹೇಗೆ ಹೊಸ ಪ್ರಪಂಚವನ್ನು ಕಂಡು ಹಿಡಿಯುವುದಕ್ಕೆ ೪೦ ವರ್ಷಗಳ ವರೆವಿಗೂ ತದೇಕ ಧ್ಯಾನವುಳ್ಳವರಾಗಿ ಶ್ರಮಪಟ್ಟರೋ ಅದೇ ರೀತಿಯಲ್ಲಿ ಆರ್ನಲ್ಡರವರು ಪ್ರಜ್ಞಾಪ್ರಪಂಚದಲ್ಲಿ ಒಳ್ಳೇ ಪದವಿಯನ್ನು ಹೊಂದಿ ಕೈಲಾದಮಟ್ಟಿಗೂ ಅನೇಕ ಜನರಿಗೆ ಅಜ್ಞಾನವನ್ನು ಹೋಗಲಾಡಿಸುವ ಪ್ರಯತ್ನ ಮಾಡಬೇಕೆಂದು ಕುತೂಹಲವುಳ್ಳವರಾದರು. ಇವರ ಇಷ್ಟಾರ್ಥವೂ ಹೇಗೆ ನೆರವೇರಿತೋ ಅದು ಮುಂದೆ ವಾಚಕರಿಗೆ ಗೊತ್ತಾಗುವುದು.

(ಸಶೇಷ.)

ವ್ಯಾಕರಣ ಶಾಸ್ತ್ರಂ

ಧಾತುಪ್ರಕರಣಂ.

ಲೋಕದಲ್ಲಿ ಪ್ರಯೋಗಕ್ಕೆ ಅರ್ಹವಾದ ಶಬ್ದಗಳು, ನಾಮಪ್ರಕೃತಿಕ ಧಾತುಪ್ರಕೃತಿಕಗಳೆಂದೆರಡು ಭಾಗಗಳಾಗಿರುವುದು. ಅವುಗಳಲ್ಲಿ ನಾಮಪ್ರಕೃತಿಕವಾದುದು ಸ್ತ್ರೀಪ್ರತ್ಯಯ, ಕಾರಕ, ಸಮಾಸ, ತದ್ಧಿತ ಮೊದಲಾದ ಭೇದಗಳಿಂದ ಭಿನ್ನಭಿ

ಹೋಗಲಾಡಿಸಿ ಅವರಿಗೆ ಯುಕ್ತಾಯುಕ್ತ ವಿವೇಚನೆಯುಸ್ಸುಂಟುಮಾಡಿ ಅವರಿಗೆ ಜ್ಞಾನಮಯವಾದ ಜೀವನವನ್ನುಂಟುಮಾಡಬೇಕೆಂಬುವುದೇ ಇವರ ಮುಖ್ಯೋದ್ದೇಶವಾಯಿತು. ಹುಡುಗರಿಗೆ ಸಹಜವಾದ ಚೇಷ್ಟೆಗಳು ಹೋಗಿಬಿಟ್ಟವು. ಈ ಪ್ರಪಂಚದ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣಭೂತನಾದ ಈಶ್ವರನ ವಿಚಾರವನ್ನು ಶೋಧಿಸುವುದರಲ್ಲಿ ಅಸಕ್ತಿಯೂ ದಿನೇದಿನೇ ಹೆಚ್ಚುಗುತ್ತಾ ಬಂತು. ಈ ಪ್ರಪಂಚದ ಪ್ರಾಣಿಗಳಲ್ಲಿ ಕಾಣಬರತಕ್ಕ ಸಂಪತ್ತು ವಿಪತ್ತುಗಳಿಗೂ ಐಶ್ವರ್ಯ ದಾರಿದ್ರ್ಯಗಳಿಗೂ ಜ್ಞಾನಾಜ್ಞಾನಗಳಿಗೂ ಕಾರಣಗಳನ್ನು ವಿಚಾರಿಸುವುದಕ್ಕುಪಕ್ರಮಿಸಿದರು. ಈ ವಿಚಾರದಲ್ಲಿ ನಿಷ್ಕೃಷ್ಟವಾದ ಜ್ಞಾನವನ್ನು ಹೊಂದುವುದಕ್ಕೋಸ್ಕರ ಅನೇಕ ಮತಗ್ರಂಥಾವಲೋಕನಗಳನ್ನು ಮಾಡಿದ್ದಲ್ಲದೆ ಅನೇಕ ಶಾಸ್ತ್ರಗಳನ್ನೂ ಕೂಲಂಕಷವಾಗಿ ವ್ಯಾಸಂಗಮಾಡಿದರು. ಹೀಗೆಯೇ ಅನೇಕ ವರ್ಷಗಳು ವ್ಯಾಸಂಗಮಾಡಿ ಅನೇಕ ವೇದಾಂತ ತತ್ವಗಳನ್ನೆಲ್ಲಾ ತಿಳಿದುಕೊಂಡು ವೇದಾಂತ ವಿಷಯದಲ್ಲಿ ಅನೇಕ ಉಪನ್ಯಾಸಗಳನ್ನು ಮಾಡಿ ಆ ಉಪನ್ಯಾಸಗಳನ್ನೆಲ್ಲಾ ಗ್ರಂಥವನ್ನಾಗಿ ಬರೆದು ಮುದ್ರಿಸಿದರು. ತಿಳಿದ ವಿಷಯಗಳನ್ನು ಅನೇಕ ಪಂಡಿತರು ತಮ್ಮಲ್ಲೀ ಐಕ್ಯವನ್ನು ಮಾಡಿಕೊಳ್ಳುತ್ತಾರೆ. ಆರ್ನಲ್ಡ್‌ರವರ ಸ್ವಭಾವವು ಇಂಥಾದ್ದಾಗಿರಲಿಲ್ಲ. ಬಹಳ ಮಿಹನತ್ತುಮಾಡಿ ವ್ಯಾಸಂಗಮಾಡಬೇಕೆಂಬದಾಗಿ ಇಚ್ಛೆಯುಳ್ಳ ವಿದ್ಯಾರ್ಥಿಗಳನ್ನು ಹುಡುಕಿ ಅವರಿಗೆ ತಾವು ವ್ಯಾಸಂಗಮಾಡಿದ್ದನ್ನೆಲ್ಲಾ ಹೇಳುತ್ತಾ ಅವರೊಡನೆ ಚರ್ಚಿಸುತ್ತಾ ಅವರನ್ನು ಜ್ಞಾನವಂತರನ್ನಾಗಿ ಮಾಡುವುದಕ್ಕೆ ಬಹಳವಾಗಿ ಶ್ರಮಪಡುತ್ತಿದ್ದರು. ಇವರು ೨ ವಿಧವಾದ ಪ್ರಪಂಚವನ್ನು ಅಂಗೀಕರಿಸಿದ್ದರು. ರಾಜ್ಯ, ಕೋಶ, ಅಧಿಕಾರ ಪ್ರಾಪಂಚಿಕ ಸಂಪತ್ತು, ಇವುಗಳಿಗೆ ಸಂಬಂಧಪಟ್ಟ ಪ್ರಪಂಚ ಒಂದುಂಟೆಂಬದಾಗಿಯೂ ಜ್ಞಾನಮಯವಾದ ಪ್ರಪಂಚ ಒಂದೆಂಬದಾಗಿಯೂ, ಜ್ಞಾನಮಯವಾದ ಪ್ರಪಂಚದಲ್ಲಿ ಚಕ್ರವರ್ತಿ ಪದವಿಯನ್ನನುಭವಿಸುತ್ತಾ ಅಜ್ಞಾನವೆಂಬಂಧಕಾರಕ್ಕೆ ಸೂರ್ಯಪ್ರಾಯನಾಗಿರುವುದಕ್ಕೆ ಶಕ್ತಿಯಿಲ್ಲದವನು ಪ್ರಾಕೃತ ಪ್ರಪಂಚದ ಚಕ್ರವರ್ತಿ ಪದವಿಯನ್ನು ಅಪೇಕ್ಷಿಸಬೇಕೆಂದು ಹೇಳುತ್ತಿದ್ದರು. ಈ ಅಭಿಪ್ರಾಯಕ್ಕನುಸಾರವಾಗಿ ಇವರು ಪ್ರಕೃತಿಸಂಬಂಧವಾದ ಇಷ್ಟಾರ್ಥಗಳನ್ನೆಲ್ಲಾ ಪರಿತ್ಯಾಗಮಾಡಿ ಪ್ರಜ್ಞಾ ಪ್ರಪಂಚದಲ್ಲಿ ಪ್ರತಿಷ್ಠೆಯನ್ನು ಸಂಪಾದಿಸಬೇಕೆಂದು ಕೃಷಿಯನ್ನು ಮಾಡಿದರು. ಯಾರು ಯಾವ ಕೆಲಸವನ್ನು ಮಾಡಬೇಕೆಂದು ದೃಢಸಂಕಲ್ಪರಾಗಿ ಅಹೋ

ದೆನುವೊದಲಾದ ಪ್ರಯೋಗಗಳಲ್ಲಿ ಪ್ರಥಮೆ ತೃತೀಯೆಗಳೆರಡೂ ಉಪಯೋಗಿಸುವ ವಾಡಿಕೆಯಿದ್ದಾಗ್ಯೂ ಅರ್ಥವ್ಯತ್ಯಾಸವು ಏನೂ ಇಲ್ಲದೆ ಇದ್ದರೂ ಇಲ್ಲಿ ತೃತೀಯೆ ಬರುವುದಕ್ಕೆ ಯಾವ ವ್ಯಾಕರಣಕಾರರೂ ಸೂತ್ರವನ್ನು ಹೇಳದಿರುವುದರಿಂದ ಅಂತಹ ಪ್ರಯೋಗಗಳನ್ನೆ ಅಸಾಧುವೆಂದುಹೇಳಬೇಕು. ಒಂದುವೇಳೆ ಸೂತ್ರವಿಲ್ಲದಿದ್ದರೂ, 'ವ್ಯತ್ಯಯೋಬಹುಳಂ' ಎಂಬಸೂತ್ರದಿಂದ ವಿಭಕ್ತಿಪಲ್ಲಟವಾಗಿದೆ ಎಂದು ಹೇಳಬಹುದು. ಅವರೂ ಓಣ ಎಂಬ ಪ್ರತ್ಯಯವನ್ನು ಯಾರೂ ಅಂಗೀಕರಿಸಿಲ್ಲ. ಹೀಗೆ ಪ್ರಾಚೀನರಾರೂ ಒಪ್ಪದೆ ಇರುವದನ್ನು ಹೊಸದಾಗಿ ಕಲ್ಪನೆ ಮಾಡುವುದಕ್ಕಿಂತಲೂ ಮಾಡುವನು, ಕೂಡುವನು, ಎಂಬ ಶಬ್ದಗಳೆ ಉಚ್ಚಾರಣೆ ಮಾಡುವರ ವ್ಯತ್ಯಾಸದಿಂದ ಮಾಡೋಣ, ಕೂಡೋಣ ಎಂದು ಆಗಿವೆ ಎಂದು ಹೇಳುವದು ಉತ್ತಮವೆಂದು ತೋರುವುದು.

ಸಂಸ್ಕೃತದಲ್ಲಿ ಭಾವೆಪ್ರಯೋಗಗಳಿಗೆಲ್ಲ ಅಕರ್ಮಕದಂತೆಯೇ ತಾತ್ಪರ್ಯವಾಗುವದರಿಂದ ಭಾಷೆಯಲ್ಲೂ ಇಂತಹ ಪ್ರಯೋಗಗಳನ್ನು ಅಕರ್ಮಕಪ್ರಯೋಗಗಳೆಂದೇ ಹೇಳಬೇಕು. ಮತ್ತು ಕೆಲವು ಸಂದರ್ಭದಲ್ಲಿ ಓಣ ಎಂಬುವದು ಸಕರ್ಮಕ ಧಾತುಗಳಮೇಲೂ ಸೇರಿರುವದರಿಂದಲೂ ಎಂದಿಗೂ ಭಾವಾರ್ಥದಲ್ಲಿ ಆಖ್ಯಾತಪ್ರತ್ಯಯಗಳು ಬರುವದಿಲ್ಲವಾದುದರಿಂದಲೂ ಇದು ಭಾವಾರ್ಥಕವಲ್ಲವೆಂದು ತಿಳಿಯಬೇಕು. ಇದೇ ಅರ್ಥವು ಮುಂದೆ ವಿವರಿಸಲ್ಪಡುವುದು.

ಭೂ ವಿ

ಭೂವಿಯು ಮೇಲ್ಬಾಗವು ಶೈತ್ಯವನ್ನು ಕಳೆದುಕೊಂಡಿರುವುದರಿಂದ ಅದು ಸ್ವಯಂ ತೇಜಸ್ಸನ್ನಳ್ಳ ಗ್ರಹವೆಂದು ಎಣಿಸಲ್ಪಟ್ಟಿಲ್ಲ. ಆದಾಗ್ಯೂ ಭೂವಿಯಿಂದ ಅಕಾಶದಟ್ಟಿ ಮೊದಲಾದವುಗಳ ಸಹಾಯದಿಂದ ನಾವು ಅಂತರಿಕ್ಷಕ್ಕೆ ಹೊರಟುಹೋಗಿ

ನ್ನಗಳಾಗಿರುವುದು. ಅವುಗಳಲ್ಲಿ ಸುಖಂತಕಾರಕಪ್ರಭೇದಗಳನ್ನು ಮಾತ್ರ ಹಿಂದಿನ ಸಂಚಿಕೆಗಳಲ್ಲಿ ವಿವರಿಸಿರುವುದು. ಸ್ತ್ರೀಪ್ರತ್ಯಯ ಸವಾಸ ಮೊದಲಾದವು ಮುಂದೆ ವಿವರಿಸಲ್ಪಡುವುದು. ಈಗ ಧಾತುಪ್ರಕೃತಿಗಳಾದ ಶಬ್ದಗಳು ಮಾತ್ರ ಮೊದಲು ಹೇಳಲ್ಪಡುವುದು. ಸಾಮಾನ್ಯವಾಗಿ ವಾಕ್ಯಗಳಲ್ಲೆಲ್ಲ ಕ್ರಿಯೆಯೇ ಮುಖ್ಯವಾಗಿರುವುದು. ಅಂತಹ ಕ್ರಿಯೆಯನ್ನು ಬೋಧಿಸುವ ಪ್ರಕೃತಿಗೆ ಧಾತುವೆಂದು ಹೆಸರು. ಇಂತಹ ಧಾತುಪ್ರಕೃತಿಕ ಶಬ್ದಗಳು,—ತಿಜಂತವೆಂದೂ, ಕೃದಂತವೆಂದೂ ಎರಡುವಿಧವಾಗಿರುವವು.

ಇವುಗಳಲ್ಲಿ ಕೃತ್ಪ್ರತ್ಯಯಗಳು ಕರ್ತೃ ಮೊದಲಾದ ಕಾರಕಾರ್ಥಗಳಲ್ಲೂ ಭಾವಾರ್ಥದಲ್ಲೂ ಬರುವವು. ತಿಜ್ಪ್ರತ್ಯಯಾಡಳಾದರೋ ಸಂಸ್ಕೃತದಲ್ಲಿ ಕರ್ತ್ರರ್ಥದಲ್ಲೂ ಕರ್ಮಾರ್ಥದಲ್ಲೂ, ಭಾವಾರ್ಥದಲ್ಲೂ ಬರುವವೆಂದು ಹೇಳಲ್ಪಟ್ಟಿದೆ. ಕರ್ಣಾಟಕಭಾಷೆಯಲ್ಲಾದರೊ ಕರ್ತೃ ಕರ್ಮಾರ್ಥಗಳೆರಡರಲ್ಲೇ ಬರುವವು; ಭಾವಾರ್ಥದಲ್ಲಿ ಬರುವದಿಲ್ಲ.

ಏತಕ್ಕೆಂದರೆ, ಭಾಷೆಯಲ್ಲಿ ಧಾತ್ವರ್ಥರೂಪವಾದ ಭಾವವು ಕೃತ್ತುಗಳಿಂದ ಹೇಳಲ್ಪಡುವದೇ ಹೊರತು ತಿಜ್ಪ್ರತ್ಯಯಗಳಿಂದ ಹೇಳಲ್ಪಡುವದಿಲ್ಲ. ಆದುದರಿಂದಲೇ ಪೂರ್ವಕರಾರೂ ಪ್ರಯೋಗಿಸಲಿಲ್ಲ. ಮತ್ತು ಕನ್ನಡಭಾಷೆಯಲ್ಲಿ ಸಂಸ್ಕೃತಭಾಷೆಯಂತೆ ಭಾವೇಪ್ರಯೋಗವು ಅಮ್ಮ ಚನ್ನಾಗಿರುವದಿಲ್ಲ. ಆದರೆ ಈಚಿಗೆ ಕೆಲವರು ಓಣ, ಎಂಬುದೊಂದು ಪ್ರತ್ಯಯವನ್ನು ಕಲ್ಪಿಸಿಕೊಂಡು ಗೌರವಾರ್ಥವನ್ನು ತೋರಿಸುವದಕ್ಕಾಗಿ ಮಾಡೋಣ, ಕೂಡೋಣ, ಹೋಗೋಣ ಮೊದಲಾದವುಗಳನ್ನು ಭಾವೆಪ್ರಯೋಗಗಳೆಂದು ಹೇಳುತ್ತಾರೆ. ಇವನ್ನು ಭಾವೆಪ್ರಯೋಗಗಳೆಂದು ಹೇಳುವುದಕ್ಕಾಗುವದಿಲ್ಲ; ಏಕೆಂದರೆ ಭಾವೆಪ್ರಯೋಗದಲ್ಲಿ ವಿಭಕ್ತಿಪ್ರಕರಣದಲ್ಲಿ ಹೇಳಿರುವಂತೆ ಆಖ್ಯಾತಪ್ರತ್ಯಯಗಳಿಂದ ಕರ್ತೃ ಅಥವಾ ಕರ್ಮ ಇವೆರಡರಲ್ಲಿ ಯಾವುದೊಂದೂ ಹೇಳಲ್ಪಡದಿದ್ದರೆ, (ಎಂದರೆ ಭಾವಾರ್ಥದಲ್ಲಿ ಪ್ರತ್ಯಯವನ್ನು ವಿಧಿಸಿದ್ದರೆ) ಅಲ್ಲಿ ಕರ್ತೃವಾಚಕವಾದ ಶಬ್ದದಮೇಲೆ ತೃತೀಯಾವಿಭಕ್ತಿಯನ್ನು ಮಾಡಬೇಕೆಂದು ಸೂತ್ರದಲ್ಲಿ ಹೇಳಿರುವದರಿಂದ ತೃತೀಯಯನ್ನೇ ಮಾಡಬೇಕು. ಇಂತಹ ಶಬ್ದಗಳಿದ್ದಾಗ ಅನೇಕಸಂದರ್ಭದಲ್ಲಿ ತೃತೀಯೆ ಇಲ್ಲದೆ ಪ್ರಥಮೆಯನ್ನೇ ಉಪಯೋಗಿಸಿರುವುದರಿಂದ ಇವನ್ನು ಭಾವೆಪ್ರಯೋಗವೆಂದು ಹೇಳುವುದಕ್ಕಾಗದು. ಮತ್ತು ತಮ್ಮಿಂದ ಮಾಡೋಣವಾಗಲಿ, ನಿನ್ನಿಂದ ಮಾಡೋಣವಾಗಲಿ, ತಾವು ಕೂಡೋಣವಾಗಲಿ, ತಾವು ಕೂಡೋಣಬಂ

ಯೇ ಚಂದ್ರನಲ್ಲಯೂ ಕೂಡ ಬಂದಿರಬಹುದು. ಮೇಲೆ ಹೇಳಿದ ಸಾದೃಶ್ಯವೇ ಈ ಅನುಮಾನಕ್ಕೆ ಆಧಾರವಾದದ್ದು ಎಂದು ಅನೇಕ ಸಿದ್ಧಾಂತಿಗಳು ಗೊತ್ತುಮಾಡಿರುತ್ತಾರೆ. ಇಂಥಾ ಪರ್ವತಗಳೂ ಕಣಿವೆಗಳೂ ಮತ್ತು ಮೇಲೆ ಹೇಳಿದ ದ್ವಾರಗಳೂ ಚಂದ್ರಮಂಡಲದ ಮೇಲೆ ಅಸಂಖ್ಯಾತವಾಗಿರುತ್ತವೆ. ಸಿದ್ಧಾಂತಿಗಳು ಚಂದ್ರಮಂಡಲದ ಮೇಲೆ ಇರತಕ್ಕ ಅಗ್ನಿಪರ್ವತಗಳ ವಿಸ್ತೀರ್ಣವನ್ನು ಗಣಿತಶಾಸ್ತ್ರದಿಂದ ಗೊತ್ತುಮಾಡಿರುತ್ತಾರೆ. ಅಲ್ಲಿನ ಅಗ್ನಿಪರ್ವತಗಳೂ ನಮ್ಮ ಅಗ್ನಿಪರ್ವತಗಳಿಗಿಂತಲೂ ಬಹಳ ದೊಡ್ಡವುಗಳೆಂಬದಾಗಿಯೂ ಚಂದ್ರಮಂಡಲಕ್ಕೆ ಸ್ವಕೀಯವಾದ ತೇಜಸ್ಸಿಲ್ಲವೆಂಬದಾಗಿಯೂ ಸೂರ್ಯನ ತೇಜಸ್ಸು ಅದರ ಮೇಲೆ ಬೀಳುವುದರಿಂದ ಆ ಬೆಳಕು ನಮ್ಮ ಕಡೆ ಪ್ರತಿಫಲಿಸಿದಾಗ ಚಂದ್ರಮಂಡಲವು ತೇಜಸ್ಸುಳ್ಳದ್ದೆಂದು ಕಾಣಿಬರುವುದೆಂಬದಾಗಿಯೂ, ಭೂಮಿಯೂ ಅದೇ ರೀತಿಯಲ್ಲಿ ಸೂರ್ಯನ ತೇಜಸ್ಸಿನಿಂದ ಇತರ ಗ್ರಹಗಳ ಕಡೆಗೆ ತೇಜೋಮಯನಾಗಿ ಕಾಣುವದೆಂಬದಾಗಿಯೂ ಭೂಗರ್ಭದಲ್ಲಿರತಕ್ಕ ತೀಕ್ಷ್ಣವಾದ ಅಗ್ನಿಯನ್ನು ನೋಡಲಾಗಿ ಲಕ್ಷಾಂತರ ವರ್ಷಗಳ ಕೆಳಗೆ ಈಗ ತಣ್ಣಗಾಗಿ ಪ್ರಾಣಿಗಳೇ ಮೊದಲಾದ ಪದಾರ್ಥಗಳಿಗೆ ಆವಾಸಸ್ಥಾನವಾಗಿಯೂ ಇರತಕ್ಕ ಈ ಭೂಮಿಯು ಒಂದಾನೊಂದು ಕಾಲದಲ್ಲಿ ಸ್ವಯಂ ತೇಜೋಮಯವಾಗಿತ್ತೆಂಬದಾಗಿಯೂ ಸಿದ್ಧಾಂತಿಗಳು ಗೊತ್ತುಮಾಡಿ ಇದಾರೆ.

ಬೆಳಕು.

ಬೆಳಕು ಎಂಬುವದರ ಸಾಮಾನ್ಯ ವ್ಯಕ್ತಿಜ್ಞಾನ ನಮಗೆಲ್ಲರಿಗೂ ಇದೆ. ಅದು ನೇತ್ರೇಂದ್ರಿಯದಿಂದ ಗ್ರಹಿಸಲ್ಪಡುವ ಒಂದು ವಿಷಯವೆಂದು ಎಲ್ಲರೂ ಬಲ್ಲರು. ಆದರೆ ನಮ್ಮ ಇಂದ್ರಿಯಕ್ಕೆ ತೋರುವುದೆ ಪದಾರ್ಥಗಳ ಸಹಜ ಸ್ವಭಾವಗಳೆಂದು ಹೇಳಲಿಕ್ಕಾಗುವುದಿಲ್ಲ. ಗರಗರನೆ ತಿರುಗಿಸುತ್ತಿರುವ ಒಂದು ಹಚ್ಚಿದ ಗಂಧದ ಕಡ್ಡಿಯು ವೃತ್ತಾಕಾರ ಚಲನವ್ರಣ್ಣ ಬಿಂದುವಾದಾಗಲ್ಯೂ ವೃತ್ತವೆಂತಲೇ ತೋರುವುದು. ದೂರದಲ್ಲಿರತಕ್ಕ ಒಂದು ದೊಡ್ಡ ಪದಾರ್ಥವು ಅದರ ಸಹಜವಾದ ಗಾತ್ರಕ್ಕಿಂತಲೂ ಸಣ್ಣದಾಗಿಯೂ,

ಅಲ್ಲಿಂದ ಭೂಮಿಯನ್ನು ನೋಡಿದರೆ ಅದು ಗೋಳಾಕಾರವಾಗಿಯೂ ಚಂದ್ರನಂತೆ ಕಾಂತಿಯುಳ್ಳದ್ದಾಗಿಯೂ ಕಾಣಬರುವುದು. ಚಂದ್ರನು ಹೇಗೋಹಾಗೆ ಭೂಮಿಯೂ ಸೂರ್ಯಕಿರಣಗಳನ್ನು ಹೊಂದಿ ಅದೇ ಬೆಳಕನ್ನು ಪ್ರತಿಫಲಿಸುವಂತೆ ಮಾಡುತ್ತದೆ. ನಮ್ಮ ಭೂಮಿಗೆ ಅತ್ಯಂತ ಸವಿಾಪದಲ್ಲಿರತಕ್ಕ ಗ್ರಹವು ಚಂದ್ರಗ್ರಹವಾಗಿರುವುದು. ಇದು ೨೯ ದಿವಸಕ್ಕೊಂದಾವರ್ತಿ ಭೂಮಿಯು ಸುತ್ತಲೂ ಸುತ್ತುವುದು. ಭೂಮಿಯೂ ಚಂದ್ರನೂ ಇವೆರಡೂ ಸೂರ್ಯನೆನ್ನು ಪ್ರದಕ್ಷಿಣ ಮಾಡುವವು. ಸೂರ್ಯನ ತೇಜಸ್ಸನ್ನು ಹೊಂದತಕ್ಕ ಗ್ರಹಗಳನೇಕವಿರುವವು. ಅವುಗಳಲ್ಲಿ ಭೂಮಿಯು ಒಂದಾಗಿರುವುದು. ಇಟಲೀ ದೇಶದಲ್ಲಿ ಅಗ್ನಿಪರ್ವತಗಳಿರುತ್ತವೆ. ಈ ಪರ್ವತಗಳಿಂದ ಭೂಗರ್ಭದಲ್ಲಿರತಕ್ಕ ಅಗ್ನಿಯು ದ್ವಾರಗಳನ್ನು ಮಾಡಿಕೊಂಡು ಅಲ್ಲಿರತಕ್ಕ ಸಕಲ ಲೋಹಗಳನ್ನೂ ಕರಗಿಸಿ ನೀರಿನಂತೆ ಈಚೆಗೆ ಹರದು ಪರ್ವತಶಿಖರಗಳಲ್ಲನೇಕ ದ್ವಾರಗಳನ್ನು ಮಾಡಿರುವುದು. ಈಂಥಾ ದ್ವಾರಗಳು ಭೂಮಿಯಮೇಲೆ ಹೇಗೆ ದೃಷ್ಟಿಪಥಕ್ಕೆ ಬೀಳುವುವೋ ಹಾಗೆಯೇ ಚಂದ್ರನೇ ಮೊದಲಾದ ಅನೇಕ ಗ್ರಹಗಳಲ್ಲಿ ದುರ್ಬೀನಿನ ಸಹಾಯದಿಂದನೋಡಲ್ಪಡಬಹುದು ವೆಸೂವಿಯುಸ್ ಪರ್ವತಗಳಲ್ಲಿ ಕಾಣಲ್ಪಡತಕ್ಕ ಈಗ ಶೈತ್ಯವನ್ನು ಕಳೆದುಕೊಂಡಿರತಕ್ಕ ಅಗ್ನಿಪರ್ವತಗಳೂ ಮತ್ತು ಕರಗಿದ ಪದಾರ್ಥಗಳು ಒಳಗಿನಿಂದ ಬಂದ ದ್ವಾರಗಳೂ ಇವುಗಳನ್ನೆಲ್ಲಾ ನಾವು ಪ್ರತ್ಯಕ್ಷವಾಗಿ ನೋಡಬಹುದು. ಕೆಲವು ಕಾಲಗಳಲ್ಲಿ ಈ ದ್ವಾರಗಳಿಂದ ಕರಗಿದ ಲೋಹಾದಿಗಳೊಡನೆ ಧೂಳುಕೆಂಡಗಳೂ ನೀರಿನಲವಿ, ಹೊಗೆ ಮೊದಲಾದವುಗಳೆಲ್ಲಾ ವಿಶೇಷವಾಗಿ ಬರುತ್ತವೆ ಪರ್ವತಶಿಖರಗಳಿಂದ ಕರಗಿ ಜಲರೂಪವಾಗಿರತಕ್ಕ ಪ್ರವಾಹವು ಗಿರಿನದಿಗಳಂತೆ ಪ್ರವಹಿಸಿ ಅನೇಕ ಪಟ್ಟಣಗಳನ್ನೂ ಗ್ರಾಮಗಳನ್ನೂ ಮುಳಗಿಸಿ ಇವೆ. ಮತ್ತು ನೀರಿನ ಆವಿ, ಬೂದಿ ಇವುಗಳೆಲ್ಲಾ ವಿಪರೀತ ವೇಗವಾಗಿ ಅಂತರಿಕ್ಷದ ಕಡೆಗೆ ಹೋಗುತ್ತಲಿರುತ್ತವೆ.

ಈ ಭೂಮಿಯಲ್ಲಿ ಕಾಣತಕ್ಕ ಅಗ್ನಿಪರ್ವತಗಳೂ ಅವುಗಳಲ್ಲಿರತಕ್ಕ ದ್ವಾರಗಳಿಗೂ ಚಂದ್ರನಲ್ಲಿ ದುರ್ಬೀನಿನ ಸಹಾಯದಿಂದ ಕಾಣತಕ್ಕ ಪರ್ವತಗಳಿಗೂ ದ್ವಾರಗಳಿಗೂ ಸರಿಯಾದ ಸಾದೃಶ್ಯವು ಇರುವುದು. ಈ ದ್ವಾರಗಳು ಒಂದಕ್ಕೊಂದು ಅಂಟಿಕೊಂಡಿರುವಂತೆ ಕಾಣಬರುವವು. ಭೂಮಿಯು ಅಗ್ನಿಪರ್ವತಗಳಲ್ಲಿ ಹೇಗೆ ಬಂಡೆಗಳೂ ಲೋಹಗಳೂ ಭೂಗರ್ಭದ ಶಾಖದಿಂದ ಕರಗಿ ಈಚೆಗೆ ಬರುತ್ತವೋ ಹಾಗೆ

ವಾಗುವುದಿಲ್ಲ. ತೂಕಾಧಿಕ್ಯವಿಲ್ಲದ ಮೇಲೆ ವಸ್ತುಪ್ರವೇಶವಾಗಲಿಲ್ಲವೆಂದು ಅನುವೂ
ನ. ಪೂರ್ವೀಕರು ಉಷ್ಣವನ್ನು ತೂಕವಿಲ್ಲದ ವಸ್ತುವೆಂತ ಹೇಳಿರುತ್ತಾರೆ.

೨. ಒಂದು ಕಬ್ಬಿಣದ ಪೊಳೆಯುನ್ನು ಚಮಟಗೆಯಿಂದ ಕುಟ್ಟುವುದೂ ಚರಕಿ
ಯಲ್ಲಿ ಉಜ್ಜುವುದೂ ಇವೇ ಮುಂತಾದ ಕೃತ್ಯಗಳಿಂದ ಶಾಖವಾಗಿ ಮಾಡಬಹುದು.
ಈ ಯಾವ ಸಂದರ್ಭದಲ್ಲಿಯೂ ಕಬ್ಬಿಣದ ಪೊಳೆಗೆ ವಸ್ತು ಸೇರಲಿಲ್ಲ. ಆದಾಗ್ಯೂ
ಉಷ್ಣಾಧಿಕ್ಯವುಂಟಾಯಿತು, ಆದ್ದರಿಂದ ಉಷ್ಣವೆಂಬುವದು ಚೈತನ್ಯವೇಹೊರ್ತು
ವಸ್ತುವಲ್ಲ.

೩. ಅಲ್ಲದೆ ಹೊಗೆಯಂತ್ರ (Steam engine) ಮೊದಲಾದವುಗಳ ಮೂ
ಲಕ ಉಷ್ಣದಿಂದ ಚೈತನ್ಯವನ್ನು ಪಡೆಯಬಹುದು, ವಸ್ತುವನ್ನು ಪಡೆಯುವದಕ್ಕೆ
ಆಗುವದಿಲ್ಲ.

೪. ವಿದ್ಯುತ್ ಮತ್ತು ಉಷ್ಣ ಇವುಗಳಲ್ಲೊಂದರಿಂದ ಮತ್ತೊಂದನ್ನು
ಪಡೆಯುಬಹುದು ಆದರೆ ವಸ್ತುವಿನಿಂದ ಇವುಗಳನ್ನೂ ಇವುಗಳಿಂದವಸ್ತುವನ್ನೂ ಪಡೆ
ಯುವದಕ್ಕೆ ಆಗುವುದಿಲ್ಲ.

ಇವುಗಳಿಂದ ಪೂರ್ವೀಕರು ತಕ್ಕಡಿಯಲ್ಲಿ ತೂಕವನ್ನು ಗೊತ್ತುಮಾಡಲಾರದ
ಷ್ಟು ಸೂಕ್ಷ್ಮವಾದ ವಸ್ತುಗಳುಂಟೆಂತ ಒಪ್ಪುವಂತೆಯೂ, ನವೀನರು ತೂಕವಿಲ್ಲದ
ವಸ್ತುವೇ ಇಲ್ಲವೆಂತ ಹೇಳುವಂತೆಯೂ ತೋರುವುದು. ಆದರೆ ಅದು ಸರಿಯಲ್ಲ; ಯಾ
ಕೆಂದರೆ ಈಗಿನವರೂ ಕೂಡ ಎಲ್ಲಾ ಸ್ಥಳವನ್ನು ನಿಬಿಡವಾಗಿ ಈತರ್ (ether) ಎಂಬ
ತೂಕರಹಿತವಾದವಸ್ತು ಆಕ್ರಮಿಸಿಕೊಂಡಿದೆಯಂತ ಹೇಳುತ್ತಾರೆ. ಈ ಈತರ್ ಅನು
ಮೇಯವೇ ಹೊರ್ತು ಪ್ರತ್ಯಕ್ಷವೇದ್ಯವಲ್ಲ. ಮತ್ತು ಇದರ ಚಲನದಿಂದ ( )
ಉಷ್ಣ ಬೆಳಕ, ವಿದ್ಯುತ್ ಮುಂತಾದ ಚೈತನ್ಯಗಳುಂಟಾಗುವುವೆಂದು ಹೇಳುತ್ತಾರೆ.
ಈ ಮತವು ಆಕ್ಷೇಪಕ್ಕೆ ಅವಕಾಶಕೊಡದೆ ಇಲ್ಲ, ಆದಾಗ್ಯೂ ಇದು ಈಗ ಬಹುಮಂದಿ
ಭೌತಿಕಶಾಸ್ತ್ರಜ್ಞರ ಅಭಿಪ್ರಾಯಾನುಸಾರವಾಗಿದೆ.

ಬೆಳಕಿಗೆ ಹಲ್ಯಾಗೆ ಉತ್ಪತ್ತಿ ಎಂತ ಸ್ವಲ್ಪ ವಿಚಾರಮಾಡಿದರೆ ದೀಪ ಮುಂತಾ
ದ ಉರಿಯುವ ಜ್ವಾಲೆಗಳಿಂದಲೂ, ಕೆಂಪಾಗಿ ಕಾದ ಕಬ್ಬಿಣ ಮುಂತಾದ ಉಷ್ಣ
ವದಾರ್ಥಗಳಿಂದಲೂ, ಸೂರ್ಯ ಮುಂತಾದ ಸ್ವಯಂ ಪ್ರಕಾಶವಾದ ಗ್ರಹಗಳಿಂದ
ಲೂ ಉಂಟಾಗುವುದೆಂದು ತಿಳಿದುಬರುತ್ತೆ.

ಕಾಣಿಸುವುದು. ಹೀಗೆ ಪದಾರ್ಥಗಳ ನಿಜಸ್ವರೂಪವೆಲ್ಲದೆ ವಿಕೃತಿ ಸ್ವರೂಪವು ನಮಗೆ ತಿಳಿದುಬರುವುದು ನಮ್ಮ ಇಂದ್ರಿಯಗಳ ಸ್ವಭಾವದಿಂದ. ಆದುದರಿಂದ ಇಂದ್ರಿಯಜಮೂಲಕ ಗ್ರಹಿಸಲ್ಪಟ್ಟ ಜ್ಞಾನವೆಲ್ಲವೂ ಯಥಾರ್ಥವಾದುದೆಂದು ತಿಳಿಯಕೂಡದು. ಆದರೆ ನಮ್ಮ ಜ್ಞಾನವೆಲ್ಲವೂ ಇಂದ್ರಿಯಜನಿತವೇ. ಆದುದರಿಂದಲೂ, ಮತ್ತು ನಮ್ಮ ಇಂದ್ರಿಯಗಳು ನಮ್ಮನ್ನು ವಂಚಿಸಿ ಪದಾರ್ಥಗಳನ್ನು ನಿಜಸ್ವರೂಪಿನಲ್ಲಿ ತೋರಿಸದೆ ವಿಕಾರ ಸ್ವರೂಪಿನಲ್ಲಯೇ ತೋರಿಸುವ ಸ್ವಭಾವವುಳ್ಳದ್ದಾದುದರಿಂದಲೂ ನಮ್ಮ ಜ್ಞಾನವೆಲ್ಲವೂ ತಪ್ಪಾದೆಂತಲೂ, ಶುದ್ಧಜ್ಞಾನವನ್ನು ಪಡೆಯುವುದಕ್ಕೆ ನಮಗೆ ಅವಕಾಶವೇ ಇಲ್ಲವೆಂತಲೂ ಆಕ್ಷೇಪಿಸಬಹುದು. ಇದಕ್ಕೆ ಪ್ರತ್ಯುತ್ತರವನ್ನು ಕೊಡತಕ್ಕ ಕರ್ತವ್ಯ ತತ್ವಶಾಸ್ತ್ರ (Metaphysics) ದ್ದಾಗಿರುವುದೇ ಅಲ್ಲದೆ ವಸ್ತುಶಾಸ್ತ್ರ (Physics) ದ್ದಲ್ಲವು. ನಮ್ಮ ಜ್ಞಾನವೆಲ್ಲವೂ ಇಂದ್ರಿಯ ಜನಿತವಲ್ಲವೆಂತಲೂ, ಪ್ರತ್ಯಕ್ಷ (Observation) ಮತ್ತು ಅನುಮಾನ (Inference) ಇವುಗಳಿಗೂ ಆಧಾರಭೂತವಾದ ಸಹಜವಾದಜ್ಞಾನ (Intution) ನಮ್ಮಲ್ಲಿಯೆ ಇದೇ ಎಂದರೆ ಯಾವವಿಧದಿಂದಲೂ ಕಲಿತದ್ದಲ್ಲದೆ ಸ್ವಭಾವ ಜನ್ಯ ಎಂತಲೂ, ಆ ಜ್ಞಾನದ ಸಹಾಯದಿಂದಲೇ ಪ್ರತ್ಯಕ್ಷವೂ ಅನುಮಾನವೂ ಸಾಧ್ಯವೆಂತಲೂ, ಮತ್ತು ಅಂಥಾ ಜ್ಞಾನಸಹಾಯದಿಂದ ಪದಾರ್ಥಗಳ ನಿಜಸ್ವರೂಪವನ್ನು ಗೊತ್ತುಮಾಡಿ ಶುದ್ಧ ಜ್ಞಾನವನ್ನು ಸಂಪಾದಿಸಬಹುದೆಂತಲೂ, ತತ್ವಶಾಸ್ತ್ರದಿಂದ ತಿಳಿದುಬರುತ್ತೆ. ಈಗ ಅಂಥಾ ಜ್ಞಾನದ ಸಹಾಯದಿಂದ ಬೆಳಕಿನ ಸ್ವರೂಪವನ್ನು ಗೊತ್ತುಮಾಡಬೇಕೆಂಬುವುದೇನೂ ನಮ್ಮ ಉದ್ದೇಶವಲ್ಲ. ಭೌತಿಕ ಶಾಸ್ತ್ರಸಹಾಯದಿಂದ ತಿಳಿಯಬಹುದಾದ ಮಟ್ಟಿಗೆ ಇದರ ವಿಷಯವನ್ನು ಸ್ವಲ್ಪ ತಿಳಿಯಬೇಕೆಂಬುವುದೇ ಈಗಿನ ಪ್ರಯತ್ನ.

ಪೂರ್ವಕಾಲದ ಯೂರೋಪಿನ ಭೌತಿಕ ಶಾಸ್ತ್ರಜ್ಞರು ಬೆಳಕು ಮತ್ತು ಉಷ್ಣ ಇವೆರಡೂವಸ್ತು (matter) ಗಳಿಂದೂ ಇವು ತೂಕವಿಲ್ಲದ್ದೆಂತಲೂ ಅಭಿಪ್ರಾಯಪಟ್ಟಿದ್ದರು. ನವೀನರು ಈ ಅಭಿಪ್ರಾಯ ತಪ್ಪೆಂತಲೂ, ಬೆಳಕು ಉಷ್ಣ ಇವೆರಡೂ ವಸ್ತುವಲ್ಲ. ಚೈತನ್ಯ (energy) ವಿಶೇಷವೆಂತಲೂ ಹೇಳುತ್ತಾರೆ. ಇದಕ್ಕೆ ಇವರು ಹೇಳುವ ಮುಖ್ಯಕಾರಣಗಳೇನೆಂದರೆ.

೧ ಒಂದು ಪದಾರ್ಥದ ಚೆನ್ನಾಗಿ ಕಾಯಿಸಲ್ಪಟ್ಟಾಗ್ಯೂ ಅದರ ತೂಕ ಅಧಿಕ

ಒಂದು ಉರಿಯುವ ಮೇಣದ ಬತ್ತಿಯನ್ನು ನೋಡಿದ್ದೀರಿದರೆ ಮೇಣವು ಕರಗಿ ಎಣ್ಣೆಯಾಗಿ ಈ ಎಣ್ಣೆ ಆಕರ್ಷಣಾ ಶಕ್ತಿಯಿಂದ (capillarity) ಬತ್ತಿಯಲ್ಲಿ ಮೇಲಕ್ಕೆ ಎದ್ದು ಅಲ್ಲಿನ ಉರಿಯುವ ಜ್ವಾಲೆಯು ಶಖೆಯಿಂದ ವಾಯುರೂಪವನ್ನು ಹೊಂದಿ ಮೇಣದ ಅಣುಗಳು ವಾಯುವಿನಲ್ಲಿರುವ ಅಂಗಾರ (Carbon) ದೊಡನೆ ಸಂಯೋಜನವಾಗುತ್ತವೆ. ಸಂಯೋಜನ ವೇಗದಿಂದ ಶಖೆಯು-ಬೆಳಕು ಉಂಟಾಗುತ್ತವೆಂಬ ಸಂಗತಿಗಳು ತಿಳಿದುಬರುತ್ತವೆ. ಈ ಅಂಶಗಳಲ್ಲಿ ಒಂದೊಂದನ್ನೂ ಚೆನ್ನಾಗಿ ನೋಡಬಹುದು.

A ಮೇಣವು ಕರಗುವುದು ಕಣ್ಣಿಗೆ ಕಾಣುತ್ತದೆ. ಉರಿಯುವ ಬತ್ತಿಯನ್ನು ಓರೆ ಮಾಡಿದರೆ ಕರಗಿದ ಮೇಣವು ಸುರಿಯುತ್ತದೆ.

B ಬತ್ತಿಯಲ್ಲಿ ಮೇಣವೇರುವುದನ್ನು ಕಣ್ಣಿನಿಂದಲೇ ನೋಡಬಹುದು. ಅಲ್ಲದೆ ಮೇಣದ ಬತ್ತಿಯನ್ನು ಆರಿಸಿ ಕರಗಿಸಿದ್ದ ಮೇಣವೆಲ್ಲ ಗಟ್ಟಿಯಾದಮೇಲೆ ಮೇಲಿನ ಕಪ್ಪಾದ ಬತ್ತಿಯನ್ನು ಕತ್ತರಿಸಿಕೊಂಡು ಶಾಖಕ್ಕೆ ಹಿಡಿದರೆ ಅದರಲ್ಲಿನ ಎಣ್ಣೆ ಕರಗಿ ದೃಶ್ಯವಾಗುವುದು.

C ಉರಿಯುನ್ನು ಊದಿದ ಕೂಡಲೇ ಹೊಗೆ ಕಾಣಿಸುವುದು. ಈ ಹೊಗೆಯೇ ಮೇಣದ ವಾಯು ರೂಪಾಂತರ. ಇದಕ್ಕೆ ಕೂಡಲೇ ಉರಿಯುನ್ನು ತೋರಿಸಿದರೆ ಹತ್ತಿಕೊಂಡು ಆರಿಹೋದ ಬತ್ತಿಯನ್ನು ಪುನಃ ಹತ್ತಿಸುವುದು,

ಮೇಣದ ಬತ್ತಿ ಉರಿಯುವಾಗ ಒಂದು ಬಿಳಿ ಕಾಗದವನ್ನು ಸುಟ್ಟುಹೋಗದಂತೆ ಸ್ವಲ್ಪಹೊತ್ತು ಉರಿಯುವ ಜ್ವಾಲೆಯ ಒತ್ತಿ ತೆಗೆದರೆ ಕಾಗದದಮೇಲೆ ಕಪ್ಪು ಕಾಣುವುದು. ಇದು ಉರಿಯದೆ ತಪ್ಪಿಸಿಕೊಂಡು ಹೋಗುವ ಅಂಗಾರದ ಅಣುಗಳು.

ಜ್ವಾಲೆಗಳಿಂದುಂಟಾಗುವ ಬೆಳಕನ್ನು ನೋಡಿದರೆ ಜ್ವಾಲೆಗಳಲ್ಲಿನ ಉಷ್ಣಾಧಿಕ್ಯದಿಂದ ಬೆಳಕುಂಟಾಗುತ್ತೆಂಬ ಸಂಗತಿ ಸ್ಥೂಲವಾಗಿ ತಿಳಿಯುತ್ತೆಯೇ ಹೊರತು ಉಷ್ಣಕ್ಕೂ ಬೆಳಕಿಗೂ ಏನು ಸಂಬಂಧ? ಉಷ್ಣ ಹೆಚ್ಚಿದ ಹಾಗೆಲ್ಲಾ ಬೆಳಕು ಹೆಚ್ಚುತ್ತದೆಯೆ? ಈ ಸಂಗತಿಳು ತಿಳಿಯುವುದಿಲ್ಲ. ಇವುಗಳನ್ನು ತಿಳಿಯುವುದೇಕಾದರೆ ಅನೇಕ ತರಹ ಜ್ವಾಲೆಗಳ ಸಂಗತಿಯನ್ನು ಕುರಿತು ವಿಚಾರ ಮಾಡಬೇಕು

ಯೂನಿವರ್ಸಿಟಿ ವಿದ್ಯಾಭ್ಯಾಸ; ಬಾಲ್ಯವಿವಾಹ.

ಲೋಕದಲ್ಲಿ ಚನ್ನಾಗಿ ವಿದ್ಯಾಭ್ಯಾಸವನ್ನು ಮಾಡಿ ಅನೇಕ ಪರೀಕ್ಷೆಗಳನ್ನು ಕೊಟ್ಟು ಒಳ್ಳೇ ಪದವಿಗೆ ಬರತಕ್ಕವರು ಎಷ್ಟೋ ಜನಗಳಿರುತ್ತಾರೆ. ಒಂದು ಪಾಠ ಶಾಲೆಯಲ್ಲಿ ಓದತಕ್ಕ ವಿದ್ಯಾರ್ಥಿಗಳು ಕೆಲವರು ಎಲ್ಲಾ ಪರೀಕ್ಷೆಗಳಲ್ಲಿಯೂ ತೇರ್ಗಡೆಯಾಗಿ ಒಳ್ಳೇ ಪದವಿಗೆ ಬರುವರು. ಮತ್ತೆ ಕೆಲವರು ಈ ವಿಷಯದಲ್ಲಿ ಸಮರ್ಥರಾಗಿ ವಿದ್ಯಾಭ್ಯಾಸವನ್ನು ಬಿಟ್ಟು ಕೂಲಿಯಿಂದಾಗಲಿ ಅಥವಾ ಅಲ್ಪ ಲಾಭವುಳ್ಳ ನೌಕರಿಗಳಿಂದಲಾಗಲೀ ಜೀವನ ಮಾಡುತ್ತಾ ಅನ್ನಕ್ಕೆ ಸಂಪಾದನೆಯಾದರೆ ಬಟ್ಟೆಗಿಲ್ಲದೆ ಅಹನ್ಯಹನ ಕಾಲಕ್ಷೇಪವನ್ನು ಮಾಡುತ್ತಲಿರುವರು. ಈ ವಿಷಮಯಕ್ಕೆ ಕಾರಣವೇನು? ಪರೀಕ್ಷಿಸಿದರೆ ಈ ಕಾರಣವು ಗೊತ್ತಾಗುವುದು. ವ್ಯಾಸಂಗ ಮಾಡತಕ್ಕ ಕಾಲದಲ್ಲಿ ಆರೋಗ್ಯವಿರಬೇಕು. ಆರೋಗ್ಯವಾಗಿರಬೇಕಾದರೆ ಅನ್ನವಸ್ತ್ರಗಳಿಗೆ ನಿರ್ಮಾದಿಯಾಗಿರಬೇಕು. ಮನಸ್ಸಿಗೆ ಕಿರಕಿರಿಯನ್ನು ಮಾಡತಕ್ಕ ಗೃಹಕೃತ್ಯದ ತಾಪತ್ರಯಗಳು ಯಾವದೂ ಇರಕೂಡದು. ಈ ರೀತಿಯುಳ್ಳಿರಬೇಕಾದರೆ ಸಂಸಾರ ತಾಪತ್ರಯವಿಲ್ಲದವರಿಗೆ ಸಾಧ್ಯವೇ ಹೊರತು ಇತರರಿಗೆ ಸಾಧ್ಯವಲ್ಲ. ಇದರಿಂದಲೇ ನಮ್ಮ ಪೂರ್ವಿಕರು ಉಪನಯನವಾದ ಕೂಡಲೇ ವಿದ್ಯಾಭ್ಯಾಸಕ್ಕುಪಕ್ರಮ ಮಾಡಿ ವೇದಶಾಸ್ತ್ರಾದಿಗಳಲ್ಲಿ ಪೂರ್ಣ ಪಂಡಿತರಾದಮೇಲೆ ದೇಶಾಟನೆಯನ್ನು ಮಾಡಿ ಗುರುದಕ್ಷಿಣೆಯನ್ನು ತಂದು ಕೊಟ್ಟು ಗುರುಗಳಿಜ್ಞೆಯನ್ನು ಹೊಂದಿ ಸಮಾವರ್ತನೆ ಕರ್ಮವನ್ನು ಪೂರೈಸಿಕೊಂಡು ವಿವಾಹ ಮಾಡಿಕೊಳ್ಳಬೇಕೆಂದು ವಿಧಾಯಕ ಮಾಡಿದ್ದರು. ಆಗ ವೇದಶಾಸ್ತ್ರಗಳು ಜೀವಿಕೆಗೆ ಸಾಧ್ಯವಾದ ವಿದ್ಯೆಯಾಗಿತ್ತು. ಈಗ ರಾಜವಿದ್ಯೆಗಳೆಷ್ಟೋ ಇರುತ್ತವೆ. ಅವುಗಳಲ್ಲಿ ಪೂರ್ಣ ಪಾಂಡಿತ್ಯವನ್ನು ಹೊಂದಿ ಸ್ವಶಕ್ತಿಯಿಂದ ಜೀವಿಸುವುದಕ್ಕೆ ಸಾಕಾದಷ್ಟು ಪರೀಕ್ಷೆಗಳನ್ನು ಕೊಡುವ ವರಿಗೂ ವಿದ್ಯಾರ್ಥಿಗಳು ವಿವಾಹವನ್ನು ಮಾಡಿಕೊಳ್ಳುವುದೂ ಆತ್ಮಹತ್ಯವನ್ನು ಮಾಡಿಕೊಳ್ಳುವುದೂ ಇವೆರಡೂ ಒಂದೆ. ಬಲಾತ್ಕಾರವಾಗಿ ಸಾಲಸೋಲಗಳನ್ನಾದರೂ ಮಾಡಿ ಮಕ್ಕಳಿಗೆ ವಿವಾಹ ಮಾಡತಕ್ಕ ತಂದೆತಾಯಿಗಳು ಅಪ್ತ ವೇಷಧಾರಿಗಳಾದ ಶತ್ರುಗಳೇ ಹೊರತು ಮಿತ್ರರೆಂದು ಪೂರ್ವಾಪರಜ್ಞರಿಂದ ಎಂದಿಗೂ ಗಣಿಸಲ್ಪಡುವುದಿಲ್ಲ. ವಿವಾಹಾದಿಗಳಿಗೆ ಖರ್ಚು ಮಾಡತಕ್ಕ ದ್ರವ್ಯವನ್ನು ವಿದ್ಯಾಭ್ಯಾಸಕ್ಕೆ ಸಾಲಸೋಲಗಳನ್ನಾದರೂ ಮಾಡಿ ಖರ್ಚುಮಾ

ಜ್ವಾಲೆ.

ಜಲಜನಕವಾಯುವಿನ ಜ್ವಾಲೆ ; ಮೇಣದ ಬತ್ತಿಯಜ್ವಾಲೆ, ಮ್ಯಾಗ್ನಿಸಿಯಂ ಲೋಹದ ಜ್ವಾಲೆ ಇವುಗಳನ್ನು ನೋಡಿದರೆ ಜಲಜನಕವಾಯುವಿನ ಜ್ವಾಲೆಯು ಕಣ್ಣಿಗೆ ಕಾಣಿಸುವುದೇ ಕಷ್ಟ. ಅದು ತೇಜೋ ಹೀನವಾಗಿದೆ ಮ್ಯಾಗ್ನಿಸಿಯಂ ಜ್ವಾಲೆ ನೋಡುವುದಕ್ಕೆ ಶ್ರಮ-ಅಷ್ಟು ತೇಜೋಮಯ-ಮೇಣದ ಬತ್ತಿಯ ಜ್ವಾಲೆ ಸಾಮಾನ್ಯವಾದ ಪ್ರಕಾಶವುಳ್ಳದ್ದು.

ಇವುಗಳ ಶಾಖವನ್ನು ಪರೀಕ್ಷಿಸಿದರೆ ಜಲಜನಕಜ್ವಾಲೆಯು ಅತ್ಯಂತ ಉಷ್ಣವುಳ್ಳದ್ದು. ಕರಗಿಸುವುದಕ್ಕೆ ಸುಮಾರಾಗಿ ಅಸಾಧ್ಯನಾದ ಪ್ಲಾಟಿನಂ ಲೋಹವೂ ಕೂಡ ಈ ಜ್ವಾಲೆಯಲ್ಲಿ ಮೃದುವಾಗುತ್ತೆ. ಅತಿ ಪ್ರಕಾಶಯುಕ್ತನಾದ ಮ್ಯಾಗ್ನಿಸಿಯಾ ಜ್ವಾಲೆಯು ಬಹಳ ಕಡಮೆ ಶಾಖ ಉಳ್ಳದ್ದು. ಆದ್ದರಿಂದ ಉಷ್ಣಾಧಿಕ್ಯದಿಂದ ಪ್ರಕಾಶಾಧಿಕ್ಯವೆಂತ ಹೇಳಲಿಕ್ಕಾಗುವುದಿಲ್ಲ. ಫಾಸ್ವರಸ (Phosphorus), ಶೀಮೆ ಸಾರಾಯಿ (Spirits of Wine), ಅಸಿಟಿಲಿ (Acetilene), ಕಲ್ಲಿದ್ದಲು ವಾಯು (Coalgas) ಈ ಜ್ವಾಲೆಗಳನ್ನು ನೋಡಿದಾಗ್ಯೂ ಅಧಿಕ ಶಾಖವಿದ್ದಕಡೆ ಉಷ್ಣಾಧಿಕ್ಯವಿರುವುದಿಲ್ಲ. ಹೀಗಿರುವಲ್ಲಿ ಬೆಳಕು ಉಂಟಾಗುವುದು ಹ್ಯಾಗೆಂತ ವಿಚಾರಮಾಡಬೇಕಾಗಿರುತ್ತೆ.

ವೇಲೆ ಹೇಳಿದ ಜ್ವಾಲೆಗಳನ್ನು ನೋಡಿದರೆ ಫಾಸ್ವರಸ, ಮ್ಯಾಗ್ನಿಸಿಯಂ, ಇವುಗಳು ತುಂಬಾ ಪ್ರಕಾಶ ಉಳ್ಳವು ; ಮತ್ತು ಇವುಗಳಿಂದ ತುಂಬಾ ಮುಂದವಾದ ಹೊಗೆ ಹೊರಡುತ್ತೆ. ಮೇಣದ ಬತ್ತಿ, ಅಸಿಟಿಲಿ, ಜ್ವಾಲೆಗಳಿಂದ ಹೊಗೆ ಬರುವುದು ಕಣ್ಣಿಗೆ ಕಾಣಿಸುವುದಿಲ್ಲ. ಅದಾಗ್ಯೂ ಒಂದು ಬಿಳೀ ಕಾಗದದಿಂದ ಆ ಜ್ವಾಲೆಗಳನ್ನು ಮುಚ್ಚಿ ಪರೀಕ್ಷಿಸಿದರೆ ಸ್ವಲ್ಪ ಹೊಗೆ ಹೋಗುತ್ತೆಂದು ಕಾಣುತ್ತೆ. ಶೀಮೆ ಸಾರಾಯಿ ಹೈಡ್ರೋಜನ್ ವಾಯುಗಳ ಜ್ವಾಲೆಗಳಿಂದ ಸ್ವಲ್ಪವೂ ಹೊಗೆಬರುವುದೇ ಇಲ್ಲ. ಹೊಗೆಯೆಂದರೆ ಘನಪರಮಾಣುಗಳ ಸಮುದಾಯವು. ಆದ್ದರಿಂದ ಘನಪರಮಾಣುಗಳು ಇರುವ ಜ್ವಾಲೆಗಳಲ್ಲಿ ಬೆಳಕು ಹೆಚ್ಚು ಎಂತ ತೋರುತ್ತೆ. ಹೈಡ್ರೋಜನ್ ಜ್ವಾಲೆಗೆ ಇದ್ದಲು ಧೂಳನ್ನು ಸ್ವಲ್ಪ ಹಾಕಿದರೆ ಜ್ವಾಲೆ ತುಂಬಾ ಪ್ರಕಾಶವಾನವಾಗುತ್ತೆ.

ಇದೇ ಜ್ವಾಲೆಗೆ ತುಪ್ಪರಾಷ್ಟಡಲ್ಪಟ್ಟ ಸುಣ್ಣದ ಗೆಡ್ಡೆಯನ್ನಿಟ್ಟರೆ ಅತ್ಯಂತ ಪ್ರಕಾಶ ಉಂಟಾಗುತ್ತೆ. ಈ ಬೆಳಕಿಗೆ ಡ್ರಮ್ಮಂಡ್ ಬೆಳಕೆಂತ ಹೆಸರುಂಟು. ಸುಣ್ಣದ ಪರಮಾಣುಗಳು ಗೆಡ್ಡೆಯಿಂದ ಬಿಡಿಸಲ್ಪಟ್ಟು ಜ್ವಾಲೆ ಕಾವಿಗೆ ಕೆಂಪಾಗಿ ಕಾದು ಬಹುವಾಗಿ ಜ್ವಾಲೆಯನ್ನು ತುಂಬಿಕೊಂಡು ಬೆಳಕನ್ನು ಕೊಡುತ್ತೆ. ಆದುದರಿಂದ ಬಿಳುಪಾಗಿ ಕಾಯಲ್ಪಟ್ಟ ಘನಪರಮಾಣುಗಳ ಸಮುದಾಯವೇ ಜ್ವಾಲೆಯು ಪ್ರಕಾಶಕ್ಕೆ ಕಾರಣವು.

ಸೀಮೆ ಎಣ್ಣೆ ದೀಪದಲ್ಲಿ ಇದನ್ನುದಹರಿಸಬಹುದು. ಚಿಮ್ಮಿ ಹಾಕದೆ ಬರೀ ದೀಪವನ್ನು ಉರಿಸಿದರೆ ತುಂಬಾ ಹೊಗೆ ಹೊರಡುತ್ತೆ. ಪ್ರಕಾಶ ಕಡಮೆ. ಚಿಮ್ಮಿ ಹಾಕಿದರೆ ಪ್ರಕಾಶ ಹೆಚ್ಚು. ಹೊಗೆ ಬಹಳ ಕಡಮೆ. ಇದಕ್ಕೆ ಕಾರಣವೇನಂದರೆ, ಸೀಮೆ ಎಣ್ಣೆಯಲ್ಲಿ ಕಾರ್ಬನ್ ಪರಮಾಣುಗಳು ಅಧಿಕವಾಗಿವೆ. ಇವುಗಳನ್ನೆಲ್ಲಾ ಚನ್ನಾಗಿ ಬಿಳುಪಾಗುವಂತೆ ಕಾಯಿಸುವುದಕ್ಕೆ ತುಂಬಾ ಆಕ್ಸಿಜನ್ ವಾಯು ಬೇಕು. ಚಿಮ್ಮಿ ಹಾಕದೆ ಇರುವಾಗ ಸ್ವಲ್ಪವೇ ವಾಯುವು ಜ್ವಾಲೆಗೆ ಸಹಕಾರಿಯಾಗುತ್ತೆಯಾಗಿ ಆಕ್ಸಿಜನ್ ಸಾಲದೆಹೋಗಿ, ಶಬ್ದ ಕಡಮೆಯಾಗಿ ಕಾರ್ಬನ್ ಪರಮಾಣುಗಳು ಕಾಯಿಸಲ್ಪಡದೆ ಹೊಗೆ ರೂಪನಲ್ಲಿ ತಪ್ಪಿಸಿಕೊಂಡು ಹೋಗುತ್ತವೆ. ಈ ಹೊಗೆ ಎಲ್ಲವೂ ಶುದ್ಧ ಕಾರ್ಬನ್ ಪರಮಾಣುಗಳ ಸಮುದಾಯ. ಚಿಮ್ಮಿ ಹಾಕಿದರೆ ವಾಯು ಬಹಳವಾಗಿಯೂ, ವೇಗನೆಯೂ ನುಗ್ಗಿ ಜ್ವಾಲೆಗೆ ಸಹಕಾರಿಯಾಗುವುದರಿಂದ ಆಕ್ಸಿಜನ್ ಅಧಿಕವಾಗಿ ಒದಗಲು ಉಷ್ಣವು ತುಂಬಾ ಅಧಿಕವಾಗಿ ಕಾರ್ಬನ್ ಪರಮಾಣುಗಳು ಬೆಳ್ಳಗೆ ಕಾಯಿಸಲ್ಪಟ್ಟು ಜ್ವಾಲೆಗೆ ಪ್ರಕಾಶವನ್ನುಂಟುಮಾಡುತ್ತವೆ. ಜ್ವಾಲೆಯನ್ನು ಬಿಟ್ಟು ಹೊರಗೆ ಬರುವದರೊಳಗಾಗಿ ಇವು ಆಕ್ಸಿಜನ್ ಸಂಗಡ ಸಂಯೋಜನವಾಗಿ ಕಾರ್ಬನಿಕ್ ಆಸಿಡ್ (ಇಂಗಾರಾಮ್ಲ ಜನಕ) ವಾಯುವಾಗುತ್ತವೆ.

ಎ. ವೆಂಕಟೇಶಯ್ಯ, ಬಿ. ಎ.

$\therefore$ $2\frac{1}{2}\%$ರಿಂದ ಬರುವ ಆದಾಯವು $= £ \frac{7400\frac{1}{2} \times 2\frac{1}{4}}{907\frac{1}{4}}$

$£ = 205.$

$\therefore$ ಆದಾಯದ ವ್ಯತ್ಯಾಸವು $= £ 11. \quad 12\ S$

(i) 3% ಬಡ್ಡಿಯು, $86\frac{3}{8}$ ಖರೀದಿಯುಳ್ಳ £ 3200 ಋಣಸಂಚಯವನ್ನು ಮಾರಿ ಬರುವ ಹಣಕ್ಕೆ 4% ಬಡ್ಡಿಯು, $114\frac{7}{8}$ ಖರೀದಿಯುಳ್ಳ ಋಣಸಂಚಯವನ್ನು ಕೊಂಡುಕೊಳ್ಳುವದರಿಂದ ಆಗುವ ಆದಾಯದ ವ್ಯತ್ಯಾತ್ಯಾಸವೆಷ್ಟು?

(ದಳ್ಳಾಳಿ. $\frac{1}{8}\%$)

(ii) 30 % ಬಡ್ಡಿಯುಳ್ಳ £ 27225 ಋಣಸಂಚಯವನ್ನು $90\frac{5}{8}$ ರ ಮೇರಿಗೆ ಕೊಂಡುಕೊಳ್ಳುತ್ತೇನೆ. ಅದರ ಖರೀದಿಯು $91\frac{1}{8}$ ಆದಾಗ ಅದನ್ನು ಮಾರಿ ಬರುವ ಹಣಕ್ಕೆ $3\frac{1}{2}\%$ ಬಡ್ಡಿಯುಳ್ಳ ಋಣಸಂಚಯವನ್ನು $97\frac{3}{8}$ ರ ಮೇರಿಗೆ ಕೊಂಡುಕೊಳ್ಳುತ್ತೇನೆ. ಎಷ್ಟು ಋಣಸಂಚಯವನ್ನು ಕೊಂಡುಕೊಳ್ಳುತ್ತೇನೆ? ಮತ್ತು ನನ್ನ ಆದಾಯದ ವ್ಯತ್ಯಾಸವೆಷ್ಟು? [ದಳ್ಳಾಳಿ, $\frac{1}{8}\%$)

(2) ಒಂದು ಪೊಲವು ತನ್ನನ್ನು ಅಟ್ಟಿಕೊಂಡು ಬರುವ ಬೇಟೆನಾಯಿಗಿಂತ 100 ಗಜ ಮುಂದೆ ಇರುತ್ತದೆ. ಪೊಲವು 5 ಗಜ ಓಡಿದಾಗ ಬೇಟೆನಾಯಿ 7 ಗಜ ದೂರ ಓಡುತ್ತದೆ. ಪೊಲವನ್ನು ಹಿಡಿಯಬೇಕಾದರೆ ನಾಯಿಯು ಎಷ್ಟುದೂರ ಹೋಗ ಬೇಕು?

ಪೊಲಕ್ಕಿಂತ 2 ಗಜಹೆಚ್ಚಾಗಿ ಓಡಬೇಕಾದರೆ, 7 ಗಜ ದೂರ ನಾಯಿಯು ಹೋಗ ಬೇಕು. —— 1 —— $\frac{7}{2}$ ——

—— 130 —— $\frac{7}{2} \times 130 = 455$ ಗಜ.

(i) ಒಬ್ಬ ಪೋಲೀಸು ಜವಾನನು ಪ್ರಾತಃಕಾಲ 7 ಘಂಟೆಗೆ ಸರಿಯಾಗಿ ತನಗಿಂತ $1\frac{1}{2}$ ಘಂಟೆ ಮುಂಚೆ ಓಡಿಹೋದ ಕಳ್ಳನನ್ನು ಹಿಡಿಯುವದಕ್ಕೆ ಹೊರಡುತ್ತಾನೆ. ಕಳ್ಳನು ಒಂದು ಘಂಟೆಗೆ 4 ಮೈಲಿ ವೇಗಕ್ಕೂ, ಜವಾನನು $5\frac{1}{4}$ ಮೈಲಿ ವೇಗಕ್ಕೂ ನಡೆಯುತ್ತಾರೆ. ಕಳ್ಳನು ಯಾವಾಗ ಸಿಕ್ಕುತ್ತಾನೆ?

ದಿ ಸ್ವಶಕ್ತಿಯಿಂದ ಮಕ್ಕಳು ಬದಕುವಂತೆ ಮಾಡಿದರೆ ಆ ಹುಕ್ಕಳು ತಮ್ಮ ಸ್ವಂತ ಸಂಪಾದನೆಯಿಂದ ವಿವಾಹವನ್ನು ಮಾಡಿಕೊಂಡು ತಮ್ಮ ಕುಟುಂಬಪಾಲನವನ್ನು ಮಾಡತಕ್ಕ ಶಕ್ತಿಯನ್ನು ಹೊಂದುವುವಲ್ಲದೆ ಮಾತಾಪಿತೃ ಸೇವೆಗೂಕೂಡ ಶಕ್ತಿವುಳ್ಳವರಾಗುತ್ತಾರೆ. ಆದುದರಿಂದ ತಂದೆತಾಯಿಗಳೂ ವಿದ್ಯಾರ್ಥಿಗಳೂ ಉಭಯತ್ರರೂ ಯೊಚಿಸಿ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಮಾಡತಕ್ಕ ಕಾಲದಲ್ಲಿ ವಿವಾಹ ನಡೆಯುದಂತೆ ಮಾಡುವುದು ಉಭಯತ್ರರಿಗೂ ಶ್ರೇಯಸ್ಕರವಾದದ್ದು.

ಗಣಿತ.

ಒಬ್ಬ ಮನುಷ್ಯನು 3% ಬಡ್ಡಿಯುಳ್ಳ £ 7220 ಋಣಸಂಚಯವನ್ನು ಶೇಕಡಾ 102$\frac{5}{8}$ ರ ಮೇರೆಗೆ ಮಾರುತ್ತಾನೆ. ಅಂದ ಹಣಕ್ಕೆ 2$\frac{1}{2}$% ಬಡ್ಡಿಯುಳ್ಳ ಋಣಸಂಚಯವನ್ನು 90$\frac{1}{8}$ ರ ಮೇರೆಗೆ ಕೊಂಡುಕೊಳ್ಳುತ್ತಾನೆ. ದಲ್ಲಾಳಿ $\frac{1}{8}$% ಆದರೆ, ಅವನ ಆದಾಯದಲ್ಲಿ ವ್ಯತ್ಯಾಸವೇನು?

3% ರಿಂದ ಬರುವ ಆದಾಯ $= £\ 7220 \times \frac{3}{10}$

$= £\ 216.\ \ 12s.,$

3% ಬಡ್ಡಿಯುಳ್ಳ £ 100 ಋಣಸಂಚಯವನ್ನು ಮಾರಿಬರುವ ಹಣವು $= £\left(102\frac{5}{8} - \frac{1}{8}\right) = £\ 102\frac{1}{2}$

$\therefore$ ——— £ 7220 ... £ $\frac{7220 \times 102\frac{1}{2}}{100}$

$= £\ 7400.\ \ 10's$

$\therefore$ 2$\frac{1}{2}$% ಬಡ್ಡಿಯುಳ್ಳ £ 100 ಋಣಸಂಚಯ ಕೊಳ್ಳಲ್ಪಡಲಿಕ್ಕಾಗಿ ಕೊಡಬೇಕಾದ ಹಣವು $= \left[£\ 90\frac{1}{8} + \frac{1}{8}\right]$

$= £\ 90\frac{1}{4}$

ವಸೂಲ್ಮಾಡುವದಕ್ಕೆ ಜವಾಬ್ದಾರನನ್ನಾಗಿ ಮಾಡತಕ್ಕದ್ದು. ಸದರೀ ಮಾಸ್ತರು ಅಟೆಂಡೆನ್ಸು ಮತ್ತು ಫೀ ರಿಜಸ್ಟರಿನಲ್ಲಿ ವಸೂಲ್ಮಾಡಿದ ಫೀಜಿಗಾಗಿ ಸಲಿಕೆ ಹಾಕಬೇಕು. ಮತ್ತು ಅದೇದಿವಸ ಸದರಿ ಫೀಜನ್ನು ಖಜಾನೆಗೆ ಕಳುಹಿಸಿಕೊಡುವದಕ್ಕೆ ಆಗುವಂತೆ ಹೊತ್ತಿಗೆ ಸರಿಯಾಗಿ ಫೀಜನ್ನು ಹೆಡ್ಮಾಸ್ತರ ವಶಕ್ಕೆ ಕೊಡಬೇಕು. ತಾನು ತೆಗೆದುಕೊಂಡ ಹಣಕ್ಕೆ ಹೆಡ್ಮಾಸ್ತರು ಆಯಾ ಕ್ಲಾಸಿನ ಅಟೆಂಡೆನ್ಸು ರಿಜಸ್ಟರಿನ ಕೆಳ ಭಾಗದಲ್ಲಿ ಸಲಿಕೆ ಹಾಕಬೇಕು.

೪. ಒಬ್ಬ ವಿದ್ಯಾರ್ಥಿಯು ೧೫ ನೆಯ ತಾರೀಖಿನಲ್ಲಿ, ೧೫ ನೆಯ ತಾರೀಖು ರಜಾದಿವಸವಾದಲ್ಲಿ ಆ ತಾರೀಖಿನ ತರುವಾಯ ಮೊದಲನೆಯ ಕೆಲಸದದಿವಸ ಸ್ಕೂಲ್ ಫೀಜನ್ನು ಕೊಡುವದಕ್ಕೆ ತಪ್ಪಿದರೆ ಹೆಡ್ಮಾಸ್ತರಿಗೆ ಯುಕ್ತತೋರಿದಲ್ಲಿ ಆಂಗ್ಲೋವರ್ನಾಕ್ಯುಲರ್ ಸ್ಕೂಲಿನಲ್ಲಿ ೫ಸಾಯಿ ೧ಕ್ಕೆ ೩ ಆಣೆಗೆ ವಿೂರದೆ ಜುರ್ಮಾನೆಯನ್ನೂ ವರ್ನಾಕ್ಯುಲರ್ ಸ್ಕೂಲಿನಲ್ಲಿ ಅರ್ಧಾಣೆ ಜುಲ್ಮಾನೆಯನ್ನೂ ಹಾಕಬಹುದು. ಅಂಥ ವಿದ್ಯಾರ್ಥಿ ಫೀಜನ್ನೂ ಜುಲ್ಮಾನೆ ಹಾಕಿದ್ದಪಕ್ಷದಲ್ಲಿ ಜುಲ್ಮಾನೆಯನ್ನೂ ಆ ತಿಂಗಳ ೨೫ ನೆಯ ತಾರೀಖಿನಲ್ಲಾಗಲಿ ಅದಕ್ಕೆ ಮುಂದೆಯೇ ಆಗಲಿ ಕೊಡದಿದ್ದರೆ ರಿಜಸ್ಟರಿನಿಂದ ಅವನ ಹೆಸರು ತೆಗೆದುಹಾಕಲ್ಪಡತಕ್ಕದ್ದು. ಹಾಗೆ ಹೆಸರು ತೆಗೆದುಹಾಕಲ್ಪಟ್ಟ ತರುವಾಯ ಅವನು ಮತ್ತೆ ಸ್ಕೂಲಿಗೆ ಸೇರಿದರೆ ಹೆಸರು ತೆಗೆದು ಹಾಕಲ್ಪಟ್ಟ ತಾರೀಖಿನಲ್ಲಿ ಅವನಿಂದ ಸಲ್ಲಬೇಕಾಗಿದ್ದ ಫೀಜನ್ನೂ ಹೊಸದಾಗಿ ಅಡ್ಮಿಷ್ಟ ಫೀಜನ್ನೂ ಅವನು ಕೊಡತಕ್ಕದ್ದು. ಆದರೆ ಅವನು ಜುಲ್ಮಾನೆ ಕೊಡಬೇಕಾದ್ದಿಲ್ಲ.

೫. ಒಬ್ಬ ವಿದ್ಯಾರ್ಥಿಯು ೨೫ನೆಯ ತಾರೀಖಿನಲ್ಲಾಗಲಿ ಅದಕ್ಕೆ ಮುಂಚೆಯೇ ಆಗಲಿ ಹೊಸದಾಗಿ ಸ್ಕೂಲಿಗೆ ಸೇರಿದರೆ ಅವನು ತಿಂಗಳ ಕಟ್ಟಳೆಯ ಫೀಜನ್ನೂ ಅಡ್ಮಿಷ್ಟ ಫೀಜನ್ನೂ ಕೊಡಬೇಕು. ೨೫ ನೆಯ ತಾರೀಖಿನ ತರುವಾಯ ಹೊಸದಾಗಿ ಬರುವ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಕೂಡದು.

೬ ಸ್ಕೂಲ್ ಫೀಜನ್ನು ವಸೂಲ್ಮಾಡುವದಕ್ಕೆ ಹೆಡ್ಮಾಸ್ತರಿಂದ ಗೊತ್ತುಮಾಡಲ್ಪಟ್ಟ ದಿವಸಗಳಲ್ಲಿ ಮೊದಲಿನ ದಿವಸಕ್ಕೆ ಮುಂಚೆ ಒಬ್ಬ ವಿದ್ಯಾರ್ಥಿಯು ಸ್ಕೂಲನ್ನು ಬಿಟ್ಟುಹೋದರೆ ಅವನು ಆ ತಿಂಗಳ ಫೀಯನ್ನು ಕೊಡಕೆಲಸವಿಲ್ಲ.

೭. ಹೆಡ್ಮಾಸ್ತರು ವಸೂಲ್ಮಾಡಿದ ಅಥವಾ ತೆಗೆದುಕೊಂಡ ಫೀಜನ್ನೂ ಅದೇ ದಿವಸ ಖಜಾನೆಗೆ ಸಲ್ಲಿಸಬೇಕು. ಎಷ್ಟುಕಾಲ ಅವಶ್ಯಕವೋ ಅದಕ್ಕೆ ಹೆಚ್ಚುಕಾಲ

(ii) A, B, ಒಂದೇಸ್ಥಳದಿಂದ 14 ಮೈಲಿ ದೂರದಲ್ಲಿರುವ ಒಂದು ಊರಿಗೆ ಏಕಕಾಲದಲ್ಲಿ ಹೊರಡುತ್ತಾರೆ. A ಪ್ರತಿ 4 ಮೈಲಿ ಕೊನೆಯಲ್ಲಿ 5 ನಿಮಿಷಗಳು ವಿಶ್ರಮಿಸಿಕೊಳ್ಳುತ್ತಾನೆ. B ನಿಲ್ಲದೆ ನಡೆಯುತ್ತಾನೆ. A ಘಂಟೆಗೆ $3\frac{3}{4}$ ಮೈಲಿ ಮೇರೆಗೂ B, $3\frac{1}{2}$ ಮೈಲಿ ಮೇರೆಗೂ ನಡೆಯುತ್ತಾರೆ. ಯಾರು ಮೊದಲು ಊರನ್ನು ಸೇರುತ್ತಾರೆ, ಮತ್ತು ಅವರು ಬಂದು ಸೇರುವ ಕಾಲದ ವ್ಯತ್ಯಾಸವೇನು ?

ಮೈಸೂರು ಸೀಮೆಯ ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್‌ರವರ ಆಫೀಸು.

ಬೆಂಗಳೂರು. ತಾ॥ ೭ ನೇ ಮಾಹೆ ಸೆಪ್ಟಂಬರ್ ೧೯೦೦ ನೇ ಇಸವಿ.

ಸರ್ಕ್ಯುಲರ್ ನಂಬರು—೯.

ಎಲ್ಲಾ ಗೌರ್ನ್‌ಮೆಂಟ್ ಸ್ಕೂಲುಗಳ ಹೆಡ್ಮಾಸ್ಟರುಗಳಿಗೆ.

ಸ್ಕೂಲ್ ಫೀಜನ್ನು ವಸೂಲ್ಮಾಡುವದನ್ನು ಕುರಿತ ನಿಬಂಧನೆಗಳು.

ಸ್ಕೂಲ್ ಫೀಜನ್ನು ವಸೂಲ್ಮಾಡುವ ವಿಷಯದಲ್ಲಿ ಎಲ್ಲಾ ಸ್ಕೂಲ್‌ಗಳಲ್ಲೂ ಆಚರಣೆ ಏಕರೀತಿಯಾಗಿಲ್ಲದಿರುವದರಿಂದ ಹೆಡ್ಮಾಸ್ಟರುಗಳ ಮತ್ತು ಅಸಿಸ್ಟೆಂಟು ಮಾಸ್ಟರುಗಳ ನಡವಳಿಕೆಗಾಗಿ ಈ ಕೆಳಗೆ ಕಂಡ ನಿಬಂಧನೆಗಳು ಮಾಡಲ್ಪಟ್ಟವೆ ;—

೧. ಸ್ಕೂಲ್ ಫೀಜನ್ನು ಮುಂಗಡವಾಗಿ ಕೊಡುವದಕ್ಕೆ ಆಯಾ ತಿಂಗಳಿನ ೧೫ನೆಯ ತಾರೀಖು ಕಡೆಯದಿವಸವಾಗಿರತಕ್ಕದ್ದು. ೧೫ನೆಯ ತಾರೀಖು ರಜಾ ದಿವಸವಾಗಿರುವ ಪಕ್ಷಕ್ಕೆ ಆ ತಾರೀಖಿನ ತರುವಾಯ ಮೊದಲನೆಯ ಕೆಲಸದ ದಿವಸವು ಅಂಥಾ ಕಡೆಯದಿವಸವಾಗಿರತಕ್ಕದ್ದು.

೨. ಹೆಡ್ಮಾಸ್ಟರು ಪ್ರತಿ ತರಗತಿಯಲ್ಲೂ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ, ಕಡೆಯದಿವಸವೂ ಸೇರಿ ಮೂರುದಿನಗಳಿಗೆ ಒಂದರಂತೆ ವಸೂಲಿ ಕೆಲಸಕ್ಕೆ ಕಾಲವನ್ನು ಮುಂಚಿತವಾಗಿ ಗೊತ್ತುಮಾಡಬೇಕು.

೩. ಹಾಗೆ ಗೊತ್ತಾದ ದಿವಸಗಳಲ್ಲಿ ಆಯಾ ತರಗತಿಯ ಮಾಸ್ಟರನ್ನಾಗಲಿ ಯಾವನಾದರೂ ಒಬ್ಬ ಅಸಿಸ್ಟೆಂಟು ಮಾಸ್ಟರನ್ನಾಗಲಿ ಪ್ರತಿ ತರಗತಿಯಲ್ಲೂ ಫೀಜನ್ನು

೭. ಮತ್ತೊಂದು ಹುಕುಂ ಕೊಡುವವರೆಗೂ ಶಿವಮೊಗ್ಗಾ ಕಾಲೇಜು, ಡಿಸ್ಟ್ರಿಕ್ಟ್ ಹೈಸ್ಕೂಲುಗಳು, ನಾರ್ಮಲ್‌ಸ್ಕೂಲುಗಳು, ಮತ್ತು ಮಹಾರಾಣಿ ಬಾಲಿಕಾಪಾಠಶಾಲೆಯ ಹೈಸ್ಕೂಲ್, ಮತ್ತು ಕಾಲೇಜ್ ಡಿಪಾರ್ಟ್‌ಮೆಂಟುಗಳು ಫಳಿಗಾಲದ ರಜಾಕ್ಕೋಸ್ಕರ ಡಿಶಂಬರ್ ಗುರ್ರೆ ಲಾಗಾಯಿತು ಜನವರಿ ೩ ನೇ ತಾರೀಖು ಭಾನುವಾರವಾದರೆ ೪ ತಾರೀಖಿನವರೆಗೆ, ಅದು ಆಗದಿದ್ದರೆ ೩ ನೇ ತಾರೀಖಿನ ತರುವಾಯ ಬರುವ ಮೊದಲನೆಯು ಭಾನುವಾರದವರೆಗೆ ಮುಚ್ಚಲ್ಪಡುವವು.

೩. ಮತ್ತೊಂದು ಹುಕುಂ ಕೊಡುವವರೆಗೂ ಸ್ಕೂಲಿನ ಮೊದಲನೆಯಟರಂ, ಜನವರಿ ೪ ನೇ ತಾರೀಖು ಸೋಮವಾರದಲ್ಲಿ, ಆ ದಿವಸವೂ, ಅಲ್ಲದಿದ್ದರೆ ಜನವರಿ ೩ ನೇ ತಾ॥ ಅದನಂತರ ಬರುವ ಸೋಮವಾರ ಪ್ರಾರಂಭವಾಗುತ್ತದೆ. ಎಪ್ರಿಲ್ ೧೦ ನೇ ತಾ॥ ಶನಿವಾರವಾದಲ್ಲಿ ಆ ದಿವಸವೂ ಅಥವಾ ೧೦ ನೆಯ ತಾ॥ ಆದಮೇಲೆ ಬರುವ ಶನಿವಾರವೂ ಪೂರೈಸುತ್ತದೆ.

ಎರಡನೆಯುಟರಂ, ಜೂನ್ ಗುರ್ರೆಯು ತಾರೀಖಿನಲ್ಲಿ ಪ್ರಾರಂಭವಾಗಿ, ನವೆಂಬರ್ ೩೦ ಕ್ಕೆ ಮುಗಿಯುತ್ತದೆ.

ರುಜು—ಎಚ್. ಜೆ. ಭಾಭಾ,

ಇನ್‌ಸ್ಪೆಕ್ಟರ್ ಜನರಲ್.

ಸೂಚನೆ ಮತ್ತು ಸಮಾಚಾರಗಳು.

ಮಹಾರಾಣಿ ಬಾಲಿಕಾಪಾಠಶಾಲೆಯು ಲೇಡಿ ಸೂಪರಿಂಟೆಂಡೆಂಟರಾಗಿದ್ದು ರಾಜೀನಾಮೆ ಕೊಟ್ಟ ಮಿಸ್ ರಿಡ್‌ಸ್ಡೇಲ್‌ರವರ ಬದಲಾಗಿ ಇನ್ನೊಬ್ಬರನ್ನು ನೇಮಕ ಮಾಡುವವರೆಗೂ ಮಿಸ್, ಎಂ. ಇ. ಹುಡ್‌ಯವರು ಮಾಹೆಯಾನ ೩೦೦ ರೂಪಾಯಿ ತಲಬಿನಮೇಲೆ ನೇಮಿಸಲ್ಪಟ್ಟಿರುತ್ತಾರೆ.

ಸರ್. ಲೀನಾರ್ಡ್ ಸಾಹೇಬರವರು ಬರೆದಿರತಕ್ಕ "ಸಿಟಿಜನ್ ಆಫ್ ಇಂಡಿಯ" ಎಂಬ ಪುಸ್ತಕವನ್ನತ ಭಾಷಾಂತರವು ೧೯೦೧ ನೇ ಇಸವಿಯ ಮೈಸೂರು ದೇಶದ ಲೋವರ್ ಸೆಕೆಂಡರಿಗೆ ಇಡಲ್ಪಟ್ಟಿರುತ್ತದೆ ಈ ಪುಸ್ತಕವು ಮೈಸೂ

ಅದನ್ನು ತಮ್ಮ ವಶದಲ್ಲಿ ಇಟ್ಟುಕೊಳ್ಳಕೂಡದು. ಅವಶ್ಯಕವಿದ್ದಲ್ಲಿ, ಕಡೆಯಸಾರಿ ಬಂದ ಫೀಜನ್ನು ೨೫ ನೇ ತಾರೀಖಿನಲ್ಲಿ ಖಜಾನೆಗೆ ಪಾವತಿ ಮಾಡಬೇಕು.

೪. ಆಯಾ ತಿಂಗಳಲ್ಲಿ ಖಜಾನೆಗೆ ಪಾವತಿ ಮಾಡಿದ ಸ್ಕೂಲ್ ಫೀಜನ್ನೂ ಪಾವತಿ ಮಾಡಿದ ತಾರೀಖುಗಳನ್ನೂ ಅಥವಾ ತಾರೀಖುಗಳನ್ನೂ ಮಾಹೆವಾರಿಯ ಲೆಕ್ಕದಲ್ಲಿ ತೋರಿಸಿ ಸದರಿ ಲೆಕ್ಕಕ್ಕೆ ಖಜಾನೆಯ ರಸೀತಿಗಳನ್ನು ಲಗತ್ತು ಮಾಡಿ ಇನ್‌ಸ್ಪೆಕ್ಟರ್ ಜನೆರಲ್‌ರವರ ಆಫೀಸಿಗೆ ಕಳುಹಿಸತಕ್ಕದ್ದು.

೫. ಮೇ ಮಾಹೆಯ ಫೀಜನ್ನು ಏಪ್ರಿಲ್ ಮಾಹೆಯ ಫೀಜಿನ ಸಂಗಡಲೂ ಡಿಸೆಂಬರ್ ಮಾಹೆಯ ಫೀಜನ್ನು ನವೆಂಬರ್ ಮಾಹೆಯ ಫೀಜಿನ ಸಂಗಡಲೂ ಮುಂಗಡವಾಗಿ ವಸೂಲಾಗಬೇಕು.

H. J. BHABHA,
Inspector General of Education.

ಮೈಸೂರು ವಿದ್ಯಾಭ್ಯಾಸದ ಇನ್‌ಸ್ಪೆಕ್ಟರ ಜನೆರಲ್‌ರವರ ಆಫೀಸು.

ಬೆಂಗಳೂರು,

ಸರ್ಕ್ಯುಲರ್ C ನಂಬರ್. ೧೧. ೧೯೦೯—೧೯೧೦.

ತಾ॥ ೪ ನೇ ನವೆಂಬರ್ ೧೯೦೦.

ಶಿವಮೊಗ್ಗ ಕಾಲೇಜಿನ, ಡಿಸ್ಟ್ರಿಕ್ಟ್ ಹೈಸ್ಕೂಲುಗಳ, ಮತ್ತು ನಾರ್ಮಲ್ ಸ್ಕೂಲ್‌ಗಳ ಹೆಡ್ ಮಾಸ್ಟರುಗಳಿಗೂ, ಮೈಸೂರು ಮಹಾರಾಣಿ ಗರಲ್ ಸ್ಕೂಲ್ ಲೇಡಿ ಸೂಪರಿಂಟೆಂಡೆಂಟರವರಿಗೂ—

೧. ಮೈಸೂರು ಲೋಕಲ್ ಪರೀಕ್ಷೆಗಳು ಈ ವರ್ಷ ಮೊದಲುಗೊಂಡು ನವೆಂಬರ್ ೧೫ ನೇ ತಾ॥ ನಿಂದಲೂ, (ಮದರಾಸ್ ಯೂನಿವರ್ಸಿಟಿ) ಮೆಟ್ರಿಕ್ಯುಲೇಷನ್, ಎಫ್, ಎ ಪರೀಕ್ಷೆಗಳು ಡಿಸೆಂಬರ್ ೧ ನೇ ತಾ॥ ನಿಂದಲೂ ಪ್ರಾರಂಭವಾಗುವವು. ಮೈಸೂರು ಸರ್ಕಾರಿ ಪರೀಕ್ಷೆಗಳಿಗೆ ಹೋಗದೆ ಇರತಕ್ಕ ತರಗತಿಗಳ ವಾರ್ಷಿಕ ಪರೀಕ್ಷೆಗಳನ್ನು ಲೋಕಲ್ ಪರೀಕ್ಷೆಗಳು ಮುಗಿದ ತರುವಾಯ ನವೆಂಬರ್ ಅಖೈರೊಳಗಾಗಿ ಮುಂದಾಗಿ ನಿಶ್ಚಿತವಾದ ತಾರೀಖುಗಳಿಂದ ಆರಂಭಿಸತಕ್ಕದ್ದು.

ಕಿಂಡರ್‌ಗಾರ್ಟನ್ ಕಥೆ.

(೨೧೪ ನೇ ಪುಟದ ಶೇಷ.)

ಸಂಗೀತ ಧ್ವನಿ ಕೇಳಿಬಂತಲ್ಲದೆ, ಅವರು ಮೂಯುವಾದ ಬಗೆಯು ಕಾಣಲಿಲ್ಲ. ಅಷ್ಟರಲ್ಲೆ—ಆ ರಾಕ್ಷಸಿಯು, ಹಾ, ನರಾಧಮ, ನೀನುಯಾರು ? ಹೇಗೆಬಂದೆ ? ಒಂದು ನಿಮಿಷವೊತ್ತಿದಲ್ಲಿ ನನ್ನ ಮಕ್ಕಳು ನಿನ್ನನ್ನು ನಾಶಮಾಡುವರು. ಹಾ, ಹೋ—ಹಾ ' ಎಂದು ಘರ್ಜಿಸಿದಳು. ಆಗ ರಾಜಕುಮಾರನು ಧೈರ್ಯವನ್ನು ತಾಳಿ, ಆ ರಾಕ್ಷಸಿಯು ಸವಿಾಪಕ್ಕೆ ಹೋಗಿ ಕೈಮುಗಿದು, ಓ ತಾಯೆ, ನಾನು ನಿಮ್ಮ ಗುಣವನ್ನು ಯಶಸ್ಸನ್ನೂ, ಐಶ್ವರ್ಯವನ್ನೂ, ಸೌಂದರ್ಯವನ್ನೂ ಕೇಳಿ, ಆಶ್ಚರ್ಯಯುಕ್ತನಾಗಿ ನಿಮ್ಮನ್ನು ಸೇವಿಸಿಕೊಂಡಿರಲು ಬಂದಿರುವೆನು, ದಯಪಾಲಿಸಬೇಕು.' ಎಂದು ಭಯಭಕ್ತಿಯನ್ನು ತೋರಿಸಲು, ಅವಳಿಗೆ ಸ್ವಲ್ಪ ಕರುಣಹುಟ್ಟಿ ' ಒಳ್ಳೇದು—ಹಾಗಾದರೆ ನಮ್ಮ ದೊಂದು ಕುದುರೆ ಇರುವುದು, ಅದನ್ನು ನೀನು ಮೂರುದಿನಗಳು ಕಾಯಿದುಕೊಂಡು ಬಂದರೆ—ನಿನ್ನನ್ನು ಇಲ್ಲಿಯೆ ಇಟ್ಟುಕೊಳ್ಳುವೆವು. ಕುದುರೆಯನ್ನು ಬಿಟ್ಟುಬಂದರೆ ರಾಕ್ಷಸರು ನಿನ್ನನ್ನು ಒಡನೆಯೆ ನಾಶಮಾಡುವರು, ಎಂದಳು. ಅದಕ್ಕೆ ಆ ರಾಜಕುಮಾರನು ಒಪ್ಪಲು, ರಾಕ್ಷಸಿಯು ಅವನಿಗೆ ಆಹಾರವನ್ನು ಕೊಟ್ಟು ಮರುದಿನ ಬೆಳಿಗ್ಗೆ ಕುದುರೆಯನ್ನು ಕೊಟ್ಟುಕಳುಹಿಸಿದಳು. ಕುದುರೆಯನ್ನು ಮೇಯಲಿಕ್ಕೆ ಬಿಟ್ಟು ರಾಜಕುಮಾರನು, ರಾತ್ರಿಯು ಸೊಬಗನ್ನು ಯೋಚಿಸುತ್ತಾ ಇರುವಹಾಗೆ ಕುದುರೆಯು ಎಲೊ ಮೂಯವಾಯಿತು. ಎಲ್ಲೆಲ್ಲಿ ಹುಡಿಕಿದರು ಕುದುರೆಯು ಸಿಕ್ಕಲಿಲ್ಲ. ' ರಾಜಕುಮಾರನಿಗೆ ಬಹಳ ಚಿಂತೆಯು ಉಂಟಾಯಿತು. ಇದುವರೆಗೆ ಪಟ್ಟ ಶ್ರಮವೆಲ್ಲಾ ವ್ಯರ್ಥವಾಯಿತೆಂದು ಚಿಂತಿಸುತ್ತಲಿದ್ದಾಗ, ಕೈಯಲ್ಲೆ ಹಿಡಿದುಕೊಂಡಿದ್ದ ಆ ಮೂಯದಂಡವು ಕೆಳಕ್ಕೆ ಬಿತ್ತು. ಒಡನೆಯೆ ನೂರಾರು ಪಕ್ಷಿಗಳು ಬಂದವು. ಪಕ್ಷಿರಾಜನಾದ ಗರುಡನು ಬಂದು ನಮ್ಮಿಂದ ನಿಮಗೆ ಏನು ಆಗಬೇಕು ? ಎಂದು ಕೇಳಿದನು. ಆಗ ಈ ರಾಜಕುಮಾರನಿಗೆ, ಮೂಯಾದಂಡದ ಹಿಡಿಯು ನೆಲಕ್ಕೆ ಗಟ್ಟಿಯಾಗಿ ಒಂದಾವರ್ತಿ ತಗಲಿದರೆ, ಪಕ್ಷಿಗಳು ಬರುವವೆಂದೂ, ಮೂರಾವರ್ತಿ ಹೊಡೆದರೆ ಜಲಚರಗಳು ಬರುವವೆಂದೂ, ಕಾಡಿನಲ್ಲಿ ಅಂದು ಆ ಮುದುಕಿಯು ಹೇಳಿದದ್ದು ಜ್ಞಾಪಕಕ್ಕೆ ಬಂತು. ಆಗ ಅವನು, ' ಎಲೆ ಪಕ್ಷಿರಾಜನೆ ನಾನು ಕಾಯುತಲಿದ್ದ ಕುದುರೆಯು ಎಲೊ ಮೂಯವಾಗಿರುವುದು. ನೀನು ಹುಡುಕಿಕೊಡಬೇಕು. ಎಂದು ಹೇಳಲು, ಗರುಡನು ಪಕ್ಷಿಸಮೂಹದೊಡನೆ ಹೊರಟು, ಒಂದು ನಿಮಿಷದಲ್ಲಿ ಆ ಮೂಯಾ ಕುದುರೆಯನ್ನು ಹಿಡಿದು ತಂದುಕೊಟ್ಟನು ಆಗ ಆ ಕುದುರೆಯನ್ನು ತೆಗೆದುಕೊಂಡುಹೋಗಿ ಆ ರಾಕ್ಷಸಿಯವಶಕ್ಕೆ ಬಿಡಲು, ರಾಕ್ಷಸಿಯು ಆಶ್ಚರ್ಯಪಟ್ಟು, ಇನ್ನೂ ಎರಡು ದಿನಗಳು ಹೀಗೆ ಮಾಡಬೇಕೆಂದಳು. ಯಥಾ ಪ್ರಕಾರ ಮಾರನೆಯ ಬೆಳಿಗ್ಗೆ ಕುದುರೆಯೊಡನೆ ಹೊರಟನು. ಕುದುರೆಯು ಪುನಃ ಅದೃಶ್ಯವಾಯಿತು. ಈ ಆವೃತ್ತಿ ಮೃಗಗಳ ಸಹಾಯದಿಂದ ಕುದುರೆಯನ್ನು ಸಾಧಿಸಿ

ರಿಸಲ್ಲರುವ ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ನಲ್ಲಿಯೂ, ಬೆಂಗಳೂರಿನಲ್ಲಿರುವ ಜೆ. ಎಸ್. ಲಕ್ಕೂರ್‌ಯವರಲ್ಲಿಯೂ ೫ ಆಣೆ ಕ್ರಯಕ್ಕೆ ಸಿಕ್ಕುತ್ತದೆ.

ಮೈಸೂರು ಮಹಾರಾಣಿಯವರ ಕಾಲೇಜಿನಲ್ಲಿ ಸಹಾಯೋಪಾಧ್ಯಾಯಿನಿಯರಾಗಿರುವ ಜೆಲ್ಲಮ್ಮನವರು ಚಿಕ್ಕಮಂಗಳೂರು ಬಾಲಿಕಾಪಾಠಶಾಲೆಯ ಮುಖ್ಯೋಪಾಧ್ಯಾಯಿನಿಯರನ್ನಾಗಿ ವರ್ಗವಾಡಲ್ಪಟ್ಟಿದ್ದವರು ಈಗ ಖಾಯಲೆ ಇರುವದರಿಂದ ಇದೇ ಕಾಲೇಜಿನಲ್ಲಿಯೇ ಈ ವರ್ಷದ ಅಂತ್ಯದವರೆಗೂ ಇರಲು ಅಪ್ಪಣೆಯನ್ನು ಹೊಂದಿರುತ್ತಾರೆ.

ಗೌರ್ನಮೆಂಟಿನವರು ಸ್ಟೇಟ್‌ಫಂಡ್ ಬಡ್ಜೆಟ್ಟಿನಿಂದ ಈ ಕೆಳಗೆ ನಮೂದಿಸಿರುವ ಮೊಬಲಗುಗಳನ್ನು ಈ ವರುಷದಲ್ಲಿ ಉಪಯೋಗಿಸಲ್ಪಡಲು ಹೆಚ್ಚಿಸಿರುತ್ತಾರೆ.

(೧) ಚೆನ್ನಪಟ್ಟಣದ ಹೈಸ್ಕೂಲಿನಲ್ಲಿ ಒಬ್ಬ ಹೊಸಬ ಸಂಸ್ಕೃತ ಪಂಡಿತರನ್ನು ಇಡುವದಕ್ಕೆ ೨೪೦ ರೂಪಾಯಿ.

(೨) ಶಿವಮೊಗ್ಗೆಯ ಕಾಲೇಜಿನಲ್ಲಿರುವ ಜವಾನರುಗಳ ಸಂಬಳವನ್ನು ಬಡತಿ ಮಾಡುವದಕ್ಕೂ, ಮತ್ತು ಇತರ ಏಳು ಹೈಸ್ಕೂಲುಗಳಲ್ಲಿ ಹೊಸಜವಾನರನ್ನು ನೇಮಿಸುವದಕ್ಕೂ ೨೮೪ ರೂ.

(೩) ಕನ್ನಡ ಪಾಠಶಾಲೆ ಮತ್ತು ಆಂಗ್ಲೋವರ್ನಾಕ್ಯುಲರ್ ಪಾಠಶಾಲೆಗಳ ಮನೆ ಬಾಡಿಗೆಗಾಗಿಯೂ, ಕಂಟಿಜೆನ್ಸಿ ಖರ್ಚಿಗಾಗಿಯೂ, ಗಾಡಿ ಬಾಡಿಗೆಗಾಗಿಯೂ ೩೪೬೦ ರೂ.

(೪) ಈ ವರುಷದಲ್ಲಿ ಕನ್ನಡ ಪಾಠಶಾಲೆಗಳನ್ನು ಮತ್ತು ಆಂಗ್ಲೋವರ್ನಾಕ್ಯುಲರ್ ಪಾಠಶಾಲೆಗಳನ್ನು ಹೊಸದಾಗಿ ಸ್ಥಾಪಿಸುವದಕ್ಕಾಗಿ ೬೦೪೪ ರೂ.

(೫) ಎ ವಿ. ಸ್ಕೂಲ್ ಮತ್ತು ವರ್ನಾಕ್ಯುಲರ್ ಸ್ಕೂಲುಗಳಿಗಾಗಿ ಹೊಸದಾಗಿ ಕೆಲವು ಉಪಾಧ್ಯಾಯರುಗಳನ್ನು, ಮತ್ತು ಜವಾನರನ್ನು ನೇಮಿಸುವದಕ್ಕಾಗಿ ೩೩೪೪ ರೂಪಾಯಿ.

(೬) ತಾಲ್ಲೂಕು ಸ್ಕೂಲುಗಳ ಕಟ್ಟಡಗಳಿಗೋಸ್ಕರ ಯಾವಾಗಲು ಸ್ಯಾಂಕ್ಷನ್ ಮಾಡುತ್ತಿದ್ದ ೧೦೦೦೦ ರೂಪಾಯಿ ಜೊತೆಗೆ ೨೦ ಸಾವಿರ ರೂಪಾಯಿ ಸ್ಯಾಂಕ್ಷನ್ ಆಗಿರುತ್ತದೆ.

ವಿದ್ಯಾದಾಯಿನಿ.

ಭಾಗ ೪.] ಡಿಸಂಬರ್ ೧೯೦೦. [ಸಂಚಿಕೆ ೧೦

ಎಡಿಟರವರ ನೋಟ್ಸ್.

ಯೂರೋಪಿನ ಸಂಸ್ಕೃತ ಪಂಡಿತರದಲ್ಲಿ ಅತ್ಯಂತ ಪ್ರಸಿದ್ಧರಾದ ಮ್ಯಾಕ್ಸ್ ಮುಲ್ಲರ್‌ರವರು ಕಳೆದ ಅಕ್ಟೋಬರ್ ೨೮ ನೆಯ ದಿನ ದೈವಾಧೀನರಾದರೆಂಬುದನ್ನು ನಮ್ಮ ವಾಚಕರಿಗೆ ತಿಳಿಸಲು ಬಹಳವಾಗಿ ವಿಷಾದಿಸುತ್ತೇವೆ. ಇವರು ೧೮೨೩ (ಕ್ರಿ. ಶ.) ರಲ್ಲಿ ಜರ್ಮನೀದೇಶದ ಡೆಸ್ಸೌ ಪಟ್ಟಣದಲ್ಲಿ ಹುಟ್ಟಿದರು. ಇವರ ಇಪ್ಪತ್ತನೆಯ ವರ್ಷದಲ್ಲಿ ಸಂಸ್ಕೃತವನ್ನು ಅಭ್ಯಾಸ ಮಾಡುವದಕ್ಕೆ ಇವರು ಮೊದಲು ಮಾಡಿದರು. ಸ್ವಲ್ಪಕಾಲದಲ್ಲೇ 'ಹಿತೋಪದೇಶ' ವೆಂಬ ಸಂಸ್ಕೃತ ಗ್ರಂಥವನ್ನು ಭಾಷಾಂತರ ಮಾಡಿ ಇವರು ಪ್ರಸಿದ್ಧಿಗೊಂಡರು. ಇವರ ಶಿಕ್ಷಕರಾದ ಬರ್‌ನೂಫ್‌ರವರ ಪ್ರೇರಣೆಯಿಂದ, ಇವರು ಋಗ್ವೇದವನ್ನು ಮುದ್ರಿಸುವ ಪ್ರಯತ್ನವನ್ನು ಮಾಡಿದರು. ಇದಕ್ಕಾಗಿ ಋಗ್ವೇದದ ಓಲೆಪ್ರತಿಗಳನ್ನು ಸಂಗ್ರಹಿಸಲು ಇಂಗ್ಲೆಂಡಿಗೆ ಹೋದರು. ಅಲ್ಲಿ ಇವರ ಅಸಾಧಾರಣವಾದ ಪಾಂಡಿತ್ಯವನ್ನು ನೋಡಿ ಆಕ್ಸ್‌ಫರ್ಡ್ ವಿದ್ಯಾಸಮಾಜದವರು ಇವರಿಗೆ ಬಹುಮರ್ಯಾದೆ ಮಾಡಿದರು. ಅಲ್ಲದೆ ಅಲ್ಲೇ ಸಂಸ್ಕೃತ ಶಿಕ್ಷಕರನ್ನಾಗಿಯೂ ಮಾಡಿದರು. ಇವರ ವಿದ್ವತ್ತ್ವವನ್ನೆ ಮೆಚ್ಚಿ, ಈಸ್ಟ್ ಇಂಡಿಯಾ ಕಂಪೆನಿಯವರು, ಋಗ್ವೇದವನ್ನು ಮುದ್ರಿಸುವದಕ್ಕೆ ಇವರಿಗೆ ಬೇಕಾದ ದ್ರವ್ಯಾನುಕೂಲವನ್ನು ಕಲ್ಪಿಸಿಕೊಟ್ಟರು. ೧೮೪೯ ರಲ್ಲಿ ಋಗ್ವೇದವು ಪ್ರಥಮ ಮುದ್ರಣವನ್ನು ಕಂಡಿತು. ಇದನ್ನು ಹಿಂದೂಸ್ಥಾನದಲ್ಲಿರತಕ್ಕ ಪ್ರಸಿದ್ಧರಾದ ವೇದಪಾರಕರೆಲ್ಲರೂ ಕೊಂಡಾಡುವರು. ಇವರು ಆರ್ಯರ ಪಕ್ಷಪಾತಿಗಳಾಗಿದ್ದರು. ಆರ್ಯಧರ್ಮದ ಮಹಾತ್ಮ್ಯದಲ್ಲಿ ಪಾಶ್ಚಾತ್ಯರಿಗೆ ಅಭಿರುಚಿಯನ್ನುಂಟುಮಾಡಿದವರೇ ಈ ಪೂಜ್ಯರು. ಇವರ ಮೃತ್ಯುವು ಹಿಂದೂಸ್ಥಾನವನ್ನು ಬಹುಸಂಕಟಗೊಳಿಸುವುದು.

ಕೊಂಡು ಬಂದನು. ಆವತ್ತು ಅವನ ಸಾಹಸಕ್ಕೆ ಮೆಚ್ಚಿ ರಾಕ್ಷಸಿಯು ನಾಳೆ ನೀನು ಕುದುರೆಯನ್ನು ಹಿಡಿದುಕೊಂಡು ಬಂದರೆ ನಿನ್ನನ್ನು ಇಲ್ಲಿಯೆ ಇಟ್ಟುಕೊಳ್ಳುವೆನೆಂದಳು. ಮೂರನೆಯ ಬೆಳಿಗ್ಗೆ ಕುದುರೆಯೊಡನೆ ಹೊರಡುತಿದ್ದಾಗ, ಪುಷ್ಪಮಂಜರಿಯು ಸತ್ರನೆ ಎಂದು ಇವನ ಕಿವಿಯಲ್ಲಿ ಈವತ್ತಿನರಾತ್ರಿ, ನೀನು ಕುದುರೆಯೊಡನೆ ಬಂದರೆ, ರಾಕ್ಷಸಿಗೆ ಕುದುರೆ ಮರಿಯನ್ನು ಕೊಡೆಂದು ಕೇಳು ? ಎಂಬದಾಗಿ ಹೇಳಿ, ಮುಂಚಿನಂತೆ ಮೂಯವಾದಳು. ಆ ದಿನ ಜಲಚರದ ಸಹಾಯದಿಂದ ಕುದುರೆಯನ್ನು ಹಿಡಿದು ಕೊಂಡು ಬಂದನು. ಆಗ ರಾಕ್ಷಸಿಯು ನಿನ್ನಸಾಹಸಕ್ಕೆ ಮೆಚ್ಚಿದೆನು. ನೀನು ಯಾ ವಜಾಕರಿವೊಡುತ್ತಿ ? ಕೇಳಿಕೊ ಎನ್ನಲು, ನಾನು ಕುದುರೆಯುಮರಿಯು ಚಾಕರಿದು ನ್ನು ಮೊಡುವೆನು, ಎಂದನು. ರಾಕ್ಷಸಿಯು ಒಪ್ಪಿ ಕುದುರೆ ಮರಿಯನ್ನು ಇವನ ವಶ ಕ್ಕೆ ಕೊಟ್ಟಳು. ಮರುದಿನ ಬೆಳಿಗ್ಗೆ ಇವನು ಕುದುರೆ ಮರಿಯನ್ನು ನೋಡುತಲಿದ್ದಾ ಗ ಇವನ ಸಾಹಸವನ್ನೂ, ಇವನ ರೂಪಲಾವಣ್ಯವನ್ನೂ, ಇವನ ಧೈರ್ಯವನ್ನೂ ನೋಡಿ ಮೆಚ್ಚಿದ ಪುಷ್ಪಮಂಜರಿಯು ಬಂದು, ಬೇಗ ಕುದುರೆಯನ್ನೇರು—ನಾನೂ ಬರುವೆನು ತಡವೂಡಬೇಡ, ರಾಕ್ಷಸರೆಲ್ಲರೂ ನಿನ್ನನ್ನು ಕೊಲ್ಲಲು ಯೋಚಿಸುತ್ತಿರುವರು. ಎನ್ನ ಲು ಕುದುರೆಯನ್ನು ತಾನೇ ಹತ್ತಿದಳು. ಒಡನೆಯೆ ರಾಜಕುಮೂರನು ಹತ್ತಿದನು. ಪುಷ್ಪಮಂಜರಿಯು ಆ ಕುದುರೆಯನ್ನು ತಟ್ಟಲು, ಕುದುರೆಯು ಆಕಾಶಮೂರ್ಗವಾ ಗಿ ಹೊರಟಿತು. ಕಾವಲಿದ್ದ ರಾಕ್ಷಸರು ಪುಷ್ಪಮಂಜರಿ ರಾಜಕುಮೂರನೊಡನೆ ಹೋ ಗುತಿದ್ದುದ್ದನ್ನು ನೋಡಿ, ಮಲಗಿದ್ದ ರಾಕ್ಷಸಾಧಿಪನನ್ನು ಎಚ್ಚರಿಸಲು, ಬೊಬ್ಬಿಟ್ಟ ರು. ಅವನಿಗೆ ಗಾಢನಿದ್ರೆ—ಅವನು ಏಳುವಷ್ಟರಲ್ಲಿ ಇವರು ನೂರುಗಾವ್ದದ ದೂರ ಹೋಗಿದ್ದರು. ಅವನೆದ್ದು ವರ್ತಮೂನವನ್ನು ತಿಳಿಯುವದರಲ್ಲಿ ಇವಳು ರಾಜಕುಮೂರ ನು ಪಟ್ಟಣವನ್ನು ಸೇರಿದ್ದರು. ನಿದ್ರೆಯಲ್ಲಿ ಎದ್ದ ರಾಕ್ಷಸನಿಗೆ ಕೋಪಬಂದು, ಕಾವ ಲಿದ್ದ ರಾಕ್ಷಸರನ್ನೆಲ್ಲಾ ಕೊಂದನು. ಪುಷ್ಪಮಂಜರಿಯು ಮೂಯವಾದಳೆಂಬ ದುಃಖ ದಲ್ಲಿ ತಾನೂ ಪ್ರಾಣವನ್ನು ಬಿಟ್ಟನು. ಇತ್ತಲಾಗಿ ರಾಜಕುಮೂರನ ವೃದ್ಧ ಮೂತಾ ಪಿತೃಗಳು ಬಹುಕಾಲ ಅಗಲಿದ್ದ ಮಗನನ್ನು ಮತ್ತು ಸೊಸೆಯನ್ನು ನೋಡಿ ಸಂತೋ ಷಗೊಂಡರು, ಕಾಡಿನಲ್ಲಿ ಅಂದು ಕಂಡ, ಮೂಯಾದಂಡವನ್ನು ಕೊಟ್ಟ ವೃದ್ಧಳೇ ಪುಷ್ಪಮಂಜರಿಯ ತಾಯಿ. ಪುಷ್ಪಮಂಜರಿಯು ಬಂದಳೆಂಬ ವರ್ತಮೂನವನ್ನು ಕೇಳಿ, ವಿವಾಹ ಮಹೋತ್ಸವಕ್ಕೆ ವನಲಕ್ಷ್ಮಿಯು ಬಂದಳು. ಪುಷ್ಪಮಂಜರಿಯು ರಾಜಕುಮೂರನನ್ನು ಮದುವೆಯಾದಳು. ಬಹುಕಾಲ ಸುಖವಾಗಿದ್ದು ಕೊನೆಗೆ ಪುಷ್ಪ ಮಂಜರಿಯು ವನಲಕ್ಷ್ಮಿಯ ಒಬ್ಬಳೆ ಮಗಳಾಗಿದ್ದುದರಿಂದ ಪತಿಯೊಡನೆ ತೌರುಮನೆ ಗೆ ಹೋಗಿ, ಅಲ್ಲಿ ಕೆಲವುಕಾಲವಿದ್ದು, ಕೊನೆಗೆ ವಸಂತ ಕಾಲದಲ್ಲೆಲ್ಲಾ ತಾಯಿಮನೆ ಯಲ್ಲೂ ವಿುಕ್ಕಕಾಲದಲ್ಲೆಲ್ಲಾ ಪತಿಯ ಮನೆಯಲ್ಲೂ ಇದ್ದುಕೊಂಡು ಸುಖವಾಗಿ ದ್ದಳು.

ಸೂರ್ಯ.

ಪ್ರಪಂಚದಲ್ಲಿರುವ ಬೆಳ್ಳಗ್ಯಕ್ಕೆ ಸೂರ್ಯನು ಕಾರಣ ನೆಂಬದಾಗಿ ತಿಳಿದಿದ್ದಾಗ್ಯೂ ಈ ಬೆಳ್ಳಗ್ಯದ ಪ್ರಮಾಣವು ಇಷ್ಟೇ ಇರುವದೆಂದು ಇದುವರೆಗೂ ಗೊತ್ತಾಗಲಿಲ್ಲ. ಸೂರ್ಯಮಂಡಲವು ಸ್ವಯಂ ತೇಜಸ್ಸುಳ್ಳದ್ದು. ಭೂಮಂಡಲವೂ ಚಂದ್ರಮಂಡಲವೂ ಸೂರ್ಯನಬೆಳಕನ್ನು ಪ್ರತಿಫಲಿಸತಕ್ಕವುಗಳು. ಸೂರ್ಯನಬೆಳಕನ್ನು ಪರೀಕ್ಷಿಸುವದಕ್ಕೆ ಉಪಯುಕ್ತವಾದ ಒಂದು ಯಂತ್ರವಿರುವದು. ಇದರಿಂದ ಸೂರ್ಯನ ಬೆಳಕನ್ನು ನೋಡಿದರೆ ಸೂರ್ಯಮಂಡಲದ ಬೆಳ್ಳಗ್ಯದ ಪ್ರಮಾಣವು ಗೊತ್ತಾಗುವದು. ಬೆಳ್ಳಗ್ಯವು ಸೂರ್ಯಮಂಡಲದಲ್ಲಿ ಅನಿಲಾವಸ್ಥೆಯಲ್ಲಿರುವದೆಂದು ಗೊತ್ತಾಗುತ್ತದೆ. ಸೂರ್ಯಮಂಡಲದಲ್ಲಿರತಕ್ಕ ಲೋಹಾದಿ ಸಮಸ್ತ ಪದಾರ್ಥಗಳೂ ಕೂಡ ಈ ಅವಸ್ಥೆಯಲ್ಲಿಯೇ ಇರುವವು. ದ್ರವಾವಸ್ಥೆಯಲ್ಲಿಯೂ, ಶಿಲಾವಸ್ಥೆಯಲ್ಲಿಯೂ ಯಾವಪದಾರ್ಥಗಳನ್ನು ನಾವು ಈ ಭೂಮಂಡಲದಲ್ಲಿ ನೋಡುತ್ತೇವೋ ಅಂತಹ ಪದಾರ್ಥಗಳು ಸೂರ್ಯಮಂಡಲದಲ್ಲಿ ಅನಿಲಾವಸ್ಥೆಯಲ್ಲಿ ವಿಶಾಲ ತೇಜೋವಿಲಾಪಕ ಯಂತ್ರಕ್ಕೆ ಗೊತ್ತಾಗುತ್ತದೆ. ಈ ಭೂಮಂಡಲವು ಸೂರ್ಯಮಂಡಲದಮೇಲೆ ಬಿದ್ದರೆ ತಕ್ಷಣದಲ್ಲೇ ಶಿಲಾವಸ್ಥೆಯಲ್ಲಿರತಕ್ಕ ಈ ಭೂಮಂಡಲದ ಪದಾರ್ಥಗಳೆಲ್ಲಾ ಅನಿಲಾವಸ್ಥೆಯನ್ನು ಹೊಂದುವವು. ಇದರಿಂದ ಸೂರ್ಯಮಂಡಲದ ಬೆಳ್ಳಗ್ಯದ ಪ್ರಮಾಣವು ಊಹನೀಯವಾಗಿರುತ್ತದೆ.

ಸೂರ್ಯನು ಪಶ್ಚಿಮದಿಂದ ಪೂರ್ವಕ್ಕೆ ತನ್ನ ಸ್ವಂತ ಅಕ್ಷದ ಮೇಲೆ ತಿರುಗುವದು. ಹೀಗೆ ತಿರುಗುವದಕ್ಕೆ ನಮ್ಮ ಭೂಮಂಡಲದ ೨೫ ದಿವಸಗಳಾಗಬೇಕಾಗುವವು. ಸೂರ್ಯಮಂಡಲದಲ್ಲಿ ದೃಷ್ಟಿಪಥಕ್ಕೆ ಬೀಳುವ ಕಪ್ಪು ಚುಕ್ಕೆಗಳಿಂದ ಇದು ಗೊತ್ತಾಗುವದು. ಈ ಚುಕ್ಕೆಗಳಲ್ಲಿ ಯಾವುದಾದರೂ ಒಂದು ದೃಷ್ಟಿಗೆ ಒಂದಾವರ್ತಿ ಗೋಚರವಾಗಿ ಇನ್ನೊಂದಾವರ್ತಿ ಆ ಚುಕ್ಕೆಯು ಗೋಚರವಾಗುವದರೊಳಗಾಗಿ ೨೫ ದಿನಗಳಾಗುವವು.

ನಮ್ಮ ಭೂಮಂಡಲವೂ ಚಂದ್ರಮಂಡಲವೂ ಅಲ್ಲದೆ ಇತರ ಅನೇಕ ಗ್ರಹಗಳು ಸೂರ್ಯನ ಸುತ್ತಲೂ ಸುತ್ತುತ್ತವೆ. ಆಕಾಶದಲ್ಲಿ ನಕ್ಷತ್ರಮಂಡಲಗಳು ಸಂಚರಿಸುವಂತೆ ಕಾಣಬಂದಾಗ್ಯೂ, ಆಕಾಶವೆಲ್ಲಾ ಪೂರ್ವದಿಂದ ಪಶ್ಚಿಮಕ್ಕೆ ಹೋಗುವಂತೆ ತೋರಿದಾಗ್ಯೂ ನಕ್ಷತ್ರಗಳಿಗೆ ಪರಸ್ಪರ ಸಂಬಂಧವೂ ಅವಕಾಶವೂ

(ಇವರ ಜೀವಿತ ಚರಿತ್ರೆಯನ್ನು ವಿಸ್ತಾರವಾಗಿ ಪ್ರಕಟಿಸುವೆವು.)

***

ಮಾ॥ ಶ್ರೀರಾಮಚಂದ್ರನಾರಾಯಣ ಭಟ್ಟರಳಿಯವರು ದಯವಿಟ್ಟು ಕಳುಹಿಸಿದ 'ಶ್ರೀಸರಸ್ವತಿ' ಎಂಬ ಮಾಸಪತ್ರಿಕೆಯನ್ನು ಆದರದಿಂದ ಓದಿನೋಡಿದೆವು. ಈ ಪತ್ರಿಕೆಯಲ್ಲಿ ಮುಖ್ಯವಾಗಿ ವ್ಯವಸಾಯಗಾರರಿಗೆ ಉಪಯುಕ್ತವಾದ ವಿಷಯಗಳನ್ನೂ ಬರೆಯುವೆವೆಂತಲೂ, ಇನ್ನೂ ಕೆಲವು ವಿಶೇಷಸಂಗತಿಗಳನ್ನು ತಿಳಿಸುವೆವೆಂತಲೂ ಪತ್ರಿಕಾಕರ್ತರು ಸೂಚಿಸುವರು. ಸದ್ಯಃ ಈ ಪತ್ರಿಕೆಯನ್ನು ಶಿಲಾಯಂತ್ರದಲ್ಲಿ ಪ್ರಕಟಿಸುವರು. ವಾಚಕರು ಈ ಪತ್ರಿಕೆಯನ್ನು ತೆಗೆದುಕೊಂಡು ತಕ್ಕಮಟ್ಟಿಗೆ ಪ್ರೋತ್ಸಾಹಗೊಳಿಸಿದರೆ ಸಂಪಾದಕರು ಇದನ್ನು ಓದುವುದಕ್ಕೆ ಅನುಕೂಲವಾಗಿ ಮುದ್ರಿಸುವರೆಂದು ನಂಬುವೆವು.

***

ಈ ಸಂವತ್ಸರ ಮೈಸೂರು ಲೋಕಲ್‌ಪರೀಕ್ಷೆಗಳು ನವೆಂಬರ್ ೧೫ಕ್ಕೆ ಆರಂಭವಾದವು. ಪ್ಲೇಗ್ ಉಪದ್ರವದ ಹಾವಳಿಯಿಂದ ಮೈಸೂರಿಗೆ ಸುಮಾರು ೧೯೦ ಮಂದಿ ವಿದ್ಯಾರ್ಥಿಗಳು ಬರಲಿಲ್ಲ. ಪರಸ್ಥಳದಿಂದ ಬಂದ ವಿದ್ಯಾರ್ಥಿಗಳು, ಇಳಿಯುವುದಕ್ಕೆ ಸ್ಥಳವೂ ಸಿಕ್ಕದೆ ಬಹುತೊಂದರೆಗೆ ಈಡಾದರು. ಮೈಸೂರು ಡಿಸ್ಟ್ರಿಕ್ಟಿನ ಎಲ್ಲಾ ಆಂಗ್ಲೋವರ್ನಾಕ್ಯುಲರ್ ಸ್ಕೂಲ್ ಹೆಡ್ಮಾಸ್ಟರುಗಳಿಗೂ, ಮೈಸೂರಲ್ಲಿ ಪ್ಲೇಗ್ ಹಾವಳಿಯು ಹೆಚ್ಚಾಗಿತ್ತೆಂದು ತಿಳಿದಿದ್ದಾಗ್ಯೂ, ತಮ್ಮ ತಮ್ಮ ಸ್ಕೂಲುಗಳಿಂದ ಪರೀಕ್ಷೆಗೆ ಬರತಕ್ಕ ವಿದ್ಯಾರ್ಥಿಗಳಿಗೆ ಮುಂದಾಗಿ ತಕ್ಕ ಏರ್ಪಾಡು ಮಾಡದೆ ಇದ್ದುದೇ ಬಾಲಕರಿಗೆ ಅನಾನುಕೂಲಕ್ಕೆ ಕಾರಣವಾಯಿತು. ಮಹಾರಾಜರ ಕಾಲೇಜ್ ಸ್ಟೂಡೆಂಟ್ಸ್‌ಹೋಂ ಪ್ರಸಿಡೆಂಟರಿಗೆ ಮುಂದಾಗಿ ಬರೆದುಕೊಂಡಿದ್ದರೆ ಅವರು ಇಳಿದುಕೊಳ್ಳುವುದಕ್ಕೆ ಅದರಲ್ಲಿ ಅವಕಾಶವನ್ನು ಕೊಡುತ್ತಿದ್ದರು.

ಈಪ್ರವೃತ್ತಿ ಪರಸ್ಥಳದ ವಿದ್ಯಾರ್ಥಿಗಳು ಖಾಲಿಯಾಗಿದ್ದ ಸ್ಟೂಡೆಂಟ್ಸ್ ಹೋಂನಲ್ಲಿರುವುದಕ್ಕೆ ಅವಕಾಶವನ್ನು ಕಡೆಯಲಿಲ್ಲವೆಂದು ಕೇಳಿದೆವು. ಇನ್ನು ಮುಂದಾದರೂ, ಆಂಗ್ಲೋವರ್ನಾಕ್ಯುಲರ್ ಸ್ಕೂಲ್ ಹೆಡ್ಮಾಸ್ಟರುಗಳು, ವಿದ್ಯಾರ್ಥಿಗಳನ್ನು ಪರಸ್ಥಳಕ್ಕೆ ಕಳುಹಿಸುವುದಕ್ಕೆ ಮುಂಚಿತವಾಗಿ ತಕ್ಕ ಏರ್ಪಾಡುಗಳನ್ನು ಮಾಡಿ ಕಳುಹಿಸುವರೆಂದು ನಂಬುವೆವು.

ವಾಗಿ ಜಲಾವಸ್ಥೆಯನ್ನೂ ಶಿಲಾವಸ್ಥೆಯನ್ನೂ ಹೊಂದುತ್ತವೋ ಅಲ್ಲಿ ಸ್ವಂತವಾದ ತೇಜಸ್ಸು ಕಡಮೆಯಾಗುತ್ತದೆ. ಹೀಗೆ ಕಡಮೆಯಾದ ಭಾಗಗಳಿಗೆ ಚುಕ್ಕೆಗಳೆಂದು ಹೆಸರು. ಕೋಟ್ಯಂತರ ವರುಷಗಳಲ್ಲಿ ಸೂರ್ಯಮಂಡಲವು ಸಂಪೂರ್ಣವಾಗಿ ಶಿಲಾವಸ್ಥೆಗೆ ಬಂದು—ಅದೂ ಗ್ರಹಗಳಲ್ಲಿ ಒಂದಾಗುವುದು. ಈಗಿರತಕ್ಕ ಗ್ರಹಗಳು ಅನೇಕ ಕೋಟಿ ವರುಷಗಳ ಹಿಂದೆ ಸೂರ್ಯನಂತೆ ಸ್ವಯಂ ತೇಜಸ್ಸುಳ್ಳ ಮಂಡಲಗಳಾಗಿದ್ದವೆಂದು ಗೊತ್ತಾಗುತ್ತವೆ. ಇದಲ್ಲದೆ ತೇಜಸ್ಸು ಇತರ ಪದಾರ್ಥಗಳು ಹ್ಯಾಗೋ ಹಾಗೆ ನಷ್ಟವಾಗತಕ್ಕದ್ದಲ್ಲ. ಈ ತೇಜೋರಾಸಿಯು ಕ್ರಮಕ್ರಮವಾಗಿ ಸೇರಿಕೊಂಡು ಹೊಸಸೂರ್ಯಮಂಡಲಗಳಾಗುವವು. ಭೂಮಿಯೇ ಮೊದಲಾದ ಗ್ರಹಗಳೇ ಅನಲಾವಸ್ಥೆಯಲ್ಲಿ ತೇಜೋಮಯವಾಗಿದ್ದು ಮೇಲುಭಾಗದಲ್ಲಿ ಶಿಲಾವಸ್ಥೆಯನ್ನು ಹೊಂದಿದ್ದಾಗಿ ಭೂಗರ್ಭದಲ್ಲಿ ಇನ್ನೂ ತೇಜೋಮಯವಾಗಿರುವದು. ಭೂಗರ್ಭಕ್ಕೆ ದ್ವಾರವನ್ನು ಮಾಡುತ್ತಾ ಹೋದರೆ ೧೬ ಗಜಕ್ಕೆ ಒಂದು ಡಿಗ್ರಿ ಔಷ್ಣ್ಯವು ಹೆಚ್ಚುವದು. ಹೀಗೆಯೇ ಒಂದೆರಡು ಮೈಲಿಗೆಳೊಳಗಾಗಿ ಜಲಾವಸ್ಥೆಯಲ್ಲಿಯೂ ಅನಲಾವಸ್ಥೆಯಲ್ಲಿಯೂ ಇರತಕ್ಕ ಔಷ್ಣ್ಯವುಳ್ಳ ಭೂಭಾಗವು ಸಿಕ್ಕುವದು. ಅಂಥಾ ಭಾಗದ ಸನಿಹಪದವಿಗೂ ಅಗೆಯುವದಕ್ಕಾಗುವದಿಲ್ಲ. ಅಗೆಯುವದಕ್ಕೆ ಉಪಯೋಗಿಸತಕ್ಕ ಯಂತ್ರಗಳೂ ಕೂಡ ಕರಗಿಹೋಗುವವು. ಈ ಭೂಗರ್ಭದಲ್ಲಿರತಕ್ಕ ಔಷ್ಣ್ಯವೂ ತೇಜಸ್ಸೂ ಒಂದಾನೊಂದುಕಾಲದಲ್ಲಿ ಈ ಭೂಮಂಡಲವು ಸೂರ್ಯಮಂಡಲವಾಗುತ್ತೆಂದು ಹೇಳುವದಕ್ಕೆ ದೃಷ್ಟಾಂತವಾಗಿರುವುದು.

ಆರ್ನಲ್ಡ್ ರವರ ಚರಿತ್ರೆ.

ಆರ್ನಲ್ಡ್‌ರವರು ಅಪರಿಮಿತವಾದ ಆಶೆ ಉಳ್ಳವರಾಗಿದ್ದರು. ಲೋಕದಲ್ಲಿ ಜನರಿಗೆ ಆಶೆಯು ಅನೇಕ ವಿಧಗಳಾಗಿರುವುದು. ಕೆಲವರು ಅದ್ವಿತೀಯವಾದ ಅಧಿಕಾರವನ್ನು ಹೊಂದಬೇಕೆಂದು ಆಶೆಪಡುವರು ಮತ್ತೆ ಕೆಲವರು ಕುಬೇರನ ಸಂಪತ್ತಿಗೆ

ಯಾವಾಗಲ್ಯೂ ಒಂದೇ ವಿಧವಾಗಿರುವದು. ಇನ್ನು ಕೆಲವು ನಕ್ಷತ್ರಗಳಿಗಿರತಕ್ಕ ಸಂಬಂಧವು ಅವಕಾಶವೂ ಅಗಾಗ್ಯೆ ವ್ಯತ್ಯಸ್ತವಾಗುವವು. ಯಾವ ನಕ್ಷತ್ರಗಳು ಇಂಥಾ ಭೇದವನ್ನು ಹೊಂದುವದಿಲ್ಲವೊ ಅವುಗಳೇ ನಿಜವಾದ ನಕ್ಷತ್ರಗಳು. ಇದಲ್ಲದೆ ಅವುಗಳು ನಮ್ಮ ಸೂರ್ಯಮಂಡಲದಂತೆ ಸ್ವಯಂ ತೇಜಸ್ಸುಳ್ಳವುಗಳು. ಅವುಗಳಲ್ಲಿ ಅನೇಕ ನಕ್ಷತ್ರಗಳು. ನಮ್ಮ ಸೂರ್ಯ ಮಂಡಲಕ್ಕಿಂತಲೂ ಹೆಚ್ಚಾದ ಪ್ರಾಮ್ಯವನ್ನೂ ಬೆಳಕನ್ನೂ ಉಳ್ಳವುಗಳು. ಅವುಗಳು ಬಹಳ ದೂರವಲ್ಲಿರುವದರಿಂದ ಚಿಕ್ಕವುಗಳಾಗಿ ಕಾಣಬರುತ್ತವೆ. ಪರಸ್ಪರ ಸಂಬಂಧವಲ್ಲಿಯೂ ಅವಕಾಶವಲ್ಲಿಯೂ ಭೇದವನ್ನು ಹೊಂದುತಿರುವ ನಕ್ಷತ್ರಗಳು ನಿಜವಾದ ನಕ್ಷತ್ರಗಳಲ್ಲ. ಇವುಗಳಿಗೆ ಗ್ರಹಗಳೆಂದು ಹೇಳುವರು. ಇವುಗಳೆಲ್ಲಾ ಸ್ವಯಂ ತೇಜಸ್ಸುಳ್ಳವುಗಳಲ್ಲ ಇವುಗಳು ಅನೇಕ ವಿಷಯಗಳಲ್ಲಿ ಭೂಮಿಯನ್ನು ಹೋಲುವವು. ಇವುಗಳು ತಮ್ಮ ತಮ್ಮ ಅಕ್ಷದ ಮೇಲೆಯೇ ತಿರುಗುವವು, ಈ ಗ್ರಹಗಳಲ್ಲಿ ಕೆಲವಕ್ಕೆ ಚಂದ್ರ ಮಂಡಲಗಳಿರುವವು. ನಮ್ಮ ಭೂಮಿಗೆ ಒಂದು ಚಂದ್ರ ಮಂಡಲವಿರುವಂತೆ ಕೆಲವು ಗ್ರಹಗಳಿಗೆ ಅನೇಕ ಚಂದ್ರಮಂಡಲಗಳಿರುವವು ಈ ಭೂಮಂಡಲದಲ್ಲಿ ಹ್ಯಾಗೋ ಹಾಗೆ ಕೆಲವು ಗ್ರಹಗಳಲ್ಲಿ ಮೇಘಗಳೂ, ವಾಯು ಮಂಡಲವೂ, ಹವಾರಾಸಿಯೂ ಕಾಣಬರುವವು ಕೆಲವು ಗ್ರಹಗಳು ಸೂರ್ಯಮಂಡಲಕ್ಕೆ ನಮ್ಮ ಭೂಮಿಗಿಂತಲೂ ಸವಿಾಪದಲ್ಲಿರುವವು. ಸೂರ್ಯಮಂಡಲವು ಈ ಗ್ರಹಗಳ ಮಧ್ಯವರ್ತಿಯಾಗಿರುವದು. ಇದರ ಸುತ್ತಲೂ ಪುತ್ತತಕ್ಕ ಗ್ರಹಗಳಿಗೆಲ್ಲಾ ಬೆಳಕಿಗೂ ಪ್ರಾಮ್ಯಕ್ಕೂ ಸೂರ್ಯಮಂಡಲವೇ ಕಾರಣ. ಸೂರ್ಯನ ಸುತ್ತಲೂ ಈ ಗ್ರಹಗಳು ಸುತ್ತುವಂತೆ ಈ ಗ್ರಹಗಳಸುತ್ತಲೂ ಚಂದ್ರ ಮಂಡಲಗಳು ಸುತ್ತುವವು. ಈ ಗ್ರಹಗಳು ಮತ್ತು ಚಂದ್ರಮಂಡಲಗಳೂ ಕೂಡ ಒಂದಾನೊಂದು ಕಾಲದಲ್ಲಿ ಸೂರ್ಯಮಂಡಲದಂತೆಯೇ ಅನಲಾವಸ್ಥೆಯಲ್ಲಿ ಇದ್ದವೆಂದು ಗೊತ್ತಾಗುತ್ತವೆ. ಇದಕ್ಕೆ ಸೂರ್ಯಮಂಡಲವೇ ಕಾರಣ. ಸೂರ್ಯನ ಸುತ್ತಲೂ ಈ ಗ್ರಹಗಳು ಸುತ್ತುವಂತೆ ಈ ಗ್ರಹಗಳ ಸುತ್ತಲೂ ಚಂದ್ರಮಂಡಲಗಳು ಸುತ್ತುವವು. ಈ ಗ್ರಹಗಳು ಮತ್ತು ಚಂದ್ರಮಂಡಲಗಳೂ ಕೂಡ ಒಂದಾನೊಂದುಕಾಲದಲ್ಲಿ ಸೂರ್ಯಮಂಡಲದಂತೆಯೇ ಅನಲಾವಸ್ಥೆಯಲ್ಲಿ ಇದ್ದವೆಂದು ಗೊತ್ತಾಗುತ್ತವೆ. ಇದಕ್ಕೆ ಸೂರ್ಯಮಂಡಲವೇ ದೃಷ್ಟಾಂತವಾಗಿರುವುದು. ಈ ಮಂಡಲದಲ್ಲಿ ಚುಕ್ಕೆಗಳು ಕಾಣುವವಲ್ಲ. ಈ ಚುಕ್ಕೆಗಳಂದರೇನು ? ತೇಜಸ್ಸು, ಶಾಖವೂ ಯಾವಭಾಗದಲ್ಲಿ ಕಡಮೆಯಾಗುತ್ತವೋ ಅನಲಾವಸ್ಥೆಯನ್ನು ಬಿಟ್ಟು ಯಾವಭಾಗವು ಕ್ರಮಕ್ರಮ

ರ್ಥವಾಗಿ ಯಾವುದಾದರೂ ಒಂದು ವೃತ್ತ್ಯವಲಂಬನೆಗೆ ಸಾಧಕವಾಗಲೆಂದು ವಿದ್ಯಾಭ್ಯಾಸವನ್ನು ಮಾಡುವರು. ಆರ್ನಲ್ಡ್‌ರವರ ಶಿಕ್ಷೆಯಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾವಲಂಬನೆಯು ವೃತ್ತ್ಯವಲಂಬನೆಗೋಸ್ಕರ ಮಾಡಲ್ಪಡಲಿಲ್ಲ. ಜ್ಞಾನವನ್ನಾರ್ಜಿಸುವುದೇ ಮುಖ್ಯವಾದ ಕೆಲಸವೆಂಬ ಅಭಿಪ್ರಾಯದಿಂದ ವಿದ್ಯಾರ್ಥಿಗಳು ವ್ಯಾಸಂಗವನ್ನು ಮಾಡುತ್ತಿದ್ದರು. ವಿಶೇಷ ಪಾಂಡಿತ್ಯ ಉಳ್ಳವರ ಸಹವಾಸವೂ ಕೂಡ ಅನ್ಯಾಯ್ಯವಾದ ಜ್ಞಾನಾರ್ಜನೆಗೆ ಸಾಧಕವಾದದ್ದು. ಆರ್ನಲ್ಡ್‌ರವರೊಡನೆ ವಾಸವಾಡುವುದು, ಮಾತನಾಡುವುದು, ಆಟಗಳನ್ನಾಡುವುದು, ವ್ಯಾಯಾಮಗಳಲ್ಲಿ ಸೇರುವುದು, ಸಮುದ್ರಯಾನ ಮಾಡುವುದು ಇವೇ ಮೊದಲಾದ ಎಲ್ಲಾ ಕೆಲಸಗಳೂ ವಿದ್ಯಾರ್ಥಿಗಳಿಗೆ ಉತ್ಸವಪ್ರಾಯವಾಗಿ ಪರಿಣಮಿಸಿದವು. ವಿದ್ಯಾರ್ಥಿಗಳೆಲ್ಲರೂ ಗುಣಾಢ್ಯರಾಗಿರುವುದು ಕಷ್ಟ. ದುರ್ಮಾರ್ಗರಾಗಿರುವವರು ಪಾಠಶಾಲೆಗಳಿಗೆ ಸೇರುವುದುಂಟು. ಇಂಥವರ ದುರ್ಗುಣಗಳನ್ನು ಬಿಡಿಸುವುದು ಬಹಳ ಕಷ್ಟ. ಒಬ್ಬ ದುರ್ಮಾರ್ಗನು ಸೇರಿದರೆ ಯೋಗ್ಯರಾದ ಅನೇಕರು ಕೆಡುವುದಕ್ಕೆ ಅವಕಾಶವಾಗುವುದು. ಇದನ್ನು ಪರಿಹಾರ ಮಾಡುವುದಕ್ಕೋಸ್ಕರ ಇವರು ತನ್ನ ಪಾಠಶಾಲೆಗೆ ಹೊಸವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದರಲ್ಲಿ ಬಹಳ ಜಾಗರೂಕರಾಗಿರುತ್ತಿದ್ದರು. ಹೊಸ ವಿದ್ಯಾರ್ಥಿಗಳನ್ನು ಕೆಲವು ದಿವಸಗಳ ವರೆಗೂ ಉಮೇದುವಾರರಂತೆ ಇಟ್ಟುಕೊಂಡು ಅವರಿಗೆ ಸೌಖ್ಯಸ್ವಾತಂತ್ರ್ಯವನ್ನೂ ಕೊಟ್ಟು ಅನೇಕ ವಿಧವಾಗಿ ಅವರನ್ನು ಪರೀಕ್ಷಿಸಿ ಸಮರ್ಪಕವಾದ ಗುಣಾತಿಶಯಗಳುಳ್ಳವರೆಂದು ಗೊತ್ತಾದ ಹೊರ್ತು ಅವರನ್ನು ಪಾಠಶಾಲೆಗೆ ಸೇರಿಸುತ್ತಿರಲಿಲ್ಲ. ಹೀಗೆ ಪರೀಕ್ಷಿಸುವುದೆಂದು ಜನಜನಿತವಾಗಿ ತಿಳಿದು ಉಮೇದುವಾರರಾಗಿ ಬರತಕ್ಕ ಕಾಲವಲ್ಲಿಯೇ ವಿದ್ಯಾರ್ಥಿಗಳು ಬಹಳ ಜಾಗರೂಕರಾಗಿರುತ್ತಾ ಬಂದರು. ಹೀಗೆಯೇ ಕೆಲವು ದಿವಸ ಒಳ್ಳೆಯ ಸಹವಾಸದಲ್ಲಿ ಭಯಭಕ್ತಿಯಿಂದ ಇದ್ದು ಕ್ರಮಕ್ರಮವಾಗಿ ದುರ್ಮಾರ್ಗಪ್ರವರ್ತನೆಯ ವಿಷಯದಲ್ಲಿ ಪರಾಙ್ಮುಖರಾಗಿ ವಿದ್ಯಾರ್ಜನೆಯಲ್ಲಿಯೇ ಆಸಕ್ತರಾಗುತ್ತಾ ಬಂದರು. ಆರ್ನಲ್ಡ್‌ರವರು ವಿದ್ಯಾರ್ಥಿಗಳೊಡನೆ ಅಪ್ತ ಸ್ನೇಹಿತರಂತೆ ನಡೆದುಕೊಳ್ಳುತ್ತಾ ಎಲ್ಲರಿಗೂ ಬೇಕಾದಷ್ಟು ಸಲಿಗೆಯನ್ನು ಕೊಟ್ಟಿದ್ದಾಗ್ಯೂ ಆ ಸಲಿಗೆಯನ್ನು ದುರುಪಯೋಗವನ್ನು ಮಾಡಿ ಮನಸ್ವಿನಡಿಯುವುದಕ್ಕೆ ವಿದ್ಯಾರ್ಥಿಗಳಿಗೆ ಅವಕಾಶವನ್ನು ಕೊಡುತ್ತಿರಲಿಲ್ಲ. ವಿದ್ಯಾರ್ಥಿಗಳು ಉಚ್ಚೃಂಖಲವಾಗಿ ಪ್ರವರ್ತಿಸಿದ ಕೂಡಲೇ ಅವರಲ್ಲಿ ಆಪ್ತತ್ವವನ್ನೂ, ಸಲಿಗೆಯನ್ನೂ

ಸಹಾಯನಾದ ಸಂದರ್ಶನನ್ನು ಹೊಂದಬೇಕೆಂದು ಅಪೇಕ್ಷಿಸುವರು. ಮತ್ತೆ ಕೆಲವರು ಸಕಲ ವಿದ್ಯಾಧಿಕಾರವರಾಗಿ ಪ್ರಪಂಚದ ಅಜ್ಞಾನ ನಿವಾರಣೆಗೆ ಜ್ಞಾನಪಯವಾದ ಸೂರ್ಯ ಹೊಂಡುವಂತೆ ಆಚರಿಸಬೇಕೆಂದು ಅಪೇಕ್ಷಿಸುವರು. ಆರ್ನಲ್ಡ್‌ರವರು ಅಧಿಕಾರವನ್ನೂ ಐಶ್ವರ್ಯವನ್ನೂ ಅಪೇಕ್ಷಿಸಲಿಲ್ಲ. ಅವರು ಇವೆರಡನ್ನೂ ತೃಣಪ್ರಾಯವಾಗಿ ಕಾಣುತ್ತಿದ್ದರು. ಆದರೆ ಜ್ಞಾನವನ್ನಾರ್ಜಿಸಿ ಪರೋಪಕಾರಿಗಳಾಗಬೇಕೆಂಬ ಇವರ ಉದ್ದೇಶವು ಅಪರಿಮಿತವಾಗಿತ್ತು. ಐಹಿಕಾಮುಷ್ಮಿಕ ಸೌಖ್ಯಗಳಿಗೆ ಸದ್ವಿದ್ಯಾರ್ಜನೆಯಂತೆ ಸಾಧಕವಾದದ್ದು ಯಾವದೂ ಇಲ್ಲವೆಂದು ನಿಶ್ಚಯಿಸಿ ಇವರು ವಿದ್ಯಾರ್ಜನೆಯಲ್ಲಿಯೂ ವಿದ್ಯೆಯನ್ನು ಹೇಳುವುದರಲ್ಲಿಯೂ ತಮ್ಮ ಕಾಲವನ್ನು ಉಪಯೋಗಿಸುತ್ತಾ ಬಂದರು. ಲೇಲಿಹ್ಯಾಂ ಪಟ್ಟಣದಲ್ಲಿ ಪಾಠಕರಾಗಿ ನಿಯುಮಿಸಲ್ಪಟ್ಟ ಕೂಡಲೆ ಅಲ್ಲಿಗೆ ಹೋಗಿ ವಿದ್ಯಾರ್ಥಿಗಳಿಗೆ ಪಾಠಗಳನ್ನು ಹೇಳುತ್ತಾ ಇತರ ಸ್ಥಳಗಳಲ್ಲಿ ಉಪನ್ಯಾಸಗಳನ್ನು ಮಾಡುತ್ತಾ ಅನೇಕ ಮಾರ್ಗಗಳಲ್ಲಿ ಜನಗಳಿಗೆ ಹಿತೋಪದೇಶವನ್ನು ಮಾಡುತಿದ್ದರು. ಕ್ರಮಕ್ರಮವಾಗಿ ಪಾಠ ಹೇಳುವುದರಲ್ಲಿಯೂ ಉಪನ್ಯಾಸಗಳನ್ನು ಮಾಡುವುದರಲ್ಲಿಯೂ ಅದ್ವಿತೀಯ ಪಂಡಿತರೆಂದು ಹೆಸರನ್ನು ಸಂಪಾದಿಸಿದರು. ರಗ್ಬಿ ಪಾಠಶಾಲೆಗೆ ಕೆಲವು ದಿವಸಗಳೊಳಗಾಗಿಯೇ ಇವರು ಜೂನಾಯಿಸಲ್ಪಟ್ಟರು. ಈ ಪಾಠಶಾಲೆಯಲ್ಲಿ ಇವರು ಮಾಡಿದ ವಿಹನಕ್ಕು ಅನ್ಯಾದೃಶವಾದದ್ದು. ಇವರು ಈ ಪಾಠಶಾಲೆಗೆ ನಿಯುಮಿಸಲ್ಪಡುವುದಕ್ಕೆ ಮುಂಚೆ ರಗ್ಬಿ ಪಟ್ಟಣದ ಪಾಠಶಾಲೆಯು ಹೆಸರು ಪ್ರಸಿದ್ಧವಾಗಿರಲಿಲ್ಲ. ಇವರು ಈ ಪಾಠಶಾಲೆಗೆ ಬಂದ ಕೆಲವು ದಿವಸಗಳೊಳಗಾಗಿ ಅದು ಬ್ರಿಟಿಷ್ ರಾಜ್ಯದಲ್ಲೆಲ್ಲಾ ಹೆಸರುವಾಸಿಯಾಗಿತ್ತು. ಈ ಪಾಠಶಾಲೆಯಲ್ಲಿ ಅನೇಕ ವಿದ್ಯಾರ್ಥಿಗಳು ಓದುತ್ತಿದ್ದರು. ಆರ್ನಲ್ಡ್‌ರವರು ಇವರಿಗೆ ಪಾಠಕರಾಗಿಯೂ, ಸಹವಾಸಿಗಳಾಗಿಯೂ, ಸ್ನೇಹಿತರಾಗಿಯೂ ಇದ್ದರು. ವಿದ್ಯಾರ್ಥಿಗಳು ಆರೋಗ್ಯ ದೃಢಕಾಯರಾಗಿದ್ದರೆ ಅವರ ಬುದ್ಧಿಯು ವಿದ್ಯಾರ್ಜನೆಗೆ ಅನುಕೂಲವಾದ ಸ್ಥಿತಿಯಲ್ಲಿರುವುದು. ಈ ಸಂಗತಿಯನ್ನು ತಿಳಿದುಕೊಂಡು ಆರ್ನಲ್ಡ್‌ರವರು ವಿದ್ಯಾರ್ಥಿಗಳ ಆರೋಗ್ಯಭಾಗ್ಯಕ್ಕೆ ಅನುಕೂಲವಾದ ಆಟಪಾಟ ವ್ಯಾಯಾಮ ಕೆಲಸ ಮೊದಲಾದವುಗಳಿಗೆ ಅವಕಾಶವನ್ನುಂಟುಮಾಡಿದರು. ಇದರಿಂದ ವಿದ್ಯಾರ್ಥಿಗಳು ಆರೋಗ್ಯವನ್ನೂ, ದೇಹಶಕ್ತಿಯನ್ನೂ ಹೊಂದುತ್ತಾ ಬಂದರು. ಇದರ ಜೊತೆಗೆ ಸುಲಭವಾಗಿಯೂ ಕ್ಲೇಶವಿಲ್ಲದೆಯೂ ವಿದ್ಯಾಭ್ಯಾಸ ಮಾಡಿಸುತ್ತಾ ಬಂದರು. ಸಾಮಾನ್ಯನಾಗಿ ಜನರು ಉದರ ಪೋಷಣಾ

ಪಾಠಕರು ಉದಾಸೀನರೆಂಬದಾಗಿಯೂ, ತಾವು ಮಾಡಿದ ಅಪರಾಧಗಳನ್ನು ಕ್ಷಮಿಸುವರೆಂಬದಾಗಿಯೂ, ತಿಳಿದಹೊರ್ತು ಅಪರಾಧಗಳನ್ನು ಮಾಡುವದು ಅಪೂರ್ವ. ಮಾಡಿದ ಅಪರಾಧಕ್ಕೆ ಶಿಕ್ಷೆಯೂ, ಒಳ್ಳೇ ಕೆಲಸಗಳಿಗೆ ಫಲವೂ ತಪ್ಪುವದಿಲ್ಲವೆಂಬದಾಗಿಯೂ, ಪಾಠಕರು ಸಲಿಗೆಯೂ ಸ್ನೇಹವೂ ಉಳ್ಳವರಾದಾಗ್ಯೂ ದಾಕ್ಷಿಣ್ಯಗ್ರಹ ಶಿಕ್ಷಪರಿಪಾಲನೈಕಪರರಾಯಣರೆಂದು ವಿದ್ಯಾರ್ಥಿಗಳಿಗೆ ಚೆನ್ನಾಗಿ ಗೊತ್ತಾದರೆ ಅವರು ಎಂದಿಗೂ ಸನ್ಮಾರ್ಗವನ್ನು ಬಿಟ್ಟು ನಡೆಯುವದಿಲ್ಲ. ಈ ಅಂಶವು ಆರ್ನಲ್ಡ್‌ರವರಿಗೆ ಚೆನ್ನಾಗಿ ಗೊತ್ತಾಗಿತ್ತು. ಭಯಭಕ್ತಿ ಯುಳ್ಳವರಾಗಿಯೂ, ವ್ಯಾಯಾಮವಾದಿಗಳಲ್ಲಿಯೂ ವಿದ್ಯಾರ್ಜನೆಯಲ್ಲಿಯೂ ಆಸಕ್ತರಾಗಿಯೂ, ಪಾಠಕರ ಸ್ನೇಹದಿಂದಲೂ ಸಲಿಗೆಯಿಂದಲೂ ಉಬ್ಬಿ ಮನಸ್ವೀ ನಡೆಯದೇ ಇರತಕ್ಕವರಲ್ಲಿಯೂ ಇವರ ಪ್ರೀತಿಯು ಅಗಾಧವಾಗಿತ್ತು. ಪಾಠಕರ ಸ್ನೇಹ ಮತ್ತು ಸಲಿಗೆಗಳಿಂದ ಉನ್ಮತ್ತರಾಗಿ ಮನಸ್ವಿ ನಡೆಯತಕ್ಕವರನ್ನು ಇವರು ಪಾಠಶಾಲೆಗೇ ಸೇರಿಸುತ್ತಿರಲಿಲ್ಲ. ಅನ್ಯಾದೃಶರಾದ ಪಾಠಕರೆಂದು ಇವರಿಗೆ ಯಶಸ್ಸು ಬರುವದಕ್ಕೆ ಇದೇ ಮುಖ್ಯ ಕಾರಣ.

ಮತಧರ್ಮ.

ಇಂಡಿಯಾದೇಶದಲ್ಲಿ ಸರ್ಕಾರದ ಸೂಲುಗಳೂ, ಕಾಲೇಜುಗಳೂ ಅನೇಕವಾಗಿರುವವು, ಮಿಷನರಿ ಸ್ಕೂಲ್‌ಗಳೂ, ಕಾಲೇಜುಗಳೂ ಕೂಡ ವಿಶೇಷವಾಗಿರುವವು. ಮಿಷನರೀಸ್ಕೂಲ್ ಮತ್ತು ಕಾಲೇಜುಗಳಲ್ಲಿ ಕ್ರಿಸ್ತಮತ ಧರ್ಮಗಳನ್ನು ಬೋಧಿಸುವರು. ಗವರ್ನಮೆಂಟ್ ಸ್ಕೂಲ್ ಮತ್ತು ಕಾಲೇಜುಗಳಲ್ಲಿ ಯಾವ ಮತತತ್ವವನ್ನೂ ತಿಳಿಸುವದಿಲ್ಲ. ಇದಕ್ಕೆ ಕಾರಣವುಂಟು. ಇಂಡಿಯಾದೇಶದಲ್ಲಿ ಅನೇಕ ಮತಗಳಿರುವವು. ಎಲ್ಲಾ ಮತಾವಲಂಬಿಗಳೂ ಸರ್ಕಾರದವರ ಪ್ರಜೆಗಳಾಗಿರುತ್ತಾರೆ. ಎಲ್ಲಾ ಮತಗಳೂ ಕೂಡ ಸರ್ಕಾರದವರ ಪೋಷಣೆಗೆ ಅರ್ಹನಾದವುಗಳು. ಪ್ರತಿ ಒಂದು ಪಾಠಶಾಲೆಯಲ್ಲಿಯೂ ಅನೇಕ ಮತಸ್ಥರಿರುತ್ತಾರೆ. ಎಲ್ಲಾ ಮತಸ್ಥರಿಗೂ ಅವರವರ ಮತಧರ್ಮಗಳನ್ನು ಹೇಳುವದು ಸಾಧ್ಯವೆ? ಎಂದಿಗೂ ಸಾಧ್ಯವಲ್ಲ. ಇದಕ್ಕಾಗಿಯೇ ಯಾವವಿಶೇಷಧರ್ಮವನ್ನೂ ಈ ಪಾಠಶಾಲೆಗಳಲ್ಲಿ ಹೇಳುವದಿಲ್ಲ. ಎಲ್ಲಾ ವಿದ್ಯಾರ್ಥಿಗಳೂ ತಮ್ಮ ತಮ್ಮ ಮತಗಳನ್ನು ತಮ್ಮತಮ್ಮ ಮನೆಗಳಲ್ಲಿ ವ್ಯಾಸಂಗ ಮಾಡಿಕೊಳ್ಳಲೆಂದು ಬಿಟ್ಟಿರುತ್ತಾರೆ. ಮಿಷನರಿಗಳಾದರೋ ಎಲ್ಲಾ ಮತದ ವಿದ್ಯಾರ್ಥಿಗಳಿಗೂ ತಮ್ಮ

ಬಿಟ್ಟು ಪಾಠಶಾಲೆಯಿಂದ ಅವರನ್ನು ನಿವರ್ತಿ ಮಾಡುತ್ತಿದ್ದರು. ಇದು ಸಹಜವಾ ದಷ್ಟು ಅನೇಕ ಪಾಠಕರು ವಿದ್ಯಾರ್ಥಿಗಳು ಮನಸ್ವಿ ನಡಿಯುವರೆಂದು ಯಾವಾಗ್ಲೂ ಹುಬ್ಬು ಗಂಟುಹಾಕಿಕೊಂಡು ಇರುವರು. ಹೀಗಿರುವುದರಿಂದ ವಿದ್ಯಾರ್ಥಿಗಳಿಗೆ ಭಯವೂ ಭಕ್ತಿಯೂ ಇರುವದೆಂಬದಾಗಿಯೂ, ಪಾಠಪ್ರವಚನೆಗಳು ಸರಿಯಾಗಿ ನಡಿಯುವುದೆಂಬದಾಗಿಯೂ ತಿಳಿದುಕೊಳ್ಳುವರು. ಇದು ತಪ್ಪು. ವಿದ್ಯಾರ್ಥಿಗಳೊಡನೆ ಸ್ನೇಹವಾಗಿಯೂ ಸರಿಗೆಯುಳ್ಳವರಾಗಿಯೂ ಇರುವುದರಿಂದ ಅವರಿಗೆ ಬೇಕಾದ ವಿಷಯಗಳನ್ನು ಕೇಳಿ ತಿಳಿದುಕೊಳ್ಳುವುದಕ್ಕೆ ಧೈರ್ಯವೂ ಇಷ್ಟವೂ ಹುಟ್ಟುವುದು. ಅನೇಕ ವಿದ್ಯಾರ್ಥಿಗಳು ಹೀಗಿರುವುದರಿಂದ ತಿಳಿದುಕೊಳ್ಳಬೇಕಾದ ಸಂಗತಿಗಳನ್ನು ಲೀಲೆಯಿಂದ ತಿಳಿದುಕೊಳ್ಳುವದಲ್ಲದೆ ಪಾಠಕರಲ್ಲಿಯೂ ನಿಜವಾದ ಭಕ್ತಿಯನ್ನೂ ಗುರುತ್ವವನ್ನೂ ಇಡುವರು. ಆದರೆ ದುರ್ಮಾರ್ಗರಾದ ಒಬ್ಬೊಬ್ಬರು ಈ ಸರಿಗೆಯನ್ನು ನೋಡಿ ನ್ಯಾಯವನ್ನು ಬಿಟ್ಟು ಉಚ್ಛೃಂಖಲವಾಗಿ ಪ್ರವರ್ತಿಸುವದುಂಟು. ಇಂಥಾ ಸಂದರ್ಭಗಳಲ್ಲಿ ಪಾಠಕರು ಬಹಳ ಜಾಗರೂಕರಾಗಿರಬೇಕು. ವಿದ್ಯಾರ್ಥಿಗಳು ಪಾಠಕರ ಸರಿಗೆಯಿಂದ ಭಯಭಕ್ತಿಯನ್ನು ಬಿಟ್ಟು ಮನಸ್ವಿ ನಡಿಯುವದಕ್ಕೆ ಉಪಕ್ರಮವಾಡಿದ ಕೂಡಲೇ ಆ ತಪ್ಪಿಗೆ ಅನುರೂಪವಾದ ಶಿಕ್ಷೆಯನ್ನು ಕೊಡಬೇಕು. ಹಾಗೆ ಶಿಕ್ಷೆಯನ್ನು ಮಾಡುವದರಲ್ಲಿ ಪಾಠಕರು ಉದಾಸೀನವನ್ನು ಮಾಡಿದರೆ ವಿದ್ಯಾರ್ಥಿಗಳು ಧೈರ್ಯದಿಂದ ಪುನಃ ತಪ್ಪುಗಳನ್ನು ಮಾಡುವದಕ್ಕೂ, ಇತರರು ತಮ್ಮ ಮೇಲುಪಜ್ಞೆಯನ್ನು ಅನುಸರಿಸುವದಕ್ಕೂ ಅವಕಾಶವನ್ನುಂಟುಮಾಡುವರು. ಇದಕ್ಕೆ ಪಾಠಕರು ಕಾರಣರೇಹೊರ್ತು ವಿದ್ಯಾರ್ಥಿಗಳು ಕಾರಣರಲ್ಲ. ತಪ್ಪು ಮಾಡಿದಕೂಡಲೇ ಅದಕ್ಕನುರೂಪವಾದ ಶಿಕ್ಷೆಯನ್ನು ಹೊಂದಿದರೆ ಹುಡುಗರು ಎಂದಿಗೂ ಅಶಿಕ್ಷಿತರಾಗುವದಿಲ್ಲ. ಮಕ್ಕಳು ದುರ್ಮಾರ್ಗರಾದರೆ ತಂದೆ ತಾಯಿಗಳಿಗೆ ಶಿಕ್ಷೆಯನ್ನು ಮಾಡಬೇಕೆಂಬದಾಗಿಯೂ, ವಿದ್ಯಾರ್ಥಿಗಳು ಉಚ್ಛೃಂಖಲಪ್ರವರ್ತಕರಾದರೆ ಪಾಠಕರನ್ನು ಶಿಕ್ಷಿಸಬೇಕೆಂಬದಾಗಿಯೂ ಲೋಕೋಕ್ತಿಗಳು ಉಂಟು. ಇವು ಸತ್ಯವಾದ ಮಾತುಗಳು. ಪ್ರಾಯಶಃ ವಾಗಿ ಮಕ್ಕಳು ತಂದೆತಾಯಿಗಳನ್ನೂ, ಸಹವಾಸಿಗಳನ್ನೂ ನೋಡಿ ಅವರು ಹಾಕತಕ್ಕ ಮೇಲುಪಜ್ಞೆಗಳನ್ನು ಅನುಸರಿಸುವರು. ಸರಿಯಾದ ಮೇಲುಪಜ್ಞೆಗಳನ್ನು ಹಾಕದೇ ಇರತಕ್ಕ ತಂದೆತಾಯಿಗಳು ದಂಡನೀಯರಲ್ಲವೇ ? ವಿದ್ಯಾರ್ಥಿಗಳು ಪಾಠಕರ ಮನೋಭಾವವನ್ನು ತಿಳಿದುಕೊಂಡು ಅದಕ್ಕನುಸಾರವಾಗಿ ನಡೆದುಕೊಳ್ಳುವರು.

ವ್ಯಾಕರಣ ಶಾಸ್ತ್ರ

ಧಾತು ಪ್ರಕರಣ.

ಧಾತುಗಳಲ್ಲಿ ಸಕರ್ಮಕ ಧಾತುಗಳೆಂತಲೂ, ಅಕರ್ಮಕ ಧಾತುಗಳೆಂತಲೂ, ಸಾವಾನ್ಯವಾಗಿ ಎರಡು ಭಾಗಗಳುಂಟು. ಇವುಗಳಲ್ಲಿ ಯಾವ ಧಾತುಗಳಲ್ಲಿ ಕರ್ತೃ ಪದ ಕ್ರಿಯಾ ಪದಗಳನ್ನು ಉಚ್ಚರಿಸಿದ ಕೂಡಲೇ ಕರ್ಮಕಾಂಕ್ಷೆಯುಂಟಾಗುತ್ತದೋ, ಅಲ್ಲಿರುವ ಕ್ರಿಯಾಪದಗಳಿಗೆ ಪ್ರಕೃತಿಯಾದುವು ಸಕರ್ಮಕ ಧಾತುಗಳೆಂದೂ, ಯಾವ ಧಾತುಗಳಲ್ಲಿ ಕರ್ಮಕಾಂಕ್ಷೆ ಬರುವದಿಲ್ಲವೋ, ಅಲ್ಲಿರುವುವು ಅಕರ್ಮಕ ಧಾತುಗಳೆಂದೂ, ತಿಳಿಯತಕ್ಕದ್ದು. ಇದೇ ಅರ್ಥವನ್ನು ಶಬ್ದಾನುಶಾಸನಕಾರನು, ಪ್ರಾಚೀನವೈಯ್ಯಾಕರಣರು ಹೇಳಿರುವ,— ಶ್ಲೋ ॥ " ಕರ್ತೃ ಕ್ರಿಯಾಪದ ದ್ವಂದ್ವಾತ್ಕರ್ಮಾಕಾಂಕ್ಷಾಯದಾಭವೇತ್ | ತದಾಸಕರ್ಮಕೋಜ್ಞೇಯೋವಿಪರೀತಸ್ತ್ವಕರ್ಮಕಃ ॥ " ಎಂಬ ಶ್ಲೋಕವನ್ನು ಬರೆದು, ಕರ್ತೃಕ್ರಿಯಾಪದದ್ವಂದಗಳಿಂದ ಕರ್ಮಾಕಾಂಕ್ಷೆ ಯಾವಾಗ ಬರುವುದೋ, ಆವಾಗ ಅಲ್ಲಿರುವ ಧಾತು ಸಕರ್ಮಕವೆಂದೂ, ಯಾವಾಗಿಲ್ಲವೋ ಅದು ಅಕರ್ಮಕವೆಂದೂ, ತಿಳಿಯುಬೇಕೆಂದು ಹೇಳಿ ಉದಾಹರಿಸಿರುವುನು.

ಹ್ಯಾಗೆಂದರೆ,—ಕುಂಬಾರನು ಮಾಡುತ್ತಾನೆ, ರಾಮನು ನೋಡುತ್ತಾನೆ, ಇವೇ ಮೊದಲಾದ ವಾಕ್ಯಗಳಲ್ಲಿ, ಏನನ್ನು ಮಾಡಿದನು? ಏನನ್ನು ನೋಡಿದನು? ಎಂದು ಕರ್ಮಾಕಾಂಕ್ಷೆ ಇರುವುದರಿಂದ ಮಾಡು, ನೋಡು ಎಂಬಿವು ಸಕರ್ಮಕವಾಗುವುವು. ರಾಮನಿದ್ದನು. ಕೃಷ್ಣನು ಕುಳಿತನು, ಮೊದಲಾದ ವಾಕ್ಯಗಳಲ್ಲ ಕರ್ಮವನ್ನು ಹೇಕ್ಷಿಸದಿರುವುದರಿಂದ ಇದ್ದನು, ಕುಳಿತನು, ಎಂಬಿವು ಅಕರ್ಮಕಗಳಾಗುವುವು.

ಮತ್ತು ಮೇಲೆ ಹೇಳಿರುವ ಸಕರ್ಮಕಾಕರ್ಮಕ ವಿಭಾಗಗಳು ಸಾರ್ವತ್ರಿಕವಾದವುಗಳಾದುದರಿಂದ ಕೆಲವು ಸಂದರ್ಭಗಳಲ್ಲಿ ಅರ್ಥವಿಶೇಷಗಳಿಂದ ಸಕರ್ಮಕ ಧಾತುಗಳನ್ನು ಅಕರ್ಮಕಗಳನ್ನಾಗಿಯೂ, ಅಕರ್ಮಕ ಧಾತುಗಳನ್ನು ಸಕರ್ಮಕಗಳನ್ನಾಗಿಯೂ, ಉಪಯೋಗಿಸುವುದುಂಟು. ಈ ವಿಷಯವು ಸಂಸ್ಕೃತ ವ್ಯಾಕರಣದಲ್ಲಿ ಸ್ಪಷ್ಟವಾಗಿರುವುದು. ಹ್ಯಾಗೆಂದರೆ, " ಧಾತೋರರ್ಥಾಂತರೇವೃತ್ತೆರ್ಧಾತ್ವರ್ಥೇನೋಪಸಂಗ್ರಹಾತ್ | ಪ್ರಸಿದ್ಧೇರನಿಪಕ್ಷಾತಃ ಕರ್ಮಣೋಕರ್ಮಿಕಾಕ್ರಿಯಾ " ಎಂದು ಹೇಳಿ ಧಾತುಗಳಿಗೆ ಧಾತು ಪಾಠದಲ್ಲಿ ಕೊಟ್ಟಿರುವ ಅರ್ಥವನ್ನು ಬಿಟ್ಟು ಬೇರೆ ಅರ್ಥದಲ್ಲಿ ಪ್ರಯೋಗಿಸುವ ಸಂದರ್ಭದಲ್ಲೂ, ಕೆಲವು ಧಾತುಗಳಿಗೆ ಪ್ರಯೋಗವಿಷಾದ್ಯಾಗ ಆ ಧಾತು

ಮತಸಿದ್ಧಾಂತವನ್ನು ಅಭ್ಯಾಸಮಾಡಿಸುತ್ತಾರೆ. ತಮ್ಮ ಮತವೇ ಸರ್ವೋತ್ಕೃಷ್ಟ ವಾದದ್ದೆಂದು ತಿಳಿಸುತ್ತಾರೆ. ಈ ವಿದ್ಯಾರ್ಥಿಗಳ ಪೈಕಿ ಸ್ವಮತವಿಷಯವನ್ನು ತಿಳಿದವರು ತಮ್ಮ ಮತಸಿದ್ಧಾಂತಗಳಿಗೂ ಕ್ರಿಸ್ತಮತ ಸಿದ್ಧಾಂತಗಳಿಗೂ ಇರತಕ್ಕ ವೈಲಕ್ಷಣ್ಯವನ್ನು ತಿಳಿದುಕೊಂಡು ಕ್ರಿಸ್ತಮತಬೋಧನೆಯ ವಿಷಯದಲ್ಲಿ ಉದಾಸೀನರಾಗಿ ಅಲ್ಲಿ ನಡೆಯುತಕ್ಕ ಪರೀಕ್ಷೆಗೆ ಉಪಯುಕ್ತನಾದ ಪಾಠಗಳಿಗೆ ಮನವನ್ನು ಕೊಟ್ಟು ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಮತಭ್ರಂಶವನ್ನು ಹೊಂದದೆ ಇರುವರು. ಮತ್ತೆ ಕೆಲವರು ತಮ್ಮ ಮತದಲ್ಲಿ ಪ್ರವೇಶವಿಲ್ಲದೆ ವಿಜಾತೀಯರಿಗಳ ವಾತನ್ನು ನಂಬಿ ಕ್ರಿಸ್ತಮತಾವಲಂಬಿಗಳಾಗುವರು. ಇದನ್ನು ನೋಡಿ ನಮ್ಮ ದೇಶೀಯರಲ್ಲಿನೇಕರು, ಕ್ರಿಸ್ತಮತೀಯರಂತೆಯೇ ನಮ್ಮ ಮತತತ್ವಗಳನ್ನು ಹೇಳತಕ್ಕ ಸ್ಕೂಲುಗಳನ್ನೂ, ಕಾಲೇಜುಗಳನ್ನೂ ಏರ್ಪಡಿಸುತ್ತಲಿರುವರು. ಅನೇಕ ಯೂರೋಪಿಯರ್ ಮತ್ತು ನೇಟಿವ್ ದೊಡ್ಡ ಮನುಷ್ಯರು ಎಲ್ಲಾ ಮತಸ್ಥರೂ ಅವರವರ ಮತಾಭ್ಯಾಸವನ್ನು ಮಾಡಿಕೊಳ್ಳುವದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿಕೊಳ್ಳಬೇಕೆಂದು ಅಭಿಪ್ರಾಯಪಡುತ್ತಾರೆ. ಇದು ನ್ಯಾಯವಾದದ್ದು. ಸ್ವಂತ ಮತಸಿದ್ಧಾಂತವನ್ನು ತಿಳಿದು ಕೊಳ್ಳುವದಕ್ಕೆ ಉಪಕ್ರಮಿಸುವದು ಬಹಳ ಅನರ್ಥಕ್ಕೆ ಹೇತುವಾದುದು. ಮತಾಭ್ಯಾಸವನ್ನು ಮಾಡಿಸತಕ್ಕ ಪಾಠಶಾಲೆಗಳಿಗೆ ಆಯಾಯ ಮತಸ್ಥರು ತಮ್ಮ ಮಕ್ಕಳನ್ನು ಕಳುಹಿಸಬಹುದು. ಮತೇತರಸ್ಥರು ತಮ್ಮ ಮಕ್ಕಳನ್ನು ಗವರ್ನ್‌ಮೆಂಟು ಪಾಠಶಾಲೆಗೆ ಕಳುಹಿಸುವದು ಉಚಿತ. ಹಾಗಿಲ್ಲದಪಕ್ಷದಲ್ಲಿ ಸಮಯಾಚಾರಗಳಲ್ಲಿ ತೊಂದರೆಗಳು ಬರಬಹುದು. ಗವರ್ನ್‌ಮೆಂಟು ಪಾಠಶಾಲೆಗಳಲ್ಲಿ ಬಹಳ ಸಮರ್ಥರಾದ ಸಾರಕರಿರುವರು. ಅವರು ಸಕಲಮತಗಳಿಗೂ ಸಮನಾದ ಧರ್ಮಗಳನ್ನು ದುರಭಿಮಾನವಿಲ್ಲದೆ ಬೋಧಿಸುವದುಂಟು. ಇಂಥಾ ಧರ್ಮಗಳು ಸಕಲಮತಸ್ಥರಿಗೂ ಪರಿಗ್ರಾಹ್ಯವಾಗಿರುವದು. ಅನಾಭವದೃಷ್ಟಿಯಲ್ಲಿಯೂ ಸಕಲಮತಗಳಿಗೂ ಸಾಮಾನ್ಯವಾದ ಧರ್ಮಗಳನ್ನು ತಿಳಿದುಕೊಂಡು ಅವುಗಳನ್ನು ಅನುಷ್ಠಾನಕ್ಕೆ ತರತಕ್ಕವರು ಧರ್ಮಿಷ್ಠರಾಗಿದ್ದಾರೆಯೇ ಹೊರ್ತು ಒಂದೊಂದು ಮತ ಧರ್ಮವನ್ನು ತಿಳಿದು ಕೊಂಡು ದುರಭಿಮಾನ ಪ್ರತಿನಿವಿಷ್ಟರಾಗಿ ವಿಶೇಷ ಧರ್ಮಿಷ್ಠರಾಗಿರುವದು ಅಪೂರ್ವ. ಪಾಠಶಾಲೆಗಳಲ್ಲಿ ಮತವಿಚಾರಗಳನ್ನು ತಿಳಿಸುವದಕ್ಕಿಂತ ಅವರವರ ಮತಗಳನ್ನು ಅವರವರು ಮನೆಗಳಲ್ಲಿ ಅಭ್ಯಾಸ ಮಾಡಿಕೊಳ್ಳಲೆಂದು ಬಿಡುವದು ಉತ್ತಮವೆಂದು ಅನೇಕ ವಿದ್ವಾಂಸರು ತಾತ್ಪರ್ಯ ಪಡುತ್ತಾರೆ.

ಹೇಳಿರುವ ಉಳುವುದು, ಪೋಣಿಸುವುದು, ಎಂಬ ಅರ್ಥವನ್ನು ಬಿಟ್ಟು, ಇದ್ದರು, ಓದಿದರು, ಎಂದು ಬೇರೆ ಅರ್ಥವನ್ನು ಹೇಳಿರುವದರಿಂದ ಇವೂ ಅಕರ್ಮಕಗಳೇ ಆಗುವವು.

(೪) ಬೋನವನ್ನಿಟ್ಟನು, ಅನ್ನವನ್ನುಂಡನು, ಇತ್ಯಾದಿ ವಾಕ್ಯಗಳಲ್ಲಿ ಅಡು, ಉಣ್ ಎಂಬ ಧಾತುಗಳು ಸಕರ್ಮಕಗಳಾಗಿದ್ದರೂ, ಇನ್ನು ನಾವು ಅಟ್ಟುಂಡು ಬದುಕು ಗೆಯ್ವುದು ದಿಟವೇ, ಇತ್ಯಾದಿ ಪ್ರಯೋಗಗಳಲ್ಲಿ ಚಿತ್ತಕ್ಷೋಭದಿಂದ ಏಕ, ಭೋಜನರೂಪವಾದ ಕ್ರಿಯೆಗಳನ್ನು ಮಾತ್ರವೇ ನಿಷೇಧಿಸಲ್ಪಟ್ಟಿರುವದರಿಂದ ಆ ಕ್ರಿಯೆಗಳಿಗೆ ವಿಷಯವಾದ ಕರ್ಮವಿಶೇಷವನ್ನು ಹೇಳಲು ವಕ್ತೃತಾತ್ಪರ್ಯವಿಲ್ಲದಿರುವವರಿಂದ ಈ ಧಾತುಗಳೂ ಅಕರ್ಮಕಗಳೇ ಆಗುವವು. ಆದರೆ ಅವಿವಕ್ಷಿತಕರ್ಮಕಗಳಾದ ಧಾತುಗಳಾವುವೊ, ಅವು ಅನಿತ್ಯಾಕರ್ಮಕಗಳೆಂದು ತಿಳಿಯಬೇಕು. ಉಳಿದವುಗಳೆಲ್ಲಾ ನಿತ್ಯಾಕರ್ಮಕಗಳೆಂದು ಹೇಳಬೇಕು

ಸಂಸ್ಕೃತಭಾಷೆಯಲ್ಲಿ ಸ್ವಭಾವನಾದ ಅಕರ್ಮಕಗಳು, ಧಾತುಗಳಿಗೆ ಅರ್ಥಾಂತರದಲ್ಲಿ ಪ್ರಯೋಗಿಸಿದಾಗ ಆಗುವ ಅಕರ್ಮಕಗಳು, ಧಾತ್ವರ್ಥದಿಂದಲೆ ಕರ್ಮಗಳಿಗೂ ಸಂಗ್ರಹವೆಂದರೆ ಆಗುವ ಅಕರ್ಮಕಗಳು, ಕರ್ಮಕ್ಕೆ ಪ್ರಸಿದ್ಧಿಯಿಂದ ಅಕರ್ಮಪದವನ್ನುಚ್ಚರಿಸದಿದ್ದರೆ ಆಗುವ ಅಕರ್ಮಕಗಳು, ಕರ್ಮವಿದ್ದರೂ ಕರ್ಮವನ್ನು ಪ್ರಯೋಗಿಸಲು ವಕ್ತೃವಿಗೆ ತಾತ್ಪರ್ಯವಿಲ್ಲದಾಗ ಆಗುವ ಅಕರ್ಮಕಗಳು, ಎಂದು ಐದು ವಿಧನಾದ ಅಕರ್ಮಕಗಳು ಹೇಳಲ್ಪಟ್ಟಿರುವುದು. ಕನ್ನಡದಲ್ಲಿ ನಾಲ್ಕು ವಿಧವೆಂದು ಹೇಳಲ್ಪಟ್ಟಿರುವುದು. ಆದರೆ ಭಾಷೆಯಲ್ಲಿ, ಸ್ವಭಾವಾಕರ್ಮಕ, ಪದಾಂತಸಮಭಿವ್ಯಾಹೃತಾಕರ್ಮಕ, ಧಾತುಗಳಿಗೆ ಅರ್ಥಾಂತರ ವೃತ್ತಿಯಿಂದಾಗುವ ಅಕರ್ಮಕ, ಕರ್ಮೋವಿವಕ್ಷೆಯಿಂದಾಗುವ ಅಕರ್ಮಕಗಳೆಂದು ನಾಲ್ಕೇ ಭೇದವನ್ನು ಹೇಳಿದ್ದರೂ ಕರ್ಮೋವಿವಕ್ಷೆಯಿಂದಾಗುವ ಅಕರ್ಮಕಗಳಲ್ಲೆ ಸಂಸ್ಕೃತಭಾಷೆಯಲ್ಲಿ ಹೇಳಿರುವ ಕರ್ಮಪ್ರಸಿದ್ಧಿಯಿಂದಾಗುವ ಅಕರ್ಮಕಗಳಿಗೂ ಅಂತರ್ಭಾವವನ್ನು ಹೇಳಬಹುದಾದುದರಿಂದ ಭಾಷೆಯಲ್ಲಿ ನಾಲ್ಕು ಪ್ರಕಾರವೆಂದು ಹೇಳಿರುವದು ಸಂಸ್ಕೃತಕ್ಕೆ ವಿರುದ್ಧವಲ್ಲ. ಮತ್ತು ಸಂಸ್ಕೃತದಲ್ಲಿ "ಧಾತ್ವರ್ಥೇನೋಪಸಂಗ್ರಹಾತ್" ಎಂಬ ವಾಕ್ಯದಿಂದ ಧಾತ್ವರ್ಥದಲ್ಲಿ ಕರ್ಮಾರ್ಥವು ಸೇರಿದ್ದರೆ ಅದು ಅಕರ್ಮಕವಾಗುವದೆಂದು ಹೇಳಲ್ಪಟ್ಟಿದೆ ಇದು ಸಂಸ್ಕೃತದಲ್ಲಿದ್ದರೂ, ಕನ್ನಡ ಭಾಷೆಯಲ್ಲಿ ಸಾಮ್ಯವಿಲ್ಲದೆ ಇರುವುದರಿಂದ ಮತ್ತೊಂದು ಪದದೊಡನೆ ಉಚ್ಚರಿಸುವ ದೊರೆಕೊಳ್ ಕೈಕೊಳ್, ಮೊದಲಾದುವು

ಗಳಿಂದಲೇ ಕರ್ಮಾರ್ಥವೂ ಸೇರಿ ಕ್ರಿಯೆಯನ್ನು ಬೋಧಿಸುವ ಸಂದರ್ಭದಲ್ಲೂ, ಕೆಲವು ಧಾತುಗಳಿದ್ದಾಗ ಕರ್ಮಾರ್ಥವು ಪ್ರಸಿದ್ಧವಾಗಿರುವ ಸಂದರ್ಭದಲ್ಲೂ, ಕರ್ಮಾರ್ಥ ತೋರುತ್ತಿದ್ದರೂ ಅವಕ್ಕೆ ವಿವಕ್ಷೆಯಾಗದೆ ಕರ್ತೃಕ್ರಿಯೆಗಳೆರಡನ್ನೇ ಪ್ರಯೋಗಿಸುವ ಸಂದರ್ಭದಲ್ಲೂ, ಸಕರ್ಮಕಧಾತುಗಳು ಅಕರ್ಮಕಗಳಾಗುವುದುಂಟೆಂದು ಅರ್ಥವನ್ನು ಬರೆದು ಉದಾಹರಣೆಗಳನ್ನೂ ಕೊಟ್ಟಿರುವುದು. ಇದೇ ರೀತಿಯಾಗಿ ಭಾಷೆಯಲ್ಲೂ ಪ್ರಯೋಗಿಸುವದುಂಟೆಂದು ಶಬ್ದಾನುಶಾಸನಕಾರನು ಹೇಳಿರುವನು.

ಏನೆಂದರೆ —ಧಾತುಗಳನ್ನು ಅಕರ್ಮಕವೆಂದು ಹೇಳಬೇಕಾದರೆ, ಯಾವುಗಳಿಗೆ ಪ್ರಯೋಗವಿದ್ದಾಗ ಕರ್ಮಾಕಾಂಕ್ಷೆ ಬರುವದಿಲ್ಲವೋ ಅವು ಅಕರ್ಮಕಗಳು. ಆ ಆಕಾಂಕ್ಷೆ ಇಲ್ಲದೆ ಇರುವುದು ಕೆಲವೆಡೆಯಲ್ಲಿ ಸ್ವಭಾವವಾಗಿಯೂ, ಕೆಲವೆಡೆಯಲ್ಲಿ ಧಾತುಗಳ ಜತೆಯಲ್ಲಿ ಕೂಡಿರುವ ಪದವಿಶೇಷಗಳಿಂದಲೂ, ಕೆಲವೆಡೆಯಲ್ಲಿ ಧಾತುಪಾಠದಲ್ಲಿ ಹೇಳಿರುವ ಅರ್ಥವನ್ನು ಬಿಟ್ಟು ಬೇರೇ ಅರ್ಥವನ್ನು ಹೇಳುವದರಿಂದಲೂ, ಕೆಲವೆಡೆಯಲ್ಲಿ ಕರ್ಮವಿದ್ದರೂ ಅದನ್ನು ವಿವಕ್ಷಿಸದೆ ಇರುವದರಿಂದಲೂ, ಸಕರ್ಮಕಗಳು ಅಕರ್ಮಕಗಳಾಗುವವು. ಇವಕ್ಕೆ ಕ್ರಮವಾಗಿ ಉದಾಹರಣೆಗಳು:.

(೧) ಅತನು ಬಂದನು, ಈತನು ಇದ್ದನು, ಇತ್ಯಾದಿ ವಾಕ್ಯಗಳಲ್ಲಿ ಇರ್, ಉರ್, ಎಂಬ ಧಾತುಗಳ ಕ್ರಿಯೆಯು ಎಲ್ಲಿಂದ, ಎಲ್ಲಿ ಎಂಬ ಕಾರಕಾಂತರಗಳನ್ನಪೇಕ್ಷಿಸುತ್ತಿದ್ದರೂ, ಸ್ವಭಾವವಾಗಿ ಕರ್ಮಕಾರಕವನ್ನು ಅಪೇಕ್ಷಿಸುವದಿಲ್ಲವಾದುದರಿಂದ ಇತ್ಯಾದಿಧಾತುಗಳು ಸ್ವಭಾವವಾಗಿಅಕರ್ಮಕಗಳಾಗುವವು.

(೨) ನೆಲವನ್ನು ಕೊಂಡನು, ಸತಿಯನ್ನು ಕರೆದನು, ಇತ್ಯಾದಿ ವಾಕ್ಯಗಳಲ್ಲಿ ಕೊಳ್, ಕರೆ ಎಂಬ ಧಾತುಗಳು ಸ್ವಯಂ ಸಕರ್ಮಕಗಳಾಗಿದ್ದರೂ, ದೊರೆಕೊಂಡುದು, ಮೈಯ್ಗರೆದನು, ಇತ್ಯಾದಿ ಸ್ಥಳಗಳಲ್ಲಿ ದೊರೆಕೊಳ್, ಮೈಯ್ಗರೆ, ಎಂಬಿವು ದೊರೆ. ಮೈಯ್, ಎಂಬ ಬೇರೆ ಪದಗಳೊಡನೆ ಸೇರಿರುವುದರಿಂದ, ಸಿರಿದೊರೆಕೊಂಡುದು, ತಾನು ಮೈಯ್ಗರೆದನು, ಎಂಬಲ್ಲಿ ಅಕರ್ಮಕಗಳಾಗುವುವು.

(೩) ಹೀಗೆಯೇ ಹೊಲವನ್ನುತ್ತನು, ಮಣಿಯನ್ನು ಸರಿದನು, ಮೊದಲಾದ ವಾಕ್ಯಗಳಲ್ಲಿ, ಉಳ್, ಸರಿ, ಮೊದಲಾದ ಧಾತುಗಳು ಸಕರ್ಮಕಗಳಾಗಿದ್ದರೂ, ಅವರೊಳರ್, ಇವರು ಸರಿದರ್, ಮೊದಲಾದ ವಾಕ್ಯಗಳಲ್ಲಿ, ಧಾತುಪಾಠದಲ್ಲಿ ಈ ಧಾತುಗಳಿಗೆ

ಬ್ಬರವನ್ನು 'ವಿಶೇಷಗೊಬ್ಬರ' ಎಂದು ಕರೆಯಬಹುದು, ಈ ವಿಶೇಷಗೊಬ್ಬರಗಳನ್ನು ಎಲ್ಲಾ ಪೈರಿಗೂ ಉಪಯೋಗಿಸುವುದರಿಂದ ಪ್ರಯೋಜನವಿಲ್ಲ. ಒಂದೊಂದು ವಿಶೇಷಗೊಬ್ಬರವನ್ನು ಒಂದೊಂದು ಜಾತಿಯ ಪೈರಿಗೆ ಉಪಯೋಗಿಸಬೇಕು. ಮುಖ್ಯವಾದವಿಶೇಷ ಗೊಬ್ಬರಗಳು ಯಾವವೆಂದರೆ.

೧ಪೆಟ್ಟ್ಲಪ್ಪ (ಪೊಟಾಸಿಯಂ ನೈಟ್ರೇಟ್, NKO_3)

೨ಎಲುಬುಗಳು.

೩ಸೋಡಿಯಂ ನೈಟ್ರೇಟ್ ($NaNo_3$)

೪ಸುಣ್ಣ.

೫ಬೂದಿ.

೬ಅಡಿಗೆಯ ಉಪ್ಪು (Nacl)

ಮೇಲೆ ಬರೆದಿರುವ ಆರು ಗೊಬ್ಬರಗಳಲ್ಲಿ ಸೋಡಿಯಂ ನೈಟ್ರೇಟ್‌ವಿನಾ ಉಳಿದ ಐದು ವಸ್ತುಗಳೆಲ್ಲಾ ನಮಗೆ ಸುಲಭದಲ್ಲಿ ದೊರೆಯುತ್ತವೆ. ಈ ಗೊಬ್ಬರಗಳೆಲ್ಲಾ ಮಣ್ಣಿಗೆ ಹಾಕಿದ ಪಕ್ಷದಲ್ಲಿ ಬಹಳ ಪ್ರಯೋಜನವನ್ನು ಅನೇಕವೇಳೆ ಉಂಟುಮಾಡುತ್ತವೆ.

೧ ಪೆಟ್ಟ್ಲಪ್ಪ ಮುಖ್ಯವಾದ ವಿಶೇಷಗೊಬ್ಬರಗಳಲ್ಲಿ ಒಂದಾಗಿದೆ. ಇದರಿಂದ ಸಸ್ಯಗಳಿಗೆ ಮುಖ್ಯಾಹಾರ ವಸ್ತುಗಳಾದ ಪೊಟಾಸಿಯಂ(K)ಮತ್ತು ನೈಟ್ರಜನ್(N) ಇವೆರಡೂ ದೊರೆಯುತ್ತವೆ. ನೈಟ್ರಜನ್ ಹೆಚ್ಚಾಗಿ ಅವಶ್ಯಕವಾದ ಪೈರಿಗೆಲ್ಲಾ ಇದು ಉತ್ತಮವಾದ ಗೊಬ್ಬರವೆಂದು ತಿಳಿದಿರುವರು. ಇದು ಕಾರಣ. ಗೋಧಿ, ರಾಗಿ, ಜೋಳ ಬತ್ತ ಮೊದಲಾದ ಧಾನ್ಯದ ಪೈರುಗಳಿಗೆಲ್ಲಾ ಈ ಗೊಬ್ಬರ ಉಪಯೋಗವಾಗಿದೆ. ಪೆಟ್ಟ್ಲಪ್ಪ ನೀರಿನಲ್ಲಿ ಬಹಳ ಸುಲಭವಾಗಿ ಕರಗುವ ಗುಣವನ್ನು ಪಡೆದಿರುವ ವಸ್ತುವಾದುದರಿಂದ ಮಳೆಯ ಸಹಾಯದಿಂದಲೇ ಬೆಳೆಯಬೇಕಾದ ಪೈರುಗಳಿಗೂ, ಬತ್ತದ ಪೈರಿಗೂ ಅನು ಕೂಲವಾಗಿಲ್ಲ. ನೀರು ಹಾಯಿಸುವಿಕೆಯಿಂದ ಬೆಳೆಯಿಸಲ್ಪಡುವ ಪೈರುಗಳಿಗೆ ಅನುಕೂಲವಾಗಿದೆ. ಇದಲ್ಲದೆ ಇದು ಬೆಲೆಯುಳ್ಳ ಗೊಬ್ಬರವಾದುದರಿಂದ ಇದನ್ನು ಬೆಲೆಯುಳ್ಳ ಪೈರುಗಳಿಗೇ ಉಪಯೋಗಿಸಬೇಕು. ಕಬ್ಬು ಹೆಚ್ಚಾದ ಲಾಭವನ್ನು ಕೊಡುವ ಪೈರಾಗಿರುವುದರಿಂದಲೂ ನೈಟ್ರಜನ್ನಿನಿಂದ ಅಭಿವೃದ್ಧಿ ಹೊಂದುವುದರಿಂದಲೂ ಅದಕ್ಕೆ ಅನು ಕೂಲವಾಗಿ ಉಪಯೋಗಿಸ ಬಹುದು. ಹೊಗೇ ಸೊಪ್ಪು ಲಾಭ

ಗಳನ್ನು ಧಾತ್ವರ್ಥೇನೋಪಸಂಗ್ರಹಾತ್, ಎಂಬುವುದಕ್ಕೆ ಉದಾಹರಣೆಯನ್ನು ಹೇಳಬಹುದಾದುದರಿಂದ ಈ ಭಾಗದಲ್ಲೂ ಸಂಸ್ಕೃತದಲ್ಲಿರುವುದಕ್ಕೂ ಕನ್ನಡದಲ್ಲಿರುವುದಕ್ಕೂ ಭೇದವಿಲ್ಲವೆಂದು ಬುದ್ಧಿವಂತರು ಊಹಿಸಿಕೊಳ್ಳಬಹುದು.

ಹೀಗೆಯೆ ಕೆಲವು ಸಂದರ್ಭಗಳಲ್ಲಿ ಅಕರ್ಮಕಧಾತುಗಳನ್ನು ಸಕರ್ಮಕಗಳನ್ನಾಗಿ ಪ್ರಯೋಗಿಸುವುದುಂಟು. ಇದು ಸಂಸ್ಕೃತಭಾಷೆಯಲ್ಲಿ ಬಹಳವಾಗಿರುತ್ತದೆ. ಆದರೆ ಅಲ್ಲಿ ಅಕರ್ಮಕಗಳಾದ ಕೇವಲ ಧಾತುಗಳು ಸಕರ್ಮಕಗಳಾಗದಿದ್ದರೂ, ಉಪಸರ್ಗಗಳ ಬಲದಿಂದ ಸಕರ್ಮಕಗಳಾಗುವುವು. ಭಾಷೆಯಲ್ಲಾದರೊ ಅಂತಹ ಉಪಸರ್ಗಗಳಿಲ್ಲದಿರುವುದರಿಂದ ಬೇರೆ ಪದಗಳೊಡನೆ ಸೇರಿ ಆಗುವುವು. ಅಕರ್ಮಕಧಾತುಗಳು ಸಕರ್ಮಕಗಳಾಗುವುದಕ್ಕೆ ವ್ಯಾಕರಣಕಾರರಾರೂ ಸ್ಪಷ್ಟವಾಗಿ ಕಾರಣವನ್ನು ಹೇಳದಿದ್ದರೂ ಪ್ರಯೋಗಗಳಿಂದ, ಸಕರ್ಮಕಧಾತುಗಳು ಅಕರ್ಮಕಗಳಾಗುವುದಕ್ಕೆ ಹೇಳಿರುವ ಯುಕ್ತಿಗಳಿಂದಲೂ. ಆಗಬಹುದೆಂದು ತಿಳಿದುಕೊಳ್ಳಬಹುದು. ಇದರಲ್ಲಿ ಅಕರ್ಮಕ ಧಾತುಗಳು ಸಕರ್ಮಕವಾಗುವುದಕ್ಕೆ, 'ಧಾತೋರರ್ಥಾಂತರವೃತ್ತೇಃ' ಎಂದು ಸಂಸ್ಕೃತವ್ಯಾಕರಣಕಾರರು ಹೇಳಿರುವುದೂ, ಶಬ್ದಾನುಶಾಸನದಲ್ಲಿ, 'ಸ್ವಚಿತ್ತಸಮಭಿವ್ಯಾಹಾರ ವಿಶೇಷತಃ, ಎಂದು ಹೇಳಿರುವುದೇ ಯುಕ್ತಿಯಾಗಿರುವುದು. ಇದಕ್ಕೆ ತಕ್ಕಂತೆ ಪ್ರಯೋಗಗಳೂ ಇರುವುದರಿಂದ ಪ್ರಯೋಗಜ್ಞರು ಊಹಿಸಿಕೊಳ್ಳಬಹುದು.

(ಸಶೇಷ.)

ವಿಶೇಷಗೊಬ್ಬರಗಳು.

ಸಸ್ಯಗಳ ಅಮೂಲ್ಯ ಆಹಾರ ವಸ್ತುಗಳಾದ ನೈಟ್ರಜನ್, ಪೊಟಾಷ್, ಫಾಸ್ಫರಸ್, ಸುಣ್ಣ ಈ ವಸ್ತುಗಳಲ್ಲಿ ಒಂದು ಅಥವಾ ಎರಡನ್ನು ಹೆಚ್ಚಾಗಿ ಕೊಡುವ ಗೊ

ವರಸೆ ಎಲುಬು ಒಂದು ವರಸೆ ಬೂದಿ ಈರೀತಿಯಲ್ಲಿ ಅನುಕೂಲವಾದ ಒಂದು ಹಳ್ಳದಲ್ಲಿ ತುಂಬಿ ಗಂಜಲವನ್ನು ಇಲ್ಲವಾದರೆ ನೀರನ್ನು ರಾಸಿಯಲ್ಲಿ ತೇವವಾಗಿರುವಹಾಗೆ ಹಾಕಿ ಮಣ್ಣಿನಿಂದ ಮುಚ್ಚಿಟ್ಟರಬೇಕು. ಆಗಾಗ್ಗೆ ಹಳ್ಳದೊಳಕ್ಕೆ ಬಿದಿರು ಕೊಳವೆಗಳ ಮೂಲಕ ಗಂಜಲವನ್ನು ಹೊಯ್ಯುತ್ತಿರಬಹುದು. ಆರುತಿಂಗಳಾದಮೇಲೆ ಹಳ್ಳದಲ್ಲಿರುವ ಗೊಬ್ಬರವನ್ನು ಚೆನ್ನಾಗಿ ಕಲಸಬೇಕು. ಎಲುಬುಗಳ ತುಂಡುಗಳನ್ನು ಬೆರಳುಗಳಿಂದ ಅದಮಿದರೆ ಪುಡಿಯಾಗುವಷ್ಟು ಮೆತ್ತಗಿರಬೇಕು. ಈ ಸ್ಥಿತಿಗೆ ಬಾರದೆ ಇದ್ದಲ್ಲಿ ಇನ್ನೂ ಕೆಲವು ಕಾಲದವರೆಗೆ ಹಳ್ಳದಲ್ಲಿ ಇದೇರೀತಿಯಲ್ಲಿ ಕೊಳೆಯಿಸಬೇಕು. ಈರೀತಿಯಲ್ಲಿ ಕೊಳೆಯಿಸಲ್ಪಟ್ಟ ಎಲುಬುಗಳು ಬೇಗನೆ ಸಸ್ಯಗಳಿಗೆ ಉಪಯೋಗವಾಗುತ್ತವೆ.

ಯಾವ ಗೊಬ್ಬರವಾಗಲಿ ಸಸಿಗಳು ಹೂಬಿಟ್ಟಮೇಲೆ ಮಣ್ಣಿಗೆ ಹಾಕಿದರೆ ಉಪಯೋಗವಾಗುವುದಿಲ್ಲ. ಇದುಕಾರಣ ಪೆಟ್ಲ್ಲಪ್ಪನ್ನು ಪೈರು ಎಳಸಾಗಿರುವಾಗ ಹಾಕಬೇಕು. ಮಳೆ ಬರುವಹಾಗೆ ತೋರಿಬಂದರೆ ಹಾಕಬಾರದು. ಎಕರೆ ಒಂದಕ್ಕೆ ನೂರಹನ್ನೆರಡು ಪವುನಿನಂತೆರೆಗೂ ಹಾಕಬಹುದು. ಹಾಕಬೇಕಾದ ಪೆಟ್ಲ್ಲಪ್ಪನ್ನು ಎರಡುಪಾಲು ಮಾಡಿ ಒಂದು ಭಾಗವನ್ನು ಜವಿಾನಿನಮೇಲೆ ಎಲ್ಲ್ಲಕಡೆಗೂ ಎರಚಿ ಹಲುಬಿ ಹೊಡೆದು ನೀರು ಕಟ್ಟಬಹುದು. ಮತ್ತೊಂದು ಭಾಗವನ್ನು ಸುಮಾರು ಎರಡು ವಾರಗಳು ಕಳೆದ ನಂತರ ಅದೇರೀತಿಯಲ್ಲಿ ಹಾಕಬಹುದು.

ಪೆಟ್ಲ್ಲಪ್ಪಿನಿಂದ ಸೊಟಾಷ್ ನೈಟ್ರಜನ್ನೂ ಸಸ್ಯಗಳಿಗೆ ದೊರೆಯುತ್ತವೆಂದು ಹಿಂದೆ ತಿಳಿಸಿದೆ. ಪ್ರತಿವರ್ಷವೂ ಇದನ್ನೇ ಜವಿಾನಿಗೆ ಹಾಕಿ ಪೈರು ಬೆಳೆಯಿಸುತ್ತ ಬಂದರೆ ಮಣ್ಣಿನಲ್ಲಿರುವ ಉಪಯೋಗ ಸ್ಥಿತಿಯಲ್ಲಿಯು ಪಾಸ್ಪರಿಕ್ ಆಸಿಡ್ ಮುಗಿಯುವುದರಿಂದ ಮಣ್ಣು ನಿಸ್ಸಾರ ಸ್ಥಿತಿಗೆ ಬರುತ್ತದೆ. ಇದ.ಕಾರಣ ಮೊದಲು ಕೆಲವು ವರ್ಷಗಳು ಮಾತ್ರ ಫಸಲು ಹೆಚ್ಚಿ ಆಮೇಲೆ ಕಡಮೆಯಾಗುತ್ತದೆ. ಹೀಗಾಗುವುದನ್ನು ತಪ್ಪಿಸುವುದಕ್ಕಾಗಿ ಪೆಟ್ಲ್ಲಪ್ಪಿನೊಡನೆ ಪಾಸ್ಪರಸ್ಸನ್ನು ಕೊಡುವ ಗೊಬ್ಬರವನ್ನು ಬೆರೆಸುವುದು ಅವಶ್ಯಕವಾಗಿ ತೋರಿಬರುವುದು. ಎಲುಬು ಗೊಬ್ಬರ, ಬೂದಿ, ಇವುಗಳನ್ನು ಇದಕ್ಕಾಗಿ ಉಪಯೋಗಿಸಬಹುದು. ತಿರುಚಿನಾಪಲ್ಲಿಯಲ್ಲಿ ಸಿಕ್ಕುವ 'ಕಾಫ್ರೊಲೈಟ್ಸ್' ಎಂಬ ರಂಜಕ ಸಂಬಂಧ ಖನಿಜವಸ್ತುವನ್ನೂ ಉಪಯೋಗಿಸಬಹುದು.

ವನ್ನು ಕೊಡುವ ಸೈರಾಗಿದೆ. ಇದಕ್ಕೆ ಪೊಟಾಷ್ ಹೆಚ್ಚಾಗಿ ಬೇಕೆಂದು ತಿಳಿದುಬಂದಿದೆ. ಪೊಟಾಷು ಸಾಕಾಗುವಷ್ಟು ಇರುವ ಮಣ್ಣಿನಲ್ಲಿ ಬೆಳೆದ ಹೊಗೇಸೊಪ್ಪಿನಗುಣ ಚೆನ್ನಾಗಿರುತ್ತದೆಂದು ಹೇಳುವರು. ಇದುಕಾರಣ ಹೊಗೇಸೊಪ್ಪಿಗೆ ಈ ಗೊಬ್ಬರ ಉಪಯೋಗವಾಗಿದೆ. ಇಂಗ್ಲೆಂಡಿನಲ್ಲಿ ಇದನ್ನು ಗೋಧಿಯ ಬೆಳೆಗೆ ಸಾಧಾರಣವಾಗಿ ಉಪಯೋಗಿಸುವರು.

ಸಾಕಾಗುವಷ್ಟು ನೈಟ್ರಜನ್ ದೊರಿಯದೆಇರುವ ಮಣ್ಣಿನಲ್ಲಿ ಬಲಹೀನವಾಗಿಯೂ ರೋಗತಗಲಿದಹಾಗೆಯೂ ಸೈರು ಬೆಳೆಯುತ್ತಿದ್ದರೆ ಪೆಟ್ಲುಪ್ಪನ್ನು ಹಾಕಿದ ಕೆಲವು ದಿನಗಳಲ್ಲಿಯೇ ಹಸರುತಿರುಗುತ್ತದೆ. ನೈಟ್ರಜನ್ನನ್ನು ಹೆಚ್ಚಾಗಿ ಕೊಡುವ ಗೊಬ್ಬರಗಳಲ್ಲಾ ಸಸ್ಯಗಳ ಎಲೆಗಳನ್ನೂ ರಂಬಿಕಾಂಡಗಳನ್ನೂ ಬಹಳವಾಗಿ ಅಭಿವೃದ್ಧಿ ಪಡಿಸುವಗುಣ ಪಡೆದಿರುವುದರಿಂದ ಪೆಟ್ಲು ಪ್ಪು ಇದೇರೀತಿಯಲ್ಲಿ ಮಾಡುತ್ತದೆ. ಪೆಟ್ಲುಪ್ಪು ಒಂದನ್ನೇ ಮಣ್ಣಿಗೆ ಹಾಕಿದರೆ ಸೈರು ಬಹಳ ಹುಲುಸಾಗಿ ಬೆಳೆದು ಫಸಲು ಹೆಚ್ಚಾಗಿ ದೊರೆಯುವೇ ಹೇಳಾಗಬಹುದು. ಹೀಗಾಗುವುದನ್ನು ತಪ್ಪಿಸುವದಕ್ಕಾಗಿ ಇಂಗ್ಲಂಡಿನಲ್ಲಿ ಪೆಟ್ಲುಪ್ಪಿನೊಡನೆ ಅಡಿಗೆ ಉಪ್ಪನ್ನು ಬೆರೆಸಿ ಉಪಯೋಗಿಸುವ ವಾಡಿಕೆಯನ್ನು ಅನುಸರಿಸಿರುವರು. ನೂರುಪವುನ್ ಪೆಟ್ಲುಪ್ಪಿನಸಂಗಡ ಇನ್ನೂರುಪವುನ್ ಅಡಿಗೇಉಪ್ಪನ್ನು ಸೇರಿಸಿ ಒಂದು ಎಕರೆಯ ಗೋಧಿ ಬೆಳೆಗೆ ಹಾಕುವುದು ಅನುಭವದಲ್ಲಿದೆ. ಈರೀತಿಯಲ್ಲಿ ಬೆರೆಸಿಸಲ್ಪಟ್ಟ ಅಡಿಗೇ ಉಪ್ಪು ಫಸಲನ್ನು ಹೆಚ್ಚಿಸುತ್ತದೆ.

ಎಲುಬುಗಳನ್ನು ಮಣ್ಣಿಗೆಹಾಕಿದರೆ ಬೇಗನೆ ಉಪಯೋಗಕ್ಕೆ ಬರುವವಸ್ತುವಲ್ಲವಾದುದರಿಂದ ಅವರ ಪ್ರಯೋಜನವನ್ನು ಜಾಗ್ರತೆಯಲ್ಲಿ ಪಡೆಯುವುದಕ್ಕಾಗಿ ನಾನಾರೂಪಗಳಲ್ಲಿ ಅದನ್ನು ಮಣ್ಣಿಗೆಹಾಕುವರು. ಅವುಗಳು ಯಾವವೆಂದರೆ—ಎಲುಬುಗಳಪುಡಿ, ಸೂಪರ್‌ಫಾಸ್ಫೇಟ್, ಕೊಳೆತ ಎಲುಬುಗಳು.

ಎಲುಬುಗಳನ್ನು ಯಂತ್ರಗಳ ಸಹಾಯದಿಂದ ಪುಡಿಮಾಡಿ ಮಣ್ಣಿಗೆ ಸೇರಿಸುವುದು. ಕೆಲವುವೇಳೆ ಸಣ್ಣತುಂಡಗಳಾಗಿ ಮಾಡಿ ಹಾಕುವುದೂ ಉಂಟು. ತುಂಡುಗಳಿಗಿಂತಲೂ ಪುಡಿ ಉತ್ತಮ. ಎಲುಬುಗಳಿಗೆ ಸಾಕಾಗುವಷ್ಟು ಸಲ್ಫ್ಯೂರಿಕ್ ಆಸಿಡ್ಡನ್ನು ಹಾಕಿದರೆ ಸೂಪರ್‌ಫಾಸ್ಫೇಟ್ ಆಗುತ್ತದೆ. ಸೂಪರ್‌ಫಾಸ್ಫೇಟಿನಲ್ಲಿರುವಕೊಳ್ಳಿಯಂ ಫಾಸ್ಫೇಟಿನ ಹೆಚ್ಚಾದಭಾಗವು ನೀರಿನಲ್ಲಿ ಕರಗುವಸ್ಥಿತಿಯಲ್ಲಿರುವುದರಿಂದ ಅದು ಬೇಗನೆ ಸೈರಿಗೆ ಉಪಯೋಗವಾಗುತ್ತದೆ. ಎಲುಬುಗಳನ್ನು ಕೊಳೆಯಿಸಿ ಉಪಯೋಗಿಸಬಹುದು. ಹೊಸಎಲುಬುಗಳನ್ನು ವರಸೆ ವರಸೆಯಾಗಿ ಬೂದಿಯೊಡನೆ ಒಂದು

ನೋಡಬೇಕಾದರೆ ಒಂದು ಸಣ್ಣ ದಾರಕ್ಕೆ ಬಹಳ ಲಘುವಾದ ಹಕ್ಕಿಯಪುಕ್ಕ, ಯಕ್ಕದ ಬೀಜ ಮುಂತಾದ ಪದಾರ್ಥವನ್ನು ಕಟ್ಟಿ ಚಿಲುಮೆಯ ಕೆಳಭಾಗದಲ್ಲಿ ಹಿಡಿದರೆ ಅದು ಚಿಲುಮೆಯೊಳಕ್ಕೆ ನುಗ್ಗುವದೂ, ಮೇಲುಭಾಗದಿಂದ ಒಳಕ್ಕೆ ದೂರಿಸುವದಕ್ಕೆ ಪ್ರಯತ್ನಪಟ್ಟಾಗ್ಯೂ ಅದು ಈಚೆಗೆ ತಳ್ಳಲ್ಪಡುವದೂ ದೃಷ್ಟಾಂತಗಳು

ಹೀಗಾಗುವದಕ್ಕೆ ಕಾರಣವೇನಂದರೆ—ಸಾಮಾನ್ಯವಾಗಿ ಶಾಖದಿಂದ ಪದಾರ್ಥಗಳ ಗಾತ್ರವು ವೃದ್ಧಿಯಾಗುತ್ತೆ. ಅಂದರೆ ಪದಾರ್ಥಗಳು ವಿಶಳತರವಾಗುತ್ತೆಂತಲೂ ಹೇಳಬಹುದು. ಚಿಲುಮೆಯೊಳಗಿನ ಗಾಳಿಯು ಹೊರಗಿನ ಗಾಳಿಗಿಂತಲೂ ತುಂಬಾ ಶಾಖವುಳ್ಳದ್ದು. ಆದ್ದರಿಂದ ಈ ಗಾಳಿಯು ಅತಿವಿಶಳವಾಗಿಯೂ ಕಡಮೆ ತೂಕವುಳ್ಳದ್ದಾಗಿಯೂ ಇರುವದರಿಂದ ಬೇಗನೆ ಮೇಲಕ್ಕೆ ಎದ್ದು ಚಿಲುಮೆಯನ್ನು ಬಿಟ್ಟು ಬರುತ್ತೆ. ಬರಿದಾದಚಿಲುಮೆಗೆ ಕೂಡಲೆ ಹೊರಗಿನ ವಾಯುವು ತುಂಬಿಕೊಳ್ಳುತ್ತದೆ. ಈ ಕೆಲಸಗಳು ಅತಿಜಾಗ್ರತೆಯಾಗಿ ನಡೆಯುತ್ತವೆಯಾದಕಾರಣ ಜ್ವಾಲೆಗೆ ತುಂಬಾ ಆಕ್ಸಿಜನ್ ವಾಯುವು ತಲಪಿ ಶಾಖ ಹೆಚ್ಚಿ ಜ್ವಾಲೆಯಲ್ಲಿನ ಕಾರ್ಬನ್ ಪರಮಾಣುಗಳು ಚನ್ನಾಗಿ ಕಾಯಿಸಲ್ಪಟ್ಟು ಸುಡಲ್ಪಟ್ಟು ಕಾರ್ಬಾನಿಕ್ ಆಸಿಡ್— ಅಂಗಾರಾಮ್ಲವಾಯು ಆಗುತ್ತವೆ.

ಮೇಲೆ ಹೇಳಿರುವ ವಿಷಯಗಳಿಗೆ ದೃಷ್ಟಾಂತಗಳನ್ನು ಕೊಡುವದು ಉಪಯೋಗಕರವೆಂತ ತೋರುತ್ತೆ.

ಉಷ್ಣದಿಂದ ಸಾಮಾನ್ಯವಾಗಿ (ಅಂದರೆ ಕೆಲವು ಸಂದರ್ಭಗಳಲ್ಲಿ ವಿನಹ ಎಂತ ತಿಳಿಯಬೇಕು) ಪದಾರ್ಥಗಳ ಗಾತ್ರವು ವೃದ್ಧಿಯಾಗುತ್ತೆ ಎಂಬುವದಕ್ಕೆ,—

೩. ಒಂದು ಕಬ್ಬಿಣದ ಗುಳವನ್ನು ಕಾಯಿಸಿದರೆ ಇದರ ಉದ್ದ ಹೆಚ್ಚುವದು. ತಣ್ಣಗಿರುವಾಗ ಈ ಗುಳವನ್ನು ಹತ್ತನಾಗಿ ಹಿಡಿಯುವಹಾಗೆ ಇದರ ಉದ್ದಕ್ಕೆ ಸರಿಯಾಗಿ ಎರಡು ತಗಡುಗಳನ್ನು ನಿಲ್ಲಿಸಿ ಒಂದು ಗೂಡು ಮಾಡಿಟ್ಟಿದ್ದರೆ ಕಾದ ಗುಳವು ಗೂಡಿಗೆ ಹಿಡಿಸುವದಿಲ್ಲ.

ಇದಕ್ಕಾಗಿಯೇ ರೈಲ್‌ರಸ್ತೆಯಲ್ಲಿ ಕಂಬಿಗಳ ಮಧ್ಯೆ ಸ್ವಲ್ಪ ಜಾಗ ಬಿಟ್ಟಿರುತ್ತೆ. ಹಾಗಿಲ್ಲದಿದ್ದರೆ ಬೇಸಿಗೆ ಸೆಕೆಗೆ ಕಂಬಿಗಳು ಉದ್ದವಾಗಿ ಅಡರಿಕೊಳ್ಳುವದಕ್ಕೆ ಜಾಗವಿಲ್ಲದೆ ದೊಂಕಾಗಿ ಬಾಗುತ್ತವೆ.

ಎಲುಬುಗಳು ಉಪಯೋಗವಾದ ಗೊಬ್ಬರವಾಗುವ ವಸ್ತುವೆಂದು ತಿಳಿದಿರುವರು. ಇದು ಮುಖ್ಯವಾಗಿ ಕ್ಯಾಲ್ಸಿಯಂ ಪಾಸ್ಫೇಟ್ ($Ca_3 P_2 O_8$)ನಿಂದ ಉಂಟಾಗಿದೆ. ಇದರಲ್ಲಿ ಹೊಸದಾದರೆ ಮಾಂಸ ಸಂಬಂಧ ವಸ್ತುವೂ ಇರುತ್ತದೆ. ಹಳೇ ಎಲುಬುಗಳಲ್ಲಿ ಮಾಂಸ ಸಂಬಂಧ ವಸ್ತು ಇರುವುದಿಲ್ಲ. ಎಲುಬುಗಳಲ್ಲಿ ಸುಣ್ಣ ಪಾಸ್ಫರಸ್ ಎರಡೂ ಇದ್ದರೂ ಅದರಲ್ಲಿಯು ಪಾಸ್ಫರಸ್ಸಿನ ಅವಶ್ಯಕತೆಯೇ ನಮಗೆ ಹೆಚ್ಚು.

(ಸಶೇಷ)

ಬೆಳಕು.

ಚಿಲುಮೆಯ ಕರ್ತವ್ಯವನ್ನು ಸ್ವಲ್ಪ ವಿಚಾರಮಾಡುವದು ಈಗ ಅವಶ್ಯಕವಾಯಿತು. ನುಣುಪಾದ ಅಡಿಯುಳ್ಳ ಸ್ಥೂರಂದ್ರಾಕಾರವಾದ ಒಂದು ಚಿಲುಮೆಯನ್ನು ನೋಡಿಟ್ಟುಕೊಳ್ಳಬೇಕು. ಮಟ್ಟವಾಗಿ ಹತ್ತರಿ ಮಾಡಿರುವ ಒಂದು ಮೇಜು ಅಥವ ಹಲಗೆಯಮೇಲೆ ಎರಡು ಅಂಗುಲ ಎತ್ತರದ ಮೇಣದ ಬತ್ತಿಯನ್ನು ಹಚ್ಚಿರಿಸಿ ಇದರ ಸುತ್ತಲೂ ಚಿಲುಮೆಯನ್ನಿಟ್ಟರೆ ಕೂಡಲೆ ಬತ್ತಿಯು ಆರಿಹೋಗುವದು. ಮತ್ತು ಕೆಳಗಿನಿಂದ ಗಾಳಿ ನುಗ್ಗುವದಕ್ಕೆ ಸ್ವಲ್ಪ ಅವಕಾಶವನ್ನು ಕೊಟ್ಟು ಎರಡು ಮಂದವಾದ ಕಾಗದದ ತುಕ್ಕಡಗಳಮೇಲಾಗಲಿ, ಅಥವಾ ಒಂದೆರಡು ದೀಪದಕಡ್ಡಿಗಳಮೇಲಾಗಲಿ ಚಿಲುಮೆಯನ್ನು ಇಟ್ಟರೆ ಬತ್ತಿಯು ಉರಿಯುತ್ತಿರುವದು. ಸೀಮೆಯಣ್ಣೆ ಲ್ಯಾಂಪು ಉರಿಯುತ್ತಿರುವಾಗ ಬರ್ನರಿನ (Burner) ಕೆಳಭಾಗದಲ್ಲಿರುವ ರಂಧ್ರಗಳನ್ನೆಲ್ಲಾ ಚೆನ್ನಾಗಿ ಮುಚ್ಚಿಬಿಟ್ಟರೂ ದೀಪ ಆರಿಹೋಗುವದು. ಈ ಪರೀಕ್ಷೆಗಳಿಂದ ಕೆಳಗಡೆಯಿಂದ ಗಾಳಿಗೆ ಅವಕಾಶವಿರುವದು ದೀಪ ಉರಿಯುವದಕ್ಕೆ ಅವಶ್ಯಕವೆಂತ ಗೊತ್ತಾಗುತ್ತೆ. ದೀಪ ಅಥವಾ ಮೇಣದಬತ್ತಿ ಉರಿಯುತ್ತಿರುವಾಗ ಚಿಲುಮೆಯ ಮೇಲುಭಾಗದ ಬಾಯಿಯನ್ನು ಮುಚ್ಚಿದರೂ ಜ್ವಾಲೆಯು ಆರಿಹೋಗುತ್ತೆ. ಆದ್ದರಿಂದ ಚಿಲುಮೆಯು ಮೇಲುಭಾಗದಲ್ಲೂ ಗಾಳಿ ಹೋಗುವದಕ್ಕೆ ಅವಕಾಶವು ಅವಶ್ಯಕ. ಕೆಳಭಾಗದಿಂದ ಗಾಳಿಬರುತ್ತೆಂತಲೂ ಮೇಲುಭಾಗದಿಂದ ಕಾದ ಗಾಳಿ ಹೋಗುತ್ತೆಂತಲೂ

ಇರುವದಕ್ಕೆ ಕಾರಣವೂ, ಮಾಗ್ನಿಸಿಯಂ ಜ್ವಾಲೆಯಲ್ಲಿ ಶಾಖ ಕಡಮೆಯಾದಾಗ್ಯೂ ಅದರಲ್ಲಿ ಲಘಿಳವಾಗಿ ಬೆಳಕಿರುವದಕ್ಕೆ ಕಾರಣವೂ ಈಗ ಗೊತ್ತಾದಹಾಗೆ ಆಯಿತು. ವಿದ್ಯುತ್ ಶಕ್ತಿಯಿಂದ ಉಂಟಾಗುವ ಬೆಳಕಿನಲ್ಲಿ ಜ್ವಾಲೆ ಇಲ್ಲದಿದ್ದರೂ ಬೆಳಕು ಬಿಡಿಗೆ ಕಾಯಿಸಲ್ಪಟ್ಟ ಪದಾರ್ಥದಿಂದಲೇ (ಸ್ಫಟನಂ ಅಥವಾ ಕಾರ್ಬನ್) ಉಂಟಾಗುತ್ತೆ. ಈ ಎರಡು ಸಂದರ್ಭಗಳಲ್ಲಿಯೂ ಶಾಖದಿಂದ ಬಳಕು ಉಂಟಾಯಿತು. ಸೂರ್ಯನ ಬೆಳಕೂ ಕೂಡ ಶಾಖಯುಕ್ತವಾದದ್ದೆಯೆ. ಜ್ವಾಲೆಗಳಲ್ಲಿ ಆಕ್ಸಿಜನ್ ವಾಯುವಿಗೂ ಮತ್ತು ಕಾರ್ಬನ್ ಅಥವ ಇತರವದಾರ್ಥದ ಪರಮಾಣುಗಳಿಗೂ ಉಂಟಾಗುವ ಸಂಯೋಗದಿಂದ ಶಾಖವು ಉತ್ಪತ್ತಿಯಾಗುತ್ತೆ.

ಪಾಶ್ಚಾತ್ಯರ ವಿದ್ಯಾಪ್ರಚಾರ.

ಈ ವಿಷಯವಾಗಿ ಮು॥ರಾ॥ ಎಚ್. ನಾರಾಯಣರಾವ್ ಬಿ. ಎ. ಬಿ. ಎಲ್. ರವರು ಮದರಾಸಿನಲ್ಲಿ ಒಂದು ಇಂಗ್ಲಿಷ್ ಉಪನ್ಯಾಸವನ್ನು ಮಾಡಿದರು. ಅವರು ಹೇಳಿರುವ ಅನೇಕ ಅಂಶಗಳು ಉಪಯುಕ್ತವಾಗಿ ತೋರುವುದರಿಂದ ಇಲ್ಲಿ ಸಂಗ್ರಹಿಸಿ ಬರೆದಿರುವೆವು.

೧೮೫೪ನೆಯ ವರ್ಷದಲ್ಲಿ ಇಂಡಿಯಾ ಸರ್ಕಾರದವರು ಈ ದೇಶದಲ್ಲಿ ಯೂರೊಂಪ್‌ಖಂಡದ ಭಾಷೆ, ಶಾಸ್ತ್ರ, ದರ್ಶನ, ಇತಿಹಾಸ ಮುಂತಾದವುಗಳನ್ನು ಬೋಧಿಸತಕ್ಕದ್ದೆಂದು ತೀರ್ಮಾನ ಮಾಡಿದರು. ಮುಖ್ಯವಾಗಿ ನಮ್ಮ ದೇಶದ ವಿದ್ಯಾಭ್ಯಾಸಕ್ಕೆ ಪ್ರತಿಯಾಗಿ ಪಾಶ್ಚಾತ್ಯ ವಿದ್ಯಾಪ್ರಚಾರವನ್ನು ಮಾಡಬೇಕೆಂಬುವದೇ ಅವರ ಉದ್ದೇಶವು. ಏಕೆಂದರೆ ಅವರ ಅಭಿಪ್ರಾಯಾನುಸಾರವಾಗಿ ನಮ್ಮ ದೇಶದ ಶಾಸ್ತ್ರ, ದರ್ಶನ ಸಾಹಿತ್ಯಗಳು ಎಷ್ಟು ಶ್ಲಾಘನೀಯಗಳಾದರೂ ನ್ಯೂನತೆಗಳಿಂದ ಕೂಡಿರುವವು. ಇಂಡಿಯಾ ಸರ್ಕಾರದವರ ಇಂತಹ ಅಭಿಪ್ರಾಯವು ಅಸಾಧುವೆಂದು ನಮ್ಮ ಪೂರ್ವಿಕ ಶಾಸ್ತ್ರಸಾಹಿತ್ಯಾಭಿಮಾನಿಗಳನೇಕರು ಯೋಚಿಸುತ್ತಿರುವುದು ಸ್ವಾಭಾವಿಕವಾಗಿರುವುದು. ಆದಾಗ್ಯೂ ನಾವು ಪರ್ಯಾಲೋಚಿಸಿದಲ್ಲಿ ಒಂದು ಮುಖ್ಯವಾದ ಸಂಗ

b. ಗಾಡಿ ಚಕ್ರಕ್ಕೆ ಪಟ್ಟಿಬಿಡಬೇಕಾದರೆ ಪಟ್ಟಿಯು ಚಕ್ರದ ಅಳತೆಗೆ ಸರಿಯಾಗಿ ಕತ್ತರಿಸಲ್ಪಟ್ಟು, ವ್ಯತ್ಯಾಕಾರನಾಗಿ ಬಗ್ಗಿಸಲ್ಪಟ್ಟು ಚನ್ನಾಗಿ ಕಾಯಿಸಲ್ಪಡುತ್ತದೆ. ಕಾದಾಗ ಚಕ್ರವನ್ನು ಬಹಳ ಸಡಲವಾಗಿ ಹಿಡಿಯುತ್ತದೆ. ತಣ್ಣೀರು ಹಯಿದು ಆರಿಸಲ್ಪಟ್ಟಾಗ ಪುನಃ ಗಾತ್ರ ಕಡಮೆಯಾಗಿ ಚಕ್ರವನ್ನು ಬಿಗಿಯಾಗಿ ಹಿಡಿದು ಹಾರೆಕಾಲುಗಳನ್ನು ಗುಂಬಕ್ಕೆ ಭದ್ರವಾಗಿ ನಾಟುತ್ತದೆ.

c. ಒಂದು ಗಾಜಿನ ಕೊಳವಿ ತುಂಬ ತಣ್ಣೀರನ್ನು ತುಂಬಿ ಕಾಯಿಸಿದರೆ ಸ್ವಲ್ಪ ನೀರು ಮಕ್ಕೆ ಕೆಳಕ್ಕೆ ಸುರಿದುಹೋಗುವದು. ಈ ಸಂದರ್ಭದಲ್ಲಿ ಗಾಜಿನ ಕೊಳವಿಯು, ನೀರೂ ಎರಡೂ ವಿರಳವಾಗುತ್ತವೆ. ಆದರೆ ಗಾಜಿಗಿಂತಲೂ ನೀರು ಅಧಿಕವಾಗಿ ವಿರಳವಾಗುತ್ತದೆ.

d. ಗೋಳಾಕೃತಿಯಲ್ಲಿ ಬಂದು ಹಿತಾಳ ಗುಂಡನ್ನು ಮತ್ತು ಅದನ್ನು ಹತ್ತಾನಾಗಿ ಹಿಡಿಸುವ ವ್ಯತಾ ಕಾರನಾದ ಒಂದು ಬಳೆಯನ್ನು ಮಾಡಿಸಿ ಗುಂಡನ್ನು ಕಾಯಿಸಿದರೆ ಅದು ಬಳೆಯಮೇಲೆ ಕೂತುಕೊಳ್ಳುವದೇ ಹೊರ್ತು ಅದರಲ್ಲಿ ದೂರುವದಿಲ್ಲ.

e. ಒಂದುಕೊನೆಯಲ್ಲಿ ಚಂದಿನಾಕಾರದಲ್ಲಿಯೂ ಮತ್ತೊಂದು ಕೊನೆಯಲ್ಲಿ ಬಾಯಿಬಿಟ್ಟುಕೊಂಡಿರುವ ಒಂದು ಗಾಜಿನ ಕೊಳವೆಯನ್ನು ತೆಗದುಕೊಂಡು ಚಂಡನ್ನು ಸ್ವಲ್ಪ ಕಾಯಿಸಿ ತಟ್ಟನೆ ನೀರಿನಪಾತ್ರೆಯಲ್ಲಿ ಬಾಯನ್ನು ಮುಳುಗಿಸಿ ಸ್ವಲ್ಪ ಹೊತ್ತು ಇಟ್ಟಿದ್ದರೆ ಸ್ವಲ್ಪ ನೀರು ಗಾಜಿನಕೊಳವೆಯಲ್ಲಿ ಏರುವದು. ಚಂಡನ್ನು ಕೈಯಲ್ಲಿ ಹಿಡಿದುಕೊಂಡರೆ ಕೈಯಿನ ಶಾಖದಿಂದ ಒಳಗಿನ ವಾಯುವು ವಿರಳವಾಗಿ ನೀರು ಕೆಳಕ್ಕೆ ಇಳಿಯುವದು. ಕೈತೆಗದುಬಿಟ್ಟರೆ ವಾಯು ತಣ್ಣಗಾಗಿ ಪುನಃ ಸಂಕುಚಿತವಾಗಿ ನೀರು ಮೇಲಕ್ಕೆ ಏಳುವದು.

ಈ ದೃಷ್ಟಾಂತಗಳಿಂದ ಪದಾರ್ಥಗಳು ಉಷ್ಣದಿಂದ ಗಾತ್ರಾಭಿವೃದ್ಧಿಯನ್ನು ಹೊಂದಿ ವಿರಳವಾಗುತ್ತವೆಂತಲೂ ಘನಪದಾರ್ಥಗಳಿಗಿಂತ ದ್ರವಪದಾರ್ಥಗಳು ಅಧಿಕವಾಗಿಯೂ, ದ್ರವಗಳಿಗಿಂತಲೂ ವಾಯುಗಳು ಅಧಿಕವಾಗಿಯೂ ವಿರಳವಾಗುತ್ತವೆಂತಲೂ ತಿಳಿಯಬರುತ್ತೆ. ಕೈಯಿನ ಉಷ್ಣದಿಂದ ಅಷ್ಟುಮಟ್ಟು ವಿರಳವಾಗುವ ವಾಯುವು ದೀಪದ ಸೆಕೆಯಿಂದ ಚಿಲುಮೆಯಲ್ಲಿ ಎಷ್ಟುಮಟ್ಟು ವಿರಳವಾಗಬೇಕು. ಊಹಿಸಿರಿ.

ಹೈಡ್ರೊಜನ್ ಜ್ವಾಲೆಯು ಅತ್ಯುಷ್ಣವುಳ್ಳದ್ದಾದಾಗ್ಯೂ ಅದರಲ್ಲಿ ಬೆಳಕಿಲ್ಲದೆ

ಳಲ್ಲಿ ಮಾತೃಭಾಷೆಗಳಿಗೆ ತಕ್ಕಮಟ್ಟು ಉತ್ಸಾಹವಿಲ್ಲ. ಶಾಲಾ ವಿದ್ಯಾಭ್ಯಾಸವು ಮುಗಿದನಂತರ ನಮ್ಮ ವಿದ್ಯಾರ್ಥಿಗಳಿಗೆ ತಮ್ಮ ಮಾತೃಭಾಷೆಗಳಲ್ಲಿ ಜಾಗರೂಪ್ಸೆಯುಂಟಾಗಿದ್ದರೂ ಅನಾದರಣೆಯೋನೋ ಯಥೇಷ್ಟವಾಗಿರುವುದು.

(ಸಶೇಷ)

ಡಿ. ವೆಂಕಟರಾವ್ಯಯ್ಯ, ಬಿ. ಎ. ಎಲ್. ಟಿ

ಶ್ರೀಲೇಡೀ ಕರ್ಜನ್ ಲಾರ್ಡ್ ಕರ್ಜನ್ ದಂಪತಿಗಳ ಸುಖಾಗಮನಂ.

ಮಂದಾಕ್ರಾಂತಾವೃತ್ತಂ.

ಶ್ರೀಮದ್ರಾಜ್ಞೀಪ್ರತಿನಿಧಿಯೆ ಮಾಬಿಜೈಯಿಂ ಬಲ್ಮೆಗಳ್ದು ।
ದ್ರಾಮಶ್ರೀಲಾರ್ಡ್ಕರಜನುಮಹೋದಾರ ನಿಮ್ಪೇಕ್ಷಸಾತಂ ॥
ಪ್ರೇಮಂಬೆತ್ತೆಲ್ಲರ ಪೊರೆವನೇ ನ್ಯಾಯಮುಂ ಚರ್ಚಿಸುತ್ತಂ ।
ಶ್ರೀಮಲ್ಲೇಡೀಕರಜನುಯುತ ಕ್ಷೇಮದಿಂ ಬಿಂದಿರೇಂ ನೀಂ ॥೧॥

ಮತ್ತೇಭವಿಕ್ರೀಡಿತಂ.

ಬರದೊಳ್ಪೆಲ್ಗೀನೊಳಂ ತೊಳಲ್ವರಳಲಂ ಪೋಗಾಡಲೆಂದಂತು ಲಾ ।
ರ್ಡ್ಕರಜನ್ನೀಂ ಪದಚಾರಿಯಾಗಿ ಗವಿಸುತ್ತಲ್ಲಲ್ಲಿ ಕೇಳ್ದ ಲೋ ॥
ಗರ ದೈನ್ಯಾರ್ತಿಯನುಬ್ಬೆಗಂಬೆರಸುತಂ ಲೋಕಾನುಕೂಲ್ಯಂಗಳಂ ।
ಭರದಿಂ ಕಲ್ಪಿಸಿ ಬಾರದಂತೆ ಬರಮುಂ ವಿಖ್ಯಾತನಾಗಿರ್ದಯ್ ॥ ೨ ॥

ಚಂಪಕಮಾಲೆ.

ಕೂಳುಗುಳದೊಜ್ಜು ಗಂಗಳಸುಗಾಲದಿನಿಲ್ಲುದರಿಂ ಮಸುಳ್ದು ಸಾಂ ।
ಗಿಳಿದಿರುವಸ್ಮದೀಯ ಚಮುವಂ ಬಹುದೂರದ ಚೀಣಕಾಫ್ರಿಕಾ ॥
ಸ್ಥಳರಣಕೊಲ್ದು ನೀಂ ಕಳಿಪಲಾಭಟರಲ್ಲಿ ನೆಗಳ್ದ ಸಾಹಸಂ ।
ಗಳವು ನೆಗಳ್ತೆಯಾಂಪಬಗೆವಾಡಿದೆ ಲಾರ್ಡ್ಕರಜನ್ಮಹಾಪ್ರಭೊ ॥ ೩ ॥

ತಿಯು ವ್ಯಕ್ತವಾಗುವದು. ಅದು ಏನೆಂದರೆ—ತತ್ವಬೋಧೆ. ದೈವಜ್ಞಾನ, ಮತಸಾ
ಚಾರ ಇವುಗಳಲ್ಲಿ ನಮ್ಮ ಪೂರ್ವಿಕರು ಅಸಾಧಾರಣವಾದ ಪರಿಶೀಲನೆಗಳನ್ನು ಮಾಡಿ
ರುವರು. ಯೂರೋಪ್ ಅಮೆರಿಕಾಖಂಡದವರು ಕೂಡ ನಮ್ಮ ತತ್ವಶಾಸ್ತ್ರಗಳನ್ನು
ಮತಸಾರಾಂಶಗಳನ್ನು ಶ್ಲಾಘಿಸಿ ಅವರಲ್ಲಿ ಅನೇಕರು ಸ್ವೀಕರಿಸುವರು. ಆದರೆ ಭೌತಿ
ಕಶಾಸ್ತ್ರ, ಖಗೋಳಶಾಸ್ತ್ರ, ಶಾರೀರಕಶಾಸ್ತ್ರ, ಇತಿಹಾಸ, ಮನಶ್ಶಾಸ್ತ್ರ ಇವೇ
ಮುಂತಾದವುಗಳಲ್ಲಿ ನಮ್ಮವರು ಎಷ್ಟು ಜ್ಞಾನವನ್ನು ಸಂಪಾದಿಸಿದ್ದರೂ ಅದು ಪಾ
ಶ್ಚಾತ್ಯರ ಜ್ಞಾನಕ್ಕಿಂತಲೂ ಕಡಮೆಯಾಗಿರುವುದು. ಏಕೆಂದರೆ ನಮ್ಮ ದೇಶೀಯರ
ಉನ್ನತಿಯು ಒಂದು ಮೇರೆಯನ್ನು ಸೇರಿ ಅಲ್ಲಿಂದ ಮುಂದಕ್ಕೆ ಹಾಯದೆ ನಿಂತುಹೋ
ಯಿತು. ಈ ವಿಷಯಗಳಲ್ಲಿ ಅನ್ಯದೇಶೀಯರ ಜ್ಞಾನವಾದರೋ ಅಭಿವೃದ್ಧಿಯನ್ನು
ಹೊಂದುತ್ತಲೇ ಇರುವುದು, ಅದುದರಿಂದ ಈ ದೇಶದ ವಿದ್ಯಾಭ್ಯಾಸದ ವಿಷಯವಾಗಿ
ಬ್ರಿಟಿಷ್‌ಗೌರ್ನಮೆಂಟಿನವರು ೧೮೫೪ನೆಯ ವರ್ಷದಲ್ಲಿ ಮಾಡಿದ ತೀರ್ಮಾನವು ಯು
ಕ್ತವಾದುದೆಂಬುವುದು ಸ್ಪಷ್ಟವಾಗಿದೆ. ವೈದ್ಯಶಾಸ್ತ್ರದಲ್ಲಿ ಚರಕ, ಸುಶ್ರುತಗಳೂ,
ಖಗೋಳಶಾಸ್ತ್ರದಲ್ಲಿ ಸೂರ್ಯಸಿದ್ಧಾಂತವೂ, ಶಿಲ್ಪವಿದ್ಯೆಯಲ್ಲಿ ವಸ್ತುಶಾಸ್ತ್ರವೂ ಬಹು
ಉತ್ಕೃಷ್ಟವಾದವುಗಳೇಸರಿ. ಆದರೆ ಈ ಶಾಸ್ತ್ರಗಳಲ್ಲಿ ಪಾಶ್ಚಾತ್ಯರಿಗಿರುವ ಜ್ಞಾನ
ವನ್ನು ನಿರಾಕರಿಸಿ ತಮ್ಮವರ ಪಾಂಡಿತ್ಯವೇ ಮೇಲಾದುದೆಂದು ತಿಳಿಯುವುದು ಹೊಂದ್ದು
ವಲ್ಲವೇ ?

೧೮೫೪ನೇ ವರ್ಷದ ವಿದ್ಯಾಪ್ರಚಾರಕಶಾಸನದಲ್ಲಿ ಪಾಶ್ಚಾತ್ಯ ಕಲಾ
ವಿದ್ಯೆ, ಭೌತಿಕಶಾಸ್ತ್ರ, ದರ್ಶನಭೇದ, ಸಾಹಿತ್ಯ ಈ ನಾಲ್ಕುಭಾಗಗಳನ್ನು ವಿದ್ಯಾಶಾ
ಲೆಗಳಲ್ಲಿ ಬೋಧಿಸಬೇಕೆಂದು ವಿಧಾಯಕವಾಯಿತು. ಹೇರಳವಾಗಿ ಇಂಗ್ಲಿಷ್‌ಭಾಷಾ
ಪರಿಚರ್ಯವನ್ನು ಹೊಂದುವ ಕೆಲವರು ಮೇಲೆಹೇಳಿದ ನಾಲ್ಕುಭಾಗಗಳಲ್ಲಿ ಜ್ಞಾನ
ವನ್ನು ಇಂಗ್ಲಿಷ್‌ಭಾಷೆಯ ಮೂಲಕವಾಗಿ ಸಂಪಾದಿಸುವುದು ಸಾಧ್ಯವಾದರೂ ಜನ
ಸಾಮಾನ್ಯಕ್ಕೆ ಅಂತಹ ಜ್ಞಾನವು ನಮ್ಮ ದೇಶದಲ್ಲಿ ವಾಡಿಕೆಯಾದ ಭಾಷೆಗಳ ಮೂಲ
ಕವಾಗಿಯೇ ಉಂಟಾಗಬೇಕೆಂದು ೧೮೫೪ನೇ ಶಾಸನವು ಸ್ಪಷ್ಟವಾಗಿ ಸೂಚಿಸು
ವುದು. ಆದರೆ ದೇಶೀಯ ಭಾಷೆಗಳ ಅವಸ್ಥೆಯು ಶೋಚನೀಯವಾಗಿರುವುದು.
ಇಂಡಿಯಾದೇಶವಲ್ಲಿ ಇಂಗ್ಲಿಷ್ ಪಾಠಶಾಲೆಗಳು ವಿಶೇಷವಾಗಿರುವುವಲ್ಲದೆ ಕ್ರಮೇಣ
ಹೆಚ್ಚುತ್ತಲಿರುವುವು. ಇದು ಏನೋ ಅನುಕೂಲವೇಸರಿ. ಆದರೆ ಈ ಪಾಠಶಾಲೆಗ

ಳಲ್ಲಿ ಮಾತೃಭಾಷೆಗಳಿಗೆ ತಕ್ಕಮ್ಟು ಉತ್ಸಾಹವಿಲ್ಲ. ಶಾಲಾ ವಿದ್ಯಾಭ್ಯಾಸವು ಮುಗಿದನಂತರ ನಮ್ಮ ವಿದ್ಯಾರ್ಥಿಗಳಿಗೆ ತಮ್ಮ ಮಾತೃಭಾಷೆಗಳಲ್ಲಿ ಜಾಗುಪ್ಸೆಯುಂಟಾಗಿರದಿದ್ದರೂ ಅನಾದರಣೆಯೇನೋ ಯಥೇಷ್ಟವಾಗಿರುವುದು.

(ಸಶೇಷ)

ಡಿ. ವೆಂಕಟರಾಮಯ್ಯ, ಬಿ. ಎ. ಎಲ್. ಟಿ.

ಶ್ರೀಲೇಡೀ ಕರ್ಜನ್ ಲಾರ್ಡ್ ಕರ್ಜನ್ ದಂಪತಿಗಳ ಸುಖಾಗಮನಂ.

ಮಂದಾಕ್ರಾಂತಾವೃತ್ತಂ.

ಶ್ರೀಮದ್ರಾಜ್ಞೀಪ್ರತಿನಿಧಿಯೆ ಮಾಬಿಜ್ಜಯಿಂ ಬಲ್ಮೆಗಳ್ದ ।
ದ್ವಾಮುಶ್ರೀಲಾರ್ಡ್ಕರ್ಜನುಮಹೋದಾರ ನಿಮ್ಪೇಕ್ಷಪಾತಂ ॥
ಪ್ರೇಮಂಬೆತ್ತೆಲ್ಲರ ಪೊರೆವನೇ ನ್ಯಾಯಮಂ ಚರ್ಚಿಸುತ್ತಂ ।
ಶ್ರೀನುಲ್ಲೇಡೀಕರ್ಜನುಯುತ ಕ್ಷ್ಮೇಮುದಿಂ ಬಿಂದಿರೇಂ ನೀಂ ॥೧॥

ಮತ್ತೇಭವಿಕ್ರೀಡಿತಂ.

ಬರದೊಳ್ಪೆಲ್ಗೀನೊಳಂ ಕೊಳಲ್ವರಳಲಂ ಪೋಗಾಡಲೆಂದಂತು ಲಾ ।
ರ್ಡ್ಕರ್ಜನ್ನೀಂ ಪದಚಾರಿಯಾಗಿ ಗವಿಸುತ್ತಲ್ಲಲ್ಲಿ ಕೇಳ್ದ ಲೋ ॥
ಗರ ದೈನ್ಯಾರ್ತಿಯನುಬ್ಬೆಗಂಬೆರಸುತಂ ಲೋಕಾನುಕೂಲ್ಯಂಗಳಂ ।
ಭರದಿಂ ಕಲ್ಪಿಸಿ ಬಾರದಂತೆ ಬರಮುಂ ವಿಖ್ಯಾತನಾಗಿರ್ದಪಯ್ ॥ ೨ ॥

ಚಂಪಕಮಾಲೆ.

ಕೂಳುಗುಳದುಬ್ಬುಗಂಗಳೆನುಗಾಲದಿನಿಲ್ಲುದರಿಂ ಮಸುಳ್ದ ಸಾಂ ।
ಗಿಳಿದಿರುವಸ್ಮದೀಯ ಚಮುವಂ ಬಹುದೂರದ ಚೀನಕಾಫ್ರಿಕಾ ॥
ಸ್ಥಳರಣಕೊಲ್ದ ನೀಂ ಕಳಿಪಲಾಭಟರಲ್ಲಿ ನೆಗಳ್ದ ಸಾಹಸಂ ।
ಗಳವು ನೆಗಳ್ತೆಯಾಂಬಬಗೆವಾಡಿದೆ ಲಾರ್ಡ್ಕರ್ಜನ್ಮಹಾಪ್ರಭೂ ॥ ೩ ॥

ತಿಯು ವ್ಯಕ್ತವಾಗುವುದು ಅದು ಏನೆಂದರೆ—ತತ್ವಬೋಧೆ. ದೈವಜ್ಞಾನ, ಮತವಿಚಾರ ಇವುಗಳಲ್ಲಿ ನಮ್ಮ ಪೂರ್ವಿಕರು ಅಸಾಧಾರಣವಾದ ಪರಿಶ್ರಮವನ್ನು ಮಾಡಿರುವರು. ಯೂರೋಪ್ ಅಮೆರಿಕಾಖಂಡದವರು ಕೂಡ ನಮ್ಮ ತತ್ವಶಾಸ್ತ್ರಗಳನ್ನು ಮತಸಾರಾಂಶಗಳನ್ನು ಶ್ಲಾಘಿಸಿ ಅವರಲ್ಲಿ ಅನೇಕರು ಸ್ವೀಕರಿಸುವರು. ಆದರೆ ಭೌತಿಕಶಾಸ್ತ್ರ, ಖಗೋಳಶಾಸ್ತ್ರ, ಶಾರೀರಕಶಾಸ್ತ್ರ, ಇತಿಹಾಸ, ಮನಶ್ಶಾಸ್ತ್ರ ಇವೇ ಮುಂತಾದವುಗಳಲ್ಲಿ ನಮ್ಮವರು ಎಷ್ಟು ಜ್ಞಾನವನ್ನು ಸಂಪಾದಿಸಿದ್ದರೂ ಅದು ಪಾಶ್ಚಾತ್ಯರ ಜ್ಞಾನಕ್ಕಿಂತಲೂ ಕಡಮೆಯಾಗಿರುವುದು. ಏಕೆಂದರೆ ನಮ್ಮ ದೇಶೀಯರ ಉನ್ನತಿಯು ಒಂದು ಮೇರೆಯನ್ನು ಸೇರಿ ಅಲ್ಲಿಂದ ಮುಂದಕ್ಕೆ ಹಾಯದೆ ನಿಂತುಹೋಯಿತು. ಈ ವಿಷಯಗಳಲ್ಲಿ ಅನ್ಯದೇಶೀಯರ ಜ್ಞಾನವಾಗಲೀ ಅಭಿವೃದ್ಧಿಯನ್ನು ಹೊಂದುತ್ತಲೇ ಇರುವುದು. ಅದುದರಿಂದ ಈ ದೇಶದ ವಿದ್ಯಾಭ್ಯಾಸದ ವಿಷಯವಾಗಿ ಬ್ರಿಟಿಷ್‌ಗೌರ್ನಮೆಂಟಿನವರು ೧೮೫೪ನೆಯ ವರ್ಷದಲ್ಲಿ ಮಾಡಿದ ತೀರ್ಮಾನವು ಯುಕ್ತವಾದುದೆಂಬುವುದು ಸ್ಪಷ್ಟವಾಗಿದೆ. ವೈದ್ಯಶಾಸ್ತ್ರದಲ್ಲಿ ಚರಕ, ಸುಶ್ರುತಗಳೂ, ಖಗೋಳಶಾಸ್ತ್ರದಲ್ಲಿ ಸೂರ್ಯಸಿದ್ಧಾಂತವೂ, ಶಿಲ್ಪವಿದ್ಯೆಯಲ್ಲಿ ವಸ್ತುಶಾಸ್ತ್ರವೂ ಬಹು ಉತ್ಕೃಷ್ಟವಾದವುಗಳೇಸರಿ. ಆದರೆ ಈ ಶಾಸ್ತ್ರಗಳಲ್ಲಿ ಪಾಶ್ಚಾತ್ಯರಿಗಿರುವ ಜ್ಞಾನವನ್ನು ನಿರಾಕರಿಸಿ ತನ್ಮವರ ಪಾಂಡಿತ್ಯವೇ ಮೇಲಾದುದೆಂದು ತಿಳಿಯುವುದು ಪಾಂಡಿತ್ಯವಲ್ಲವೇ ?

೧೮೫೪ ನೇ

ವಿದ್ಯೆ, ಭೌತಿಕಶಾಸ್ತ್ರ,

ಲೆಗಳಲ್ಲಿ ಬೋಧಿಸಬೇಕೆಂ

ಪರಿಚರ್ಯವನ್ನು ಹೊಂದುವ ಕೆಲವರು ಮೇಲೆಹೇಳಿದ ನಾಲ್ಕುಭಾಗಗಳಲ್ಲಿ ಜ್ಞಾನವನ್ನು ಇಂಗ್ಲಿಷ್‌ಭಾಷೆಯು ಮೂಲಕವಾಗಿ ಸಂಪಾದಿಸುವುದು ಸಾಧ್ಯವಾದರೂ ಜನಸಾಮಾನ್ಯಕ್ಕೆ ಅಂತಹ ಜ್ಞಾನವು ನಮ್ಮ ದೇಶದಲ್ಲಿ ವಾಡಿಕೆಯಾದ ಭಾಷೆಗಳ ಮೂಲಕವಾಗಿಯೇ ಉಂಟಾಗಬೇಕೆಂದು ೧೮೫೪ ನೇ ಶಾಸನವು ಸ್ಪಷ್ಟವಾಗಿ ಸೂಚಿಸುವುದು. ಆದರೆ ದೇಶೀಯ ಭಾಷೆಗಳ ಅವಸ್ಥೆಯು ಶೋಚನೀಯವಾಗಿರುವುದು. ಇಂಡಿಯಾದೇಶವಲ್ಲಿ ಇಂಗ್ಲಿಷ್ ಪಾಠಶಾಲೆಗಳು ವಿಶೇಷವಾಗಿರುವುವಲ್ಲದೆ ಕ್ರಮೇಣ ಹೆಚ್ಚುತಲಿರುವುವು. ಇದು ಏನೋ ಅನುಕೂಲವೇಸರಿ. ಆದರೆ ಈ ಪಾಠಶಾಲೆಗ

ಕಂದ

ರಾಜೇಂದ್ರನೆ ಲಾಡ್ರ್ ಕರರ್ಜ ।
ರಾಜನ್ಮತಿಲೇಡಿಕರಜನನ್ವಿತವಿಭುವೇ ॥
ಓಜೋಧೃತಿಕೀರ್ತಿಶ್ರೀ ।
ರಾಜಿಯ ನಿಮಗೊಡನೊಡರ್ಚಿ ಕಾಪಿಡುಗೀಶಂ ॥ ॥

ರಾಗ । ಕಮಾಚ್ । ರೂಪಕತಾಳ.

ಆರಯಲಾ ಶ್ರೀಜಾನಿಯು । ಬೀರುತಿಪ್ಪುವ ॥ ನಿಮ್ಮ ॥ ಪ ॥
ಸಾರಸುಗುಣಲಾಡ್ರ್ಕರರ್ಜ । ಧೀರ ಶೂರ ಕರುಣಾಪೂರ ॥ ಅ ॥
ಕ್ಷಾಮಪ್ರೇಗುಷ್ಠಿತರಿಗೆ । ಕ್ಷೇಮವನೆಸಗೆ ॥ ಪ್ರೇಮದಿಂ ವಿಜಯಗೆ
ಯ್ದು । ದ್ದಾಮಸದ್ಗುಣಾಭಿರಾಮ ॥ ೧ ॥
ಆಯುರಾರೋಗ್ಯಕೀರ್ತಿ । ಶ್ರೇಯವನಿತ್ತು ॥ ಶ್ರೇಯುತವರಲೇಡೀಕರರ್ಜ
ಜಾಯಾಸಹಿತ ಗೇಯ ನಿಪ್ಪು ॥ ೨ ॥

ಮತ್ತೇಭವಿಕ್ರೀಡಿತಂ

ಧೃತನೀತಿ ಪ್ರಶಮಾದಿ ಸದ್ಗುಣಯುತ ಶ್ರೀಜಾಮಭೂವಿಂದ್ರನಾ।
ಸತಿ ಸನ್ನೀತಿಸುಶೀಲವಂತೆಯಹ ಮಾವಾಣೀವಿಲಾಸಾಂಬೆ ಸ ॥
ನ್ಮತಿ ರೀಜುಂಟುಪದಾರ್ಹೆ ತಾಂ ಪ್ರತಿದಿನಂ ಸಂರಕ್ಷಿಸುತ್ತಿರ್ಪ ವಿ।
ಶ್ರುತದೇಶಕ್ಕಿದೆ ನಿಮ್ಮ ಯಾಗಮನದಿಂದಾದತ್ತು ಭಾಗ್ಯೋತ್ಸವಂ ॥೪ ॥

ಚಂಪಕಮಾಲೆ.

ಸಿರಿವೆರೆದಿಂಡಿಯಾನೃಪತಿಗಳ್ನಿಜರಾಜ್ಯವ ರಾಜನೀತಿಯಿಂ ।
ನರೆಪೊರೆವಂತವರ್ಗುಚಿತವಾರ್ಗವ ತೋರ್ಪ ಮಹೇಂದ್ರ ನಮ್ಮ ಭೂ ॥
ಪರಿವೃಢಕೃಷ್ಣ ರಾಜನುಮನಂತೆಯೆ ಬೋಧಿಸಿ ಬಿಜ್ಜ ವಕ್ಷನಂ ।
ವಿರಚಿಸಿ ಪಾಲಿಪೀತಮಗೆ ಮಾಳ್ಪುದು ವಿನ್ನಪಮಾವುದಿರ್ಪುದುಂ ॥ ೫ ॥

ಶ್ರೇಯಃ ಪಾರ್ಥನೆ.

ಉತ್ಪಲಮಾಲೆ.

ಸಂಗರಧೀರ ಲಾಡ್ರ್ಕರರ್ಜನ್ವಿಭುವರ್ಯ ಯುರೋಪಖಂಡದೊಳ್ ।
ಪೊಂಗಿಹ ಪಂಡಿತಾಳಿಯ ಪೊಗಳ್ಕೆಯ ತಾಳ್ದಿಹ ಬಿಜ್ಜ ಬಲ್ಲಹಾ ॥
ಪೆಂಗಳೆ ಬಿಜ್ಜಯೇಳ್ಗೆಯೊಡನಿಲ್ಲಿಯ ಬಿಜ್ಜಯ ಪೆರ್ಚಿಪಳ್ಕರಿಂ ।
ಪಿಂಗದ ಕೌತುಕಂದಳಿದ ನಿಮ್ಮನೆ ಕಾಪಿಡುಗೀಶನಾವಗಂ ॥೬ ॥

K 1042
1042
6756

ವಿದ್ಯಾದಾಯಿನಿ.

ನೇ ಭಾಗ.

೧೯೦೯
೧೯೦೧

ಮೈಸೂರು.

ಪ್ರಜಾಮಿತ್ರ ಟ್ರೇಡಿಂಗ್ ಅಸೋಸಿಯೇಷನ್ ಪ್ರೆಸ್.

ವಿಷಯಗಳನ್ನು ಬರೆದವರ ಹೆಸರು.

ಮುದ್ರಾ ಶ್ರೀ ॥

1 ಎಡಿಟರ್.

2 ಎಂ. ವೆಂಕಟಕೃಷ್ಣಯ್ಯನವರು.

3 ಕುಂಡಲಿಗಿರ್ಯಾಟಾರ್ಯರು, ಪಂಡಿತರು.

4 ಕೆ ನರಸಿಂಹಯ್ಯಂಗಾರ್, ಅಗ್ರಿಕಲ್ಚರ್ ಲೆಕ್ಚರರ್.

5 ಬಿ. ರಾಮರಾವ್, ಎಂ. ಎ.

6 ಕೆ. ನರಸಿಂಹಮೂರ್ತಿರಾವ್, ಸ್ಕೂಲ್ ಮಾಸ್ಟರ್.

7 ಸಂಪತ್ತಯ್ಯಂಗಾರ್, ಸ್ಕೂಲ್ ಮಾಸ್ಟರ್.

8 ಕೆ. ಚಿಂತಾಮಣಿರಾವ್, ಬಿ. ಎ. ಎಲ್. ಟಿ.

9 ಎ. ವೆಂಕಟೇಶಯ್ಯ, ಬಿ. ಎ.

10 ವಿ. ನರಸಿಂಹಮೂರ್ತಿರಾವ್, ರೇಂಜರ್.

11 ಜಿ. ವೆಂಕಟೇಶಯ್ಯ.

12 ಎಂ. ಶಾಮರಾವ್. ಬಿ. ಎ.ಅ. ಡಿ. ಇನ್‌ಸ್ಪೆಕ್ಟರ್.

13 ಎಂ. ಶ್ರೀನಿವಾಸರಾವ ಬಿ. ಎ. ಡಿ. ಇನ್‌ಸ್ಪೆಕ್ಟರ್.

14 ಎಸ್. ವೆಂಕೋಬರಾವ್ ಬಿ. ಎ. ಅಪೂತಕೆರಿ.

15 ಶ್ರೀನಿವಾಸರಾಘವಾಚಾರ ಪಂಡಿತರು.

16 ಎಂ ವಿ. ಶ್ರೀನಿವಾಸಯ್ಯಂಗಾರ ಬಿ. ಎ.

17 ಎಂ. ನಾರಾಯಣಮೂರ್ತಿರಾವ್.

ಮುಂತಾದವರು.